ಪ್ರಜಾವಾಣಿ ಭಾನುವಾರ • ನವೆಂಬರ್ 24, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

CBC 19101/13/0027/2425

ಹೂಡಿಕೆಯ ವಂಚನೆಗಳ ಬಗ್ಗೆ ಎಚ್ಚರವಿರಲಿ

ಸಾಮಾಜಿಕ ಮಾಧ್ಯಮಗಳ ಗುಂಪುಗಳಲ್ಲಿ / ಜಾಹೀರಾತುಗಳಲ್ಲಿ ಪ್ರಸಾರವಾಗುವ ಅನಧಿಕೃತ ಆ್ಯಪ್‌ಗಳ/ ವೆಬ್‌ಸೈಟ್‌ಗಳ ಮೂಲಕ

ತ್ವರಿತವಾಗಿ ನಿಮ್ಮ ಹಣವನ್ನು ದ್ವಿಗುಣಗೊಳಿಸಲು ಪ್ರಯತ್ನ ಮಾಡುತ್ತಿದ್ದಿರಾ?

ಸೆಬಿ-ನೋಂದಾಯಿತ ಆ್ಯಪ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಿರಿ

ಗೃಹ ಮಂತ್ರಾಲಯ MINISTRY OF HOME AFFAIRS

Indian Cyber Crime Coordination Centre

ನಿಧಾನಿಸಿ. ಯೋಚಿಸಿ. ಕ್ರಮವಹಿಸಿ

ಇಲ್ಲಿ ದೂರು ಸಲ್ಲಿಸಿ www.cybercrime.gov.in ಅಥವಾ ಕಾಲ್ 1930

ಮಾಹಿತಿಗಾಗಿ ಸೈಬರ್‌ದೋಸ್ತ್ ಫಾಲೋ ಮಾಡಿ

ನೆಲಗೆದರನಹಳ್ಳಿ ರಸ್ತೆ ಕಾಮಗಾರಿಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸರಹಳ್ಳಿ ವಲಯದ ನೆಲಗೆದರನಹಳ್ಳಿ ಮುಖ್ಯರಸ್ತೆ ವಿಸ್ತರಣೆ ಕಾಮಗಾರಿಯನ್ನು 2 ತಿಂಗಳಲ್ಲಿ ಪೂರ್ಣಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಡಿ ದಾಸರಹಳ್ಳಿ ವಲಯದ ವಿವಿಧ ಸ್ಥಳಗಳಲ್ಲಿ ಶುಕ್ರವಾರ ಪರಿಶೀಲನೆ ನಡೆಸಿದರು.

ಕಾಮಗಾರಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ‘ನೆಲಗೆದರನಹಳ್ಳಿ ರಸ್ತೆಯು ತುಮಕೂರು ಮುಖ್ಯ ರಸ್ತೆಯಿಂದ ಗಂಗಾ ಇಂಟರ್ ನ್ಯಾಷನಲ್ ಸ್ಕೂಲ್‌ವರೆಗೆ 2.45 ಕಿ.ಮೀ ಉದ್ದವಿದೆ. ಇದನ್ನು 60 ಅಡಿಗೆ ವಿಸ್ತರಣೆ ಮಾಡಲಾಗುತ್ತಿದೆ. 1.2 ಕಿ.ಮೀ ಉದ್ದದ ರಸ್ತೆ ವಿಸ್ತರಿಸಿ ಡಾಂಬರೀಕರಣ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಉಳಿದ ಕಾಮಗಾರಿಯನ್ನು 60 ದಿನದಲ್ಲಿ ಪೂರ್ಣಗೊಳಿಸಲು ಸೂಚಿಸಲಾಗಿದೆ’ ಎಂದು ತಿಳಿಸಿದರು.

173 ಮಂದಿಯ ಆಸ್ತಿಗಳಿಗೆ ಟಿಡಿಆರ್ ನೀಡಬೇಕಾಗಿತ್ತು. 16 ಮಂದಿಗೆ ಟಿಡಿಆರ್ ನೀಡಲಾಗಿದೆ. 85 ಮಂದಿ ದಾಖಲೆಗಳನ್ನು ಸಲ್ಲಿಸಿದ್ದು, ನಾಲ್ಕು ಆಸ್ತಿಗಳು ಸರ್ಕಾರಿ ಸ್ವತ್ತಾಗಿರುತ್ತವೆ ಎಂದರು. ಅಬ್ಬಿಗೆರೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು. ಅಬ್ಬಿಗೆರೆ ಉದ್ಯಾನ ನಿರ್ವಹಣೆ ಮಾಡಬೇಕು ಎಂದು ಸೂಚಿಸಿದರು.

ಸ್ಥಗಿತಗೊಂಡಿದ್ದ ಒಣ ತ್ಯಾಜ್ಯ ಸಂಗ್ರಹಣಾ ಘಟಕ ಕಾಮಗಾರಿಯನ್ನು ಪುನರಾರಂಭಿಸಲು ನಿರ್ದೇಶನ ನೀಡಿದ ತುಷಾರ್ ಗಿರಿನಾಥ್, ದಾಸರಹಳ್ಳಿ ವಲಯದ ಅಬ್ಬಿಗೆರೆ ಅರಣ್ಯ ರಸ್ತೆಯ ವಿಸ್ತರಣೆ ಸಂದರ್ಭದಲ್ಲಿ ತೆರವು ಮಾಡಲಾಗಿರುವ ರುದ್ರಭೂಮಿಯ ಗೋಡೆಯನ್ನು ಮರು ನಿರ್ಮಿಸಲು ಗುತ್ತಿಗೆದಾರರಿಗೆ ಸೂಚಿಸಿದರು.

ನಿಧನ

ಶ್ರೀ ಟಿ. ಶಂಕರ್

ಇವರು ದಿನಾಂಕ: 23.11.2024 ರಂದು ನಿಧನರಾದರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ:24.11.2024 ಭಾನುವಾರ, ಮಧ್ಯಾಹ್ನ 2.00 ಗಂಟೆಗೆ ಕಲ್ಲಹಳ್ಳಿ ರುದ್ರಭೂಮಿಯಲ್ಲಿ ನಡೆಸಲಾಗುವುದು.

ದುಃಖತಪ್ತರು: ಕುಟುಂಬದವರು

ಏಳು ವಾಹನ ವಶ

ಬೆಂಗಳೂರು: ಖಾಸಗಿ ವಾಹನಗಳನ್ನು ವಾಣಿಜ್ಯ ಸಂಚಾರಕ್ಕೆ ಬಳಕೆ ಮಾಡಿದ ಏಳು ವಾಹನಗಳನ್ನು ಸಾರಿಗೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

‘ಲಾಂಗ್ ಡ್ರೈವ್’ ಎಂಬ ಅನಧಿಕೃತ ಅಗ್ರಿಗೇಟರ್ ಸಂಸ್ಥೆಯ ಅಡಿಯಲ್ಲಿ ಈ ವಾಹನಗಳು ಬಾಡಿಗೆ ಆಧಾರದಲ್ಲಿ ಸಂಚಾರ ಮಾಡುತ್ತಿದ್ದವು. ಬಿಳಿ ನೋಂದಣಿ ಫಲಕದ ವಾಹನಗಳನ್ನು ವಾಣಿಜ್ಯ ಬಳಕೆ ಮಾಡಬಾರದು ಎಂದು ಎಚ್ಚರಿಕೆ ನೀಡಲಾಗಿದೆ. ಈ ರೀತಿ ಯಾವುದೇ ಖಾಸಗಿ ವಾಹನಗಳು ಬಳಕೆ ಮಾಡಿದರೆ ಅವುಗಳ ಆರ್‌.ಸಿ 3–4 ತಿಂಗಳು ಅಮಾನತು ಮಾಡಲಾಗುವುದು ಎಂದು ಸಾರಿಗೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ವಿಜಯನಗರ ಕ್ಲಬ್

ವಿಜಯನಗರ, ಬೆಂಗಳೂರು–560104. ದೂ: 080–2330 0675, 9606098126

ಸದಸ್ಯತ್ವ ತುಂಬಲು ಅರ್ಜಿ

ವಿಜಯನಗರ ಕ್ಲಬ್ ಆಡಳಿತ ಮಂಡಳಿಯು ಸದಸ್ಯತ್ವಕ್ಕೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸಿದೆ. ಸದಸ್ಯತ್ವದ ಅರ್ಜಿಗಳನ್ನು ಕ್ಲಬ್‌ನ ಕಛೇರಿ ವೇಳೆ ಬೆಳಿಗ್ಗೆ 11.00 ರಿಂದ ಸಂಜೆ 7.00 ರವರೆಗೆ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಿ. ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20.12.2024.

ವಿವಿಧ ವರ್ಗದ ಸದಸ್ಯತ್ವ	
(1) ಅಜೀವ ಸದಸ್ಯತ್ವ	(2) ಸ್ಥಾನಿಕ ಸದಸ್ಯತ್ವ

ಸಹಿ/– ಕಾರ್ಯದರ್ಶಿ (ಎಂ.ಶಿವಶಂಕರ್)

ಫಾರ್ಮ್ ಎ

ಸಾರ್ವಜನಿಕ ಪ್ರಕಟಣೆ

(ಭಾರತೀಯ ದಿವಾಳಿತನ ಮತ್ತು ದಿವಾಳಿತನ ಮಂಡಳಿಯ ನಿಯಮಗಳು 6ರ ಅಡಿಯಲ್ಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಮಗಳು, 2016,

ಸಾಲಗಾರರ ಗಮನಕ್ಕೆ

ಫೋರ್ ಫ್ಲೇವರ್ಸ್ LLP, LLPIN: AAD - 8427

	ಸಂಬಂಧಿತ ವಿವರಗಳು	
1.	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಫೋರ್ ಫ್ಲೇವರ್ಸ್ LLP,
2.	ಕಾರ್ಪೊರೇಟ್ ವ್ಯಕ್ತಿಯ ಸಂಯೋಜನೆಯ ದಿನಾಂಕ	28ನೇ ಏಪ್ರಿಲ್ 2015
3.	ಕಾರ್ಪೊರೇಟ್ ವ್ಯಕ್ತಿಯನ್ನು ಸಂಯೋಜಿಸಿರುವ/ನೋಂದಾಯಿಸಿದ ಪ್ರಾಧಿಕಾರ	ROC – ಬೆಂಗಳೂರು
4.	ಕಾರ್ಪೊರೇಟ್ ಗುರುತಿನ ಸಂಖ್ಯೆ./ ಕಾರ್ಪೊರೇಟ್ ವ್ಯಕ್ತಿಯ ಸೀಮಿತ ಹೊಣೆಗಾರಿಕೆ ಗುರುತಿಸುವಿಕೆ	LLPIN : AAD-8427
5.	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಚೇರಿ ಮತ್ತು ಪ್ರಧಾನ ಕಚೇರಿ (ಯಾವುದಾದರೂ ಇದ್ದರೆ) ವಿಳಾಸ	ನೋಂದಾಯಿತ ಕಛೇರಿ: ನಂ. 133/2, 4ನೇ ಮಹಡಿ, ಜನಾರ್ದನ್ ಟವರ್ಸ್ ರೆಸಿಡೆನ್ಸಿ ರಸ್ತೆ, ಬೆಂಗಳೂರು – 560 025.
6.	ಕಾರ್ಪೊರೇಟ್ ವ್ಯಕ್ತಿಗೆ ಸಂಬಂಧಿಸಿದಂತೆ ದಿವಾಳಿತನದ ಪ್ರಾರಂಭ ದಿನಾಂಕ	20-11-2024
7.	ದಿವಾಳಿತನ ಪ್ರಕ್ರಿಯೆಯ ಮುಕ್ತಾಯದ ಅಂದಾಜು ದಿನಾಂಕ	19-05-2025
8.	ಮಂಡಳಿಯಲ್ಲಿ ನೋಂದಾಯಿದಂತೆ ದಿವಾಳಿತನ ವೃತ್ತಿಪರ ಹೆಸರು ಮತ್ತು ನೋಂದಣಿ ಸಂಖ್ಯೆ	ಹೆಸರು : ಹರಿ ಟಿ ದೇವಾಡಿಗ Regn. No. IBBI/IPA-002/IP-N002/ 2018-19/12351
9.	ಮಂಡಳಿಯಲ್ಲಿ ನೋಂದಾಯಿಸಿದಂತೆ ಮಧ್ಯಂತರ ರೆಸಲ್ಯೂಶನ್ ವೃತ್ತಿಪರರ ವಿಳಾಸ ಮತ್ತು ಇಮೇಲ್	ವಿಳಾಸ: ನಂ. 3, ದೇವಿ ಕೃಪಾ, 7ನೇ ಮೈನ್, 3ನೇ ಹಂತ, ಅಯಪ್ಪ ನಗರ, ಕೆಆರ್ ಪುರಂ ಅಂಚೆ, ಬೆಂಗಳೂರು – 560036. ಇಮೇಲ್: devadiga_hari@hotmail.com
10.	ಮಧ್ಯಂತರ ರೆಸಲ್ಯೂಶನ್ ವೃತ್ತಿಪರರೊಂದಿಗೆ ಪತ್ರವ್ಯವಹಾರಕ್ಕಾಗಿ ಬಳಸಬೇಕಾದ ವಿಳಾಸ ಮತ್ತು ಇಮೇಲ್	ವಿಳಾಸ: ನಂ. 3, ದೇವಿ ಕೃಪಾ, 7ನೇ ಮೈನ್, 3ನೇ ಹಂತ, ಅಯಪ್ಪ ನಗರ, ಕೆಆರ್ ಪುರಂ ಅಂಚೆ, ಬೆಂಗಳೂರು – 560036. ಇಮೇಲ್: hariirpfourflavours@gmail.com
11.	ಕ್ಲೈಮಗಳನ್ನು ಸಲ್ಲಿಸಲು ಕೊನೆಯ ದಿನಾಂಕ	04-12-2024
12.	ವ್ಯಕ್ತಿಯ ವರ್ಗ, ಸೆಕ್ಷನ್ 21ರ ಉಪವಿಭಾಗ (6ಎ)ನ ಷರತ್ತು (ಬಿ) ಅಡಿಯಲ್ಲಿ ಯಾವುದಾದರೂ ಇದ್ದರೆ, ಮಧ್ಯಂತರ ರೆಸಲ್ಯೂಶನ್ ವೃತ್ತಿಪರರಿಂದ ಖಚಿತಪಡಿಸಿಕೊಳ್ಳಲಾಗುತ್ತದೆ	ಅನ್ವಯಿಸುವುದಿಲ್ಲ
13.	ಅಧಿಕೃತವಾಗಿ ಕಾರ್ಯನಿರ್ವಹಿಸಲು ಗುರುತಿಸಲಾದ ದಿವಾಳಿತನದ ವೃತ್ತಿಪರರ ಹೆಸರು ವ್ಯಕ್ತಿಯ ಪ್ರತಿನಿಧಿಯ ವರ್ಗ (ಪ್ರತಿ ವರ್ಗದ ಮೂರು ಹೆಸರು)	ಅನ್ವಯಿಸುವುದಿಲ್ಲ
14.	(ಎ) ಸಂಬಂಧಿತ ಫಾರಂಗಳು ಮತ್ತು (ಬಿ) ಅಧಿಕೃತ ಪ್ರತಿನಿಧಿಯ ವಿವರಗಳು	Form ‘c’ Web link : https://ibbi.gov.in /en/home/downloads N.A

20-11-2024 ರಂದು ಫೋರ್ ಫ್ಲೇವರ್ಸ್ ಎಲ್‌ಎಲ್‌ಪಿಯ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಯನ್ನು ಪ್ರಾರಂಭಿಸಲು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು, ಪ್ರಧಾನ ಪೀಠವು ಆದೇಶಿಸಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಫೋರ್ ಫ್ಲೇವರ್ಸ್ LLPಯ ವ್ಯಕ್ತಿಯ ತಮ್ಮ ಹಕ್ಕುಗಳನ್ನು 04-12-2024 ರಂದು ಅಥವಾ ಮೊದಲು ಪ್ರವೇಶ ಸಂಖ್ಯೆ 10ರ ವಿರುದ್ಧ ನಮೂದಿಸಲಾದ ವಿಳಾಸದಲ್ಲಿ ಮಧ್ಯಂತರ ರೆಸಲ್ಯೂಶನ್ ವೃತ್ತಿಪರರಿಗೆ ಪುರಾವೆಯೊಂದಿಗೆ ಸಲ್ಲಿಸಲು ಈ ಮೂಲಕ ಕರೆ ನೀಡಲಾಗಿದೆ.

ಹಣಕಾಸಿನ ವ್ಯಕ್ತಿಗಳು ತಮ್ಮ ಹಕ್ಕನ್ನು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮಾತ್ರ ಪುರಾವೆಯೊಂದಿಗೆ ಸಲ್ಲಿಸಬೇಕು. ಎಲ್ಲಾ ಇತರ ವ್ಯಕ್ತಿಗಳು ವೈಯಕ್ತಿಕವಾಗಿ, ಅಂಚೆ ಮೂಲಕ ಅಥವಾ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಪುರಾವೆಯೊಂದಿಗೆ ಕ್ಲೈಮ್‌ಗಳನ್ನು ಸಲ್ಲಿಸಬಹುದು.

ಕ್ಲೈಮ್‌ನ ಸುಳ್ಳು ಅಥವಾ ತಪ್ಪುದಾರಿಗೆಳೆಯುವ ಪುರಾವೆಗಳನ್ನು ಸಲ್ಲಿಸುವುದು ದಂಡಕ್ಕೆ ಆಕರ್ಷಿಸಿದಂತೆ.

ಹರಿ ಟಿ ದೇವಾಡಿಗ
ಮಧ್ಯಂತರ ರೆಸಲ್ಯೂಶನ್ ವೃತ್ತಿಪರರು
ಫೋರ್ ಫ್ಲೇವರ್ಸ್ ಎಲ್‌ಎಲ್‌ಪಿ
ರಿ. ಸಂ. IBBI/IPA-002/IP-N002/2018-19/12351
AFA 30-06-2025 ರವರೆಗೆ ಮಾನ್ಯವಾಗಿರುತ್ತದೆ

ದಿನಾಂಕ : 23-11-2024
ಸ್ಥಳ : ಬೆಂಗಳೂರು

ಎರಡು ದಿನದ ಮೊದಲೇ ಜಾತ್ರೆ ವಾತಾವರಣ ಸೃಷ್ಟಿ; ನಾಳೆ ಅಧಿಕೃತ ಚಾಲನೆ

ಕಡಲೆಕಾಯಿ ಪರಿಷೆ: ಕಳೆಗಟ್ಟಿದ ಬಸವನಗುಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಐತಿಹಾಸಿಕ ಕಡಲೆಕಾಯಿ ಪರಿಷೆಯ ಸೊಬಗು ಕಳೆಗಟ್ಟಿದೆ. ಪರಿಷೆಗೆ ಅಧಿಕೃತವಾಗಿ ಚಾಲನೆ ಸಿಗುವ ಎರಡು ದಿನದ ಮೊದಲೇ ಬಸವನಗುಡಿಯಲ್ಲಿ ಜಾತ್ರೆ ವಾತಾವರಣ ಸೃಷ್ಟಿಯಾಗಿದೆ.

ಕಾರ್ತೀಕ ಮಾಸದ ಕೊನೆ ಸೋಮವಾರ ದೊಡ್ಡ ಬಸವಣ್ಣ ದೇವಸ್ಥಾನದಲ್ಲಿ ಬಸವನಿಗೆ ಕಡಲೆಕಾಯಿ ಹಾಗೂ ಪುಷ್ಪಗಳಿಂದ ಅಲಂಕಾರ ಮಾಡಲಾಗುತ್ತದೆ. ನವೆಂಬರ್ 25ರಂದು ಬೆಳಿಗ್ಗೆ ಕಡಲೆಕಾಯಿ ಪರಿಷೆಗೆ ಅಧಿಕೃತವಾಗಿ ಚಾಲನೆ ಸಿಗಲಿದೆ.

ಬಸವನಗುಡಿ ರಸ್ತೆಯಲ್ಲಿ ನವೆಂಬರ್ 21ರಿಂದಲೇ ಕಡಲೆಕಾಯಿ ರಾಶಿ ಕಂಡು ಬಂತು. ಶುಕ್ರವಾರ ಅದರ ಪ್ರಮಾಣ ಹೆಚ್ಚಾಯಿತು. ಸರ್ಕಾರಿ ರಜೆಯಾಗಿದ್ದ ನಾಲ್ಕನೇ ಶನಿವಾರ ಮಧ್ಯಾಹ್ನದಿಂದಲೇ ಜನರೂ ಹೆಚ್ಚಾದರು. ಬಸವನಗುಡಿ ರಸ್ತೆಯಲ್ಲಿ ವಾಹನ ಸಂಚಾರದಟ್ಟಣೆ ಹೆಚ್ಚಾಯಿತು. ಸೋಮವಾರ ಮತ್ತು ಮಂಗಳವಾರ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಿಕೊಡಬೇಕಾಗಿದ್ದ ಸಂಚಾರ ಪೊಲೀಸರು ಶನಿವಾರ ಮಧ್ಯಾಹ್ನದಿಂದಲೇ ಮಾರ್ಗ ಬದಲಾವಣೆಗೆ ಅಣಿಯಾಗಿದ್ದರು.

ಕನಕಪುರ, ದೊಡ್ಡಬಳ್ಳಾಪುರ, ರಾಮನಗರ, ಮಾಗಡಿ, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಮೈಸೂರು, ಮಂಡ್ಯ, ತುಮಕೂರು ಕಡೆಗಳಿಂದ ಕಡಲೆಕಾಯಿಯನ್ನು ವ್ಯಾಪಾರಿಗಳು ಇಲ್ಲಿಗೆ ತಂದಿದ್ದಾರೆ.

ಸುಂಕೇನಹಳ್ಳಿಯಲ್ಲಿ ನಡೆಯುವ ಕಡಲೆಕಾಯಿ ಪರಿಷೆಯಲ್ಲಿ ಬಸವನಗುಡಿ ರಸ್ತೆಯ ಇಕ್ಕೆಲಗಳಲ್ಲಿ ವ್ಯಾಪಾರ ನಡೆಸಲು ಈ ಬಾರಿ ಯಾವುದೇ ಟೆಂಡರ್ ಅಥವಾ ಶುಲ್ಕ ಇಲ್ಲ. ಹೀಗಾಗಿ ವ್ಯಾಪಾರಿಗಳು ತಮ್ಮ ತಾಣಗಳನ್ನು ಗುರುವಾರದಿಂದಲೇ ಗುರುತಿಸಿಕೊಂಡು ಕುಳಿತಿದ್ದಾರೆ.

ಬಸನಗುಡಿ ರಸ್ತೆ ಕಡಲೆಕಾಯಿ ವ್ಯಾಪಾರಕ್ಕೆ ಸೀಮಿತವಾಗಿಲ್ಲ. ಮಕ್ಕಳ ಆಟಿಕೆಗಳು, ಆಲಂಕಾರಿಕ ವಸ್ತುಗಳು, ಹಲವು ರೀತಿಯ ತಿನಿಸುಗಳ ಮಾರಾಟವೂ ಹೆಚ್ಚಾಗಿದೆ.

ಪ್ಲಾಸ್ಟಿಕ್ ನಿಷೇಧ: ಕಡಲೆಕಾಯಿ ಪರಿಷೆಯಲ್ಲಿ ‘ಪರಿಷೆಗೆ ಬನ್ನಿ ಕೈಚೀಲ ತನ್ನಿ’ ಎಂಬ ಘೋಷಣೆ ಅಲ್ಲಲ್ಲಿ ಕಾಣುತ್ತಿದೆ. ಪ್ಲಾಸ್ಟಿಕ್ ಚೀಲಗಳ ಬದಲಿಗೆ ಬಟ್ಟೆ ಬ್ಯಾಗ್‌ಗಳನ್ನು ಬಳಸುವಂತೆ ಹೇಳಲಾಗುತ್ತಿದೆ.

ಉದ್ಘಾಟನೆ: ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ನವೆಂಬರ್ 25ರಂದು ಬೆಳಿಗ್ಗೆ 10 ಗಂಟೆಗೆ ಕಡಲೆಕಾಯಿ ಪರಿಷೆಯನ್ನು ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿದ್ದಾರೆ. ಬ್ಯೂಗಲ್ ರಾಕ್ ಉದ್ಯಾನ ಹಾಗೂ ನರಸಿಂಹಸ್ವಾಮಿ ಉದ್ಯಾನದಲ್ಲಿ ನ.25 ಮತ್ತು26ರಂದು ಸಂಜೆ 6ರಿಂದ ರಾತ್ರಿ 9.30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕೆಂಪಾಂಬುಧಿ ಕೆರೆಯಲ್ಲಿ ನ.25ರಂದು ಸಂಜೆ 6 ಗಂಟೆಗೆ ತೆಪ್ಪೋತ್ಸವ ನಡೆಯಲಿದೆ.

ಬಸವನಗುಡಿಯ ಕಡಲೆಕಾಯಿ ಪರಿಷೆ ಸೋಮವಾರ ಆರಂಭವಾಗಲಿದ್ದು, ನಾಗರಿಕರು ಶನಿವಾರ ಸಂಜೆಯಿಂದಲೇ ಕಡಲೆಕಾಯಿ ಖರೀದಿಸುತ್ತಿದ್ದುದು ಕಂಡುಬಂತು –ಪ್ರಜಾವಾಣಿ ಚಿತ್ರ

ವಾಹನ ಸಂಚಾರ: ಮಾರ್ಗ ಬದಲಾವಣೆ

ಬಸವನಗುಡಿಯಲ್ಲಿ ಕಡಲೆಕಾಯಿ ಪರಿಷೆ ನಡೆಯುವುದರಿಂದ ವಾಹನ ಸಂಚಾರ ವ್ಯವಸ್ಥೆಯಲ್ಲಿ ಹಲವು ಬದಲಾವಣೆ ಮಾಡಲಾಗಿದೆ. ವಾಹನ ಸವಾರರು ಸಾಧ್ಯವಾದಷ್ಟು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಬೇಕು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಲಾಲ್‌ಬಾಗ್ ವೆಸ್ಟ್ ಗೇಟ್, ಚಾಮರಾಜಪೇಟೆ, ಬುಲ್ ಟೆಂಪಲ್ ಮೂಲಕ ಹನುಮಂತನಗರದ ಕಡೆಗೆ ಸಂಚರಿಸುವ ವಾಹನಗಳು ರಾಮಕೃಷ್ಣ ಆಶ್ರಮ ವೃತ್ತದಲ್ಲಿ ಬಲ ತಿರುವು ಪಡೆದು ಸೀತಾರಾಮಯ್ಯ (ಹಯವದನರಾವ್) ರಸ್ತೆಯಲ್ಲಿ ಸಾಗಿ, ಗವಿಪುರ 3ನೇ ಅಡ್ಡರಸ್ತೆ, ಮೌಂಟ್ ಜಾಯ್ ರಸ್ತೆ ಮಾರ್ಗವಾಗಿ ಸಾಗಬೇಕು.

ಆರ್‌.ವಿ. ಟೀಚರ್ಸ್ ಕಾಲೇಜು ಜಂಕ್ಷನ್, ಟ್ರಿನಿಟಿ ಆಸ್ಪತ್ರೆ ರಸ್ತೆ, ಕೆ.ಆರ್. ರಸ್ತೆ, ಬ್ಯೂಗಲ್ ರಾಕ್ ರಸ್ತೆಯಿಂದ ಹನುಮಂತನಗರ ಕಡೆಗೆ ಹೋಗುವ ವಾಹನಗಳು ಠಾಗೋರ್ ಸರ್ಕಲ್‌ನಲ್ಲಿ ಬಲ ತಿರುವು ಪಡೆದು ಗಾಂಧಿ ಬಜಾರ್ ಮುಖ್ಯ ರಸ್ತೆ ಮೂಲಕ ರಾಮಕೃಷ್ಣ ಆಶ್ರಮ ಜಂಕ್ಷನ್, ಸೀತಾರಾಮಯ್ಯ ರಸ್ತೆ, ಗವಿಪುರ ಬಡಾವಣೆ 3ನೇ ಅಡ್ಡ ರಸ್ತೆ, ಮೌಂಟ್ ಜಾಯ್ ರಸ್ತೆ ಮಾರ್ಗವಾಗಿ ಸಂಚರಿಸಬೇಕು.

ತ್ಯಾಗರಾಜನಗರ, ಬನಶಂಕರಿ, ಎನ್‌.ಆರ್. ಕಾಲೊನಿ, ಬುಲ್ ಟೆಂಪಲ್ ರಸ್ತೆ ಕಡೆಯಿಂದ ಚಾಮರಾಜಪೇಟೆ ಕಡೆಗೆ ಹೋಗುವ ವಾಹನಗಳು ಕಾಮತ್ ಯಾತ್ರಿ ನಿವಾಸ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಆಶೋಕನಗರ 2ನೇ ಕ್ರಾಸ್ (ಬಿಎಂಎಸ್ ಕಾಲೇಜು ಹಾಸ್ಟೆಲ್ ರಸ್ತೆ) ರಸ್ತೆಯಲ್ಲಿ ಸಾಗಿ ಕತ್ರಿಗುಪ್ಪೆ ರಸ್ತೆ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು 3ನೇ ಮುಖ್ಯರಸ್ತೆ, ನಾರಾಯಣಸ್ವಾಮಿ ಸರ್ಕಲ್, ಕೆ.ಜಿ. ನಗರ ಮುಖ್ಯರಸ್ತೆ ಅಥವಾ ಸೀತಾರಾಮಯ್ಯ ರಸ್ತೆ, ರಾಮಕೃಷ್ಣ ಆಶ್ರಮ ಜಂಕ್ಷನ್ ಮಾರ್ಗವಾಗಿ ಸಾಗಬೇಕು ಎಂದು ತಿಳಿಸಿದ್ದಾರೆ.

ಇಂದು ಸಾರ್ವಜನಿಕ ಸಭೆ ಸಂಚಾರದಲ್ಲಿ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲಕೇಶಿ ನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮಿಲ್ಲರ್ಸ್ ರಸ್ತೆ ಈದ್ಗಾ ಖುದ್ದೂಸ್ ಸಾಹೇಬ್ ಮೈದಾನದಲ್ಲಿ (ಓಲ್ಡ್ ಹಜ್ ಕ್ಯಾಂಪ್) ನವೆಂಬರ್ 24ರಂದು ಸಾರ್ವಜನಿಕ ಸಭೆ ಆಯೋಜಿಸಿರುವುದರಿಂದ ಮೈದಾನದ ಸುತ್ತಮುತ್ತ ವಾಹನ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ.

ಸಭೆಯಲ್ಲಿ ಅಂದಾಜು ಎರಡು ಲಕ್ಷ ಜನರು ಭಾಗವಹಿಸುವ ನಿರೀಕ್ಷೆಯಿದ್ದು, ವಾಹನ ದಟ್ಟಣೆ ಸಾಧ್ಯತೆಯಿದೆ. ಹಾಗಾಗಿ ಸುಗಮ ಸಂಚಾರದ ದೃಷ್ಟಿಯಿಂದ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರ್ಯಾಯ ಮಾರ್ಗ: ಮಿಲ್ಲರ್ಸ್ ರಸ್ತೆಯ ಹೇನ್ಸ್ ರಸ್ತೆ ಕಡೆಗೆ ಹೋಗುವ ವಾಹನ ಸವಾರರು ಮಿಲ್ಲರ್ಸ್ ರಸ್ತೆಯಲ್ಲಿ ಬಲ ತಿರುವು ಪಡೆದು ಕಂಟೋನ್ಮೆಂಟ್ ರೈಲು ನಿಲ್ದಾಣ ಮುಂಭಾಗ ಕಂಟೋನ್ಮೆಂಟ್ ರಸ್ತೆಯಲ್ಲಿ ನೇರವಾಗಿ ಸಾಗಿ ಬಂಬೂ ಬಜಾರ್ ಜಂಕ್ಷನ್, ನೇತಾಜಿ ರಸ್ತೆ ಮೂಲಕ ಪುಲಕೇಶಿ ನಗರದ ಕಡೆಗೆ ಸಂಚರಿಸಬೇಕು.

ಹೇನ್ಸ್ ರಸ್ತೆ ಕಡೆಯಿಂದ ಮಿಲ್ಲರ್ಸ್ ರಸ್ತೆ ಕಡೆಗೆ ಹೋಗುವ ವಾಹನ ಸವಾರರು ಹೇನ್ಸ್ ರಸ್ತೆ ಜಂಕ್ಷನ್‌ನಿಂದ ಹೇನ್ಸ್ ರಸ್ತೆಯಲ್ಲಿ ನೇರವಾಗಿ ಸಾಗಿ ಧನಕೋಟಿ ರಸ್ತೆಯಲ್ಲಿ ಬಲಕ್ಕೆ ತಿರುಗಿ ಎ.ಎಂ.ರಸ್ತೆ, ಬಂಬೂ ಬಜಾರ್, ಕಂಟೋನ್ಮೆಂಟ್ ರಸ್ತೆ, ಕ್ವೀನ್ಸ್ ರಸ್ತೆ, ತಿಮ್ಮಯ್ಯ ರಸ್ತೆ, ಜಯಮಹಲ್ ರಸ್ತೆ ಮಾರ್ಗವಾಗಿ ಹೋಗಬೇಕು.

ನಂದಿ ದುರ್ಗ ರಸ್ತೆ ಕಡೆಯಿಂದ ಹೇನ್ಸ್ ರಸ್ತೆ ಕಡೆಗೆ ಹೋಗುವ ವಾಹನಗಳು ನಂದಿದುರ್ಗ ರಸ್ತೆ ಕ್ರಾಸ್ ರಸ್ತೆಯಲ್ಲಿ ಎಡಕ್ಕೆ ತಿರುಗಿ ಬೆನ್ಸನ್ ಕ್ರಾಸ್ ರಸ್ತೆಯಲ್ಲಿ ನೇರವಾಗಿ ಸಾಗಿ ಬೋರ್ ಬಂಕ್ ರಸ್ತೆಯಲ್ಲಿ ಎಡ ತಿರುವು ಪಡೆಯಬೇಕು. ನಂತರ ಪಾಟರಿ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಪುಲಿಕೇಶಿ ನಗರದ ಕಡೆಗೆ ಸಂಚರಿಸಬೇಕು.

ಪಾರ್ಕಿಂಗ್ ನಿರ್ಬಂಧ: ಕಂಟೋನ್ಮೆಂಟ್ ರಸ್ತೆ, ಸೇಂಟ್ ಜಾನ್ಸ್ ಚರ್ಚ್ ರಸ್ತೆ, ಮಿಲ್ಲರ್ಸ್ ರಸ್ತೆ, ನಂದಿ ದುರ್ಗ ರಸ್ತೆ, ಹೇನ್ಸ್ ರಸ್ತೆ, ನೇತಾಜಿ ರಸ್ತೆ, ಎಚ್‌.ಎಂ.ರಸ್ತೆ, ಎಂ.ಎಂ ರಸ್ತೆಯಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ.

ಪಾರ್ಕಿಂಗ್‌ಗೆ ಸ್ಥಳಾವಕಾಶ: ಕಾರ್ಯಕ್ರಮಕ್ಕೆ ಬರುವವರಿಗೆ ವಾಹನಗಳ ನಿಲುಗಡೆಗೆ ಅರಮನೆ ಮೈದಾನದ ಸರ್ಕಸ್ ಮೈದಾನ, ಅರಮನೆ ಮೈದಾನದ ಚಾಮರವಜ್ರ ಗೇಟ್, ಜಯಮಹಲ್ ಬಿಬಿಎಂಪಿ ಮೈದಾನ, ಮೌಂಟ್ ಕಾರ್ಮೆಲ್ ಕಾಲೇಜು ಮೈದಾನ, ಕಮಲಾಬಾಯಿ ಶಾಲಾ ಮೈದಾನ, ಕ್ಲಾರೆನ್ಸ್ ಮೈದಾನ, ಈಸ್ಟ್ ಫುಟ್‌ಬಾಲ್ ಮೈದಾನ, ಅಣ್ಣಸ್ವಾಮಿ ಮೈದಾನ ಹಾಗೂ ಚಾರ್ಲ್ಸ್ ಮೈದಾನದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಂಚಾರ ನಿರ್ಬಂಧ

- ಮಿಲ್ಲರ್ಸ್ ರಸ್ತೆಯ ಕಂಟೋನ್ಮೆಂಟ್ ರೈಲ್ವೆ ಕೆಳ ಸೇತುವೆಯಿಂದ ಹೇನ್ಸ್ ರಸ್ತೆ ಜಂಕ್ಷನ್ ವರೆಗೆ ಎರಡೂ ಬದಿ
- ಹೇನ್ಸ್ ರಸ್ತೆ ಜಂಕ್ಷನ್‌ನಿಂದ ಮಿಲ್ಲರ್ಸ್ ರಸ್ತೆಯ ಕಂಟೋನ್ಮೆಂಟ್ ರೈಲ್ವೆ ಕೆಳ ಸೇತುವೆವರೆಗೆ ಎರಡೂ ಬದಿ.
- ನಂದಿದುರ್ಗ ರಸ್ತೆಯಲ್ಲಿ ಬೆನ್ಸನ್ ಕ್ರಾಸ್ ರಸ್ತೆ ಜಂಕ್ಷನ್ ನಿಂದ ಮಿಲ್ಲರ್ಸ್ ರಸ್ತೆ ಜಂಕ್ಷನ್ ನವರೆಗೆ ಎರಡೂ ಬದಿ



‘ಭಾಷೆಯ ನಿರ್ಲಕ್ಷ್ಯ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶಾಲ ಭಾಷಿಗರಾದ ಕನ್ನಡಿಗರು ಇದೀಗ ಅಭಿಮಾನದ ಅಭಿರುಚಿ ಬೆಳೆಸಿಕೊಳ್ಳಬೇಕಾಗಿದೆ. ತಮ್ಮ ಭಾಷೆ ಬಗ್ಗೆ ದಿವ್ಯ ನಿರ್ಲಕ್ಷ್ಯ ತಳೆದು, ಅನ್ಯ ಭಾಷೆ, ಸಂಸ್ಕೃತಿಗಳಿಗೆ ಮಾರು-ಹೋಗುತ್ತಿರುವುದು ದುರದೃಷ್ಟಕರ’ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ವಿಷಾದಿಸಿದರು.

ರಾಜಾಜಿನಗರದ ಆರ್‌ಪಿಎ ಶಿಕ್ಷಣ ಸಂಸ್ಥೆ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಕನ್ನಡ ಭಾಷೆಯ ಇತಿಹಾಸ ಅತ್ಯಂತ ಪ್ರಾಚೀನವಾಗಿದ್ದು, ಭಾರತದ ಮೊದಲ ನಾಗರಿಕತೆಯ ಹರಪ್ಪಾದಲ್ಲೇ ಕನ್ನಡವಿದೆ. ಹರಪ್ಪ ಪದವನ್ನು ಬಿಡಿಸಿದರೆ ಹರ ಮತ್ತು ಅಪ್ಪ ಎರಡೂ ಅಚ್ಚ ಕನ್ನಡ ಪದಗಳಾಗಿವೆ. ದ್ರಾವಿಡ ಸಂಸ್ಕೃತಿ ಭರತಖಂಡದ ಮೂಲವಾಗಿದ್ದು ಕನ್ನಡವು ಇದರ ನಿಜ ಉತ್ತರಾಧಿಕಾರಿ. ಕನ್ನಡದ ರಾಜ ಮನೆತನಗಳು ಗುಜರಾತ್, ವೆಂಗಿ, ಬಂಗಾಳ, ಉತ್ತರ ಭಾರತದ ಹಲವೆಡೆ ರಾಜ್ಯ ಕಟ್ಟಿದವರು. ನೇಪಾಳದಲ್ಲಿಯೂ ಕನ್ನಡದ ಕುರುಹುಗಳಿವೆ’ ಎಂದು ವಿವರಿಸಿದರು. ‘ಕನ್ನಡದ ವೀರರು - ಕವಿಪುಂಗವರನ್ನು ಜಾತಿ ಮೂಲಗಳಿಂದ ಹುಡುಕುತ್ತಿರುವುದು ಬೇಸರದ ಸಂಗತಿ. ಗಂಗರನ್ನು ಶೈವ-ಜೈನ-ಒಕ್ಕಲಿಗರಾಗಿ ಕಾಣುವುದು, ವಿಜಯನಗರದ ಸಂಗಮ ವಂಶಸ್ಥರನ್ನು ಹಾಲು ಮತಸ್ಥರು - ವೀರಶೈವರು ತಮ್ಮವರೆಂದು ಭಾವಿಸುವುದು, ಬಸವಣ್ಣ - ಕನಕ - ಸಂಗೊಳ್ಳಿರಾಯಣ್ಣರನ್ನು ತಮ್ಮ ತಮ್ಮವರೆಂದು ಗುರುತಿಸುವುದೇ ತಪ್ಪು’ ಎಂದರು. ಸಂಸ್ಥೆಯ ಅಧ್ಯಕ್ಷ ಮೃತ್ಯುಂಜಯ ಮಾತನಾಡಿ, ‘ರಾಜಧಾನಿಯಲ್ಲಿ ಕನ್ನಡವನ್ನು ಉಳಿಸಿ ಬೆಳೆಸಬೇಕಾದ್ದು ವಿದ್ಯಾರ್ಥಿಗಳ ಕರ್ತವ್ಯ. ತಮ್ಮ ಸಂಸ್ಥೆಯ ದೈನಂದಿನ ವ್ಯವಹಾರ-ದಲ್ಲಿ ಕನ್ನಡವನ್ನು ಆದ್ಯತೆಯಾಗಿ ಬಳಸಿ, ಕನ್ನಡ ಚಟುವಟಿಕೆಗಳಿಗೆ ಸಂಸ್ಥೆ ಸದಾ ಪ್ರೋತ್ಸಾಹಿಸುತ್ತಿದೆ’ ಎಂದು ತಿಳಿಸಿದರು.

ಸಂಸ್ಥೆ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಕಾರ್ಯದರ್ಶಿ ನಟರಾಜ್ ಸಾಗರನಹಳ್ಳಿ, ಖಜಾಂಚಿ ದೇವರಸೇಗೌಡ, ಜಂಟಿ ಕಾರ್ಯದರ್ಶಿ ಮೃತ್ಯುಂಜಯಸ್ವಾಮಿ, ನಿರ್ದೇಶಕಿ ಗೀತಾಶೆಟ್ಟಿ, ವಚನಜ್ಯೋತಿ ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ರಂಗಕರ್ಮಿ ಲೋಕೇಶ್ ಉಪಸ್ಥಿತರಿದ್ದರು.

ರಾಜಾಜಿನಗರದ ಆರ್‌ಪಿಎ ಶಿಕ್ಷಣ ಸಂಸ್ಥೆ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮತ್ತು ರಂಗಕರ್ಮಿ ಲೋಕೇಶ್ ಅವರನ್ನು ಅಭಿನಂದಿಸಲಾಯಿತು. ಸಂಸ್ಥೆ ಅಧ್ಯಕ್ಷ ಮೃತ್ಯುಂಜಯ ಹಾಗೂ ಪದಾಧಿಕಾರಿಗಳು ಹಾಜರಿದ್ದರು

ನಗರದಲ್ಲಿ ಇಂದು

ಕನ್ನಡಕ್ಕಾಗಿ ನಡಿಗೆ: ಅಧ್ಯಕ್ಷತೆ: ಯೋಗರಾಜ್ ಭಟ್, ಮುಖ್ಯ ಅತಿಥಿಗಳು: ಉದಯ್ ಬಿ. ಗರುಡಾಚಾರ್, ಎಂ.ಎನ್. ಅನುಚೇತ್, ಶಿವಪ್ರಕಾಶ್ ದೇವರಾಜು, ರಾಕೇಶ್ ಮಯ್ಯ, ಆಯೋಜನೆ: ಕಾರ್ಪೊರೇಟ್ ಕನ್ನಡಿಗರು, ಸ್ಥಳ: ಶ್ರೀರಾಮ ವಿದ್ಯಾಲಯ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಳಿಗ್ಗೆ 7



ಯೋಗರಾಜ್ ಭಟ್

ಬೃಹತ್ ರಕ್ತದಾನ ಶಿಬಿರ: ಆಯೋಜನೆ: ವರ್ಲ್ಡ್ ಮಿಷನ್ ಸೊಸೈಟಿ ಚರ್ಚ್ ಆಫ್ ಗಾಡ್, ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಳಿಗ್ಗೆ 9

ಕರ್ನಾಟಕ ರಾಜ್ಯೋತ್ಸವ: ಧ್ವಜಾರೋಹಣ: ಸಿ. ಕೃಷ್ಣಪ್ಪ, ಉದ್ಘಾಟನೆ: ತಲಕಾಡು ಚಿಕ್ಕರಂಗೇಗೌಡ, ಅಧ್ಯಕ್ಷತೆ: ರುದ್ರೇಗೌಡ, ಆಯೋಜನೆ: ಸರ್ವೋದಯ ಹಿರಿಯ ನಾಗರಿಕರ ವೇದಿಕೆ, ಸ್ಥಳ: ಈಸ್ಟ್ ವೆಸ್ಟ್ ಶಾಲೆ ಆವರಣ, ರಾಜಾಜಿನಗರ, ಬೆಳಿಗ್ಗೆ 10

ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ಶ್ರದ್ಧಾಂಜಲಿ ಕಾರ್ಯಕ್ರಮ: ಅನುರಾಧ ಕೋಡಿಹಳ್ಳಿ, ವೆಂಕಟೇಶ್ ಎಂ., ಬಿ.ಕೆ. ಮುರಳಿ, ಮಹೇಶ್ ಹೊಸಮನಿ, ಭಾಸ್ಕರ ರಾವ್, ಆಯೋಜನೆ: ಹೆರಿಟೇಜ್ ಬಸವನಗುಡಿ ರೆಸಿಡೆಂಟ್ಸ್ ವೆಲ್ಫೇರ್ ಫೋರಂ, ಸ್ಥಳ: ಡಾ.ಎಚ್‌.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10

ಕಾವ್ಯ ಸಂಜೆಯ ಕಾವ್ಯ ಹಬ್ಬ: ಉದ್ಘಾಟನೆ: ಎಲ್. ಎನ್. ಮುಕುಂದರಾಜ್, ‘ಓಡಾಟ’ ಪುಸ್ತಕ ಬಿಡುಗಡೆ: ಮೇನಕಾ ಲೋಡ್ರಿಗಸ್, ಪುಸ್ತಕದ ಬಗ್ಗೆ ಮಾತು: ಸುಮನಾ ಚಂದ್ರಶೇಖರ್, ಅಧ್ಯಕ್ಷತೆ: ಮಮತಾ ಸಾಗರ, ಆಯೋಜನೆ: ಕಾವ್ಯ ಸಂಜೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

‘ಶ್ರೀ ಸಹಸ್ರಾರ್ಜುನ ಮಹಾರಾಜ’ರ ಜಯಂತಿ ಮಹೋತ್ಸವ: ಅಧ್ಯಕ್ಷತೆ: ಸ್ವಾಮಿಸಾ ಎಲ್. ಖೋಡೆ, ಧ್ವಜಾರೋಹಣ: ಎಂ. ಕೃಷ್ಣಪ್ಪ, ಫ್ಲೀ ಮಾರ್ಕೆಟ್ ಉದ್ಘಾಟನೆ: ಪ್ರಿಯಕೃಷ್ಣ, ಉದ್ಘಾಟನೆ: ದಿನೇಶ್ ಗುಂಡೂರಾವ್, ಪಿ.ಸಿ. ಮೋಹನ್, ನಾರಾಯಣಸಾ ಕೆ. ಭಾಂಡಗೆ, ಶ್ರೀನಿವಾಸ ಶ್ರೀಹರಿ ಖೋಡೆ, ಡಮಾಮ್ ವಿ. ಸತ್ಯನಾರಾಯಣ, ಆಯೋಜನೆ: ಶ್ರೀ ರಾಜರಾಜೇಶ್ವರ ಸಹಸ್ರಾರ್ಜುನ ಮಹಾರಾಜ ಜಯಂತಿ ಸಮಿತಿ, ಸ್ಥಳ: ಬಂಟರ ಸಂಘ, ವಿಜಯನಗರ, ಬೆಳಿಗ್ಗೆ 11

ದತ್ತಿ ಉಪನ್ಯಾಸ: ‘ಚಿಂತಾಮಣಿ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದ ಹೆಜ್ಜೆ ಗುರುತುಗಳು’ ಉಪನ್ಯಾಸ: ಟಿ.ವಿ. ನಾಗರಾಜ, ‘ವೈದಿಕ ಭಾರತ ಮತ್ತು ವೇದೋತ್ತರ ಭಾರತೀಯ ರಾಜಕೀಯ ಸಾಮಾಜಿಕ ಸ್ಥಿತಿ–ಒಂದು ಚಿಂತನೆ’: ಸದ್ಯೋಜಾತ ಭಟ್ಟ, ಆಯೋಜನೆ ಹಾಗೂ ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

‘ಆರ್ಗ್ಯಾನಿಕ್ ಸಂತೆ’ 50ನೇ ಸಂಭ್ರಮ: ಉದ್ಘಾಟನೆ: ಕೃಷ್ಣಬೈರೇಗೌಡ, ಅಧ್ಯಕ್ಷತೆ: ಜಯಮಾಲಾ, ಮುಖ್ಯ ಅತಿಥಿ: ಚುಕ್ಕಿ ನಂಜುಂಡಸ್ವಾಮಿ, ಉಪಸ್ಥಿತಿ: ಎಚ್‌.ಆರ್. ಜಯರಾಮ್, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾತ್ ರೆಸ್ಟೋರೆಂಟ್, ಮಲ್ಲೇಶ್ವರ, ಬೆಳಿಗ್ಗೆ 11.30

‘ಬೊಂಬೆ ಹಬ್ಬ’ ಮಕ್ಕಳ ಕಿರು ನಾಟಕೋತ್ಸವ: ನಾಟಕಗಳು: ‘ಚಿತ್ರವಿಚಿತ್ರ ರಾಜ’, ‘ವಿಶೇಷಚೇತನರು’, ‘ಮೂರು ಮುಖಗಳು’, ‘ಸ್ವರಾಜ್ಯದ ಕನಸು’, ಆಯೋಜನೆ ಹಾಗೂ ಸ್ಥಳ: ವಿಜಯನಗರ ಬಿಂಬ, ವಿಜಯನಗರ 2ನೇ ಹಂತ, ಬೆಳಿಗ್ಗೆ 11 ಮತ್ತು ಸಂಜೆ 6

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಪಿ. ಗೌರಿಶಂಕರ್, ಮುಖ್ಯ ಅತಿಥಿಗಳು: ವೇಮಗಲ್ ನಾರಾಯಣಸ್ವಾಮಿ, ಭಾಗ್ಯಲಕ್ಷ್ಮಿ ಮಗ್ಗೆ, ಅಧ್ಯಕ್ಷತೆ: ಎಂ. ಚಿಕ್ಕಪ್ಪಯ್ಯ, ಆಯೋಜನೆ: ಭಾರತೀಯ ಕರ್ನಾಟಕ ಸಂಘ, ಸ್ಥಳ: ಕಬಿನಿ ಸಭಾಂಗಣ, ಇಂದಿರಾನಗರ ಕ್ಲಬ್, ಎಚ್‌ಎಎಲ್ 2ನೇ ಹಂತ, ಮಧ್ಯಾಹ್ನ 2

ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಚಲನಚಿತ್ರ ಗೀತೆಗಳ ಗಾಯನ: ಎಚ್‌.ಕೆ. ರಘು, ಪಿ.ಆರ್. ಶ್ರೀನಿವಾಸನ್, ಶೈಲಜಾ ವಿ., ಸಿರಿ ಚಂದ್ರಶೇಖರ್, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್‌.ಆರ್. ಕಾಲೊನಿ, ಮಧ್ಯಾಹ್ನ 3.30

ಮುತ್ತುಸ್ವಾಮಿ ದೀಕ್ಷಿತರ ಆರಾಧನಾ ಮಹೋತ್ಸವ ಮತ್ತು ಕನಕದಾಸ ಜಯಂತಿ: ಉದ್ಘಾಟನೆ: ಸುಧಾಮಣಿ, ಅಧ್ಯಕ್ಷತೆ: ಜೆ.ಎಸ್. ಶ್ರೀಕಂಠ ಭಟ್, ಸಂಗೀತ ಕಛೇರಿ, ಆಯೋಜನೆ: ಶ್ರೀ ಅನುಗ್ರಹ ಸಂಗೀತ ಮಹಾವಿದ್ಯಾಲಯ, ಸ್ಥಳ: ಸ್ವಾಮಿ ವಿವೇಕಾನಂದ ವಿದ್ಯಾಶಾಲೆ, ಬನಶಂಕರಿ 1ನೇ ಹಂತ, ಮಧ್ಯಾಹ್ನ 3.30

ಸಂಪ್ರದಾ ಪಾಟೀಲ್

ರಂಗ ಪ್ರವೇಶ: ಸಂಪ್ರದಾ ಪಾಟೀಲ್, ಮಾರ್ಗದರ್ಶನ: ತನುಜಾ ರಾಜ್, ಅತಿಥಿಗಳು: ಸವಿತಾ ಅರುಣ್, ಶಶಿಧರ್ ಕೋಟೆ, ಪ್ರವೀಣಾ ಪ್ರೇಮದಾಸ್, ಆಯೋಜನೆ: ಸಂಜೀವಿನಿ ಕಲಾ ಸಂಸ್ಥೆ, ಸ್ಥಳ: ರವಿಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಕದಂಬಿನಿ ಎಸ್. ಭರತನಾಟ್ಯ ರಂಗ ಪ್ರವೇಶ: ಆಯೋಜನೆ: ನಾಟ್ಯೇಶ್ವರ ನೃತ್ಯ ಶಾಲೆ, ಸ್ಥಳ: ತೆಲುಗು ವಿಜ್ಞಾನ ಸಮಿತಿ, ಮಲ್ಲೇಶ್ವರ, ಮಧ್ಯಾಹ್ನ 2.30

ಕನ್ನಡ ಗೀತ ಗಾಯನ ಹಾಗೂ 69ನೇ ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಜಿ.ಎಸ್. ನಾರಾಯಣಸ್ವಾಮಿ, ಅಧ್ಯಕ್ಷತೆ: ಪಿ.ಎಸ್. ಶ್ರೀನಿವಾಸಾಚಾರ್, ಅತಿಥಿ: ವಿ. ರಾಣಿ ಗೋವಿಂದರಾಜು, ಬಿ.ಎನ್. ಶ್ರೀಕೀರ್ತಿ, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ–ಕಲಾ ಅಕಾಡೆಮಿ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಕರ್ನಾಟಕ ರಾಜ್ಯೋತ್ಸವ ಹಾಗೂ ನಾಟಕ ಪ್ರದರ್ಶನ: ಅಧ್ಯಕ್ಷತೆ: ಲೋಕನಾಥ್ ದೀಕ್ಷಿತ್, ಮುಖ್ಯ ಅತಿಥಿ: ಕೆ.ವಿ. ನಾಗರಾಜಮೂರ್ತಿ, ನಾಟಕ: ‘ಭಾಗವತರ ನಾಟಕ ಮಂಡಳಿ’, ಆಯೋಜನೆ: ರಂಗಸಂಸ್ಕೃತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ಪಿ.ಶೇಷಾದ್ರಿ ಅವರ ಸಿನಿಮಾಲೋಕನ ಕುರಿತ ನಾಲ್ಕು ಪುಸ್ತಕಗಳ ಬಿಡುಗಡೆ: ಶಾಲಿನಿ ರಜನೀಶ್, ಉಪಸ್ಥಿತಿ: ಗಿರೀಶ್ ಕಾಸರವಳ್ಳಿ, ರಾಜೇಂದ್ರಸಿಂಗ್ ಬಾಬು, ಟಿ.ಎಸ್. ನಾಗಾಭರಣ, ಟಿ.ಎನ್. ಸೀತಾರಾಮ್, ಬಸಂತಕುಮಾರ ಪಾಟೀಲ, ಆಯೋಜನೆ ಹಾಗೂ ಸ್ಥಳ: ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ, ಸಂಜೆ 4.30

ಪಿ.ಶೇಷಾದ್ರಿ

ಪುರಂದರದಾಸರ ಪಂಚರತ್ನ ಮಾಲಿಕೆ ಗೋಷ್ಠಿ ಗಾಯನ: ಶರತ್ ಆರ್‌.ರಾವ್, ಸಂಧ್ಯಾ ಶ್ರೀನಾಥ್ ಮತ್ತು ವೃಂದ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀ ರಾಮ ಮಂದಿರ, ಮಲ್ಲೇಶ್ವರ, ಸಂಜೆ 5

ಸಂಗೀತ ಕಛೇರಿ: ಕೃತಿಕಾ ಶ್ರೀನಿವಾಸನ್, ಶುಶೃತ್ ಕಣತೂರ್, ಕಾರ್ತಿಕ್ ಭಟ್, ಪ್ರಣವ್ ದತ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀ ರಮಣ ಮಹರ್ಷಿ ಅಕಾಡೆಮಿ ಫಾರ್ ದಿ ಬ್ಲೈಂಡ್, ಜೆ.ಪಿ.ನಗರ, ಸಂಜೆ 5.30

‘ವೆಂಕಟಗಿರಿ ಮಹಾತ್ಮೆ’ ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಹಾಗೂ ಸ್ಥಳ: ವಿಜಯ ಮಧ್ವ ಸಂಘ, #37/2, ಗಂಗಾಧರ ಬಡಾವಣೆ, 2ನೇ ಮುಖ್ಯರಸ್ತೆ, ವಿಜಯನಗರ, ಸಂಜೆ 6.30

‘ಪುಕ್ಕಟೆ ಸಲಹೆ’ ಹಾಸ್ಯ ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾ ಭವನ , ಎನ್. ಆರ್. ಕಾಲೊನಿ, ಸಂಜೆ 5 ಮತ್ತು 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕನ್ನಡ ಸಾಹಿತ್ಯ ಪರಿಷತ್ತಿನಿಂದ ವಿವಿಧ ದತ್ತಿ ಪ್ರಶಸ್ತಿಗಳ ಪ್ರದಾನ

‘ಕರ್ನಾಟಕ ರಾಜ್ಯೋತ್ಸವ ನಿತ್ಯೋತ್ಸವವಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯೋತ್ಸವದ ಆಚರಣೆ ನಿತ್ಯೋತ್ಸವವಾಗಬೇಕು. ಕನ್ನಡಿಗರು ತಮ್ಮ ಭಾಷೆಗೆ ಸಮರ್ಪಿಸಿಕೊಳ್ಳುವ ಕೆಲಸವನ್ನು ನಿತ್ಯವೂ ಮಾಡಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶನಿವಾರ ಹಮ್ಮಿಕೊಂಡ ಕರ್ನಾಟಕ ರಾಜ್ಯೋತ್ಸವ ಮತ್ತು ಪರಿಷತ್ತಿನ ವಿವಿಧ ದತ್ತಿ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು

‘ಕನ್ನಡ ಭಾಷೆಗೆ ಅಪಾರ ಕೊಡುಗೆ ನೀಡಿದ ಹಲವು ಹಿರಿಯರ ಮಾತೃಭಾಷೆ ಕನ್ನಡವಾಗಿರಲಿಲ್ಲ. ಅಷ್ಟೇ ಅಲ್ಲ, ವಿದೇಶದಿಂದ ಬಂದ ಮೊಗ್ಲಿಂಗ್, ಕಿಟಲ್, ಕಬ್ಬನ್ ಮೊದಲಾದವರು ಕನ್ನಡ ನಾಡಿಗೆ ಬಹು ದೊಡ್ಡ ಕೊಡುಗೆಗಳನ್ನು ನೀಡಿದ್ದಾರೆ. ಇದು ನಮಗೆ ಪ್ರೇರಣೆ ಆಗಬೇಕು’ ಎಂದರು. ‘ಸಾಹಿತ್ಯ ಪರಿಷತ್ತಿನಲ್ಲಿ ಎರಡು ಸಾವಿರಕ್ಕೂ ಹೆಚ್ಚು ದತ್ತಿ ಪ್ರಶಸ್ತಿಗಳು ಸ್ಥಾಪಿತವಾಗಿವೆ. ಯಾವುದೇ ಅರ್ಜಿ-ಮರ್ಜಿ ಇಲ್ಲದೆ ಪಾರದರ್ಶಕವಾಗಿ ಈ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗುತ್ತದೆ. ನಿಜವಾದ ಸಾಧಕರನ್ನು ಗುರುತಿಸ ಲಾಗುತ್ತದೆ’ ಎಂದರು.

ವಿವಿಧ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಿದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಶ್ರೀಧರರಾವ್ ಅವರು ‘ಸಾಹಿತ್ಯ ಪರಿಷತ್ತಿನ ದತ್ತಿಗಳು ರಾಜ್ಯ, ಜಿಲ್ಲೆ, ತಾಲ್ಲೂಕು ಮಟ್ಟಗಳಲ್ಲಿಯೂ ಸಾಧಕರನ್ನು ಗುರುತಿಸಿ ಮಹತ್ವದ ಪರಂಪರೆಯನ್ನು ರೂಪಿಸಿದೆ’ ಎಂದು ಪ್ರಶಂಸಿಸಿದರು.

ದತ್ತಿ ಪ್ರಶಸ್ತಿ ಪ್ರದಾನ: ‘ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ ವಿದ್ವತ್ ದತ್ತಿ ಪ್ರಶಸ್ತಿ’ಯನ್ನು ಕಾಸರಗೋಡಿನ ವಿದ್ವಾಂಸ ಪ್ರೊ.ಪಿ.ಕೃಷ್ಣ ಭಟ್ ಅವರಿಗೆ, ಶೈಲಜಾ ಟಿ. ಎಸ್ ಅವರು ಸ್ಥಾಪಿಸಿರುವ ‘ಶ್ರೀಮತಿ ಟಿ.ಗಿರಿಜಾ ದತ್ತಿ ಪ್ರಶಸ್ತಿ’ಯನ್ನು ಭಾಷಾತಜ್ಞೆ ವನಮಾಲಾ ವಿಶ್ವನಾಥ್ ಅವರಿಗೆ ಪ್ರದಾನ ಮಾಡಲಾಯಿತು.

‘ಶ್ರೀಮತಿ ಕಂಡ್ಲೂರು ಗಿರಿಜಮ್ಮ ಮತ್ತು ನರಸಿಂಹ ಜೋಗಿ’ ದತ್ತಿ ಪ್ರಶಸ್ತಿಯನ್ನು ಧಾರವಾಡದ ರಂಗಕರ್ಮಿ ಬಸವರಾಜ ಚನ್ನವೀರಪ್ಪ ಬೆಂಗೇರಿ ಅವರಿಗೆ ಮತ್ತು ‘ಎ.ಆರ್.ನಾರಾಯಣ ಘಟ್ಟ ಮತ್ತು ಸರೋಜಮ್ಮ ಗಾಂಧಿ ಪುರಸ್ಕಾರ ಪುದವಟ್ಟಿನ ಪ್ರಶಸ್ತಿಯನ್ನು ರಾಜ್ಯಸಭಾ ಮಾಜಿ ಸದಸ್ಯ ಎಚ್.ಹನುಮಂತಪ್ಪ ಅವರಿಗೆ ಪ್ರದಾನ ಮಾಡಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು, ಗೌರವ ಕಾರ್ಯದರ್ಶಿ ನೇ.ಭ.ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಇದೇ 30ರಿಂದ ‘ಬೆಂಗಳೂರು ಹಬ್ಬ’

ಬೆಂಗಳೂರು: ನಗರದ ಸಂಸ್ಕೃತಿ, ಕಲೆ ಮತ್ತು ಸಾಹಿತ್ಯ ಪ್ರೀತಿಯನ್ನು ಬಿಂಬಿಸುವ ‘ಬೆಂಗಳೂರು ಹಬ್ಬ’ದ ಎರಡನೇ ಆವೃತ್ತಿ ಇದೇ 30ರಿಂದ ಡಿಸೆಂಬರ್ 15ರವರೆಗೆ ನಡೆಯಲಿದೆ.

ಅನ್‌ಬಾಕ್ಸಿಂಗ್ ಬೆಂಗಳೂರು ಪ್ರತಿಷ್ಠಾನವು ರಾಜ್ಯ ಸರ್ಕಾರದ ಸಹಯೋಗದಲ್ಲಿ ಬೆಂಗಳೂರು ಹಬ್ಬ ಆಯೋಜಿಸುತ್ತಿದೆ. 16 ದಿನಗಳ ಹಬ್ಬದ ಭಾಗವಾಗಿ ನಗರದ 40 ಸ್ಥಳಗಳಲ್ಲಿ ಕಾರ್ಯಕ್ರಮ ನಡೆಯಲಿವೆ.

ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ನಾಟಕ, ಸಂಗೀತ, ನೃತ್ಯ, ಚಿತ್ರಕಲೆ, ವಿವಿಧ ಮಳಿಗೆಗಳು ಸೇರಿ 500ಕ್ಕೂ ಹೆಚ್ಚು ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮಗಳಿಗೆ ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ ಎಂದು ಅನ್‌ಬಾಕ್ಸಿಂಗ್ ಬೆಂಗಳೂರು ಪ್ರತಿಷ್ಠಾನ ಹೇಳಿದೆ. ಹೆಚ್ಚಿನ ಮಾಹಿತಿಗೆ https://blrhubba.in ಜಾಲತಾಣವನ್ನು ಪರಿಶೀಲಿಸಬಹುದು.

ಹಬ್ಬದ ಪ್ರಮುಖ ಸ್ಥಳಗಳು

- ಸ್ವಾತಂತ್ರ್ಯ ಉದ್ಯಾನ
- ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ (ಬಿಐಸಿ)
- ಮಲ್ಲೇಶ್ವರದ ಪಂಚವಟಿ
- ಕಾಮರಾಜ ರಸ್ತೆಯ ಸಭಾ

ಕಾರ್ಯಕ್ರಮಗಳು

- ಗೋಡೆ ಚಿತ್ರ, ಕಲಾ ಪ್ರದರ್ಶನ, ನಾಟಕ, ಸಂಗೀತ ಕಾರ್ಯಕ್ರಮ
- ನಗರದ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ‘ಬೆಂಗಳೂರು ಚಾಲೆಂಜ್’
- ಬೊಂಬೆಯಾಟ
- 38 ಕಲಾವಿದರ ತಂಡದಿಂದ ಬೃಹತ್ ಜಾನಪದ ಮೇಳ
- ಕುವೆಂಪು ಅವರ 120ನೇ ಜನ್ಮ ಶತಮಾನೋತ್ಸವದ ಅಂಗವಾಗಿ ‘ಗಲ ಗಲ ಗದ್ದಲ’ ಕಾರ್ಯಕ್ರಮ

ಉಚಿತ ತರಬೇತಿ ಕಾರ್ಯಕ್ರಮಗಳು

BRBNMPL

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು

ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ, ಮೈಸೂರು

ಸಿ ಪೆ ಟ CIPET

ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ್ ಪ್ರೈವೇಟ್ ಲಿಮಿಟೆಡ್, ಮೈಸೂರು 2024–25ನೇ ಸಾಲಿನಲ್ಲಿ ತನ್ನ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿಯಡಿ ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ, (ಸಿಪೆಟ್) – ಸೆಂಟರ್ ಫಾರ್ ಸ್ಕಿಲ್ಲಿಂಗ್ ಅಂಡ್ ಟೆಕ್ನಿಕಲ್ ಸಪೋರ್ಟ್ ಮೂಲಕ 03 ತಿಂಗಳ ಉಚಿತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಎಲ್ಲಾ ವರ್ಗದ 150 ನಿರುದ್ಯೋಗಿ ಯುವಕ ಯುವತಿಯರಿಗೆ ಉಚಿತ ಊಟ ಹಾಗೂ ವಸತಿಗಳೊಂದಿಗೆ ಆಯೋಜಿಸಿದೆ. ತರಬೇತಿ ಹಾಗೂ ಅರ್ಹತೆಗಳ ವಿವರ ಈ ಕೆಳಗಿನಂತಿದೆ

ತರಬೇತಿಯ ಹೆಸರು	ಮಂಜೂರಾದ ಸಂಖ್ಯೆ	ಅವಧಿ	ವಿದ್ಯಾರ್ಹತೆ
ಸಹಾಯಕ ಯಂತ್ರ ನಿರ್ವಾಹಕರು ಪ್ಲಾಸ್ಟಿಕ್ಸ್ ಪ್ರೋಸೆಸಿಂಗ್ ಮೆಷಿನ್ (MoA-PP)	75	03 ತಿಂಗಳು	8ನೇ ತರಗತಿ (ಪಾಸ್) ಮೇಲ್ಪಟ್ಟು
ಸಹಾಯಕ ಯಂತ್ರ ನಿರ್ವಾಹಕರು ಇಂಜೆಕ್ಷನ್ ಮೌಲ್ಡಿಂಗ್ ಮೆಷಿನ್ (MoA-IM)	75		

ವಯೋಮಿತಿ: General / EWS: 18-30, OBC: 18-33, SC/ST: 18-35 ವರ್ಷಗಳು

ಕಾರ್ಯಕ್ರಮದ ವಿಶೇಷತೆಗಳು:

- ತಿಂಗಳಿಗೆ 1000/– ರೂಪಾಯಿ ಶಿಷ್ಯವೇತನ ನೀಡಲಾಗುವುದು
- ಉದ್ಯೋಗಾವಕಾಶ ಕಲ್ಪಿಸಿ ಕೊಡಲಾಗುವುದು
- Uniform, Shoes, Course Materials ಮತ್ತು Training Kit ಗಳನ್ನೂ ಉಚಿತವಾಗಿ ನೀಡಲಾಗುವುದು
- ತರಬೇತಿಯನ್ನು ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಅನುಸಾರ ನೀಡಲಿದ್ದು NCVET-Skill India Training Certificate ನೀಡಲಾಗುವುದು

ಆಯ್ಕೆಯ ವಿಧಾನ: ಇಚ್ಛೆಯುಳ್ಳ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಗೆ ಸಂಭಂದಿಸಿದ ದಾಖಲೆ, ಆಧಾರ್ ಪ್ರತಿ, ಜಾತಿ ಹಾಗೂ ಆದಾಯ ಪ್ರಮಾಣ ಪತ್ರ (ಮೂಲ ಮತ್ತು ಪ್ರತಿ) ಮತ್ತು 06 ಕಲರ್ ಫೋಟೊಗಳೊಂದಿಗೆ ನೇರ ದಾಖಲಾತಿಗೆ ದಿನಾಂಕ 27–11–2024 ರಿಂದ ಕೆಳಕಂಡ ವಿಳಾಸಕ್ಕೆ ಹಾಜರಾಗಲು ಸೂಚಿಸಿದೆ

ತರಬೇತಿ ಸಂಸ್ಥೆಯ ವಿಳಾಸ :
ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ,
437/ಎ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಮೈಸೂರು - 570 016

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
93807 56024, 78996 69920, 97417 19645

‘ಕೃಷ್ಣ ನಾಯ್ಕ ಬಂಧನ ಖಂಡನೀಯ’

ಬೆಂಗಳೂರು: ಶಿಲ್ಪ ಕಲಾವಿದ ಕೃಷ್ಣನಾಯ್ಕ ಅವರ ಬಂಧನವನ್ನು ಇಲ್ಲಿ ನೆಲಸಿರುವ ಉತ್ತರ ಕನ್ನಡದ ಕಲಾವಿದರು ಖಂಡಿಸಿದ್ದು, ‘ಕಲಾ ಚಟುವಟಿಕೆಗಳಿಗೆ ಸಹಾಯ ಹಸ್ತ ನೀಡಬೇಕಾದ ಪ್ರಭುತ್ವ, ಕಲಾವಿದರನ್ನೇ ಶೋಷಣೆ ಮಾಡುವುದು ಸರಿಯಲ್ಲ’ ಎಂದಿದ್ದಾರೆ.

‘ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಇಡಗುಂಜಿಯವರಾದ ಅವರು, ಕಲಾ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕಾರ್ಕಳ ತಾಲ್ಲೂಕಿನ ಉಮಿಕಲ್ ಬೆಟ್ಟದ ಮೇಲೆ ನಿರ್ಮಿಸಲಾಗಿದ್ದ ಪರಶುರಾಮನ ಕಂಚಿನ ಪ್ರತಿಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಗ್ಧ ಕಲಾವಿದನನ್ನು ಬಂಧಿಸಿ, ಹಿಂಸೆ ನೀಡಲಾಗುತ್ತಿದೆ. ಇದು ಅತ್ಯಂತ ನೋವಿನ ಸಂಗತಿಯಾಗಿದೆ’ ಎಂದು ಕಲಾವಿದರಾದ ಗಣಪತಿ ಎಸ್. ಹೆಗಡೆ, ಸದಾನಂದ ಹೆಗಡೆ ಹರಗಿ, ಗಣೇಶ ಧಾರೇಶ್ವರ, ರವಿ ಗುನಗ ಗೋಕರ್ಣ ಹಾಗೂ ರವಿ ಹುದ್ದಾರ್ ಬೇಸರ ವ್ಯಕ್ತಪಡಿಸಿದ್ದಾರೆ. ‘ವೃತ್ತಿಪರ ಕಲಾವಿದರಾದ ಕೃಷ್ಣ ನಾಯ್ಕ, ಸಾವಿರಕ್ಕೂ ಹೆಚ್ಚು ಮ್ಯೂರಲ್ ಹಾಗೂ ನಾಲ್ಕೈದು ಸಾವಿರ ಶಿಲ್ಪ ಕಲಾಕೃತಿಗಳ ಯೋಜನೆಯನ್ನು ಪೂರ್ಣಗೊಳಿಸಿದ್ದಾರೆ. ಬೆಂಗಳೂರಿನಲ್ಲಿ ಕೆಲವರಿಗೆ ಉದ್ಯೋಗ ನೀಡಿದ್ದಾರೆ. ಅದಾವುದನ್ನೂ ಪರಿಗಣಿಸದೆ, ಪ್ರತಿಭಾವಂತ ಕಲಾವಿದನನ್ನು ಪಕ್ಷ ರಾಜಕೀಯಕ್ಕೆ ಬಲಿಪಶು ಮಾಡಲಾಗಿದೆ’ ಎಂದು ಜಂಟಿ ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಜೈವಿಕ ಇಂಧನ ಉತ್ಪಾದನಾ ಘಟಕ: 10 ಎಕರೆ ಮೀಸಲಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಕೈಗಾರಿಕಾ ಪ್ರದೇಶಗಳಲ್ಲಿ ಜೈವಿಕ ಇಂಧನ ಉತ್ಪಾದನಾ ಘಟಕ ನಿರ್ಮಿಸಲು ಕನಿಷ್ಠ 10 ಎಕರೆ ಪ್ರದೇಶವನ್ನು ಮೀಸಲಿಡಲು ಆದೇಶ ಹೊರಡಿಸಬೇಕು’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರಿಗೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್.ಈ. ಸುಧೀಂದ್ರ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ಗ್ರೀನ್ ಎನರ್ಜಿ ಉತ್ಪಾದನೆ ಮತ್ತು ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ನೂತನ ನೀತಿ ರೂಪಿಸುವುದಾಗಿ ಎಂ.ಬಿ. ಪಾಟೀಲ ಇತ್ತೀಚೆಗೆ ಪ್ರಕಟಿಸಿದ್ದರು. ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿ ಕೈಗೊಂಡಿರುವ ಜೈವಿಕ ಇಂಧನ ಕಾರ್ಯ ಯೋಜನೆಗಳ ಕುರಿತು ಸುಧೀಂದ್ರ ಅವರು ಸಚಿವರ ಜೊತೆ ಶನಿವಾರ ಚರ್ಚೆ ನಡೆಸಿದರು.

ರಾಜ್ಯ ಜೈವಿಕ ಇಂಧನ ನೀತಿ ರೂಪಿಸಲು ಬೇರೆ ಬೇರೆ ರಾಜ್ಯಗಳ ನೀತಿಗಳನ್ನು ಮಂಡಳಿಯು ಈಗಾಗಲೇ ಪರಿಶೀಲಿಸಿರುವ ಕುರಿತು ಮಾಹಿತಿ ನೀಡಿದ ಸುಧೀಂದ್ರ, ಮಂಡಳಿಯು ಬಯೋ ಡೀಸೆಲ್, 2ಜಿ ಎಥನಾಲ್, ಕಂಪ್ರೆಸ್ಡ್ ಬಯೋ ಗ್ಯಾಸ್, ಗ್ರೀನ್ ಹೈಡ್ರೋಜನ್ ಮುಂತಾದ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಿರುವ ಅರಿವು ಜಾಗೃತಿ ಪ್ರಾತ್ಯಕ್ಷಿಕೆಗಳ ಮೂಲಕ ರೈತರು, ವಿದ್ಯಾರ್ಥಿಗಳು, ಉದ್ದಿಮೆದಾರರ ಜೊತೆ ಭಾಗಿಯಾಗಿರುವ ಕುರಿತು ವಿವರಣೆ ನೀಡಿದರು.

ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಎಲ್. ಶಿವಶಂಕರ್ ಮತ್ತು ಇತರ ಅಧಿಕಾರಿಗಳು ಇದ್ದರು.

ಸಸಿ ನೆಡುವ ಕಾರ್ಯಕ್ಕೆ ಚಾಲನೆ

ಕೆ.ಆರ್.ಪುರ: ಮೇಡಹಳ್ಳಿ ಗ್ರಾಮದ ಪ್ರಮುಖ ರಸ್ತೆಗಳು ಹಾಗೂ ಖಾಲಿ ಸ್ಥಳಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಸಸಿ ನೆಡುವ ಗುರಿ ಹೊಂದಲಾಗಿದೆ ಎಂದು ಮೇಡಹಳ್ಳಿ ಗ್ರಾಮದ ಬಿಜೆಪಿ ಮುಖಂಡ ಮೇಡಹಳ್ಳಿ ಮಲ್ಲೇಶ್ ಹೇಳಿದರು.

ಕೆ.ಆರ್.ಪುರ ಸಮೀಪದ ಮೇಡಹಳ್ಳಿಯಲ್ಲಿ ನೂರಕ್ಕೂ ಹೆಚ್ಚು ಸ್ವಯಂ ಸೇವಕರೊಂದಿಗೆ ಒಂದು ಸಾವಿರ ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

‘ಮೇಡಹಳ್ಳಿ ಗ್ರಾಮವನ್ನು ಹಸಿರಾಗಿಸುವ ಪ್ರಯತ್ನಕ್ಕೆ ಮುಂದಾಗಿದ್ದೇವೆ. ಗ್ರಾಮದ ವಿವಿಧ ಬಡಾವಣೆಗಳ ಸಾರ್ವಜನಿಕರ ನೆರವಿನಿಂದ ನಿರಂತರವಾಗಿ ಸಾವಿರ ಸಸಿಗಳನ್ನು ನೆಟ್ಟು ಪೋಷಿಸುವ ಹೊಣೆ ಹೊತ್ತಿದ್ದೇವೆ. ಸ್ವಯಂ ಸೇವಕರ ತಂಡ ಅಭಿಯಾನದ ನಿರ್ವಹಣೆ ಹೊತ್ತಿದೆ’ ಎಂದರು. ಗ್ರಾಮದ ಮುಖಂಡ ಕೋದಂಡರಾಮಯ್ಯ ಮಾತನಾಡಿ, ‘ಅಭಿಯಾನಕ್ಕೆ ಗ್ರಾಮಸ್ಥರ ಸಂಪೂರ್ಣ ಸಹಕಾರ ಇರಲಿದೆ’ ಎಂದರು. ಗ್ರಾಮದ ಮುಖಂಡರಾದ ಕೃಷ್ಣಮೂರ್ತಿ, ರಮೇಶ್ ಇದ್ದರು.

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/ 9845114560 / 9731810277/ 9886213331

ವಾಸವಿ ಸಮೂಹ ವಿದ್ಯಾ ಸಂಸ್ಥೆಗಳು

VASAVI JNANA PEETHA (Regd.) BANGALORE

VASAVI GROUP OF EDUCATIONAL INSTITUTIONS
Vijayanagar, Bangalore

Approved by AICTE
Affiliated to Bangalore University
Recognised by Government of Karnataka

40 YEARS OF EXCELLENCE

ADMISSIONS OPEN
for Academic year 2024-25

AFFORDABLE **FEES** & Assuring **100%** Placements

- **M.B.A** – Master of Business Administration
- **M.C.A** – Master of Computer Application
- **M.COM** – Master of Commerce

Our Recruiters

Contact us: **080-23300532, 9686839761**
www.vjpedu.org
E-mail: vasavicollege12@gmail.com
Office time: 9.00am to 4.00pm

ಮನೆ ಕಟ್ಟಿ ವಾಸ ಮಾಡಲು or ಪ್ರಾಪರ್ಟಿ ಇನ್ವೆಸ್ಟ್ ಮಾಡಲು ಸೂಕ್ತ ಜಾಗ

Site for Sale
ನೆಲಮಂಗಲ
ನಗರ ಸಭೆ ವ್ಯಾಪ್ತಿಯಲ್ಲಿ
DC Conversion ಅನುಮೋದನೆ ಆದ
ವಸತಿ ನಿವೇಶನಗಳು
ಸೊಂಡೆಕೊಪ್ಪ ರಸ್ತೆ
ಕೋರ್ಟ್ ಹತ್ತಿರ, ರಾಷ್ಟ್ರೀಯ ಹೆದ್ದಾರಿಯಿಂದ 1 ಕಿ.ಮೀ

•ನೋಂದಣಿಗೆ ಸಿದ್ಧವಾಗಿದೆ •ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
•ಲೇಔಟ್ ಅಭಿವೃದ್ಧಿಗೊಂಡಿದೆ, ವಾಸಮಾಡಲು ಸೂಕ್ತವಾಗಿದೆ

LAUNCHING OFFER 50% OFF ON REGISTRATION COST

ಸೌಕರ್ಯಗಳು: ಬೀದಿ ದೀಪದೊಂದಿಗೆ ವಿದ್ಯುತ್ ಕಂಬಗಳು, ಡಾಂಬರ್ ರಸ್ತೆಗಳು, ಪ್ರತ್ಯೇಕ ನೀರಿನ ಸಂಪರ್ಕ, ರಸ್ತೆ ಬದಿ ಮರಗಳು, ಒಳಚರಂಡಿ ವ್ಯವಸ್ಥೆ.

ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ **81477 49271**
Site Sizes 30x40, 30x50

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Accommodation Available

Commercial

COMMERCIAL SPACE for RENT in HSR Layout 6th Sector Main Road NEW Building 4 Floors, each Floor 2000 Sqft Call: 9845010634.

LONG TERM OFFICE Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

OFFICE SPACE for rent 1950sqft 52 workstations, 2'MD conference and 400sft 16 workstations, power backup carpark Jayanagar opposite Sagar Hospital 9845522122/ 9591908228

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

Accommodation Wanted

Industrial And Factory

REQUIRED FOR rent in Peenya and yeshwanthpur 1 Lakh sqft.Contact Arun Estates: 9380586105

WANTED 50,000 Sqft. RCC Building For RENT at DODDABALLAPURA INDUSTRIAL AREA. Call: 9611135365.

JOB OPPORTUNITIES

Accounts & Finance

AASHIRVAD Develop | Build | Save
WANTED ACCOUNTANT (Female)
Minimum 2-3 Years Experience Attractive Salary Contact: **95385 45101**
Kengeri Satellite Town, Bengaluru - 560 060

REQUIRED SENIOR ACCOUNTS EXECUTIVE with Tally knowledge and OFFICE BOY. Contact for Walk-in. 9731120003.

Engg/ Production Technical

WE REQUIRE below candidates For our special pumps & Motor Manufacturing Unit at Devarachikkanahalli, Bannergatta Road, Bangalore. 1.PURCHASE EXECUTIVE with experience, 2.QUALITY CONTROL EXECUTIVE, 3.MARKETING EXECUTIVE, 4.ITI/DIPLOMA ENGINEERS. Email- flowoilpumps@ hotmail.com

REQUIRED ASSISTANT AC Technician &Experienced AC Technician for Swastik Airconditioner Location Jayanagar Contact: 7892831686

Wanted

Existing HYDRO POWER PLANT IN KARNATAKA needs Engineers for Expansion in SOLAR Energy Sector, in Karnataka & Maharashtra
WANTED
PROJECT MANAGER
Identifying & Execution the Solar project locations initially 5 MW and Expansion on completion one by one. Having good knowledge of Govt. Policies and liason.
DIPLOMA ENGINEERS - MECHANICAL & ELECTRICALS
As trainees / fresher's Apply with detailed Bio data within 10 days
Box No. JA383, C/o Deccan Herald & Prajavani No. 75, M.G. Road, Bengaluru-560 001

General

REQUIRES
- FEMALE TELECALLER
- ADMISSION COUNSELLOR (for District wise)
- COMPUTER OPERATORS
- B.COM GRADUATES
- MALE HOSTEL WARDEN
- LIBRARIAN
- DRIVERS
- FACULTIES : PCMB+NEET - PCMC + CET/ Commerce & other subjects

K.T.G & Anuradha PU College
Hegganahalli Cross, Via Magadi Rd, Sunkadakatte, Bangalore-91
9845051023 , 9880453539
ktgcolleges@gmail.com

WANTED HOUSEWIVES and Retired people for part time job opportunity in MNC company. Manager: 9739000505.

EARN MORE than Rs 50,000/- per month, Part/ Full time, Age above 30 Years, 9343616020

Marketing & Sales

REQUIRED MARKETING EXECUTIVE for sale of Packaging material and packaging machinery for Bangalore. Should have a 2`wheeler and spoken knowledge`of Kannada.CONTACT 9940025822. OR Apply`with resume Mail-ID: mktgsmpl@gmail.com

WANTED EXPERIENCE SALES REPRESENTATIVE leading coffee powder manufacturing company apply Biodata Email mbeverage36@gmail. com whatsapp 9945469899 7338678555

Hotel

WE ARE HIRING FOR HOTEL INDUSTRY
HOUSE KEEPING SUPERVISOR & FRONT OFFICE STAFF
(Candidate should be experienced in Hotel Industry)
Age Limit: Above 25 Years to Below 40 Years
(Only Male candidates to apply for this Post)
RLH-24501
Contact: SHIVU 99649 82607

Teachers/ Professors

VET FIRST GRADE COLLEGE is inviting applications for the post of Lecturer in BCA (Artificial Intelligence & Machine Learning) with MCA/ M.Sc (Specialization in Artificial Intelligence), Lecturer in BVA (Bachelor of Visual Arts) with M.Arch./ Master of Animation. Preference is given to NET/ SLET Candidates. Mail the CV/ Resume within 3 days tovetfgc@rediffmail.com

WAYANAMAC EDUCATION TRUST®
DON BOSCO INSTITUTE OF TECHNOLOGY
(Approved by AICTE, Affiliated to VTU, Belagavi, NBA & NAAC Accredited)
KUMBALAGODU, MYSORE ROAD, BANGALORE – 560074.
Ph. : 080 - 28437028 / 29 / 30. Website: www.dbit.co.in

We are looking for talented, competent, qualified faculty & professionals for the following positions:
Dean - Academic / IQAC / Student Affairs, COE
PROFESSORS, ASSOCIATE PROFESSORS & ASSISTANT PROFESSORS
In following Disciplines:
- Artificial Intelligence & Machine Learning
- Artificial Intelligence & Data Science
- Computer Science & Engineering
- Electronics & Communication Engineering
- Information Science & Engineering
- MBA
- Mathematics, Physics, Chemistry

NON - TEACHING STAFF
- Senior Accounts Assistant
- Senior Placement Officer
- Placement Officer
- Asst. Librarian
- Office Assistant – Examination Section
- Lab Instructors - CS/IS/ECE/EE
- Foreman - (Electrical & Electronics)
- Warden - Boys / Girls Hostel

1. The institution provides professional work environment and ample opportunities for career development includes Research.
2. Qualification & Experience as per the AICTE Norms.
3. Candidates with Aptitude for Research and ability to conduct industrial consultancy shall be preferred.
4. Candidates with knowledge of quality process and relevant industry experience shall be preferred for suitable positions in IQAC.
5. Candidates from premier institutions and retired employees from research oriented institutions like IISc, IITs, NITs and other organizations of eminence are preferred.

E-mail- **Recruitment@dbit.co.in** your CV with copies of supporting documents or post them in a sealed envelope with two passport-size of Photographs superscribed with the post applied for within 15 days.
Principal

BRIGHT WAY SCHOOL, #105,12th Main, Opp.BHCS Layout, Subramanyapura post, Bangalore-560061. TEACHERS REQUIRED: ENGLISH, SOCIAL, B.A/M.A/B.Ed, DANCE-Trained, CLERK-Graduate with computer knowledge. Contact immediately: 080-26396720/ 9241204762

PREMIER HIGH SCHOOL LOOKING FOR Head Mistress, Primary Teachers (Kannada, Science, Maths, Craft) & High School English. Contact: Premier High School, Ph:9060555588'

EDUCATION

To Place your Classified Ads Contact: **9845114560**

Multiple Vacancy

MULTIPLE JOBS
- **CHARTERED ACCOUNTANT** for Reputed CA firm in Indira Nagar.
- **SALES MANAGER** for Employee Transport/ Cab service firm.
- **SALES EXECUTIVE** for FMCG company.
- **SALES EXECUTIVE** for PEB Structure, Metal fabrication, Laser Welding Machine.
- **OFFICE EXECUTIVE & ACCOUNTANT** for corporate gifting company.

Minimum 2 Yrs Exp for all jobs. Send cv to parabolahr@gmail.com

VELAMMAL VIDYALAYA
WANTED
FOR THE ACADEMIC YEAR 2025-26
- ADMINISTRATIVE OFFICER
- PUBLIC RELATIONS OFFICER
- TELE CALLER
- CASHIER
- SECURITY OFFICER
- ELECTRICIAN

No: 47, Rayakotta Road, Opposite to Sub Treasury, Old Rayakottah HUDCO, Hosur - 635109
+91 95666 32805
+91 95977 29877
E-mail to info.hosur@velammalnexus.com

ವಿಜಯನಗರ ಕ್ಲಬ್
ವಿಜಯನಗರ, ಬೆಂಗಳೂರು–560104. ದೂ: 9606098126
ಇ–ಮೇಲ್: Vijayanagaraclub@yahoo.co.in

ಉದ್ಯೋಗ ಪ್ರಕಟಣೆ

ವಿಜಯನಗರ ಕ್ಲಬ್ ಆಡಳಿತಮಂಡಳಿ
ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧರಿಸಿ ಈ ಪ್ರಕಟಣೆ:
(1) ವ್ಯವಸ್ಥಾಪಕರು (ಆಡಳಿತ): ಒಂದು ಹುದ್ದೆ: ಕನಿಷ್ಠ 10 ವರ್ಷಗಳ ಅನುಭವ ಹೊಂದಿರುವ ಹಾಗೂ ಇದೇ ಕಾರ್ಯಕ್ಷೇತ್ರದಲ್ಲಿ ಪದವಿ ಪಡೆದಿರುವವರು. (2) ವ್ಯವಸ್ಥಾಪಕರು (ಲೆಕ್ಕಪತ್ರ): ಒಂದು ಹುದ್ದೆ: ಸದರಿ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ, ವಾಣಿಜ್ಯ ಪದವಿ ಪಡೆದಿರುವವರು. (3) ಸಹಾಯಕ (ಹಣಕಾಸು): ಒಂದು ಹುದ್ದೆ: ಕ್ಲಬ್‌ನ ದೈನಂದಿನ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸಲು ಸದರಿ ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ ವಾಣಿಜ್ಯ ಪದವಿ ಪಡೆದಿರುವವರು. (4) ಬೆರಳಚ್ಚುಗಾರರು (ಟೈಪಿಸ್ಟ್): ಒಂದು ಹುದ್ದೆ: ಕನ್ನಡ ಮತ್ತು ಆಂಗ್ಲ ಭಾಷೆ ಎರಡರಲ್ಲೂ ಶೀಘ್ರ ಲಿಪಿ ಹಾಗೂ ಬೆರಳಚ್ಚಿನಲ್ಲಿ ಕನಿಷ್ಠ 3 ವರ್ಷಗಳ ಅನುಭವ ಹೊಂದಿರುವ, ಯಾವುದಾದರೂ ಪದವಿ ಪಡೆದಿರುವವರು. ಎಲ್ಲಾ ಹುದ್ದೆಗಳಿಗೂ ಕಂಪ್ಯೂಟರ್ ಜ್ಞಾನ ಅತ್ಯಾವಶಕ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.12.2024
ಸಹಿ/– ಕಾರ್ಯದರ್ಶಿ
(ಎಂ.ಶಿವಶಂಕರ್)

AUTOMOTIVE

Four Wheelers Selling

Tata

SCHOOL BUS For Sale TATA 2016 model 37 seater Very good condition 15 Lakhs 9845048193

BUSINESS

Business Offers

Business For Sale

For Sale Coffee Curing Unit
Fully equipped well maintained Coffee Curing unit machines for sale **Elevators, Hullers, Grades, Separators, Switch Boards, Controllers, Wiring &, Spares** etc at Salem, Tamil Nadu
Ct : MSP Coffee Ltd 9443263464, 9842829996
E- mail@mspcoffee.com

Business to Business

Business

HUGE QUANTITY of Cardboard & Plastic Available For Sale Monthly. 9701171944

Finance

LOANS AVAILABLE NP & CIBIL Properties, Mortgage, Purchase, Residential & Commercial in Karnataka. Contact: 7019460997.

EDUCATIONAL

Special Courses

NURSING AID Training Courses with Placement, Bangalore (Providers of Home Health Care). Contact: 8618073276

MATRIMONIAL

Brides Wanted

Brahmin

WANTED A brahmin girl for a 51 year old smartha boy, having consultation business and own house. No dependents. Divorcee/Widow fine. Phone 9845038481.

Divorcee

I AM a 60-year-old Tamil divorcee looking for a compatible life partner want to marry. Who is also divorced and does not have children. If you or someone you know might be interested, please reach out 8838744120

Grooms Wanted

Hindu

An Engineer Girl, 42 yrs Brahmin Koundinya gothra seeks alliance from Boys 42-45 Bangalore based preferably from R & D institutes, like Defence, Public Sector, MNCs, Banks. only first marriage
Contact **9880020408**
kchandra03@gmail.com

TAMIL/SC/MAR 93/IRS officer/Groom wanted from IAS allied service/MD/MS- contact 9042261465

SC/ ST

WANTED GROOM
Looking bridegroom for a girl, 30 years, MSC Biotech. Madiga (sc).
9148833532 / 8050519100

PERSONAL

Change of Name

I, RIYAZ AHMED/ M. RIYAZ AHMED/ RIYAZ AHMED. M/ RIYAZ AHMED MAQBOOL aged about 60years S/o.Maqbool Ahmed, Residing at No.127-1, 19th 'B' Cross, 3rd Block Jayanagar, Bangalore 560011, have changed my name to MOHAMMED RIYAZ AHMED. I further state and declare that where ever my name mentioned as M. RIYAZ AHMED, the expansion of intial M. is MOHAMMED Vide affidavit dated 21-11-2024 before the Advocate & Notary Mohammed Shafiulla, Bangalore

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ • 1,300 ಪುಟಗಳಿರುವ ವರದಿ

ಹೆಚ್ಚುವರಿ ಆರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣ ಸಂಬಂಧ ತನಿಖೆ ಪೂರ್ಣಗೊಳಿಸಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ನಟ ದರ್ಶನ್ ಹಾಗೂ ಇತರ ಆರೋಪಿಗಳ ವಿರುದ್ಧ ಶನಿವಾರ 1300 ಪುಟಗಳ ಹೆಚ್ಚುವರಿ ಆರೋಪಪಟ್ಟಿಯನ್ನು 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ದರ್ಶನ್

20ಕ್ಕೂ ಹೆಚ್ಚು ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಪಟ್ಟಣಗೆರೆ ಶೆಡ್‌ನಲ್ಲಿ ದರ್ಶನ್ ತನ್ನ ಸಹಚರರ ಜತೆ ತೆಗೆಸಿಕೊಂಡಿರುವ ಎಂಟು ಫೋಟೊಗಳು, ತಾಂತ್ರಿಕ ಸಾಕ್ಷ್ಯ ಮತ್ತು ಎಫ್‌ಎಸ್‌ಎಲ್ ವರದಿಯನ್ನು ಆರೋಪಪಟ್ಟಿಯಲ್ಲಿ ಲಗತ್ತಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಜೂನ್ 9ರಂದು ಸಂಜೆ 6ರಿಂದ 8ರ ಅವಧಿಯಲ್ಲಿ ರೇಣುಕಸ್ವಾಮಿ ಮೃತಪಟ್ಟಿದ್ದರು ಎಂದು ವೈದ್ಯರು ವರದಿ ನೀಡಿದ್ದರು. ಈ ಅವಧಿಯಲ್ಲಿ ದರ್ಶನ್ ಜತೆ ದುರ್ಗದ ರಾಘವೇಂದ್ರ ಹಾಗೂ ಇತರೆ ಆರೋಪಿಗಳು ಶೆಡ್‌ನಲ್ಲೇ ಫೋಟೊ ತೆಗೆಸಿಕೊಂಡಿದ್ದರು. ಸ್ಥಳದಲ್ಲಿದ್ದ ಪ್ರತ್ಯಕ್ಷದರ್ಶಿ ಪವನ್ ಎಂಬಾತ ಫೋಟೊ ತೆಗೆದು, ರಾಘವೇಂದ್ರ ಸೇರಿ ಕೆಲ ಆರೋಪಿಗಳ ವಾಟ್ಸ್‌ಆ್ಯಪ್‌ಗೆ ಕಳುಹಿಸಿದ್ದ.

ಘಟನೆ ಬಗ್ಗೆ ಗೊತ್ತಾಗುತ್ತಿದ್ದಂತೆ ಪ್ರಕರಣದ 10ನೇ ಆರೋಪಿ ವಿನಯ್, ಪವನ್ ಮೊಬೈಲ್ ಪಡೆದು ಫೋಟೊಗಳನ್ನು ಅಳಿಸಿದ್ದ. ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದ ಪೊಲೀಸರು ಪ್ರಯೋಗಾಲಯಕ್ಕೆ ಕಳುಹಿಸಿದ್ದರು. ಆ ಮೊಬೈಲ್ ಫೋನ್‌ನಿಂದ ಫೋಟೊಗಳನ್ನು ಮರುಸಂಗ್ರಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ನಗರದ ಪಟ್ಟಣಗೆರೆಯ ಶೆಡ್‌ನಲ್ಲಿ ಜೂನ್ 9ರಂದು ಕೊಲೆ ನಡೆದಿತ್ತು. ಕೊಲೆ ಆರೋಪದಡಿ ದರ್ಶನ್ ಹಾಗೂ ಅವರ ಆಪ್ತೆ ಪವಿತ್ರಾಗೌಡ ಸೇರಿ 17 ಮಂದಿಯನ್ನು ಬಂಧಿಸಿದ್ದರು.

ದರ್ಶನ್ ಮತ್ತು ಇತರ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ 3,991 ಪುಟಗಳ ಪ್ರಾಥಮಿಕ ದೋಷಾರೋಪ ಪಟ್ಟಿಯನ್ನು ಸೆಪ್ಟೆಂಬರ್ 4 ರಂದು ಪೊಲೀಸರು ಸಲ್ಲಿಸಿದ್ದರು.

ಮೂವರು ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ, ಎಂಟು ವರದಿಗಳು, 231ಕ್ಕೂ ಹೆಚ್ಚು ಸಾಕ್ಷ್ಯಾದಾರರ ಹೇಳಿಕೆಗಳನ್ನು ಆರೋಪಪಟ್ಟಿಯಲ್ಲಿ ಒದಗಿಸಲಾಗಿತ್ತು.

ಮುಖ್ಯಾಂಶಗಳು

- 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಸಲ್ಲಿಕೆ
- 20ಕ್ಕೂ ಹೆಚ್ಚು ಸಾಕ್ಷ್ಯಗಳ ಸಂಗ್ರಹ
- ಪ್ರಾಥಮಿಕ ದೋಷಾರೋಪ ಪಟ್ಟಿಯನ್ನು ಸೆ. 4ರಂದು ಸಲ್ಲಿಸಿದ್ದ ಪೊಲೀಸರು

ಸಮ್ಮೇಳನಕ್ಕೆ ಆಹ್ವಾನ

ಮಂಡ್ಯದಲ್ಲಿ ಡಿ.20, 21 ಮತ್ತು 22ರಂದು ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಗೊ.ರು. ಚನ್ನಬಸಪ್ಪ ಅವರಿಗೆ ಮಂಡ್ಯ ಜಿಲ್ಲಾಡಳಿತದ ವತಿಯಿಂದ ನಗರದಲ್ಲಿ ಶನಿವಾರ ಆಮಂತ್ರಣ ನೀಡಿ ಗೌರವಿಸಲಾಯಿತು. ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಆಗಿರುವ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಜಿಲ್ಲಾಧಿಕಾರಿ ಕುಮಾರ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು, ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು ಹಾಜರಿದ್ದರು. ಈ ಸಂದರ್ಭ ಗೊ.ರು. ಚನ್ನಬಸಪ್ಪ ಅವರ ಕುಟುಂಬದ ಸದಸ್ಯರಿದ್ದರು

ಸರಣಿ ಅಪಘಾತ ಪೊಲೀಸ್ ವಾಹನಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ರಾಮನಗರ: ನಗರದ ಬೆಂಗಳೂರು–ಮೈಸೂರು ಮುಖ್ಯರಸ್ತೆಯಲ್ಲಿರುವ ಶಾನ್ ಚಿತ್ರಮಂದಿರದ ಮುಂಭಾಗ ಶನಿವಾರ ರಾತ್ರಿ ಸಂಭವಿಸಿದ ಸರಣಿ ಅಪಘಾತದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಟಿ.ವಿ. ಸುರೇಶ್ ಅವರ ಕಾರು ಜಖಂಗೊಂಡಿದೆ. ಘಟನೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಅವರ ಕಾರು ಸೇರಿದಂತೆ ಎರಡು ಪೊಲೀಸ್ ವಾಹನಗಳಿಗೆ ಹಾನಿಯಾಗಿದೆ.

ರಸ್ತೆಯಲ್ಲಿ ಕಾರು ಹೋಗುತ್ತಿದ್ದಾಗ ವ್ಯಕ್ತಿಯೊಬ್ಬರು ರಸ್ತೆ ದಾಟಲು ಏಕಾಏಕಿ ಅಡ್ಡಬಂದಿದ್ದಾರೆ. ತಕ್ಷಣ ಕಾರು ಚಾಲಕ ಬ್ರೇಕ್ ಹಾಕಿದ್ದಾರೆ. ಇದರಿಂದ ಸರಣಿ ಅಪಘಾತ ಸಂಭವಿಸಿದೆ.

ಇಬ್ಬರ ಬಂಧನ 60 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಪ್ರಶಾಂತ್

ಮನೋಹರ್

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಮೊಬೈಲ್‌ಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಮಹಾಲಕ್ಷ್ಮೀ ಲೇಔಟ್ ಪೊಲೀಸರು, ಬಂಧಿತರಿಂದ ವಿವಿಧ ಕಂಪನಿಗಳ 60 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಚಾಕಲಿ ಮನೋಹರ್, ಕೊಮ್ಮು ಪ್ರಶಾಂತ್ ಬಂಧಿತರು.

ಕೆಲ ದಿನಗಳ ಹಿಂದೆ ಮಹಾಲಕ್ಷ್ಮೀ ಲೇಔಟ್ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಖಾಸಗಿ ಕಂಪನಿ ಉದ್ಯೋಗಿಯೊಬ್ಬರ ಮೊಬೈಲ್ ಕಳ್ಳತನವಾಗಿತ್ತು. ಪ್ರಕರಣ ದಾಖಲಿಸಿಕೊಂಡು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡ ಪೊಲೀಸರು, ತಾಂತ್ರಿಕ ಮಾಹಿತಿ ಆಧರಿಸಿ ಸೋಪ್ ಫ್ಯಾಕ್ಟರಿ ಬಳಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದರು.

‘ವಿಚಾರಣೆ ವೇಳೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಆರೋಪಿಗಳ ಬಂಧನದಿಂದ ಒಂದು ಪ್ರಕರಣ ಪತ್ತೆಯಾಗಿದೆ. ಮೊಬೈಲ್ ಕಳೆದುಕೊಂಡರೆ ಕೆಲವರು ದೂರು ನೀಡುವುದಿಲ್ಲ. 59 ಮೊಬೈಲ್ ವಾರಸುದಾರರ ಪತ್ತೆ ಕಾರ್ಯ ಪ್ರಗತಿಯಲ್ಲಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. ಕಳವು ಮಾಡಿದ ಮೊಬೈಲ್‌ಗಳನ್ನು ಕಡಿಮೆ ಬೆಲೆಗೆ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದರು. ಹೆಚ್ಚಿನ ಹಣ ಸಂಪಾದನೆ ಉದ್ದೇಶದಿಂದ ಕಳ್ಳತನ ಮಾಡುತ್ತಿದ್ದರು ಎಂದು ಹೇಳಿದ್ದಾರೆ.

ಟ್ರೋಫಿಯೊಂದಿಗೆ ಕಲ್ಯೆವನನ್, ಹಿಮಾಂಶಿ ಮತ್ತು ಅಭಿನವ್

ಟಿಟಿ: ಕಲ್ಯೆವನನ್‌ಗೆ ಪ್ರಶಸ್ತಿಯ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ. ಕಲ್ಯೆವನನ್ ಅವರು ಇಲ್ಲಿನ ಕೆನರಾ ಯೂನಿಯನ್‌ನ ಆಶ್ರಯದಲ್ಲಿ ನಡೆಯುತ್ತಿರುವ ಸಿವಿಎಲ್ ಶಾಸ್ತ್ರಿ ಸ್ಮಾರಕ ಕರ್ನಾಟಕ ರಾಜ್ಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಶನಿವಾರ ನಡೆದ ಫೈನಲ್‌ನಲ್ಲಿ ಕಲ್ಯೆವನನ್ 4–1 (8-11, 11-9, 11-7, 13-11, 11-5) ರಿಂದ ರೋಹಿತ್ ಶಂಕರ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಕಲ್ಯೆವನನ್ 11-8, 11-5, 11-7, 11-9ರಿಂದ ಸಂಜಯ್ ಮಾಧವನ್ ವಿರುದ್ಧ; ರೋಹಿತ್ 1-11, 4-11, 9-11, 12-10, 11-8, 11-7, 11-5ರಿಂದ ವರುಣ್ ಕಶ್ಯಪ್ ವಿರುದ್ಧ ಜಯ ಸಾಧಿಸಿದರು.

19 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಹಿಮಾಂಶಿ ಚೌಧರಿ ಗೆದ್ದರು. ಅವರು ಫೈನಲ್‌ನಲ್ಲಿ 4–2 (1-11, 11-9, 11-7, 11-3, 10-12, 12-10)ರಿಂದ ನೀತಿ ಅಗರವಾಲ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಹಿಮಾಂಶಿ 5-11, 11-2, 11-6, 5-11, 11-8ರಿಂದ ತನಿಷ್ಕಾ ಕಾಲಭೈರವ ವಿರುದ್ಧ; ನೀತಿ 11-9, 11-8, 11-8ರಿಂದ ಸಹನಾ ಮೂರ್ತಿ ವಿರುದ್ಧ ಗೆಲುವು ಸಾಧಿಸಿದರು.

19 ವರ್ಷದೊಳಗಿನವರ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಅಭಿನವ್ ಮೂರ್ತಿ 4–2 (10-12, 11-5, 11-13, 11-6, 11-5, 11-8)ರಿಂದ ವಿಭಾಸ್ ವಿ.ಜಿ. ಅವರನ್ನು ಸೋಲಿ ಪ್ರಶಸ್ತಿ ಗೆದ್ದರು.

ಸೆಮಿಫೈನಲ್‌ನಲ್ಲಿ ಅಭಿನವ್ 11-9, 12-10, 12-10ರಿಂದ ರೋಹಿತ್ ಶಂಕರ್ ಎದುರು; ವಿಭಾಸ್ ವಿ.ಜಿ. 11-7, 3-11, 12-10, 11-7ರಿಂದ ಅಥರ್ವ ನವರಂಗ ವಿರುದ್ಧ ಗೆಲುವು ಸಾಧಿಸಿದರು.

ವಿದ್ಯಾರ್ಥಿಗಳಿಂದ ₹50 ಸಾವಿರ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರು ಬಾಡಿಗೆ ಪಡೆದು ಮಡಿಕೇರಿಗೆ ಪ್ರವಾಸ ಕೈಗೊಂಡಿದ್ದ ವಿದ್ಯಾರ್ಥಿಗಳು, ವೇಗವಾಗಿ ಕಾರು ಚಾಲನೆ ಮಾಡುವ ಮೂಲಕ ಸಂಚಾರ ನಿಯಮವನ್ನು ಉಲ್ಲಂಘಿಸಿದ್ದಾರೆ ಎಂದು ಬಾಡಿಗೆ ನೀಡಿದ ಕಂಪನಿಯವರು ಆರೋಪಿಸಿ, ವಿದ್ಯಾರ್ಥಿಗಳಿಂದ ಹಣ ಸುಲಿಗೆ ಮಾಡಿದ್ದಲ್ಲದೆ, ಅವರ ಮೇಲೆ ಹಲ್ಲೆ ನಡೆಸಿದ್ದಾರೆ.

ಮತ್ತಿಕೆರೆಯ ಐದನೇ ಸೆಮಿಸ್ಟರ್ ಬಿಬಿಎ ವಿದ್ಯಾರ್ಥಿ ನೀಡಿದ ದೂರು ಆಧರಿಸಿ ಚಂದ್ರ ಲೇಔಟ್ ಪೊಲೀಸರು ವಿನೋದ್, ಶಶಾಂಕ್ ಮತ್ತು ನಿತಿನ್ ಎಂಬುವರನ್ನು ಬಂಧಿಸಿ, ₹30 ಸಾವಿರ ನಗದು ಹಾಗೂ ಲ್ಯಾಪ್‌ಟಾಪ್ ವಶಪಡಿಸಿಕೊಂಡಿದ್ದಾರೆ. ಮತ್ತಿಬ್ಬರು ಆರೋಪಿಗಳಿಗಾಗಿ ಶೋಧ ಆರಂಭಿಸಿದ್ದಾರೆ.

‘ನಾಗರಬಾವಿಯಲ್ಲಿರುವ ಕಂಪನಿಯೊಂದರಿಂದ ‘ರೆಂಟ್ ಎ ಕಾರ್’ ಅಡಿಯಲ್ಲಿ ಕಾರು ಬಾಡಿಗೆಗೆ ಪಡೆದು ಐವರು ವಿದ್ಯಾರ್ಥಿಗಳು ಭಾನುವಾರ ಮಡಿಕೇರಿಗೆ ಪ್ರವಾಸಕ್ಕೆ ಹೋಗಿದ್ದರು. ಕಾರು 120 ಬಾರಿ 100 ಕಿಲೋ ಮೀಟರ್ ವೇಗ ದಾಟಿದೆ ಎಂಬ ನೆಪದಲ್ಲಿ ಕಾರು ಬಾಡಿಗೆಗೆ ನೀಡಿದ ಕಂಪನಿಯ ಸಿಬ್ಬಂದಿ, ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿ, ಬೆದರಿಸಿ ₹50 ಸಾವಿರ ವಸೂಲು ಮಾಡಿದ್ದಾರೆ. ಜತೆಗೆ ಲ್ಯಾಪ್‌ಟಾಪ್ ಕಿತ್ತುಕೊಂಡಿದ್ದರು ಎಂದು ವಿದ್ಯಾರ್ಥಿಗಳು ದೂರಿನಲ್ಲಿ ಉಲ್ಲೇಖಿಸಿರುವುದಾಗಿ’ ಪೊಲೀಸರು ತಿಳಿಸಿದ್ದಾರೆ.

‘120 ಬಾರಿ ವೇಗ ಮಿತಿಯನ್ನು ಮೀರಿ ಕಾರು ಓಡಿಸಿರುವುದರಿಂದ ₹1.20 ಲಕ್ಷ ದಂಡ ಕಟ್ಟಬೇಕು ಎಂದು ಆರೋಪಿಗಳು ಸೂಚಿಸಿದ್ದರು. ಸಂಚಾರ ನಿಯಮ ಉಲ್ಲಂಘನೆಯ ಪುರಾವೆ ಅಥವಾ ಚಲನ್‌ಗಳನ್ನು ತೋರಿಸುವಂತೆ ವಿದ್ಯಾರ್ಥಿಗಳು ಕೇಳಿದಾಗ, ಅವರು ಮೂರು ಉಲ್ಲಂಘನೆಗಳ ಸ್ಕ್ರೀನ್‌ಶಾಟ್ ಮಾತ್ರ ತೋರಿಸಿದ್ದರು. ಉಳಿದವುಗಳನ್ನು ತೋರಿಸಲು ನಿರಾಕರಿಸಿದ್ದರು’ ಎಂದು ವಿದ್ಯಾರ್ಥಿಗಳು ಹೇಳಿದ್ದಾರೆ.

‘ನಿತಿನ್ ಹಾಗೂ ಮತ್ತೊಬ್ಬ ವ್ಯಕ್ತಿ, ಹಣ ಪಾವತಿಸಿ ಹೊರಡುವಂತೆ ವಿದ್ಯಾರ್ಥಿಗಳಿಗೆ ಬೆದರಿಸಿದ್ದರು. ವಿದ್ಯಾರ್ಥಿಗಳು, ತಮ್ಮ ಸಹೋದರಿ ಮತ್ತು ಸ್ನೇಹಿತರಿಗೆ ಕರೆ ಮಾಡಿ ₹50 ಸಾವಿರ ಸಾಲ ಪಡೆದುಕೊಂಡರು. ಆರೋಪಿಗಳಲ್ಲಿ ಒಬ್ಬಾತ ಮೊಬೈಲ್ ಫೋನ್ ಅಂಗಡಿಗೆ ವಿದ್ಯಾರ್ಥಿಯೊಬ್ಬರನ್ನು ಕರೆದುಕೊಂಡು ಹೋಗಿ, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿಸಿ, ₹35 ಸಾವಿರವನ್ನು ಅಂಗಡಿ ಮಾಲೀಕನ ಖಾತೆಗೆ ವರ್ಗಾಯಿಸಿ ಬಳಿಕ, ಅಂಗಡಿ ಮಾಲೀಕನಿಂದ ಆ ಹಣವನ್ನು ತನ್ನ ಖಾತೆಗೆ ವರ್ಗಾಯಿಸಿಕೊಂಡಿದ್ದ ಎಂದು ವಿದ್ಯಾರ್ಥಿಗಳು ಹೇಳಿರುವುದಾಗಿ’ ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಮೂರು ಬಾರಿ ಮಾತ್ರ ವೇಗ ಮಿತಿ ಮೀರಿದ್ದರು. ಆದರೆ ಹಣ ಸುಲಿಗೆ ಮಾಡುವುದಕ್ಕಾಗಿ ಆರೋಪಿಗಳು ಸುಳ್ಳು ಆರೋಪ ಮಾಡಿದ್ದರು ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ಪ್ರವಾಸಿ ತಾಣಗಳ ಇತಿಹಾಸವನ್ನು ಪ್ರಚಾರ ಮಾಡಲು ಸಲಹೆ

‘ಚರಿತ್ರೆ– ಪ್ರವಾಸೋದ್ಯಮ ಪರಸ್ಪರ ಪೂರಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚರಿತ್ರೆ ನಿಂತ ನೀರಲ್ಲ. ಮತ್ತೆ ಮತ್ತೆ ಪುನರ್ ವ್ಯಾಖ್ಯಾನಕ್ಕೆ ಒಳಗಾಗುತ್ತದೆ. ಚರಿತ್ರೆ ಬಿಟ್ಟು ಪ್ರವಾಸೋದ್ಯಮ ಇರಲು ಸಾಧ್ಯವಿಲ್ಲ’ ಎಂದು ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಸಮ ಕುಲಪತಿ ಪ್ರೊ. ಎಸ್. ಚಂದ್ರಶೇಖರ್ ಹೇಳಿದರು.

ರಾಷ್ಟ್ರೀಯ ಗ್ರಾಮೀಣ ವಿಕಾಸ ಕೇಂದ್ರ ಶನಿವಾರ ಆಯೋಜಿಸಿದ್ದ ‘ಕರ್ನಾಟಕ ಇತಿಹಾಸದ ಪುಟಗಳು ಮತ್ತು ಐತಿಹಾಸಿಕ ತಾಣಗಳತ್ತ ನಮ್ಮ ಪಯಣ‘ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಚಾರಿತ್ರಿಕ ಪ್ರವಾಸಿ ತಾಣಗಳು, ಪ್ರವಾಸೋದ್ಯಮ ಹಾಗೂ ಹೋಟೆಲ್ ಉದ್ಯಮಗಳಿಗೆ ಸಂಬಂಧವಿದೆ. ಚರಿತ್ರೆಯ ತಾಣಗಳಿಂದ ಬದುಕಲು ಅರ್ಥವಂತಿಕೆಯ ಜ್ಞಾನಶಿಸ್ತು ಲಭ್ಯವಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

ವಿಚಾರ ಸಂಕಿರಣದಲ್ಲಿ ಟಿ.ಎನ್. ಪ್ರವೀಣ್ ಕುಮಾರ್, ಎಸ್.ಜಿ. ಬಿರಾದರ್, ಆಶಾ ರಾಜೀವ್, ಆರ್. ಶಿವಕುಮಾರ್, ಪ್ರೊ.ಎಸ್. ಚಂದ್ರಶೇಖರ್, ಜಿ.ಕೆ.ಶೆಟ್ಟಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

‘ರಾಜ್ಯಕ್ಕೆ ಪ್ರತಿ ವರ್ಷ 28 ಕೋಟಿ ಪ್ರವಾಸಿಗರು ಬರುತ್ತಾರೆ. ಇದರಲ್ಲಿ 4.10 ಲಕ್ಷವಷ್ಟೇ ವಿದೇಶಿಯರು. ರಾಜ್ಯದಲ್ಲಿ 319 ಪ್ರವಾಸಿ ತಾಣಗಳಿದ್ದು, ಆ ಸ್ಥಳಗಳಲ್ಲಿ ಮೂಲಸೌಕರ್ಯ ಕಲ್ಪಿಸುವುದೂ ಸೇರಿದಂತೆ ವಾಣಿಜ್ಯ ಉದ್ಯಮಕ್ಕೂ ಅವಕಾಶವಿದೆ. ಅಲ್ಲದೆ ಪ್ರವಾಸಿ ತಾಣಗಳ ಇತಿಹಾಸವನ್ನು ಪ್ರಚಾರಪಡಿಸಬೇಕು’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಮಾಜಿ ಅಧ್ಯಕ್ಷ ಆರ್. ಶಿವಕುಮಾರ್ ಹೇಳಿದರು.

ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ ಮಾತನಾಡಿ, ‘ಪ್ರವಾಸಿ ತಾಣಗಳ ಅಭಿವೃದ್ಧಿಗೆ ಖಾಸಗಿಯವರಿಗೆ ಅವಕಾಶ ಮಾಡಿಕೊಡಬೇಕು. ಎಲ್ಲವನ್ನೂ ಸರ್ಕಾರವೇ ಮಾಡಲು ಸಾಧ್ಯವಿಲ್ಲ. ಪ್ರತಿ ಪ್ರವಾಸಿ ತಾಣಗಳಲ್ಲಿ ಹೋಟೆಲ್‌ಗಳ ಅಗತ್ಯವಿದೆ. ಸರ್ಕಾರ ಭೂಮಿ ನೀಡಿದರೆ ನಾವು ಉದ್ಯಮವಾಗಿ ಸಹಕಾರ ನೀಡುತ್ತೇವೆ’ ಎಂದು ತಿಳಿಸಿದರು.

ಜೈನ್ ಡೀಮ್ಡ್–ಟು–ಬಿ ಯೂನಿವರ್ಸಿಟಿಯ ನಿರ್ದೇಶಕಿ ಡಾ. ಆಶಾ ರಾಜೀವ್, ನಿವೃತ್ತ ಕೆಎಎಸ್ ಅಧಿಕಾರಿ ಎಸ್.ಜಿ. ಬಿರಾದಾರ, ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ ದಕ್ಷಿಣ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಎಸ್.ಕೆ. ಅರುಣಿ, ರಾಷ್ಟ್ರೀಯ ಗ್ರಾಮೀಣ ವಿಕಾಸ ಕೇಂದ್ರದ ಉಪಾಧ್ಯಕ್ಷ ಟಿ.ಎನ್. ಪ್ರವೀಣ್‌ಕುಮಾರ್ ಭಾಗವಹಿಸಿದ್ದರು.

ಫಲಿತಾಂಶ ಆಘಾತ ತಂದಿದೆ: ನಿಖಿಲ್ ಕುಮಾರಸ್ವಾಮಿ ಬೇಸರ

‘ಅಲ್ಪಸಂಖ್ಯಾತರು ಕೈ ಹಿಡಿಯಲಿಲ್ಲ’

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ‘ಸಂದಿಗ್ಧ ರಾಜಕೀಯ ಪರಿಸ್ಥಿತಿಯಲ್ಲಿ ಕಾರ್ಯಕರ್ತರ ಒತ್ತಡ ಹಾಗೂ ಜೆಡಿಎಸ್–ಬಿಜೆಪಿ ನಾಯಕರ ಮಾತಿಗೆ ತಲೆಬಾಗಿ ಚುನಾವಣೆಗೆ ಸ್ಪರ್ಧಿಸಿದೆ. ಕ್ಷೇತ್ರದ ಫಲಿತಾಂಶವು ನಮಗೆ ಆಘಾತ ತಂದಿದೆ. ಅಭ್ಯರ್ಥಿ ಆಯ್ಕೆ ವಿಳಂಬವಾಗದಿದ್ದಿದ್ದರೆ ನಾವು ಗೆಲ್ಲುತ್ತಿದ್ದೆವು. ಹಿಂದಿನಿಂದಲೂ ಜೊತೆಗಿದ್ದ ಅಲ್ಪಸಂಖ್ಯಾತರು ನಮ್ಮ ಕೈ ಹಿಡಿಯಲಿಲ್ಲ’ ಎಂದು ಚನ್ನಪಟ್ಟಣ ಉಪ ಚುನಾವಣೆಯ ಪರಾಜಿತ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ವಿಶ್ಲೇಷಿಸಿದರು.

ಉಪ ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದಂತೆ ಬಿಡದಿ ಸಮೀಪದ ಕೇತಗಾನಹಳ್ಳಿಯಲ್ಲಿರುವ ತೋಟದ ಮನೆಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇದು ಜೆಡಿಎಸ್ ಕ್ಷೇತ್ರ. ಯಾವುದೇ ಕಾರಣಕ್ಕೂ ಬೇರೆಯವರಿಗೆ ಬಿಡಬಾರದು ಎಂಬ ಸ್ವಾರ್ಥದಿಂದ ನಾವು ಚುನಾವಣೆ ಎದುರಿಸಿದ್ದರೆ ನಾನು ಖಂಡಿತಾ ಗೆಲ್ಲುತ್ತಿದ್ದೆ. ಚುನಾವಣೆಗೆ ಕನಿಷ್ಠ ನಾಲ್ಕು ತಿಂಗಳು ಸಮಯ ಸಿಗುತ್ತಿತ್ತು’ ಎಂದರು.

‘ನಾವು ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವುದರಿಂದ ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳದೆ ಮೈತ್ರಿ ನಾಯಕರ ಅಭಿಪ್ರಾಯ ಮತ್ತು ಭಾವನೆಗೆ ಗೌರವ ಕೊಟ್ಟೆವು. ಅದೇ ಕಾರಣಕ್ಕೆ ಅಭ್ಯರ್ಥಿ ಆಯ್ಕೆ ಅಂತಿಮಗೊಳಿಸುವ ಪ್ರಕ್ರಿಯೆ ನಾಮಪತ್ರ ಸಲ್ಲಿಸುವ ಹಿಂದಿನ ದಿನದವರೆಗೆ ನಡೆಯಿತು’ ಎಂದು ಹೇಳಿದರು.

ಸೋತೆ ಎಂದು ಜಿಲ್ಲೆ ಬಿಡುವ ಬಗ್ಗೆ ನಾನೆಂದೂ ಯೋಚಿಸಿಲ್ಲ. ನನಗೆ ಶಾಸಕ ಎಂಬ ಪಟ್ಟ ಇಲ್ಲವಷ್ಟೇ. ಕಾರ್ಯಕರ್ತರ ಹೃದಯದಲ್ಲಿರುವ ನಾನು, ಎಲ್ಲೂ ಹೋಗದೆ ಅವರ ಋಣ ತೀರಿಸುವೆ

ನಿಖಿಲ್ ಕುಮಾರಸ್ವಾಮಿ
ಪರಾಜಿತ ಜೆಡಿಎಸ್ ಅಭ್ಯರ್ಥಿ, ಚನ್ನಪಟ್ಟಣ

‘ಎರಡೂ ಪಕ್ಷಗಳ ಕಾರ್ಯಕರ್ತರು ಯೋಧರಂತೆ ಕೆಲಸ ಮಾಡಿದರು. ಸೋಲು ಮತ್ತು ಗೆಲುವಿಗೆ ತನ್ನದೇ ಆದ ಕಾರಣಗಳಿರುತ್ತವೆ. ಬಹುಶಃ ಒಂದು ಸಮುದಾಯದ (ಮುಸ್ಲಿಂ) ಮತಗಳು ಕಾಂಗ್ರೆಸ್ ಪರ ಕ್ರೋಢೀಕರಣಗೊಂಡವು. ನಮ್ಮ ಪಕ್ಷ ಅವರ ಪರವಾಗಿ ಹಲವು ವರ್ಷಗಳಿಂದ ನಿಂತರೂ ಮೀಸಲಾತಿ ಸೇರಿದಂತೆ ಎಷ್ಟೇ ಕೊಡುಗೆಗಳನ್ನು ನೀಡಿದರೂ ಅವರು ನಮ್ಮ ಕೈ ಹಿಡಿದಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಅಭಿವೃದ್ಧಿ ಪ್ರಚಾರದ ಕೊರತೆ’: ‘ಕುಮಾರಣ್ಣನ ಅವಧಿಯಲ್ಲಿ ಕ್ಷೇತ್ರಕ್ಕೆ ಸುಮಾರು ₹1,500 ಕೋಟಿ ಅನುದಾನ ತಂದು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಅದನ್ನು ಸರಿಯಾಗಿ ಜನರಿಗೆ ಹೇಳುವಲ್ಲಿ ನಾವು ಸೋತಿದ್ದೇವೆ. ನಮ್ಮ ಅಭಿವೃದ್ಧಿ ಕೆಲಸಗಳ ಕುರಿತು ಪ್ರಚಾರದ ಕೊರತೆ ಇದೆ. ಅದು ನಮ್ಮಲ್ಲಿರುವ ದೊಡ್ಡ ಲೋಪ ಎಂಬುದು ಅರಿವಾಗಿದೆ’ ಎಂದರು.

‘ಕೆಲವರು ನೂರು ರೂಪಾಯಿ ಕೆಲಸ ಮಾಡಿದರೆ ಸಾವಿರ ರೂಪಾಯಿಯ ಪ್ರಚಾರ ಪಡೆಯುತ್ತಾರೆ. ನಾವು ಸಾವಿರದ ಕೆಲಸ ಮಾಡಿದರೂ ಪ್ರಚಾರ ಪಡೆಯಲಿಲ್ಲ. ನಮ್ಮಲ್ಲಿರುವ ಈ ನ್ಯೂನತೆಯನ್ನು ಸರಿಪಡಿಸಿಕೊಳ್ಳಬೇಕಿದೆ’ ಎಂದು ಪ್ರಶ್ನೆಯೊಂದಕ್ಕೆ ನಿಖಿಲ್ ಪ್ರತಿಕ್ರಿಯಿಸಿದರು.

‘ಬಲಿಪಶು ಕಳಂಕದಿಂದ ಮುಕ್ತನಾಗಿದ್ದೇನೆ’

‘ಪಕ್ಷದಿಂದ ನಾನೇ ಹೊರತು, ನನ್ನಿಂದ ಪಕ್ಷವಲ್ಲ. ಸಂದಿಗ್ಧ ಪರಿಸ್ಥಿತಿಯಲ್ಲಿ ನಾನು ಸ್ಪರ್ಧಿಸಬೇಕಾಯಿತು. ಕಾರ್ಯಕರ್ತರ ಒತ್ತಡ ಮತ್ತು ಹಿರಿಯ ನಾಯಕರ ಸಲಹೆ ಗೌರವಿಸದೆ ನಾನು ಸ್ಪರ್ಧೆಗೆ ನಿರಾಕರಿಸಿದ್ದರೆ, ಗೆಲುವಿಗೆ ಪೂರಕವಾದ ಸ್ಥಿತಿ ಇಲ್ಲವೆಂದು ನಮ್ಮ ಕುಟುಂಬದವರು ಕಾರ್ಯಕರ್ತರನ್ನು ಬಲಿಪಶು ಮಾಡುತ್ತಿದ್ದಾರೆ ಎಂಬ ಕಳಂಕ ಬರುತ್ತಿತ್ತು. ಸೋಲಿನ ಸ್ಥಿತಿ ಇದ್ದರೂ ಸ್ಪರ್ಧಿಸಿದ ನಾನು, ಬೇರೆಯವರನ್ನು ಬಲಿಪಶುಮಾಡುವ ಕಳಂಕದಿಂದ ಮುಕ್ತನಾಗಿದ್ದೇನೆ’ ಎಂದು ಪ್ರಶ್ನೆಯೊಂದಕ್ಕೆ ನಿಖಿಲ್ ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

ಸುಳ್ಳಾದ ಭವಿಷ್ಯ, ಜ್ಯೋತಿಷ

ಚನ್ನಪಟ್ಟಣ: ನಿಖಿಲ್ ಕುಮಾರಸ್ವಾಮಿ ಅವರು ಉಪಚುನಾವಣೆಯಲ್ಲಿ ಜಯಭೇರಿ ಬಾರಿಸುತ್ತಾರೆ ಎಂದು ದೇವಸ್ಥಾನವೊಂದರ ಬಸವ (ಎತ್ತು) ಭವಿಷ್ಯ ನುಡಿದಿತ್ತು. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಆದರೆ, ಆ ಭವಿಷ್ಯ ಸುಳ್ಳಾದಂತಾಗಿದೆ.

ನಿಖಿಲ್ ಕುಮಾರಸ್ವಾಮಿ ಹಾಗೂ ಸಿ.ಪಿ. ಯೋಗೇಶ್ವರ್ ಭಾವಚಿತ್ರ ಇಟ್ಟು ಬಸವನನ್ನು ಪೂಜೆ ಮಾಡಿ ಕಳಿಸಿದ್ದ ಸಂದರ್ಭದಲ್ಲಿ ಬಸವ, ನಿಖಿಲ್ ಭಾವಚಿತ್ರದ ಬಳಿ ಬಂದು ನಿಂತಿತ್ತು. ಆಗ ನಿಖಿಲ್ ಗೆಲ್ಲುತ್ತಾರೆ ಎಂದು ಎಲ್ಲರೂ ನಂಬಿದ್ದರು. ಅದು ನಿಖಿಲ್ ಸೋಲಿನೊಂದಿಗೆ ಸುಳ್ಳಾಗಿದೆ.

ಇದರ ಜೊತೆಗೆ ನಗರದ ಕೋಟೆ ಮಾರಮ್ಮನ ದೇವಸ್ಥಾನದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಪೂಜೆ ಸಲ್ಲಿಸುತ್ತಿದ್ದ ವೇಳೆ ಬಲಗಡೆಯಿಂದ ಹೂ ಬಿದ್ದಿತ್ತು. ಇದಲ್ಲದೆ ಗಿಳಿಶಾಸ್ತ್ರ, ಕವಡೆ ಶಾಸ್ತ್ರ ಸೇರಿ ಕೆಲವು ಶಾಸ್ತ್ರಗಳಲ್ಲಿಯೂ ನಿಖಿಲ್ ಗೆಲ್ಲುತ್ತಾರೆ ಎಂದು ಹೇಳಲಾಗಿತ್ತು. ಈ ಎಲ್ಲ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

ವಿಶ್ವ ಹಿಂದೂ ಪರಿಷತ್ ಶನಿವಾರ ನಗರದಲ್ಲಿ ಆಯೋಜಿಸಿದ್ದ ‘ಸಂತ ಸಮಾವೇಶ’ದಲ್ಲಿ ಅಂಗೀಕರಿಸಿದ ನಿರ್ಣಯಗಳ ಪ್ರತಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಸಲ್ಲಿಸಿದ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾಧ್ಯಮಗಳಿಗೂ ಪ್ರದರ್ಶಿಸಿದರು. ಸಂತ ಸಮಾವೇಶದಲ್ಲಿ ಭಾಗಿಯಾಗಿದ್ದ ಇತರ ಸ್ವಾಮೀಜಿಗಳು ಇದ್ದಾರೆ ಪ್ರಜಾವಾಣಿ ಚಿತ್ರ

ಆತ್ಮಹತ್ಯೆ ಯತ್ನ

ಚನ್ನಪಟ್ಟಣ: ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರಾಭವಗೊಂಡಿದ್ದರಿಂದ ಆಘಾತಕ್ಕೊಳಗಾದ ಕಾರ್ಯಕರ್ತ ಅಭಿ (28) ಎಂಬುವರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ತಾಲ್ಲೂಕಿನ ಕೂಡ್ಲೂರು ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ವಿಷ ಕುಡಿಯುವುದಕ್ಕೆ ಮುಂಚೆ ಮರಣಪತ್ರ ಬರೆದಿರುವ ಅವರು, ‘ನಾನು ನಿಖಿಲ್ ಕುಮಾರಸ್ವಾಮಿ ಸೋಲಿಗೆ ಸಾಯುತ್ತಿದ್ದೇನೆ. ಅವರ ಅಭಿಮಾನಿ ನಾನು. ನನ್ನ ಸಾವಿಗೆ ನಾನೇ ಕಾರಣ. ಜೈ ಜೆಡಿಎಸ್ ಆ್ಯಂಡ್ ಎನ್‌ಡಿಎ’ ಎಂದು ಬರೆದು ಸಹಿ ಮಾಡಿದ್ದಾರೆ.

ಅಸ್ವಸ್ಥಗೊಂಡಿದ್ದ ಅವರಿಗೆ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯಕ್ಕೆ ಸ್ಥಳಾಂತರಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವೇಗೌಡರು ನಿವೃತ್ತರಾಗಲಿ: ಸಿಪಿವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣದಲ್ಲಿ ನಿರೀಕ್ಷಿತ ಗೆಲುವು ದೊರೆತಿದೆ. ಹಳೆ ಮೈಸೂರು ಭಾಗದ ಜನರು ಡಿ.ಕೆ. ಶಿವಕುಮಾರ್ ನಾಯಕತ್ವ ಒಪ್ಪಿಕೊಂಡಿದ್ದಾರೆ. ಒಕ್ಕಲಿಗರ ನಾಯಕತ್ವವನ್ನು ದೇವೇಗೌಡರ ಕುಟುಂಬದಿಂದ ಕಿತ್ತುಕೊಂಡಿದ್ದಾರೆ ಎಂದು ವಿಜೇತ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ತಿಳಿಸಿದರು.

ಗೆಲುವಿನ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಂಧ್ಯಾಕಾಲದಲ್ಲಿ ಚುನಾವಣಾ ಕಣಕ್ಕೆ ಇಳಿದಿದ್ದ ದೇವೇಗೌಡರು ಮೊಮ್ಮಗನನ್ನು ಗೆಲ್ಲಿಸುವ ಪಣತೊಟ್ಟಿದ್ದರು. ಅವರ ಹೋರಾಟದಲ್ಲಿ ಸಾಮಾಜಿಕ ಕಾಳಜಿ ಇರಲಿಲ್ಲ. ಸ್ವಾರ್ಥವಿತ್ತು. ವಂಶಪಾರಂಪರ್ಯ ಆಡಳಿತ ಮುಂದುವರಿಸುವ ಕೌಟುಂಬಿಕ ಉದ್ದೇಶವಷ್ಟೇ ಕಾಣುತ್ತಿತ್ತು. ಹಾಗಾಗಿ, ಜನರು ತಿರಸ್ಕಾರ ಮಾಡಿದ್ದಾರೆ. ಈಗಲಾದರೂ ರಾಜಕೀಯ ನಿವೃತ್ತಿ ಪಡೆದು, ವಿಶ್ರಾಂತ ಜೀವನ ನಡೆಸಬೇಕು ಎಂದು ಸಲಹೆ ನೀಡಿದರು.

ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ, ಕುಮಾರಸ್ವಾಮಿ ಅವರದು ಒಂದೇ ಕಾರ್ಯಸೂಚಿ. ತಮ್ಮ ಮಕ್ಕಳ ಬೆಳವಣಿಗೆಗೆ ಬಿಜೆಪಿ–ಜೆಡಿಎಸ್ ಪಕ್ಷಗಳನ್ನೇ ಬಳಸಿಕೊಳ್ಳುತ್ತಿದ್ದಾರೆ. ಜೆಡಿಎಸ್ ಅಸ್ತಿತ್ವಕ್ಕಾಗಿ ಕುಮಾರಸ್ವಾಮಿ, ದೇವೇಗೌಡರು ಮಗ–ಮೊಮ್ಮಗನನ್ನೇ ಪಣಕ್ಕೆ ಇಟ್ಟಿದ್ದರು. ಜೆಡಿಎಸ್ ಈಗ ತನ್ನ ಅಂತಿಮ ದಿನಗಳನ್ನು ಎಣಿಸುತ್ತಿದೆ ಎಂದರು.

‘ವಿಜಯೇಂದ್ರ, ಯಡಿಯೂರಪ್ಪ ಬೀದಿಗೆ ಬಂದಾಗ ಮರು ಶಕ್ತಿ ತುಂಬಿದ್ದೆವು. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಡಾ.ಮಂಜುನಾಥ್ ಅವರನ್ನು ಗೆಲ್ಲಿಸಿದ್ದೆವು. ಈಗ ಅದೇ ಮತಗಳು ಕಾಂಗ್ರೆಸ್ ಪಾಲಾಗಿವೆ. ಅಂದು ಸೋತಿದ್ದ ಅಭ್ಯರ್ಥಿ ಡಿ.ಕೆ. ಸುರೇಶ್ ಜತೆ ನಿಂತು ಈಗ ಚುನಾವಣೆ ಎದುರಿಸಿದೆ. 30 ಸಾವಿರ ಅಂತರದಿಂದ ಗೆಲ್ಲುವುದಾಗಿ ಮತದಾನದ ದಿನವೇ ಹೇಳಿದ್ದೆ’ ಎಂದರು.

ದ್ವೇಷಪೂರಿತ ಭಾಷಣಗಳಿಗೆ ತಕ್ಕ ಉತ್ತರ; ರಮೇಶ್ ಬಾಬು

ಬೆಂಗಳೂರು: ‘ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ದ್ವೇಷಪೂರಿತ ಭಾಷಣಗಳನ್ನು ತಿರಸ್ಕರಿಸಿ, ಸುಳ್ಳು ಪ್ರಚಾರಗಳಿಗೆ ಒಳಗಾಗದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನಾಯಕತ್ವಕ್ಕೆ ಮತದಾರರು ಮನ್ನಣೆ ನೀಡಿದ್ದಾರೆ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಹೇಳಿದ್ದಾರೆ.

ಉಪ ಚುನಾವಣೆಯ ಫಲಿತಾಂಶದ ಕುರಿತು ಪ್ರತಿಕ್ರಿಯಿಸಿರುವ ಅವರು, ರಾಜ್ಯ ಬಿಜೆಪಿಯಲ್ಲಿ ಗುಂಪುಗಾರಿಕೆ ಮಿತಿಮೀರಿದ್ದು, ಉಪ ಚುನಾವಣೆಯ ಫಲಿತಾಂಶ ಬಂಡಾಯ ನಾಯಕರಿಗೆ ಮತ್ತಷ್ಟು ಶಕ್ತಿ ನೀಡಿದೆ. ದೆಹಲಿ ದಂಡಯಾತ್ರೆಯ ಮೂಲಕ ಕುರ್ಚಿ ಉಳಿಸಿಕೊಳ್ಳುವ ವಿಜಯೇಂದ್ರ ಅವರ ಪ್ರಯತ್ನ ವಿಫಲವಾಗಿದ್ದು, ಬೆಳಗಾವಿ ಅಧಿವೇಶನಕ್ಕೆ ಮೊದಲೇ ಅವರು ರಾಜೀನಾಮೆ ನೀಡುವ ಅನಿವಾರ್ಯ ಉಂಟಾಗಿದೆ’ ಎಂದಿದ್ದಾರೆ.

‘ಈ ಫಲಿತಾಂಶ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಮ್ಮ ಸ್ಥಾನ ತ್ಯಜಿಸಲು ಮುನ್ನುಡಿ ಬರೆದಿದೆ. ಚುನಾವಣೆಯಲ್ಲಿ ರಾಜ್ಯದ ಅಭಿವೃದ್ಧಿ ಅಥವಾ ಕ್ಷೇತ್ರದ ಅಭಿವೃದ್ಧಿ ವಿಷಯಗಳನ್ನು ಮುನ್ನೆಲೆಗೆ ತರುವ ಬದಲು ಧಾರ್ಮಿಕ ಮತ್ತು ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟುಕೊಂಡು ಎಳಸುತನದೊಂದಿಗೆ ಉಪ ಚುನಾವಣೆ ನಡೆಸಿದ ಬಿಜೆಪಿ– ಜೆಡಿಎಸ್ ನಾಯಕರಿಗೆ ಮತದಾರರು ತಮ್ಮ ತೀರ್ಪಿನ ಮೂಲಕ ಮತ್ತೊಮ್ಮೆ ಸರಿಯಾದ ಸಂದೇಶ ನೀಡಿದ್ದಾರೆ’ ಎಂದೂ ಅವರು ಹೇಳಿದ್ದಾರೆ.

ನಿನಾದ ಸಂಸ್ಕೃತಿ ಕಲಾಕೇಂದ್ರ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗಾಯಕಿ ಬಿ.ಕೆ.ಸುಮಿತ್ರ ಅವರಿಗೆ ‘ನಾದ ಸರಸ್ವತಿ ಪ್ರಶಸ್ತಿ’ ಪ್ರದಾನ ಮಾಡಿ ಗೌರವಿಸಲಾಯಿತು. (ಎಡದಿಂದ) ಕಲಾಕೇಂದ್ರದ ಅಧ್ಯಕ್ಷ ಹರೀಶ್ ನರಸಿಂಹ, ಅಧ್ಯಾತ್ಮ ಚಿಂತಕ ದಿನೇಶ ಗುರೂಜಿ, ಸುಗಮ ಸಂಗೀತ ಕಲಾವಿದ ಹೊ.ನ. ರಾಘವೇಂದ್ರ, ತಬಲಾ ವಾದಕ ಸತೀಶ್ ಹಂಪಿಹೊಳಿ ಹಾಗೂ ರಶ್ಮಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಖಿಲ ಭಾರತ ಔಷಧ ನಿಯಂತ್ರಣ ಅಧಿಕಾರಿಗಳ ಒಕ್ಕೂಟವು (ಎಐಡಿಸಿಒಸಿ) ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ರಾಜ್ಯ ಔಷಧ ನಿಯಂತ್ರಣ ಇಲಾಖೆಯ ಡ್ರಗ್ಸ್ ಇನ್ಸ್‌ಪೆಕ್ಟರ್ ಎಸ್‌.ಆರ್‌. ಪ್ರಸನ್ನ ಕುಮಾರ್ ಅವರಿಗೆ ‘ಉತ್ತಮ ಡ್ರಗ್ಸ್ ಇನ್ಸ್‌ಪೆಕ್ಟರ್ ಪ್ರಶಸ್ತಿ’ಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರದಾನ ಮಾಡಿದರು. ಔಷಧ ನಿಯಂತ್ರಕ ಎಸ್‌. ಉಮೇಶ್ ಮತ್ತು ಒಕ್ಕೂಟದ ಅಧ್ಯಕ್ಷ ಆರ್‌.ಪಿ.ಚೌಧರಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಉಪಚುನಾವಣೆಯಲ್ಲಿ ಹಣದ ಹೊಳೆ; ಅಶೋಕ ಆರೋಪ

‘ಅಭಿವೃದ್ಧಿ ಯೋಚನೆ ಗೆಲುವಿಗೆ ದಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಚುನಾವಣೆಯಲ್ಲಿ ಅಧಿಕಾರಿಗಳು, ಗುತ್ತಿಗೆದಾರರು ಸರ್ಕಾರದ ಪರವಾಗಿ ಕೆಲಸ ಮಾಡಿದ್ದಾರೆ. ಹಣದ ಹೊಳೆ ಹರಿಸಿದ ಕಾಂಗ್ರೆಸ್ ವಿಜಯ ಸಾಧಿಸಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಹಣದ ಹೊಳೆಯ ಜತೆಗೆ, ಆಡಳಿತದಲ್ಲಿರುವ ಸರ್ಕಾರದ ಶಾಸಕ ಇದ್ದರೆ ಅಭಿವೃದ್ಧಿಯಾಗುತ್ತದೆ. ಇಲ್ಲದಿದ್ದರೆ ಕ್ಷೇತ್ರ ಅಭಿವೃದ್ಧಿಯಿಂದ ವಂಚಿತವಾಗುತ್ತದೆ ಎನ್ನುವ ಕಾರಣಕ್ಕೂ ಜನರು ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಶಿಗ್ಗಾವಿ, ಚನ್ನಪಟ್ಟಣದ ಅಭ್ಯರ್ಥಿಗಳ ಆಯ್ಕೆ ವಿಳಂಬವಾಯಿತು. ಸಂಡೂರಿನ ಮೈತ್ರಿ ಅಭ್ಯರ್ಥಿ ಉತ್ತಮ ಸ್ಪರ್ಧೆ ನೀಡಿದ್ದಾರೆ. ಎರಡು ಬಾರಿ ಸೋತಿರುವುದು ಚನ್ನಪಟ್ಟಣದಲ್ಲಿ ನಿಖಿಲ್‌ಗೆ ವರವಾಗಬೇಕಿತ್ತು. ಆದರೆ ನಮ್ಮ ನಿರೀಕ್ಷೆ ಸುಳ್ಳಾಗಿದೆ. ಇದು ಸಿದ್ದರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್ ಗೆಲುವಲ್ಲ. ಹಣ, ಅಧಿಕಾರದ ಗೆಲುವು. ಇದು ಸಾಮಾನ್ಯ ಫಲಿತಾಂಶ, ಅದಕ್ಕಾಗಿ ಕಾಂಗ್ರೆಸ್ ಬೀಗಬೇಕಿಲ್ಲ ಎಂದರು.

ನಿರಾಸೆ ಮೂಡಿಸಿದ ಫಲಿತಾಂಶ: ಬಿವೈವಿ

‘ಉಪ ಚುನಾವಣೆಯ ಫಲಿತಾಂಶ ನಿರಾಸೆ ಮೂಡಿಸಿದೆ. ಶಿಗ್ಗಾವಿ ಸೋಲು ಆಘಾತ ತಂದಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

‘ಗೆಲ್ಲುವ ವಿಶ್ವಾಸವಿತ್ತು. ಮೈತ್ರಿ ಪಕ್ಷಗಳಿಗೆ ಮೂರು ಕ್ಷೇತ್ರಗಳಲ್ಲೂ ಹಿನ್ನಡೆಯಾಗಿದೆ. ಗೆಲುವು ಏಕೆ ಸಾಧ್ಯವಾಗಿಲ್ಲ ಎನ್ನುವ ಕುರಿತು ಎರಡೂ ಪಕ್ಷಗಳ ಮುಖಂಡರು ಕುಳಿತು ಚರ್ಚಿಸುತ್ತೇವೆ. ತಪ್ಪು ಸರಿಪಡಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ’ ಎಂದರು.

‘ಸಂಡೂರು ಕ್ಷೇತ್ರದಲ್ಲಿ ಮೊದಲ ಬಾರಿ ಬಿಜೆಪಿ ಸುಮಾರು 80 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದಿದೆ. ಗೆಲುವಿಗೆ ಹೆಚ್ಚಿನ ಶ್ರಮ ಹಾಕಿದ್ದೆವು. ಶಿಗ್ಗಾವಿಯಲ್ಲಿ ಬಸವರಾಜ ಬೊಮ್ಮಾಯಿ ಅವರು ಬಹಳ ಕೆಲಸ ಮಾಡಿದ್ದಾರೆ. ಬಿಜೆಪಿ ಕಾರ್ಯಕರ್ತರು ಹಗಲು–ರಾತ್ರಿ ಶ್ರಮ ಹಾಕಿದ್ದರು. ಪಕ್ಷದ ಎಲ್ಲ ಹಿರಿಯರು, ನಾಯಕರು ಕುಳಿತು ಸೋಲಿನ ವಿಮರ್ಶೆ ಮಾಡುತ್ತೇವೆ’ ಎಂದರು.

ಕೃಷಿ, ಕಾಡುತ್ಪತ್ತಿಯನ್ನೇ ನಂಬಿರುವ ಅರಣ್ಯದಂಚಿನ ನಿವಾಸಿಗಳೇ ಬಲಿಪಶುಗಳು

ಮಲೆಕುಡಿಯರ ಮನೆ, ಮನಗಳಲ್ಲಿ ಆತಂಕ

• ನವೀನ್ ಕುಮಾರ್ ಜಿ.

ಉಡುಪಿ: ಹೆಬ್ರಿ ತಾಲ್ಲೂಕಿನ ಪೀತುಬೈಲಿನಲ್ಲಿ ಗುಂಡಿನ ಮೊರೆತ ಕೇಳಿದ ಬಳಿಕ ಜಿಲ್ಲೆಯ ಪಶ್ಚಿಮಘಟ್ಟದ ಕಾಡಂಚಿನ ಗ್ರಾಮಗಳಲ್ಲಿ ನೆಲಸಿರುವ ಮಲೆಕುಡಿಯ ಸಮುದಾಯದವರಲ್ಲಿ ಮತ್ತೆ ಆತಂಕ ಮನೆ ಮಾಡಿದೆ.

ನಕ್ಸಲರ ದಾಳಿಯಾಗಲಿ, ಪೊಲೀಸರ ಕಾರ್ಯಾಚರಣೆಯಾಗಲಿ ನಡೆದಾಗ ಮೊದಲು ಸಂಕಷ್ಟ ಅನುಭವಿಸುವವರು ಇದೇ ಅರಣ್ಯದಂಚಿನ ನಿವಾಸಿಗಳು. ಒಂದೆಡೆ ನಕ್ಸಲರ ಭಯವಾದರೆ, ಇನ್ನೊಂದೆಡೆ ಪೊಲೀಸರ ವಿಚಾರಣೆಯ ಭಯ ಇವರ ನೆಮ್ಮದಿಯನ್ನು ಕಸಿಯುತ್ತಲೇ ಇದೆ.

ಯಾವುದೋ ಕಾಡಲ್ಲಿ ನಕ್ಸಲರು ಕಾಣಿಸಿಕೊಂಡ ಮಾಹಿತಿ ಸಿಕ್ಕಿದರೂ ನಕ್ಸಲ್‌ಬಾಧಿತ ಪ್ರದೇಶಗಳಲ್ಲಿ ನಕ್ಸಲ್ ನಿಗ್ರಹ ದಳದಿಂದ ಶೋಧ ಕಾರ್ಯಾಚರಣೆ ಚುರುಕುಗೊಳ್ಳುತ್ತದೆ. ಆ ವೇಳೆ ಹಗಲು ರಾತ್ರಿ ಎನ್ನದೆ ನಮ್ಮವರ ಮನೆಗಳಿಗೆ ಬಂದು ಪರಿಶೀಲನೆ ನಡೆಸುತ್ತಾರೆ ಎನ್ನುತ್ತಾರೆ ಮಲೆಕುಡಿಯ ಸಮುದಾಯದವರು.

ಕೃಷಿಯನ್ನೇ ಆಶ್ರಯಿಸಿರುವ ಮಲೆಕುಡಿಯರು, ರಾಮಪತ್ರೆ ಸೇರಿದಂತೆ ಕಾಡುತ್ಪನ್ನಗಳು ಹಾಗೂ ಜೇನು ಸಂಗ್ರಹಿಸಿ ಮಾರಾಟ ಮಾಡಿ ಜೀವನ ನಿರ್ವಹಣೆ ಮಾಡುತ್ತಾರೆ.

ಉಡುಪಿ ಜಿಲ್ಲೆಯಲ್ಲಿ 468 ಮಲೆಕುಡಿಯ ಕುಟುಂಬಗಳಿವೆ. ಎನ್‌ಕೌಂಟರ್ ನಡೆದಿರುವ ನಾಡ್ಪಾಲ್ ಮತ್ತು ಮುದ್ರಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಅಂದಾಜು 250 ಕುಟುಂಬಗಳು ನೆಲಸಿವೆ. ಎಎನ್‌ಎಫ್‌ನವರು ಹತ್ಯೆ ಮಾಡಿರುವ ವಿಕ್ರಂ ಗೌಡ ಕೂಡ ಇದೇ ಸಮುದಾಯಕ್ಕೆ ಸೇರಿದವನು.

‘ಕಾಡಂಚಿನಲ್ಲಿ ವಾಸಿಸುವ ಮಲೆಕುಡಿಯರ ಯಾವ ಬೇಡಿಕೆಗಳೂ ಈಡೇರುತ್ತಿಲ್ಲ. ಹೆಬ್ರಿ ತಾಲ್ಲೂಕಿನ ಮತ್ತಾವುನಲ್ಲಿ ಸೇತುವೆ ನಿರ್ಮಿಸಬೇಕೆಂಬುದು 50 ವರ್ಷಗಳ ಹಿಂದಿನ ಬೇಡಿಕೆ, ಅದು ಸಾಕಾರವಾಗಿಲ್ಲ. ಈಗ ಸಂಬಂಧಪಟ್ಟವರು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದಾರೆ’ ಎನ್ನುತ್ತಾರೆ ಉಡುಪಿ ಜಿಲ್ಲಾ ಮಲೆಕುಡಿಯ ಸಂಘದ ಅಧ್ಯಕ್ಷ ಗಂಗಾಧರ ಗೌಡ.

‘ಜಿಲ್ಲೆಯಲ್ಲಿ ಮಲೆಕುಡಿಯ ಸಮುದಾಯದವರ ಶ್ರೇಯೋಭಿವೃದ್ಧಿಗಾಗಿ ₹6.43 ಕೋಟಿ ವೆಚ್ಚದ ಕ್ರಿಯಾ ಯೋಜನೆ ಸಿದ್ಧವಾಗಿದೆ ಎಂಬ ಮಾಹಿತಿ ಇದೆ. ಇದು ಯಾವುದಕ್ಕೂ ಸಾಲದು. ಕನಿಷ್ಠ ₹50 ಕೋಟಿಯಷ್ಟಾದರೂ ವೆಚ್ಚ ಮಾಡಿ, ಸಮುದಾಯದ ಅಭಿವೃದ್ಧಿಗೆ ಮುಂದಾಗಬೇಕು’ ಎಂದು ಅವರು ಆಗ್ರಹಿಸಿದರು.

‘ಕುದುರೆಮುಖ ಸೇರಿದಂತೆ ಜಿಲ್ಲೆಯ ಅರಣ್ಯ ಪ್ರದೇಶಗಳಿಂದ ಸ್ವಇಚ್ಛೆಯಿಂದ ಹೊರಬರುವ ನಮ್ಮ ಸಮುದಾಯದವರಿಗೆ 300 ಎಕರೆ ಜಾಗ ಮೀಸಲಿರಿಸಬೇಕು. ಪ್ರತಿ ಕುಟುಂಬಕ್ಕೆ ಕನಿಷ್ಠ 2 ಎಕರೆಯಾದರೂ ಜಾಗ ನೀಡಬೇಕು’ ಎಂದು ಅವರು ಒತ್ತಾಯಿಸಿದರು.

ಹೆಬ್ರಿ ತಾಲ್ಲೂಕಿನ ಪೀತುಬೈಲ್ ಸಮೀಪ ಕಾಡಂಚಿನಲ್ಲಿರುವ ಮಲೆಕುಡಿಯ ಸಮುದಾಯದವರ ಮನೆ

ಉಡುಪಿ ಜಿಲ್ಲೆಯಲ್ಲಿ ಮಲೆಕುಡಿಯರ ಕೇವಲ 6 ಮಂದಿ ಸರ್ಕಾರಿ ನೌಕರಿಯಲ್ಲಿದ್ದಾರೆ. ಸಿ ಮತ್ತು ಡಿ ದರ್ಜೆ ಹುದ್ದೆಗಳಲ್ಲಿ ಮೀಸಲಾತಿ ನೀಡಬೇಕು

ಗಂಗಾಧರ ಗೌಡ, ಉಡುಪಿ ಜಿಲ್ಲಾ ಮಲೆಕುಡಿಯ ಸಂಘದ ಅಧ್ಯಕ್ಷ

ಕಾರ್ಕಳ ತಾಲ್ಲೂಕಿನ ಈದು ಗ್ರಾಮಕ್ಕೆ ಈಚೆಗೆ ನಕ್ಸಲರು ಬಂದಿದ್ದರೆಂಬ ಸುದ್ದಿ ಹರಡಿದ ಬಳಿಕ ಕೇರಳ ಪೊಲೀಸರ ತಂಡ ಇಲ್ಲಿಗೆ ಬಂದು ಮಾಹಿತಿ ಕಲೆಹಾಕುತ್ತಿದೆ

ಭಾಸ್ಕರ ಮಲೆಕುಡಿಯ, ಕನ್ಯಾಲು

ಸರ್ಕಾರವು ನಮಗೆ ಶಾಶ್ವತ ಹಕ್ಕುಪತ್ರ ನೀಡಬೇಕು. ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸಿದರೂ ಪರಿಸರ ಸೂಕ್ಷ್ಮ ಪ್ರದೇಶದಿಂದಾಗಿ ಆತಂಕ ಕಾಡುತ್ತಿದೆ

ಶೇಖರ ಗೌಡ, ಅಜ್ಜೋಳಿ, ಹೆಬ್ರಿ

ಕೂಡ್ಲು ಗ್ರಾಮಕ್ಕೆ ಇನ್ನೂ ತಲುಪದ ಸೌಲಭ್ಯ

ಪ್ರಜಾವಾಣಿ ವಾರ್ತೆ

ಉಡುಪಿ: ಹೆಬ್ರಿ ತಾಲ್ಲೂಕಿನ ಪೀತುಬೈಲ್ ಬಳಿ ಎನ್‌ಕೌಂಟರ್‌ನಲ್ಲಿ ಮೃತಪಟ್ಟ ವಿಕ್ರಂ ಗೌಡನ ಹುಟ್ಟೂರು ಕೂಡ್ಲು ಮೂಲ ಸೌಕರ್ಯಗಳಿಲ್ಲದೆ ಇನ್ನೂ ಕುಗ್ರಾಮವಾಗಿಯೇ ಉಳಿದಿದೆ.

ದಟ್ಟಾರಣ್ಯದೊಳಗಿನ ಕೊರಕಲು ರಸ್ತೆಯಲ್ಲಿ ಸಾಗಿಯೇ ಅಲ್ಲಿನ ಜನರು ಅಗತ್ಯಗಳಿಗೆ ದೂರದ ಹೆಬ್ರಿಗೆ ಬರಬೇಕು.

ಅಪಾಯಕಾರಿ ರಸ್ತೆಯಲ್ಲಿ ನಿತ್ಯ ಸುಮಾರು 10 ಕಿ.ಮೀ. ದೂರದಲ್ಲಿರುವ ಶಾಲೆಗೆ ಮಕ್ಕಳನ್ನು ಕರೆದುಕೊಂಡು ಹೋಗಬೇಕಾದ ಪರಿಸ್ಥಿತಿ ನಾಡ್ಪಾಲು ಗ್ರಾಮ ಪಂಚಾಯಿತಿಯ ಕೂಡ್ಲುವಿನ ನಿವಾಸಿಗಳದ್ದು.

ಇಲ್ಲಿನ ಜನರು ಕೃಷಿಯನ್ನೇ ಆಧರಿಸಿ ಜೀವನ ಸಾಗಿಸುವವರು. ಇದೇ ಪ್ರದೇಶದಲ್ಲಿ ಕೂಡ್ಲು ತೀರ್ಥ ಜಲಪಾತವಿದ್ದು, ಅಲ್ಲಿಗೆ ಮಳೆಗಾಲದಲ್ಲಿ ಪ್ರವಾಸಿಗರು ಬರುತ್ತಾರೆ. ಆದರೆ ಜಲಪಾತದ ಬಳಿ ತಲುಪಬೇಕಾದರೆ ಅರಣ್ಯದ ದಾರಿ ಸವೆಸಬೇಕು.

ವಿಕ್ರಂ ಗೌಡನ ಮನೆಗೆ ತಲುಪಲು ತೊರೆಯೊಂದರ ಸೇತುವೆ ದಾಟಿ ಹೋಗಬೇಕು. ವರ್ಷವಿಡೀ ಈ ತೊರೆಯ ನೀರೆ ಇಲ್ಲಿನ ಜನರ ಕೃಷಿಗೆ ಆಸರೆಯಾಗಿದೆ. ಮಳೆಗಾಲದಲ್ಲಿ ಈ ತೊರೆಯು ಉಕ್ಕಿ ಹರಿಯುತ್ತದೆ.

‘ನಾವು ಕೃಷಿಯನ್ನೇ ನಂಬಿ ಬದುಕುವವರು. ವಿದ್ಯುತ್ ಸಂಪರ್ಕ ಬಿಟ್ಟರೆ ಬೇರೆ ಯಾವ ಸೌಲಭ್ಯಗಳೂ ನಮಗೆ ಸಿಕ್ಕಿಲ್ಲ’ ಎನ್ನುತ್ತಾರೆ ಕೂಡ್ಲು ನಿವಾಸಿ ಸಾಧು ಶೆಟ್ಟಿ.

‘ಮಕ್ಕಳನ್ನು ಶಾಲೆಗೆ ಕಳುಹಿಸುವುದೇ ಇಲ್ಲಿ ಸವಾಲಾಗಿದೆ. ಹಿಂದೆ ಕೂಡ್ಲುವಿನಿಂದ ಏಳು ಕಿ.ಮೀ ದೂರದ ಮೇಗದ್ದೆಯಲ್ಲಿ ಪ್ರಾಥಮಿಕ ಶಾಲೆ ಇತ್ತು. ಈಗ ಅದನ್ನು ಮುಚ್ಚಲಾಗಿದೆ. ಆ ಕಾರಣಕ್ಕೆ ಪ್ರತಿ ದಿನ 10 ಕಿ.ಮೀ. ದೂರದಲ್ಲಿರುವ ನೆಲ್ಲಿಕಟ್ಟೆ ಎಂಬಲ್ಲಿನ ಶಾಲೆಗೆ ಮಕ್ಕಳನ್ನು ಕರೆದೊಯ್ಯಬೇಕಾಗುತ್ತದೆ. ಹೈಸ್ಕೂಲ್ ಶಿಕ್ಷಣಕ್ಕೆ ಮಕ್ಕಳನ್ನು 22 ಕಿ.ಮೀ. ದೂರದ ಹೆಬ್ರಿಗೆ ಕಳುಹಿಸಬೇಕು’ ಎನ್ನುತ್ತಾರೆ ಸ್ಥಳೀಯ ನಿವಾಸಿ ಸುಧಾಕರ ಗೌಡ ನಾಡ್ಪಾಲ್.

ಮಳೆಗಾಲದಲ್ಲಿ ಇಲ್ಲಿನ ರಸ್ತೆಗಳ ಪರಿಸ್ಥಿತಿ ತೀರಾ ಹದಗೆಟ್ಟು ವಾಹನ ಸಂಚಾರ ದುಸ್ತರವಾಗುತ್ತದೆ. ಕೆಲವೆಡೆ ಕಾಡಾನೆಗಳ ಹಾವಳಿ ಇರುವುದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು ಭಯವಾಗುತ್ತದೆ ಎಂದೂ ಅವರು ಅಳಲು ತೋಡಿಕೊಂಡರು.

ಪೀತುಬೈಲ್ ಪ್ರದೇಶದ ದುರ್ಗಮ ಹಾದಿಯಲ್ಲಿ ಮಕ್ಕಳನ್ನು ಬೈಕ್‌ನಲ್ಲಿ ಶಾಲೆಗೆ ಕರೆದೊಯ್ಯುತ್ತಿರುವ ಅಲ್ಲಿಯ ನಿವಾಸಿ

ಕೂಡ್ಲುವಿಗೆ ತೆರಳುವ ದಾರಿಯಲ್ಲಿ ಬರುವ ಸೇತುವೆಗಳು ಹಳೆಯದಾಗಿದ್ದು, ಶಿಥಿಲಗೊಂಡಿವೆ. ರಸ್ತೆ ಕೂಡ ದುರಸ್ತಿ ಕಾಣದೆ ಹಲವು ವರ್ಷಗಳೇ ಕಳೆದಿವೆ ಎಂದು ಹೇಳಿದರು.

ಕಾಡಿನೊಳಗಿನ ಗ್ರಾಮ ಪೀತುಬೈಲ್: ನಕ್ಸಲ್ ನಿಗ್ರಹ ಪಡೆಯು ಎನ್‌ಕೌಂಟರ್ ನಡೆಸಿರುವ ಕಬ್ಬಿನಾಲೆಯ ಪೀತುಬೈಲ್ ದಟ್ಟಾರಣ್ಯದೊಳಗಿನ ಗ್ರಾಮವಾಗಿದೆ. ಮೂರು ಕುಟುಂಬಗಳಷ್ಟೇ ಇಲ್ಲಿ ವಾಸವಾಗಿವೆ. ಕಲ್ಲು ಮಣ್ಣಿನ ರಸ್ತೆಯಲ್ಲಿ ಜೀಪ್ ಬಿಟ್ಟರೆ ಬೇರೆ ವಾಹನಗಳು ಹರಸಾಹಸಪಟ್ಟು ಸಾಗಬೇಕಾಗಿದೆ.

ಈ ಕಾರಣಕ್ಕೆ ಇಲ್ಲಿನ ಕೆಲವರು ಸುಮಾರು ಏಳು ಕಿ.ಮೀ.ಗಳಷ್ಟು ದೂರ ನಡೆದೇ ಕೆಲಸಕ್ಕೆ ಹೋಗಬೇಕು.

ವಿದ್ಯುತ್ ಸಂಪರ್ಕವಿಲ್ಲದ ಕಾರಣ ಪೀತುಬೈಲ್ ಗ್ರಾಮಸ್ಥರು ಸೋಲಾರ್ ಆಶ್ರಯಿಸಿಕೊಂಡಿದ್ದಾರೆ. ರಾತ್ರಿ ವೇಳೆ ದಟ್ಟಾರಣ್ಯದ ಈ ರಸ್ತೆಯಲ್ಲಿ ಸಾಗುವುದು ಅಪಾಯ ಆಹ್ವಾನಿಸಿದಂತೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಕೂಡ ಕಷ್ಟವಾಗುತ್ತಿದೆ ಎಂಬುದು ಇಲ್ಲಿನ ನಿವಾಸಿಗಳ ಅಳಲು.

ನಾಡ್ಪಾಲಿನ ಪೀತುಬೈಲಿನಲ್ಲಿ ಎನ್‌ಕೌಂಟರ್ ನಡೆದ ಸ್ಥಳಕ್ಕೆ ನಕ್ಸಲ್ ಪುನರ್ ವಸತಿ ಮತ್ತು ಶರಣಾಗತಿ ಸಮಿತಿ ಸದಸ್ಯರಾದ ಶ್ರೀಪಾಲ್ ಕೆ.ಪಿ., ಪಾರ್ವತೀಶ ಬಿಳಿದಾಳೆ ಮತ್ತಿತರರು ಶನಿವಾರ ಭೇಟಿ ನೀಡಿದರು

ಎನ್‌ಕೌಂಟರ್ ಸ್ಥಳಕ್ಕೆ ಶರಣಾಗತಿ ಸಮಿತಿ ಸದಸ್ಯರ ಭೇಟಿ

ಹೆಬ್ರಿ (ಉಡುಪಿ): ನಾಡ್ಪಾಲಿನ ಪೀತುಬೈಲಿನಲ್ಲಿ ನಕ್ಸಲ್ ನಾಯಕ ಕೂಡ್ಲು ವಿಕ್ರಂ ಗೌಡನ ಎನ್‌ಕೌಂಟರ್ ನಡೆದ ಸ್ಥಳಕ್ಕೆ ‘ನಕ್ಸಲ್ ಪುನರ್ ವಸತಿ ಮತ್ತು ಶರಣಾಗತಿ ಸಮಿತಿ’ ಸದಸ್ಯರಾದ ವಕೀಲ ಶ್ರೀಪಾಲ್ ಕೆ.ಪಿ. ಮತ್ತು ಪತ್ರಕರ್ತ ಪಾರ್ವತೀಶ ಬಿಳಿದಾಳೆ ಶನಿವಾರ ಭೇಟಿ ನೀಡಿದರು.

ಪೀತುಬೈಲಿನ ಆದಿವಾಸಿ ಕುಟುಂಬಗಳೊಂದಿಗೆ ಅವರು ಚರ್ಚಿಸಿದರು.

‘ನಕ್ಸಲರು ಶರಣಾಗತಿ ಬಯಸಿದರೆ ನಕ್ಸಲ್ ಪುನರ್ ವಸತಿ ಮತ್ತು ಶರಣಾಗತಿ ಸಮಿತಿ ಸದಸ್ಯರಾದ ನಮ್ಮನ್ನು ಸಂಪರ್ಕಿಸಬಹುದು. ಯಾರಾದರೂ ಮುಖ್ಯವಾಹಿನಿಗೆ ಬರುವುದಾದರೆ ಎಲ್ಲ ವ್ಯವಸ್ಥೆ ಮಾಡುತ್ತೇವೆ’ ಎಂದು ಶ್ರೀಪಾಲ್ ತಿಳಿಸಿದರು.

ಪಾರ್ವತೀಶ ಬಿಳಿದಾಳೆ ಮಾತನಾಡಿ, ಈ ಕುರಿತು ಚರ್ಚಿಸಲು ಸರ್ಕಾರ ಶೀಘ್ರ ಸಭೆ ಕರೆಯಬೇಕು. ಆದಿವಾಸಿಗಳ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಸಭೆಯಲ್ಲಿ ಮಹತ್ತರ ಚರ್ಚೆ ನಡೆಸಬೇಕಾಗಿದೆ ಎಂದರು.

ಎನ್‌ಕೌಂಟರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವಂತೆ ಆಗ್ರಹಗಳು ಕೇಳಿ ಬರುತ್ತಿದ್ದು, ಸರ್ಕಾರ ಅತಿ ಶೀಘ್ರ ನಿರ್ಧಾರ ಕೈಗೊಳ್ಳಬೇಕು ಎಂದು ಶ್ರೀಪಾಲ್ ಒತ್ತಾಯಿಸಿದರು.

ಪರಿಷತ್ತಿನ ಅಧ್ಯಕ್ಷರ ಮನೆಗೆ ಸಿ.ಎಂ ಬರಬೇಕೆಂದು ಹೇಳಿಲ್ಲ: ಜೋಶಿ

ಮಂಡ್ಯ: ‘ಸಿ.ಎಂ, ಸಚಿವರು ಪರಿಷತ್ತಿನ ಅಧ್ಯಕ್ಷರ ಮನೆಗೆ ಬರಬೇಕು ಎಂಬ ಹೇಳಿಕೆಯನ್ನು ಕೊಟ್ಟಿಲ್ಲ’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಸ್ಪಷ್ಟಪಡಿಸಿದ್ದಾರೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಈಚೆಗೆ ನಡೆದ ಸಾಹಿತಿಗಳೊಂದಿಗೆ ಸಮಾಲೋಚನೆ ಸಭೆಯಲ್ಲಿ ‘ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಸರ್ಕಾರ ಯಾವ ರೀತಿ ಗೌರವ ನೀಡುತ್ತಿದೆ ಎಂಬುದರ ಬಗ್ಗೆ ಒಂದು ಘಟನೆಯನ್ನು ವಿವರಿಸಿ, ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಕಸಾಪ ಅಧ್ಯಕ್ಷರನ್ನು ಆಹ್ವಾನಿಸಿ, ತಮ್ಮ ಅಧಿಕೃತ ವಾಹನವನ್ನು ಕಳುಹಿಸಿ, ಅದರಲ್ಲಿಯೇ ಕುಳಿತುಕೊಂಡು ಬರುವಂತೆ ಭಿನ್ನವಿಸಿ ಗೌರವದಿಂದ ಸ್ವಾಗತಿಸಿದ್ದರು ಎಂದು ಹೇಳಿದ್ದೆ’ ಎಂದಿದ್ದಾರೆ.

‘ಕಸಾಪ ಅಧ್ಯಕ್ಷರು ವಿನಾಕಾರಣ ವಿಧಾನಸೌಧಕ್ಕೆ ಹೋಗುವ, ಸಚಿವರನ್ನು ಭೇಟಿಯಾಗುವ ಪರಂಪರೆ ಹೊಂದಿಲ್ಲ. ಅವಶ್ಯಕತೆ ಇದ್ದಾಗಷ್ಟೇ ಭೇಟಿ ಮಾಡುತ್ತಾರೆ. ಪರಿಷತ್ತಿನ ಘನ ಪರಂಪರೆ ಇದು ಎಂದು ವಿವರಿಸಿದ್ದೆ’ ಎಂದು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ಸರ್ಕಾರಿ ಶಾಲೆ ಮಕ್ಕಳಿಗೆ ವಿಮಾನಯಾನ ಭಾಗ್ಯ

ಪ್ರಜಾವಾಣಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಅತ್ಯಂತ ಕಡಿಮೆ ಹಣದಲ್ಲಿ ವಿಮಾನದಲ್ಲಿ ಶೈಕ್ಷಣಿಕ ಪ್ರವಾಸಕ್ಕೆ ತೆರಳುವ ಭಾಗ್ಯ ಲಭಿಸಿದೆ.

ಈ ಶಾಲೆಯ 34 ವಿದ್ಯಾರ್ಥಿಗಳು, ಮೂವರು ಎಸ್‌ಡಿಎಂಸಿ ಪದಾಧಿಕಾರಿಗಳು ಹಾಗೂ ಐದು ಶಿಕ್ಷಕರು ಡಿ. 6ರಂದು ಬಳ್ಳಾರಿ ಜಿಲ್ಲೆಯ ಜಿಂದಾಲ್ ವಿಮಾನ ನಿಲ್ದಾಣದಿಂದ ಹೈದರಾಬಾದ್‌ಗೆ ತೆರಳುವರು. ಅಲ್ಲಿ ಎರಡು ದಿನ ವಿವಿಧ ಸ್ಥಳಗಳನ್ನು ವೀಕ್ಷಿಸಿ ರೈಲಿನ ಮೂಲಕ ವಾಪಸ್ ಬರಲಿದ್ದಾರೆ.

ಸದ್ಯಕ್ಕೆ ಪ್ರತಿ ವಿದ್ಯಾರ್ಥಿಯಿಂದ ₹2,500 ಸಂಗ್ರಹಿಸಲಾಗಿದೆ. ಉಳಿದ ಹಣವನ್ನು ಶಾಲೆಯ ಎಲ್ಲ ಶಿಕ್ಷಕರು, ಗ್ರಾಮ ಪಂಚಾಯಿತಿ, ಗ್ರಾಮದ ಸುತ್ತಮುತ್ತ ಇರುವ ಖಾಸಗಿ ಕಂಪನಿಗಳು ದೇಣಿಗೆ ನೀಡಿವೆ. ಮತ್ತಷ್ಟು ಹಣವನ್ನು ಕ್ಷೇತ್ರದ ಶಾಸಕ ಹಾಗೂ ಸಂಸದರು ನೀಡಲಿರುವುದರಿಂದ ಮಕ್ಕಳ ವಿಮಾನಯಾನದ ಕನಸಿಗೆ ರೆಕ್ಕೆ ಮೂಡಿದೆ.

‘ದೇಣಿಗೆ ನೀಡುವುದಾಗಿ ಜನಪ್ರತಿನಿಧಿಗಳು ತಿಳಿಸಿದ್ದಾರೆ. ಕಂಪನಿಗಳಿಂದ ಹಣ ಬಂದಿದ್ದರಿಂದ ಈಗಾಗಲೇ ವಿಮಾನದ ಟಿಕೆಟ್ ಬುಕ್ ಮಾಡಲಾಗಿದೆ. ಒಂದು ವೇಳೆ ಹಣ ಉಳಿದರೆ ವಿದ್ಯಾರ್ಥಿಗಳಿಗೆ ಅವರ ಹಣ ವಾಪಸ್ ಕೊಡುತ್ತೇವೆ. ಸರ್ಕಾರಿ ಶಾಲೆಯ ಮಕ್ಕಳಿಗೂ ಸಣ್ಣ ವಯಸ್ಸಿನಲ್ಲಿಯೇ ವಿಮಾನಯಾನದ ಅನುಭವ ತಿಳಿಯಲಿ ಎನ್ನುವ ಕಾರಣಕ್ಕಾಗಿ ಈ ಯೋಜನೆ ರೂಪಿಸಿದ್ದೇವೆ’ ಎಂದು ಶಾಲೆಯ ಶಿಕ್ಷಕ ನಾಗರಾಜ ‘ಪ್ರಜಾವಾಣಿ’ಗೆ ತಿಳಿಸಿದರು.

ಕಂಬಳದ ವೈಭವ

ದಕ್ಷಿಣ ಕನ್ನಡ ಜಿಲ್ಲೆ ಸಿದ್ದಕಟ್ಟೆ ಕೊಡಂಗೆಯಲ್ಲಿ ಶನಿವಾರ ನಡೆದ ವೀರ -ವಿಕ್ರಮ ಜೋಡುಕರೆ ಕಂಬಳದಲ್ಲಿ ಹಗ್ಗ ಹಿರಿಯ ವಿಭಾಗದಲ್ಲಿ ಶಾರದಾ ಸತೀಶ್ ಶೆಟ್ಟಿ ಪೇಜಾವರ ಚಿಕ್ಕಪರಾರಿ ಅವರ ಕೋಣಗಳನ್ನು ಓಡಿಸಿದ ಜಿತೇಶ್ ಪೂಜಾರಿ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಕುಕ್ಕೆ ಜಾತ್ರೆ: ಕೆಲ ಸೇವೆಗಳ ಸ್ಥಗಿತ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಚಂಪಾಷಷ್ಠಿ ಜಾತ್ರಾ ಮಹೋತ್ಸವವು ನ. 27ರಿಂದ ಡಿ. 12ರವರೆಗೆ ನೆರವೇರಲಿದ್ದು, ನ. 25ರಿಂದ ಡಿ. 12ರವರೆಗೆ ಸರ್ಪ ಸಂಸ್ಕಾರ ಸೇವೆ ನಡೆಯುವುದಿಲ್ಲ. ಇತರ ಸೇವೆಗಳು ಎಂದಿನಂತೆ ನಡೆಯಲಿವೆ ಎಂದು ದೇವಳದ ಪ್ರಕಟಣೆ ತಿಳಿಸಿದೆ.

ಲಕ್ಷದೀಪೋತ್ಸವ, ಚೌತಿ, ಪಂಚಮಿ ಮತ್ತು ಷಷ್ಠಿ ದಿನ ಕೆಲವು ಸೇವೆಗಳು ನೆರವೇರುವುದಿಲ್ಲ.

ಲಕ್ಷದೀಪೋತ್ಸವ (ನ.30), ಚೌತಿ (ಡಿ.5), ಪಂಚಮಿ (ಡಿ.6) ದಿನ ರಾತ್ರಿ ಹೊತ್ತಿನಲ್ಲಿ ಪ್ರಾರ್ಥನೆ ಸೇವೆ ಇರುವುದಿಲ್ಲ. ಚಂಪಾಷಷ್ಠಿ (ಡಿ.7)ಯಂದು ಮಧ್ಯಾಹ್ನ ಪ್ರಾರ್ಥನೆ ಸೇವೆ ನಡೆಯುವುದಿಲ್ಲ. ಚಂಪಾಷಷ್ಠಿ ದಿನ ಆಶ್ಲೇಷ ಬಲಿ ಮತ್ತು ನಾಗಪ್ರತಿಷ್ಠೆ ನೆರವೇರುವುದಿಲ್ಲ. ಲಕ್ಷದೀಪೋತ್ಸವ, ಚೌತಿ, ಪಂಚಮಿ, ಚಂಪಾಷಷ್ಠಿ (ಡಿ.7) ಮತ್ತು ಕೊಪ್ಪರಿಗೆ ಇಳಿಯುವ ಮಹಾಸಂಪ್ರೋಕ್ಷಣೆಯ ದಿನ (ಡಿ.12)ದಂದು ಪಂಚಾಮೃತ ಮಹಾಭಿಷೇಕ ಸೇವೆ ನಡೆಯುವುದಿಲ್ಲ. ನ.27ರಿಂದ ಡಿ.12ರವರೆಗೆ ಸಂಜೆಯ ಆಶ್ಲೇಷ ಬಲಿ ಸೇವೆ ನೆರವೇರುವುದಿಲ್ಲ.

ಚಂಪಾಷಷ್ಠಿ ಜಾತ್ರಾ ಮಹೋತ್ಸವದ ಅಂಗವಾಗಿ ನ.26ರಂದು ಮೂಲ ಮೃತ್ತಿಕಾ ಪ್ರಸಾದ ತೆಗೆಯುವ ಕಾರ್ಯ ಇರುವುದರಿಂದ ಬೆಳಿಗ್ಗೆಯಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಭಕ್ತರಿಗೆ ದೇವರ ದರ್ಶನ, ಸೇವೆ ನೆರವೇರಿಸಲು ಅವಕಾಶ ಇರುವುದಿಲ್ಲ. 2 ಗಂಟೆಯ ನಂತರ ಅವಕಾಶ ನೀಡಲಾಗುವುದು ಎಂದು ದೇವಳದ ಪ್ರಕಟಣೆ ತಿಳಿಸಿದೆ.

42 ಶಾಲೆಗಳಲ್ಲಿ ಎಲ್‌ಕೆಜಿ ಆರಂಭಕ್ಕೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 42 ಶಾಲೆಗಳಲ್ಲಿ ಎಲ್‌ಕೆಜಿ ಹಾಗೂ 51 ಶಾಲೆಗಳಲ್ಲಿ ಆಂಗ್ಲ ಮಾಧ್ಯಮದ ಹೆಚ್ಚುವರಿ ವಿಭಾಗ ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಲ್ಲಿ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪೂರ್ವಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗಿತ್ತು. ಈಗ ಮತ್ತೆ 42 ಶಾಲೆಗಳಿಗೆ ಇಲಾಖೆಯ ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ ಅನುಮತಿ ನೀಡಿದ್ದಾರೆ.

ಸರ್ಕಾರಿ ಶಾಲೆಗಳ ಬಲವರ್ಧನೆಗೆ ಕೆಲ ವರ್ಷಗಳ ಹಿಂದೆಯೇ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಗಿತ್ತು. ಹಾಗೆಯೇ, ಒಂದನೇ ತರಗತಿಯಿಂದಲೇ ಆಂಗ್ಲ ಮಾಧ್ಯಮ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಿತ್ತು. ಪ್ರಸ್ತುತ ಇರುವ 286 ಪಬ್ಲಿಕ್ ಶಾಲೆಗಳಲ್ಲಿ ಹೆಚ್ಚು ವಿದ್ಯಾರ್ಥಿಗಳು ದಾಖಲಾಗಿರುವ 51 ಶಾಲೆಗಳಲ್ಲಿ ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ಆರಂಭಿಸಲಾಗುತ್ತಿದೆ.

‘ಒಳ ಉಡುಪು ತೆಗೆಸಿ ಅವಮಾನ’

₹25 ಲಕ್ಷಕ್ಕೆ ಬೇಡಿಕೆ –ಮರಣ ಪತ್ರದಲ್ಲಿ ಸಿಐಡಿ ಡಿವೈಎಸ್‌ಪಿ ವಿರುದ್ಧ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದ ಪ್ರಕರಣದ ಆರೋಪಿ ಮಹಿಳೆ ಎಸ್.ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಬನಶಂಕರಿ ಪೊಲೀಸರು ಚುರುಕುಗೊಳಿಸಿದ್ದಾರೆ.

ಮರಣ ಪತ್ರ ಹಾಗೂ ಜೀವಾ ಸಹೋದರಿ ಎಸ್.ಸಂಗೀತಾ ನೀಡಿದ ದೂರು ಆಧರಿಸಿ, ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮೀ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅವರನ್ನು ಇನ್ನೂ ಬಂಧಿಸಿಲ್ಲ. ಹಿರಿಯ ಅಧಿಕಾರಿಗಳ ಮಾರ್ಗದರ್ಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ದೂರಿನ ವಿವರ: ‘ನವೆಂಬರ್ 14ರಿಂದ 23ರ ವರೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ತನಿಖೆ ನಡೆಸಲು ನ್ಯಾಯಾಲಯದಿಂದ ಸೂಚಿಸಲಾಗಿತ್ತು. ಆದರೆ 14ರಂದು ಖುದ್ದು ವಿಚಾರಣೆಗೆ ಹಾಜರಾಗುವಂತೆ ಡಿವೈಎಸ್‌ಪಿ ಕನಕಲಕ್ಷ್ಮಿ ನನ್ನ ಅಕ್ಕನಿಗೆ ಸೂಚಿಸಿದ್ದರು. ಅಕ್ಕನೊಂದಿಗೆ ಮತ್ತೊಬ್ಬರು ವಿಚಾರಣೆಗೆ ಹಾಜರಾಗಿದ್ದರು. ಜೀವಾಳ ಒಳ ಉಡುಪುಗಳನ್ನು ತೆಗೆಸಿ, ‘ಸೈನೈಡ್ ತಂದಿದ್ದೀರಾ’ ಎಂದು ಪ್ರಶ್ನಿಸಿ ಮಾನಸಿಕ ಕಿರುಕುಳ ನೀಡಿದ್ದರು. ‘ನೀವೆಲ್ಲಾ ಯಾಕೆ ಬುದುಕಿದ್ದೀರಾ? ನೀನು ಮತ್ತು ನಿನ್ನ ತಂಗಿ ದುಡ್ಡು ಹೇಗೆ ಸಂಪಾದಿಸುತ್ತಿದ್ದೀರಾ’ ಎಂದು ಪ್ರಶ್ನಿಸಿದ್ದರು’ ಎಂದು ಜೀವಾ ಬರೆದಿದ್ದ 11 ಪುಟಗಳ ಮರಣ ಪತ್ರದ ಆಧಾರದಲ್ಲಿ ನೀಡಿರುವ ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಎಲ್ಲಾ ದಾಖಲಾತಿಗಳನ್ನು ಒದಗಿಸಿದರೂ ₹25 ಲಕ್ಷ ಹಣ ಕೊಡು. ಇಲ್ಲವಾದರೆ ನೀವೆಲ್ಲಾ ಯಾಕೆ ಬದುಕಬೇಕು, ಹೋಗಿ ಸಾಯಿರಿ’ ಎಂದು ನಿಂದಿಸಿದ್ದರು. ಅಂಗಡಿ ಪರಿಶೀಲಿಸಿ ಎಲ್ಲರ ಮುಂದೆ ಅವಮಾನ ಮಾಡಿದ್ದರು. ನವೆಂಬರ್ 14 ಮತ್ತು 21ರಂದು ಇಡೀ ದಿನ ವಿಚಾರಣೆ ವೇಳೆ ಮಾನಸಿಕ ಕಿರುಕುಳ ನೀಡಿದ್ದರು. ಅಕ್ಕ ಆತ್ಮಹತ್ಯೆಗೂ ಮುನ್ನ 11 ಪುಟಗಳ ಪತ್ರ ಬರೆದಿದ್ದು, ಅಕ್ಕನ ಸಾವಿಗೆ ಕಾರಣರಾದ ಡಿವೈಎಸ್‌ಪಿ ಕನಕಲಕ್ಷ್ಮೀ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ. ವೃತ್ತಿಯಲ್ಲಿ ವಕೀಲರಾಗಿದ್ದ ಜೀವಾ ಅವರು ಪದ್ಮನಾಭನಗರದಲ್ಲಿ ಸಹೋದರಿ ಸಂಗೀತಾ ಜತೆ ವಾಸಿಸುತ್ತಿದ್ದರು. ಸಂಗೀತಾ ಕೆಲಸದ ನಿಮಿತ್ತ ಮಂಗಳೂರಿಗೆ ತೆರಳಿದ್ದರು. ಮನೆಯಲ್ಲಿ ಒಬ್ಬರೇ ಇದ್ದ ವೇಳೆ ಶುಕ್ರವಾರ ಬೆಳಿಗ್ಗೆ ಜೀವಾ ಫ್ಯಾನಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಖಾತೆಗೆ ಕೋಟ್ಯಂತರ ರೂಪಾಯಿ ವರ್ಗ

ಪೀಣ್ಯ ಬಳಿ ಮರದ ವಸ್ತು ತಯಾರಿಸುವ ಫ್ಯಾಕ್ಟರಿ ನಡೆಸುತ್ತಿದ್ದ ಜೀವಾ ಅವರು ಭೋವಿ ಅಭಿವೃದ್ಧಿ ನಿಗಮಕ್ಕೆ ಕೆಲವು ಸಾಮಗ್ರಿಗಳನ್ನು ಸರಬರಾಜು ಮಾಡಿದ್ದರು. ಆದರೆ, ಸಾಮಗ್ರಿ ಖರೀದಿ ಮೊತ್ತಕ್ಕಿಂತ ಹೆಚ್ಚಿನ ಹಣ ಜೀವಾ ಅವರ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗಿತ್ತು. ಅದಕ್ಕೆ ಸಂಬಂಧಿಸಿದಂತೆ ಪೂರಕ ದಾಖಲೆಗಳು ಸಿಕ್ಕಿದ್ದವು. ಹಾಗಾಗಿ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ಹಲವು ವರ್ಷಗಳಿಂದ ನಡೆದಿದೆ ಎನ್ನಲಾಗಿರುವ ಅವ್ಯಹಾರಗಳ ಕುರಿತು ತನಿಖೆ ನಡೆಸಿರುತ್ತಿರುವ ಸಿಐಡಿ, ₹87 ಕೋಟಿಗೂ ಹೆಚ್ಚು ಅಕ್ರಮ ನಡೆದಿರುವುದನ್ನು ಪತ್ತೆ ಮಾಡಿತ್ತು. ನಿಗಮದ ಬ್ಯಾಂಕ್ ಖಾತೆಯಿಂದ ಜೀವಾ ಅವರ ಖಾತೆಗೂ ಕೋಟ್ಯಂತರ ರೂಪಾಯಿ ವರ್ಗಾವಣೆ ಆಗಿರುವುದು ತನಿಖೆಯಲ್ಲಿ ಪತ್ತೆಯಾಗಿತ್ತು. ಹಾಗಾಗಿ ತನಿಖೆ ಮುಂದುವರಿಸಿದ್ದ ಸಿಐಡಿ ಅಧಿಕಾರಿಗಳು ಅವರನ್ನು ವಿಚಾರಣೆ ನಡೆಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೊಡವ ಸೇನಾನಿಗಳ ಅವಹೇಳನ: ವಕೀಲ ಬಂಧನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡವ ಸೇನಾನಿಗಳ ಬಗ್ಗೆ ವಾಟ್ಸ್‌ಆ್ಯಪ್ ಗ್ರೂಪ್‌ವೊಂದರಲ್ಲಿ ಅವಹೇಳನಕಾರಿ ಸಂದೇಶ ಹಾಕಿದ ಆರೋಪದಲ್ಲಿ ವಕೀಲ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಹಾಲೆಟ್ಟಿ ಗ್ರಾಮದ ವಿದ್ಯಾಧರಗೌಡ (66) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಸಪ್ತಸಾಗರ (ಕಡಲು) ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಶ್ರೀವಾತ್ಸ ಭಟ್ ಎಂಬ ಹೆಸರಿನ ಮೊಬೈಲ್ ಸಂಖ್ಯೆಯಿಂದ ಫೀಲ್ಡ್‌ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಗೂ ಜನರಲ್ ಕೆ.ಎಸ್. ತಿಮ್ಮಯ್ಯ ಅವರನ್ನು ಅವಾಚ್ಯವಾಗಿ ನಿಂದಿಸಿದ ಕುರಿತು ಸುಂಟಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಎಸ್ಪಿ ಕೆ.ರಾಮರಾಜನ್ ತಿಳಿಸಿದರು.

ವಾಟ್ಸ್‌ಆ್ಯಪ್ ಗ್ರೂಪನಲ್ಲಿ ನಡೆದ ಚರ್ಚೆಯ ತುಣುಕು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಡಿ, ಘಟನೆ ಕುರಿತು ಜಿಲ್ಲೆಯಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ

ಕಾರ್ಯಾಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ–ಮೇಲ್:zped.cta@gmail.com ದೂರವಾಣಿ ಸಂ:08194–222372

ಸಂ:ಕಾಇಂ/ಪಂರಾಜ್‌ಇಂವಿ/ಚಿದು/ತಾಂಶಾ/ಟೆಂಡರ್/2023–24/2044

ದಿನಾಂಕ:21.11.2024

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ.ಗಳ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಗುತ್ತಿಗೆದಾರರು ಟೆಂಡರ್ ಬಗ್ಗೆ ಹೆಚ್ಚಿನ ವಿವರಗಳಿಗಾಗಿ support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ದೂ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಕಾಮಗಾರಿಯ ವಿವರ:– (1) HSDPKG-06: ಹೊಸದುರ್ಗ ತಾಲ್ಲೂಕು ಗಣಿಬಾದಿತ ಪ್ರದೇಶಗಳಲ್ಲಿ 8 ಗ್ರಾಮಗಳಲ್ಲಿ 7 ಮುಖ್ಯರಸ್ತೆಗಳು ಹಾಗೂ 8 ಆಂತರಿಕ ರಸ್ತೆಗಳ ನಿರ್ಮಾಣ ಮತ್ತು ಸೋಲಾರ್ ದೀಪಗಳನ್ನು ಅಳವಡಿಸುವುದು. (Indent No: RDPR/2024-25/RD/WORK_ INDENT 9563) ಅಂದಾಜು ಮೊತ್ತ:– 6003.00 ಲಕ್ಷ. ಕೆಟಗರಿ:– ಇತರೆ. ಇಎಂಡಿ ಮೊತ್ತ ರೂ. 60.03 ಲಕ್ಷ. ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಮಿತಿ (ಮಳೆಗಾಲ ಸೇರಿ): 11 ತಿಂಗಳು.

ಪ್ರೀ ಬಿಡ್ ಮೀಟಿಂಗ್ ದಿನಾಂಕ: 11.12.2024ರ : ಸಮಯ: 11.00
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 21.12.2024ರ : ಸಮಯ: 11.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 23.12.2024ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.12.2024ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.12.2024ರ : ಸಮಯ 16.02

RO.No.388:DIPR/CTA/KSMCA/2024-25

ಸಹಿ/– ಕಾರ್ಯಪಾಲಕ ಅಭಿಯಂತರರು ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಸರ್ವೆ ಕಾರ್ಯಕ್ಕೆ ಅಡ್ಡಿಪಡಿಸಿದ ತಂದೆ, ಮಗ ಪೊಲೀಸರ ವಶಕ್ಕೆ

ಅಧಿಕಾರಿ ಮೇಲೆ ಟೆಂಪೋ ಹತ್ತಿಸಲು ಯತ್ನ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಚಿಕ್ಕಮೇದೂರು ಗ್ರಾಮಪಂಚಾಯಿತಿಯ ಬಳ್ಳೂರಿನಲ್ಲಿ ಶುಕ್ರವಾರ ಮಧ್ಯಾಹ್ನ ಕೆರೆ ಒತ್ತುವರಿ ಸರ್ವೆ ಮಾಡಲು ತೆರಳಿದ್ದ ಅಧಿಕಾರಿಗಳ ಮೇಲೆ ಟೆಂಪೋ ಹತ್ತಿಸಲು ಯತ್ನಿಸಿ, ಬಂದೂಕು ತೋರಿಸಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ, ಅದೇ ಗ್ರಾಮದ ಯೋಗಾನಂದ ಹಾಗೂ ಆತನ ತಂದೆ ಕೆ.ಎಸ್.ಪದ್ಮಾಕ್ಷೇಗೌಡ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪಿಡಿಒ ಸಂತೋಷ್ ಅವರ ದೂರಿನಂತೆ, ಆರೋಪಿಗಳ ವಿರುದ್ಧ ಬಿಎನ್‌ಎಸ್ ಸೆಕ್ಷನ್ 221 (ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ), 109 (ಕೊಲೆ ಯತ್ನ), 352 (ಶಾಂತಿ ಭಂಗ), 351(2), 351(3) (ಅಪರಾಧಕ್ಕೆ ಸಂಚು), 3(5) (ಅಪರಾಧಕ್ಕೆ ಜಂಟಿ ಯತ್ನ), ಅಕ್ರಮ ಶಸ್ತ್ರಾಸ್ತ್ರ ಬಳಕೆ ಪ್ರಕರಣ ದಾಖಲಾಗಿದೆ.

ದೂರಿನ ವಿವರ: ‘ಸರ್ವೆಗೆ ಅಡ್ಡಿ ಪಡಿಸಿ, ಆರೋಪಿಗಳು ಟೆಂಪೋ ಹತ್ತಿಸಲು ಯತ್ನಿಸುತ್ತಿದ್ದಂತೆ, ಸ್ಥಳದಲ್ಲಿದ್ದ ತಾಲ್ಲೂಕು ಮೋಜಿಣಿದಾರ ಗಂಗಾಧರಪ್ಪ, ರೆವೆನ್ಯೂ ಇನ್‌ಸ್ಪೆಕ್ಟರ್ ಚಂದ್ರಶೇಖರ್ ಎಚ್.ಪಿ., ಚಿನ್ನೇನಹಳ್ಳಿ ಗ್ರಾಮಾಡಳಿತ ಅಧಿಕಾರಿ ಬಸಪ್ಪಕೆ. ಮತ್ತು ಚಿಕ್ಕಮೇದೂರು ಪಂಚಾಯಿತಿ ಪಿಡಿಒ ಸಂತೋಷ್ ಹಾಗೂ ಅವರೊಂದಿಗಿದ್ದ ಗ್ರಾಮಸ್ಥರು ಭಯಭೀತರಾಗಿ ಜೋಳದ ಹೊಲ, ಬೇಲಿಗಳ ಮೇಲೆ ಜಿಗಿದು ದಿಕ್ಕಾಪಾಲಾಗಿ ಓಡಿದರು. ನಂತರ, ವಾಹನದಿಂದ ಕೆಳಗಿಳಿದ ಆರೋಪಿಗಳು ಬಂದೂಕು ತೋರಿಸಿ, ‘ಸರ್ವೆ ಮಾಡಿದರೆ ಎಲ್ಲರನ್ನೂ ಗುಂಡು ಹಾರಿಸಿ ಕೊಲೆ ಮಾಡುತ್ತೇವೆ’ ಎಂದು ಕೂಗಾಡಿದರು. ಅವಾಚ್ಯ ಶಬ್ದಗಳಿಂದ ಎಲ್ಲರನ್ನೂ ನಿಂದಿಸಿ, ಬೆದರಿಸಿದರು. ಅಲ್ಲಲ್ಲಿ ಚದುರಿದ್ದ ಅಧಿಕಾರಿಗಳು ಕೂಡಲೆ ಮೊಬೈಲ್ ಫೋನ್ ಮೂಲಕ ತಹಶೀಲ್ದಾರ್ ಮಮತಾ ಅವರಿಗೆ ತಿಳಿಸಿ ರಕ್ಷಣೆ ನೀಡುವಂತೆ ಕೋರಿದರು’ ಎಂದು ದೂರಿನಲ್ಲಿ ತಿಳಿಸಲಾಗಿದೆ.

ತಹಶೀಲ್ದಾರ್ ಅವರಿಂದ ಮಾಹಿತಿ ಬಂದ ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸರು ಆರೋಪಿಗಳನ್ನು ವಶಕ್ಕೆ ಪಡೆದರು. ಟೆಂಪೋ, ಬಂದೂಕು ಜಪ್ತಿ ಮಾಡಿದರು. ಆರೋಪಿಗಳು ಮೂಲತಃ ತಾಲ್ಲೂಕಿನ ಕೀತೂರು ಗ್ರಾಮದವರಾಗಿದ್ದು, ದಶಕದ ಹಿಂದೆ ಬಳ್ಳೂರು ಸಮೀಪ ಜಮೀನು ಖರೀದಿಸಿ ಕೃಷಿಯೊಂದಿಗೆ, ಕೋಳಿಫಾರಂ ನಡೆಸುತ್ತಿದ್ದಾರೆ.

ತಮ್ಮ ಜಮೀನಿಗೆ ಹೊಂದಿಕೊಂಡಿರುವ ಕೆರೆ ಜಾಗದಲ್ಲಿ ಆರೋಪಿಗಳು ಎರಡು ದಿನಗಳಿಂದ ಅಕ್ರಮವಾಗಿ ಮಣ್ಣು ಎತ್ತುತ್ತಿದ್ದರು. ಆ ಬಗ್ಗೆ ಕೆಲ ಮುಖಂಡರು ದೂರು ನೀಡಿದ್ದರು. ನಂತರ, ಗ್ರಾಮದ ಸರ್ವೆ ನಂಬರ್ 136ರ ಸರ್ವೆ ಮಾಡಿ, ಕೆರೆ ಒತ್ತುವರಿ ಪತ್ತೆ ಹಚ್ಚುವಂತೆ ತಹಶೀಲ್ದಾರ್ ಮಮತಾ ಸಿಬ್ಬಂದಿಗೆ ಸೂಚಿಸಿದ್ದರು.



ಬೇಲೂರು ಪಟ್ಟಣ ಸಮೀಪದ ಬಳ್ಳೂರಿನಲ್ಲಿ ಕೆರೆ ಒತ್ತುವರಿ ಸರ್ವೆಗೆ ತೆರಳಿದ ಅಧಿಕಾರಿಗಳ ಮೇಲೆ ಹಲ್ಲೆ ಯತ್ನ ನಡೆದ ಸ್ಥಳದಲ್ಲಿ ಪೊಲೀಸರು ಮಹಜರು ಮಾಡಿದರು

ಅಧಿಕಾರಿಗಳನ್ನು ಬೆದರಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಕೆರೆ ಒತ್ತುವರಿ ತೆರವು ಮಾಡೇ ಮಾಡುತ್ತೇವೆ

ಎಂ.ಮಮತಾ, ತಹಶೀಲ್ದಾರ್, ಬೇಲೂರು ತಾಲ್ಲೂಕು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ಇಲಾಖೆ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027

ಸಂಖ್ಯೆ: ಕರಾಸಾ/ಕೇಕ/ಉ&ಖ/1465/2024–25 ದಿನಾಂಕ:23.11.2024

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 05 ದಿನಾಂಕ: 23/11/2024

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು/ಮಾಡಲು/ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ (ಪೂರ್ವ ಅರ್ಹತೆ ಮತ್ತು ಅಥವಾ ವಾಣಿಜ್ಯ ದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇ – ಪೋರ್ಟಲ್‌ನ ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ @17.00ಗಂಟೆ
KSRTC/2024-25/IND0153	ಟಿಕೆಟ್‌ಗಳು ಹಾಗೂ ಲೇಖನಾ ಸಾಮಗ್ರಿಗಳ ಮುದ್ರಣಕ್ಕೆ ಅಗತ್ಯವಿರುವ ಮ್ಯಾಪ್ಲಿಥೋ ಪೇಪರ್‌ನ ಖರೀದಿ	4.00	23/12/2024
ಅಲ್ಪಾವಧಿ ಟೆಂಡರ್			
KSRTC/2024-25/SE1356	ಕೆಎಸ್‌ಆರ್‌ಟಿಸಿ ಆರೋಗ್ಯ ಯೋಜನೆಗಾಗಿ ಆನ್‌ಲೈನ್ ಪ್ರಕ್ರಿಯೆಯೊಂದಿಗೆ ವಹಿವಾಟುಗಳನ್ನು ನಿರ್ವಹಿಸಲು ಮತ್ತು ವೆಬ್ ಆಧಾರಿತ ಅಪ್ಲಿಕೇಶನ್ third party ಆಡಿಟ್ ಏಜೆನ್ಸಿಯ ಆಯ್ಕೆ.	0.50	30/11/2024
KSRTC/2024-25/IND0154	ಆರೋಗ್ಯ ಯೋಜನೆಗಾಗಿ PVC ಕಾರ್ಡ್‌ಗಳ ಖರೀದಿ	0.10	30/11/2024

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು. ಸೂಚನೆ:–ಆಸಕ್ತಿಯುಳ್ಳ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಅಥವಾ ದೂರವಾಣಿ ಸಂಖ್ಯೆ: 080–22230960/ 22234115, ಕರೆಮಾಡಿ support@eprochelpdesk.com ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ. ಬಿಡ್ಡುದಾರರಿಗೆ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಅಗತ್ಯವಿದ್ದರೆ cosp@ksrtc.org ನಲ್ಲಿ ಸಂಪರ್ಕಿಸಬಹುದಾಗಿದೆ. (ಸಂಪರ್ಕಿಸಿ: 7760990225, 7760990224).

ವಾಸಾಸಂಇ/ವಾಪ್ರ/ಜಿಎ/2409/2024–25

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು (ಟೆಂಡರ್ ಕರೆಯುವ ಪ್ರಾಧಿಕಾರಿ)

ಫಲಿಸಿದ ಡಿ.ಕೆ ಸಹೋದರರ ರಣತಂತ್ರ; ಜಿಲ್ಲೆಯಲ್ಲಿ ಶೂನ್ಯಕ್ಕಿಳಿದ ಜೆಡಿಎಸ್

ಮೈತ್ರಿ ಸವಾಲು ಗೆದ್ದ 'ಸೈನಿಕ'

• ಓದೇಶ ಸಕಲೇಶಪುರ

ರಾಮನಗರ: ಚನ್ನಪಟ್ಟಣದ ರಾಜಕೀಯ ಗೊಂಬೆಯಾಟದ ಕುತೂಹಲಕ್ಕೆ ಶನಿವಾರ ತೆರೆ ಬಿದ್ದಿದ್ದು, ತಮ್ಮ ರಾಜಕೀಯ ಜೀವನದ ಅಳಿವು–ಉಳಿವಿನ ಪ್ರಶ್ನೆಯಾಗಿದ್ದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಗೆಲುವಿನ ನಗೆ ಬೀರಿದ್ದಾರೆ.

ಅನಿರೀಕ್ಷಿತ ಬೆಳವಣಿಗೆಯಲ್ಲಿ ಬಿಜೆಪಿ ತೊರೆದು 'ಕೈ' ಹಿಡಿದ ಸೈನಿಕ, ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಸವಾಲು ಗೆದ್ದಿದ್ದಾರೆ. ಸತತ ಎರಡು ಸೋಲುಂಡು ಮೂರನೇ ಸಲ ಅಗ್ನಿಪರೀಕ್ಷೆಗೆ ಇಳಿದಿದ್ದ ಯೋಗೇಶ್ವರ್ ಅವರಿಗೆ ಆರೂವರೆ ವರ್ಷದ ಬಳಿಕ ಮತದಾರರು ಮತ್ತೆ ಮಣೆ ಹಾಕಿದ್ದಾರೆ. ತಂದೆ ಎಚ್.ಡಿ. ಕುಮಾರಸ್ವಾಮಿ ಸತತ ಎರಡು ಸಲ ಗೆದ್ದು, ಒಮ್ಮೆ ಮುಖ್ಯಮಂತ್ರಿ ಹುದ್ದೆಗೇರಿದ್ದ ಕ್ಷೇತ್ರದಲ್ಲಿ ಗೆಲುವಿನ ದಡ ಸೇರುವಲ್ಲಿ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ್ತೊಮ್ಮೆ ಎಡವಿದ್ದಾರೆ.

'ಸೈನಿಕ' ಯೋಗೇಶ್ವರ್ ಮತ್ತು ಡಿ.ಕೆ ಸಹೋದರರಾದ ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಮಾಜಿ ಸಂಸದ ಡಿ.ಕೆ. ಸುರೇಶ್ ರಚಿಸಿದ ಚುನಾವಣಾ ಚಕ್ರವ್ಯೂಹ ಭೇದಿಸಲಾಗದೆ ಹ್ಯಾಟ್ರಿಕ್ ಸೋಲು ಕಂಡಿದ್ದಾರೆ.

ಕ್ಷೇತ್ರ ಕಂಡಿರುವ 19 ಚುನಾವಣೆಗಳಲ್ಲಿ ಮೊದಲ ಬಾರಿಗೆ ಅಭ್ಯರ್ಥಿಯೊಬ್ಬರು ಒಂದು ಲಕ್ಷಕ್ಕೂ ಹೆಚ್ಚು (1,12,642) ಮತಗಳನ್ನು ಪಡೆದು ಜಯಭೇರಿ ಬಾರಿಸಿದ ಕೀರ್ತಿಗೆ ಯೋಗೇಶ್ವರ್ ಪಾತ್ರರಾಗಿದ್ದಾರೆ. ಕ್ಷೇತ್ರದ ರಾಜಕಾರಣದಲ್ಲಿ 25 ವರ್ಷಗಳಿಂದ ಸಕ್ರಿಯವಾಗಿರುವ ಅವರು 16 ವರ್ಷಗಳ ಬಳಿಕ ಕ್ಷೇತ್ರದಲ್ಲಿ ಮತ್ತೆ 'ಕೈ' ಬಾವುಟ ಹಾರಿಸಿದ್ದಾರೆ. ಕ್ಷೇತ್ರದ ಶಾಸಕನಾಗಿ ಆರನೇ ಸಲ ವಿಧಾನಸೌಧ ಪ್ರವೇಶಿಸಲಿದ್ದಾರೆ.

> ಕ್ಷೇತ್ರದ ಜನರಿಗೆ ಈ ಗೆಲುವನ್ನು ಅರ್ಪಿಸುವೆ. ಈ ಗೆಲುವಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಮಾಜಿ ಸಂಸದ ಡಿ.ಕೆ. ಸುರೇಶ್, ಸಚಿವರು ಸೇರಿದಂತೆ ಹಲವರ ಶ್ರಮವಿದೆ
> **ಯೋಗೇಶ್ವರ್**, ಚನ್ನಪಟ್ಟಣ ಗೆದ್ದ ಅಭ್ಯರ್ಥಿ

> ಫಲಿತಾಂಶ ಆಘಾತ ತಂದಿದೆ. ಅಲ್ಪಸಂಖ್ಯಾತರು ನಮ್ಮ ಕೈ ಹಿಡಿಯಲಿಲ್ಲ. ಅಭ್ಯರ್ಥಿ ಆಯ್ಕೆ ವಿಳಂಬವಾಗದಿದ್ದಿದ್ದರೆ ಗೆಲುವು ಸಾಧ್ಯವಾಗುತ್ತಿತ್ತು. ಜಿಲ್ಲೆಯ ಜನರ ಜೊತೆಗಿದ್ದು ಋಣ ತೀರಿಸುವೆ
> **ನಿಖಿಲ್ ಕುಮಾರಸ್ವಾಮಿ**, ಪರಾಜಿತ ಜೆಡಿಎಸ್ ಅಭ್ಯರ್ಥಿ

ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಕಾಂಗ್ರೆಸ್‌ನ ಸಿ.ಪಿ. ಯೋಗೇಶ್ವರ್ ಅವರು ವಿಜಯೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನಸಮೂಹದತ್ತ ಕೈ ಬೀಸಿದರು

ಸೋಲಿನ ಸೇಡು: ಮತ ಎಣಿಕೆಯ 20 ಸುತ್ತಗಳ ಪೈಕಿ ಮೊದಲ ಸುತ್ತಿನಲ್ಲಿ ಹಾಗೂ 7ರಿಂದ ಕಡೆಯ ಸುತ್ತಿನವರೆಗೂ ಯೋಗೇಶ್ವರ್ ಸತತ ಮುನ್ನಡೆ ಕಾಯ್ದುಕೊಂಡರು. ಸೈನಿಕನ ಬೆನ್ನಿಗೆ ನಿಂತು ಗೆಲುವಿನ ದಡ ಸೇರಿಸಿದ ಡಿ.ಕೆ ಸಹೋದರರು ಲೋಕಸಭಾ ಚುನಾವಣೆಯಲ್ಲಿ ತಮಗಾದ (ಸುರೇಶ್ ಸೋಲು) ಸೋಲಿನ ಸೇಡು ತೀರಿಸಿಕೊಂಡಿದ್ದಾರೆ. ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಗೆಲುವಿನೊಂದಿಗೆ ಜಿಲ್ಲೆಯ ನಾಲ್ಕೂ ವಿಧಾನಸಭಾ ಕ್ಷೇತ್ರಗಳು 'ಕೈ' ಪಾಲಾಗಿವೆ. ಮುಖ್ಯಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿರುವ ಡಿ.ಕೆ. ಶಿವಕುಮಾರ್ ಅವರಿಗೆ ಈ ಗೆಲುವು ಹೆಚ್ಚಿನ ಶಕ್ತಿ ತುಂಬಿದೆ.

ಮೂರು ಸಲ ಪ್ರಚಾರದಲ್ಲಿ ಪಾಲ್ಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅಹಿಂದ ಮತಗಳ ಶಕ್ತಿ ತುಂಬಿದ್ದಾರೆ. ಅಭಿವೃದ್ಧಿ ಜಪದ ಜೊತೆಗೆ ಗ್ಯಾರಂಟಿಗಳು 'ಕೈ' ಹಿಡಿದಿವೆ. ಸಚಿವರು, ಶಾಸಕರು, ಮುಖಂಡರ ಬಿಡುವಿಲ್ಲದ ಶ್ರಮ ಗೆಲುವಿನ ಸಿಹಿ ಕೊಟ್ಟಿದೆ.

ಶೂನ್ಯಕ್ಕಿಳಿದ ಜೆಡಿಎಸ್: ಜಿಲ್ಲೆಯಲ್ಲಿ 1985ರಿಂದ 39 ವರ್ಷ ತಮ್ಮ ಹಿಡಿತ ಹೊಂದಿದ್ದ ದೇವೇಗೌಡರ ಕುಟುಂಬದ ಶಾಸನಸಭೆಯ ಪ್ರಾತಿನಿಧ್ಯ ಮೊದಲ ಬಾರಿಗೆ ಶೂನ್ಯಕ್ಕಿಳಿದಿದೆ. ತಮ್ಮ ಕುಟುಂಬದವರನ್ನು ಪ್ರಧಾನಿ ಮತ್ತು ಮುಖ್ಯಮಂತ್ರಿ ಹುದ್ದೆಗೇರಿಸಿದ್ದ ಜಿಲ್ಲೆಯಲ್ಲಿ ಪುತ್ರನಿಗೆ ರಾಜಕೀಯ ಜನ್ಮ ಕೊಡಿಸಲು ಕುಮಾರಸ್ವಾಮಿ ನಡೆಸಿದ ಹೋರಾಟ ಫಲ ಕೊಟ್ಟಿಲ್ಲ. ಇಳಿ ವಯಸ್ಸಿನಲ್ಲೂ ಮೊಮ್ಮಗನ ಗೆಲುವಿಗಾಗಿ ದೇವೇಗೌಡರು ಹಾಕಿದ ಶ್ರಮ ವ್ಯರ್ಥವಾಗಿದೆ. ಕ್ಷೇತ್ರದಲ್ಲಿ ಗೌಡರ ಕುಟುಂಬ ರಾಜಕಾರಣದ ಬದಲು ಸ್ಥಳೀಯ ನಾಯಕತ್ವಕ್ಕೆ ಮತದಾರರು ಸೈ ಎಂದಿದ್ದಾರೆ.

ಯೋಗೇಶ್ವರ್, ಡಿ.ಕೆ ಸಹೋದರರು ಸೇರಿದಂತೆ ಕಾಂಗ್ರೆಸ್ ನಾಯಕರು ತಮ್ಮ ವಿರುದ್ಧ ಮಾಡಿದ ವೈಯಕ್ತಿಕ ಮಟ್ಟದ ಟೀಕೆಗಳನ್ನು ಗೌಡರ ಕುಟುಂಬ ಪ್ರಚಾರದ ಅಸ್ತ್ರ ಮಾಡಿಕೊಂಡರೂ ಮತಗಳ ಫಸಲು ಬಂದಿಲ್ಲ. ಪ್ರಚಾರದ ಕಡೆಯಲ್ಲಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಆಡಿದ ಮಾತುಗಳು, ಒಕ್ಕಲಿಗ ಮತ್ತು ಹಿಂದೂ ಮತಗಳನ್ನು ನಿಖಿಲ್ ಪರ ಕ್ರೋಡೀಕರಿಸಲಿವೆ ಎಂಬ ಲೆಕ್ಕಾಚಾರ ಉಲ್ಟಾ ಆಗಿದೆ. ವಕ್ಫ್ ವಿಷಯವನ್ನು ಮತದಾರರ ಮೇಲೆ ಪರಿಣಾಮ ಬೀರಿಲ್ಲ.

ಸುಲಭ ಕ್ಷೇತ್ರದಲ್ಲಿ ಕಷ್ಟದ ಗೆಲುವು

ಸಂಡೂರು ವಿಧಾನಸಭೆ: ಕಾಂಗ್ರೆಸ್–ಬಿಜೆಪಿ ಮತಗಳ ಅಂತರದಲ್ಲಿ ಭಾರಿ ಕುಸಿತ

• ಹರಿಶಂಕರ್ ಆರ್.

ಬಳ್ಳಾರಿ: ರಾಜ್ಯದ ಮೂರು ಉಪ ಚುನಾವಣೆ ಕ್ಷೇತ್ರಗಳ ಪೈಕಿ ಸಂಡೂರಿನಲ್ಲಿ ಕಾಂಗ್ರೆಸ್ ಅನಾಯಾಸವಾಗಿ ಗೆಲ್ಲಲಿದೆ ಎಂದು ವಿಶ್ಲೇಷಿಸಲಾಗಿತ್ತು. ಆದರೆ, ಫಲಿತಾಂಶವನ್ನು ಗಮನಿಸಿದರೆ ಕಾಂಗ್ರೆಸ್ ಕಷ್ಟಪಟ್ಟು, ಅತೀ ಕಡಿಮೆ ಅಂತರದಲ್ಲಿ ಗೆದ್ದಿದೆ.

2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಇ.ತುಕಾರಾಂ 35 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಇಲ್ಲಿ ಗೆದ್ದಿದ್ದರು. ಉಪ ಚುನಾವಣೆಯಲ್ಲಿ ಅವರ ಪತ್ನಿ ಇ. ಅನ್ನಪೂರ್ಣ ಗೆಲುವಿನ ಅಂತರ 9,649ಕ್ಕೆ ಇಳಿದಿದೆ. ಈ ಹಿಂದಿನ ಚುನಾವಣೆಗಳಂತೆ ಈ ಬಾರಿ ಮತ ಒಡೆಯಲು ಬಿಜೆಪಿಯ ಬಂಡಾಯ ಅಭ್ಯರ್ಥಿ ಕಣದಲ್ಲಿ ಇರಲಿಲ್ಲ. ಹಾಗಾಗಿಯೇ ಕಾಂಗ್ರೆಸ್ ಕಷ್ಟಪಟ್ಟು ದಡ ಸೇರಬೇಕಾಯಿತು.

ಒಂದು ಹಂತದಲ್ಲಿ ಕ್ಷೇತ್ರ 'ಕೈ' ತಪ್ಪಲಿದೆ ಎಂದೇ ಹೇಳಲಾಗಿತ್ತು. ಆದರೆ, ಯಾವಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಮೂರು ದಿನ ಕ್ಷೇತ್ರದಲ್ಲಿ ಉಳಿದು ಪ್ರಚಾರ ಮಾಡಿದರೋ ಆಗ ಚುನಾವಣಾ ಕಣ ಕೊಂಚ ಬದಲಾಯಿತು. ಮೂರು ದಿನಗಳಲ್ಲಿ ಅವರು 17 ಪ್ರಚಾರ ಸಭೆಗಳಲ್ಲಿ ಭಾಗಿಯಾಗಿದ್ದರು.

ಮುಖ್ಯವಾಗಿ ಅಕ್ರಮ ಗಣಿಗಾರಿಕೆ ಕಾಲದ ಘಟನಾವಳಿಗಳನ್ನು ಸಿದ್ದರಾಮಯ್ಯ ತಮ್ಮ ಭಾಷಣಗಳಲ್ಲಿ ಪ್ರಸ್ತಾಪಿಸಿದ್ದರು. ಜನಾರ್ದನ ರೆಡ್ಡಿ ಅವರ ಮೇಲಿನ ಪ್ರಕರಣಗಳನ್ನು ಉಲ್ಲೇಖಿಸಿದ್ದರು. ಇದು ಗಣಿ ಮಾಲೀಕರು ಮತ್ತು ಗಣಿ ಕಾರ್ಮಿಕರು ಕಾಂಗ್ರೆಸ್ ಕಡೆಗೆ ತಿರುಗುವಂತೆ ಮಾಡಿದೆ.

ಇದರ ಜತೆಗೆ, ಮತದಾನಕ್ಕೆ ಹಿಂದಿನ ದಿನ ಮಹಿಳಾ ಮತದಾರರ ಖಾತೆಗೆ ಬಂದು ಬಿದ್ದ ಗೃಹಲಕ್ಷ್ಮಿ ಹಣ, ಜನರೊಂದಿಗೆ ಆಪ್ತವಾಗಿ ವರ್ತಿಸುವ ಸಂತೋಷ್ ಲಾಡ್ ತಂತ್ರಗಾರಿಕೆ, ಒಳಮೀಸಲಾತಿ ಬಗ್ಗೆ ಇದ್ದ ಅನುಮಾನಗಳನ್ನು ನಿವಾರಿಸಲು ಸಚಿವ ಮುನಿಯಪ್ಪ, ಆಂಜನೇಯ ಪಟ್ಟ ಶ್ರಮ ಕಾಂಗ್ರೆಸ್ ಕೈ ಹಿಡಿದಿದೆ. ಇನ್ನೊಂದೆಡೆ, ವಕ್ಫ್ ವಿಚಾರವನ್ನು ಬಿಜೆಪಿ ಹಿಂಜಿದ ರೀತಿಯೂ ಅಲ್ಪಸಂಖ್ಯಾತ ಮತಗಳನ್ನು ಧ್ರುವೀಕರಿಸಿವೆ.

ಇತ್ತ, ಆರಂಭದಲ್ಲಿ ಒಗ್ಗಟ್ಟಾಗಿ ಕಂಡಿದ್ದ ಬಿಜೆಪಿ ಮುಖಂಡರು ಮತದಾನದ ದಿನ ಹತ್ತಿರ ಬಂದಂತೆ ವಿಭಜಿತರಾಗಿರುವುದು ಗೋಚರಿಸತೊಡಗಿತು. ರಾಜ್ಯ ನಾಯಕರು ಬಂದಾಗಷ್ಟೇ ಸ್ಥಳೀಯ ನಾಯಕರು ಕಾಣಿಸಿಕೊಳ್ಳತೊಡಗಿದ್ದರು. ಬಳ್ಳಾರಿ ಬಿಜೆಪಿಯೊಳಗಿನ ಒಳರಾಜಕೀಯ, ಸಂಡೂರು ಗೆಲ್ಲಲಾಗದು ಎಂಬ ಕೀಳರಿಮೆ, ವಿಶ್ವಾಸದ ಕೊರತೆ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತಗೆ ಸೋಲುಣಿಸಿದೆ.

ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ ಪತ್ನಿ ಅನ್ನಪೂರ್ಣ ಅವರಿಗೆ ಬಳ್ಳಾರಿ ಸಂಸದ ಇ. ತುಕಾರಾಂ ಸಿಹಿ ತಿನ್ನಿಸಿದರು. ಚಿತ್ರದಲ್ಲಿ ಪುತ್ರ ರಘುನಂದನ್ ಸೇರಿದಂತೆ ಹಲವರು ಇದ್ದಾರೆ.

ಸಡ್ಡು ಹೊಡೆದ ಹನುಮಂತ

ಸಂಡೂರು ವಿಧಾನಸಭೆ ಉಪಚುನಾವಣೆ ಸೋಲಿನ ಬಳಿಕ ಮತ ಎಣಿಕೆ ಕೇಂದ್ರದಿಂದ ಹೊರ ನಡೆಯುತ್ತಿದ್ದ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ, ಕಾಂಗ್ರೆಸ್ ಕಾರ್ಯಕರ್ತರನ್ನು ಕಂಡು 'ಬರ್ರಿ ಇಲ್ಲಿ... ಸಡ್ಡು ಹೊಡೆಯುತ್ತೀನಿ ನೋಡಿ' ಎಂದು ತೊಡೆತಟ್ಟಿ ತೋರಿಸಿದರು. ಆಗ ಪರಿಸ್ಥಿತಿ ಕಾವೇರಿತು. ಕೂಡಲೇ ಮಧ್ಯಪ್ರವೇಶಿಸಿದ ಪೊಲೀಸರು, ಬಂಗಾರು ಹನುಮಂತ ಅವರನ್ನು ಕಾರಿನಲ್ಲಿ ಕೂರಿಸಿ, ಸ್ಥಳದಿಂದ ಬೇರೆಡೆಗೆ ಕಳುಹಿಸಿದರು. ಪರಿಸ್ಥಿತಿ ತಿಳಿಯಾಯಿತು.

> ಸಂಡೂರಿನ ಜನ ಯಾವತ್ತೂ ಕಾಂಗ್ರೆಸ್ ಕೈ ಬಿಟ್ಟಿಲ್ಲ. ಅಭಿವೃದ್ಧಿ ಕೆಲಸ, ಗ್ಯಾರಂಟಿಗಳು, ಮಹಿಳೆಯೊಬ್ಬರಿಗೆ ಅವಕಾಶ ಮಾಡಿಕೊಟ್ಟಿದ್ದು, ಒಗ್ಗಟಿನ ಹೋರಾಟ ನಮ್ಮ ಗೆಲುವಿಗೆ ಕಾರಣವಾಗಿದೆ
> **ಇ. ಅನ್ನಪೂರ್ಣ**, ಸಂಡೂರು ಗೆದ್ದ ಅಭ್ಯರ್ಥಿ

> ಧರ್ಮ ಯುದ್ಧದಲ್ಲಿ ಅಧರ್ಮ ಗೆದ್ದಿದೆ. ಸೋಲಿನ ಹೊಣೆ ಹೊರುವೆ. ಮುಸ್ಲಿಂ, ಕುರುಬರು ಬೆಂಬಲಿಸಿಲ್ಲ. ಕಾಂಗ್ರೆಸ್ ಹಣದ ಹೊಳೆ ಹರಿಸಿದೆ. ಮತದಾನದ ಹಿಂದಿನ ದಿನ ಗೃಹಲಕ್ಷ್ಮಿ ಹಣ ಬಿಡುಗಡೆ ಆಯಿತು
> **ಬಂಗಾರು ಹನುಮಂತ**, ಪರಾಜಿತ ಅಭ್ಯರ್ಥಿ

> ಐದು ಸಾವಿರ ಮತಗಳ ಅಂತರದಿಂದ ನಮಗೆ ಗೆಲುವು ದಕ್ಕುವ ನಿರೀಕ್ಷೆ ಇತ್ತು. ಆದರೆ, ಈ ರೀತಿ ಸೋಲುತ್ತೇವೆ ಎಂದು ಕನಸಿನಲ್ಲೂ ಭಾವಿಸಿರಲಿಲ್ಲ. ಸಂಡೂರು ಫಲಿತಾಂಶವನ್ನು ಒಪ್ಪಿಕೊಳ್ಳುತ್ತೇವೆ
> **ಜನಾರ್ದನ ರೆಡ್ಡಿ**, ಶಾಸಕ

ಶಿಗ್ಗಾವಿ: 26 ವರ್ಷಗಳ ಬಳಿಕ ಕಾಂಗ್ರೆಸ್‌ಗೆ ಜಯ • 'ಬಿಜೆಪಿ ಶಾಸಕ ಮುಕ್ತ' ಜಿಲ್ಲೆ ಹಾವೇರಿ

ಬೊಮ್ಮಾಯಿ ಮಗನ ಮಣಿಸಿದ ಪೈಲ್ವಾನ್

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರವನ್ನು 26 ವರ್ಷಗಳ ಬಳಿಕ ತನ್ನ ತೆಕ್ಕೆಗೆ ತೆಗೆದುಕೊಂಡ ಕಾಂಗ್ರೆಸ್, ಬಿಜೆಪಿಯ ಭದ್ರಕೋಟೆಯಲ್ಲಿ 'ಕೈ' ಬಾವುಟ ಹಾರಿಸಿದೆ. ಕಳೆದ ಚುನಾವಣೆಯಲ್ಲಿ ಸೋಲು ಅನುಭವಿಸಿದ್ದ 'ಪೈಲ್ವಾನ' ಯಾಸೀರ ಅಹಮದ್ ಖಾನ್ ಪಠಾಣ, ಉಪಚುನಾವಣೆ ಕಣದಲ್ಲಿ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ವಿರುದ್ಧದ 'ಕುಸ್ತಿ'ಯಲ್ಲಿ ಗೆದ್ದಿದ್ದಾರೆ.

ನಾಲ್ಕು ಅವಧಿಗೆ ಶಾಸಕರಾಗಿ ಮುಖ್ಯಮಂತ್ರಿಯೂ ಆಗಿದ್ದ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಬೇರೂರಿದ್ದ ಕ್ಷೇತ್ರದಲ್ಲಿ ಬದಲಾವಣೆ ಬಯಸಿದ ಮತದಾರರು, ಈ ಬಾರಿ ಕಾಂಗ್ರೆಸ್‌ಗೆ ಜೈ ಎಂದಿದ್ದಾರೆ.

ಒಳ ಜಗಳ ಮತ್ತು ಕಾಂಗ್ರೆಸ್‌ನ ಗ್ಯಾರಂಟಿಗಳಿಂದ ಬಿಜೆಪಿ ಸೋಲು ಅನುಭವಿಸಿದರೆ, ಒಳಜಗಳಗಳನ್ನು ನಿವಾರಿಸಿಕೊಂಡು ಮುಖಂಡರು ಒಟ್ಟಾಗಿ ಎದುರಿಸಿದ್ದರಿಂದ ಕಾಂಗ್ರೆಸ್‌ಗೆ ಗೆಲುವು ದಕ್ಕಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಭರತ್ ಅವರ ಅಜ್ಜ ಎಸ್.ಆರ್. ಬೊಮ್ಮಾಯಿ ಮತ್ತು ತಂದೆ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದರು. ಕ್ಷೇತ್ರದಲ್ಲಿ ಹಿಡಿತ ಸಾಧಿಸಿದ್ದ ಬಸವರಾಜ ಬೊಮ್ಮಾಯಿ, ಈ ಬಾರಿ ತಮ್ಮ ಮಗನಿಗೆ ಟಿಕೆಟ್ ಕೊಡಿಸಿದ್ದರು. ಈ ಕುರಿತು ಬಿಜೆಪಿಯ ಹಲವು ಮುಖಂಡರಲ್ಲಿ ಅಸಮಾಧಾನ ಉಂಟಾಗಿತ್ತು. ಇದು ಕೂಡ ಬಿಜೆಪಿ ಸೋಲಿಗೆ ಕಾರಣ ಆಗಿರಬಹುದು ಎಂದು ಹೇಳಲಾಗುತ್ತಿದೆ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಜನರ ಮನಗೆದ್ದಿದ್ದು, ಮಹಿಳಾ ಮತದಾರರು ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಿದ್ದಾರೆ. ಮತದಾನಕ್ಕೂ ಮುನ್ನಾದಿನವೇ ಮನೆಯ ಯಜಮಾನಿಯರ ಖಾತೆಗೆ ₹2,000 ಗೃಹ ಲಕ್ಷ್ಮಿ ಹಣ ಜಮೆ ಮಾಡಿದ್ದು, ಫಲಿತಾಂಶದ ಮೇಲೆ ಪರಿಣಾಮ ಬೀರಿದೆ ಎಂಬ ಮಾತು ಕ್ಷೇತ್ರದಲ್ಲಿ ಕೇಳಿಬರುತ್ತಿದೆ.

ಕ್ಷೇತ್ರದಲ್ಲಿ ಪಂಚಮಸಾಲಿ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ವೇಳೆ 2ಎ ಮೀಸಲಾತಿ ಹೋರಾಟ ನಡೆದಿತ್ತು. ಆದರೆ, ಬೊಮ್ಮಾಯಿ ಈ ಬಗ್ಗೆ ಗಮನ ಹರಿಸಿರಲಿಲ್ಲ. ಇದೇ ಕಾರಣಕ್ಕೆ ಪಂಚಮಸಾಲಿ ಮತಗಳು, ಹೆಚ್ಚಿನ ಪ್ರಮಾಣದಲ್ಲಿ ಕಾಂಗ್ರೆಸ್ ತೆಕ್ಕೆಗೆ ಬಿದ್ದಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪಠಾಣ ಗೆಲ್ಲಿಸಿದ 'ಗ್ಯಾರಂಟಿ': ಮಹಿಳಾ ಸಬಲೀಕರಣಕ್ಕೆ ರಾಜ್ಯ ಸರ್ಕಾರ ಜಾರಿಗೆ ತಂದ ಗ್ಯಾರಂಟಿ ಯೋಜನೆಗಳು, ಕಾಂಗ್ರೆಸ್ ಗೆಲುವಿಗೆ ಪ್ರಮುಖ ಕಾರಣವಾಗಿವೆ. ಇಡೀ ರಾಜ್ಯ ಸರ್ಕಾರವೇ, ಪಠಾಣ ಪರ ಪ್ರಚಾರದ ಕಣಕ್ಕೆ ಇಳಿದಿದ್ದರಿಂದ ಗೆಲುವು ಸುಲಭವಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತರೂ ಪಠಾಣ ಜನರ ಒಡನಾಟ ಬಿಟ್ಟಿರಲಿಲ್ಲ. ಅನುಕಂಪದ ಮತಗಳೂ ಪಠಾಣ ಕೈ ಹಿಡಿದಿವೆ. ಚುನಾವಣೆ ಘೋಷಣೆಗೂ ಮುನ್ನವೇ ಕ್ಷೇತ್ರಕ್ಕೆ ಬಂದಿದ್ದ ಎಐಸಿಸಿ ಕಾರ್ಯದರ್ಶಿ ಮಯೂರ ಜಯಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಸತೀಶ ಜಾರಕಿಹೊಳಿ, ಜಮೀರ್ ಅಹಮದ್ ಖಾನ್ ಅವರು ಬಿತ್ತಿದ್ದ ಬೀಜಗಳು ಮೊಳಕೆಯೊಡೆದು 'ಕಾಂಗ್ರೆಸ್'ಗೆ ಫಲ ನೀಡಿವೆ. ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದು, ಶಿಗ್ಗಾವಿಯಲ್ಲಿ ಮಾತ್ರ ಬಿಜೆಪಿ ಶಾಸಕರಿದ್ದರು. ಶಿಗ್ಗಾವಿಯಲ್ಲೂ ಕಾಂಗ್ರೆಸ್ ಗೆದ್ದಿದ್ದು, ಹಾವೇರಿ ಜಿಲ್ಲೆ 'ಬಿಜೆಪಿ ಶಾಸಕ ಮುಕ್ತ' ಜಿಲ್ಲೆಯಾಗಿದೆ.

ಹಾವೇರಿ ಮತ ಎಣಿಕೆ ಕೇಂದ್ರದಲ್ಲಿ ಶನಿವಾರ ಗೆಲುವು ಘೋಷಣೆಯಾಗುತ್ತಿದ್ದಂತೆ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡ ವಿಜೇತ ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹಮದ್ ಖಾನ್ ಪಠಾಣ ಅವರು ಕಾರ್ಯಕರ್ತರಿಗೆ ಹಸ್ತಲಾಘವ ನೀಡಿದರು

> ಅಲ್ಪಸಂಖ್ಯಾತ ಸಮುದಾಯದ ಸಾಮಾನ್ಯ ಕುಟುಂಬದ ನನ್ನನ್ನು ಜನರು ಗೆಲ್ಲಿಸಿದ್ದಾರೆ. ದೇಶಕ್ಕೆ ಭಾವೈಕ್ಯದ ಸಂದೇಶ ಸಾರಿದ್ದಾರೆ. ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುವೆ
> **ಯಾಸೀರ ಅಹಮದ್ ಖಾನ್ ಪಠಾಣ**, ಶಿಗ್ಗಾವಿ ಗೆದ್ದ ಅಭ್ಯರ್ಥಿ

> ಕಾಂಗ್ರೆಸ್ ಹರಿಸಿದ ಹಣದ ಹೊಳೆಯಿಂದ ಸೋಲಾಗಿದೆ. ಕಾರಣವೇನು ಎಂಬುದನ್ನು ಚರ್ಚಿಸುತ್ತೇವೆ. ಫಲಿತಾಂಶದ ಬಗ್ಗೆ ಅವಲೋಕಿಸುತ್ತೇವೆ. ಜನಪರ ಕೆಲಸ ಮುಂದುವರಿಸುವೆ
> **ಭರತ್ ಬೊಮ್ಮಾಯಿ**, ಪರಾಜಿತ ಅಭ್ಯರ್ಥಿ

> ಜನರ ತೀರ್ಪಿಗೆ ತಲೆಬಾಗುವೆ. ವಿಪರೀತ ಹಣದ ಹೊಳೆ ಹರಿಸಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಆಡಳಿತ ಪಕ್ಷ ಎಂಬ ಕಾರಣಕ್ಕೆ ಜನರು ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿದ್ದಾರೆ
> **ಬಸವರಾಜ ಬೊಮ್ಮಾಯಿ**, ಸಂಸದ

'ಅಪಪ್ರಚಾರ ವಿರುದ್ಧ ದಿಗ್ವಿಜಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಚುನಾವಣೆ ಕಾಂಗ್ರೆಸ್ ಪಕ್ಷದ ಸತ್ಯ ಮತ್ತು ಬಿಜೆಪಿ- ಜೆಡಿಸ್ ಪಕ್ಷಗಳ ಸುಳ್ಳುಗಳ ನಡುವಿನ ಚುನಾವಣೆಯಾಗಿತ್ತು. ಸತ್ಯ ಗೆದ್ದಿದೆ. ಪ್ರತಿಪಕ್ಷಗಳ ಅಪಪ್ರಚಾರ, ಸುಳ್ಳು ಆರೋಪಗಳನ್ನು ಮೆಟ್ಟಿನಿಂತು ನಾವು ಸಾಧಿಸಿರುವುದು ದಿಗ್ವಿಜಯವಾಗಿ ಕಾಣುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ಲೇಷಿಸಿದರು.

ಸಿದ್ದರಾಮಯ್ಯ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾನು ದಂತಗೋಪುರದಲ್ಲಿ ಕುಳಿತವನಲ್ಲ. ಜನರ ಜೊತೆ ನಿರಂತರ ಒಡನಾಟ ಉಳ್ಳವನು. ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ–ಜೆಡಿಎಸ್‌ನವರು ಪ್ರಧಾನಿ ಕೂಡಾ ಸುಳ್ಳು ಹೇಳಿದರು. ಮಹಾರಾಷ್ಟ್ರದಲ್ಲಿ ಸುಳ್ಳು ಜಾಹೀರಾತು ನೀಡಿದ್ದರು. ಅವೆಲ್ಲದಕ್ಕೂ ಜನ ಉತ್ತರ ಕೊಟ್ಟಿದ್ದಾರೆ' ಎಂದರು.

'ರಾಜಭವನದಿಂದ ಹಿಡಿದು ಕೇಂದ್ರ ತನಿಖಾ ಸಂಸ್ಥೆಗಳವರೆಗೆ ದುರ್ಬಳಕೆ ಮಾಡಿ ನನ್ನ, ನನ್ನ ಕುಟುಂಬ ಹಣಿಯಲು ಯತ್ನಿಸಿದ್ದಾರೆ. ನನ್ನನ್ನು ಕಟ್ಟಿ ಹಾಕಲು ಬಿಜೆಪಿಯವರು ನನ್ನ ಮತ್ತು ಪತ್ನಿಯ ಮೇಲೆ ಸುಳ್ಳು ಆರೋಪ ಮಾಡಿದ್ದಾರೆ. ಇದನ್ನು ಯಾರೂ ನಂಬಿಲ್ಲ. ಅದಕ್ಕೆ ಈ ಫಲಿತಾಂಶವೇ ಸಾಕ್ಷಿ' ಎಂದರು.

'ಶಿಗ್ಗಾವಿ ಕ್ಷೇತ್ರದಲ್ಲಿ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಿದ್ದರಿಂದ ಹಿಂದೂ ಮತ ಧ್ರುವೀಕರಣವಾಗುತ್ತದೆ ಎಂದು ಕೆಲವರು ಶಂಕೆ ವ್ಯಕ್ತಪಡಿಸಿದ್ದರು. ಆದರೆ, ಮತದಾರರು ಅಲ್ಲಿ ನಮ್ಮ ಅಭ್ಯರ್ಥಿ ಗೆಲ್ಲಿಸಿದ್ದಾರೆ. ಇದು ಬಿಜೆಪಿಯವರ ಕೋಮುವಾದಿ ರಾಜಕಾರಣಕ್ಕೆ ನೀಡಿದ ಉತ್ತರವೂ ಆಗಿದೆ' ಎಂದೂ ಪ್ರತಿಪಾದಿಸಿದರು.

'2028ರ ಚುನಾವಣೆಗೆ ಮುನ್ನುಡಿ'

'ಉಪ ಚುನಾವಣೆಯ ಫಲಿತಾಂಶ 2028ರ ವಿಧಾನಸಭೆ ಚುನಾವಣೆ ಫಲಿತಾಂಶಕ್ಕೆ ರಾಜ್ಯದ ಜನರ ಮುನ್ನುಡಿ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.

'ಗ್ಯಾರಂಟಿ ಯೋಜನೆಗಳು, ಅಭಿವೃದ್ಧಿಗೆ ಜಯ ಸಿಕ್ಕಿದೆ. ಭಾವನೆಗಳ ಬದಲಿಗೆ, ಬದುಕಿನ ಮೇಲಿನ ರಾಜಕಾರಣ ಬೇಕು ಎಂದು ಜನ ಸಂದೇಶ ನೀಡಿದ್ದಾರೆ' ಎಂದು ಹೇಳಿದರು. 'ಚನ್ನಪಟ್ಟಣದಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ಸೋಲು ಎಂದು ನಾನು ಹೇಳುವುದಿಲ್ಲ. ಈ ಕ್ಷೇತ್ರ ಗೆದ್ದಿದ್ದ ಕುಮಾರಸ್ವಾಮಿ, ಬಿಟ್ಟು ಹೋದ ಗುರುತಿಗೆ ಜನ ತೀರ್ಪು ನೀಡಿದ್ದಾರೆ' ಎಂದರು.

'ರಾಜಕೀಯ ಲಾಭಕ್ಕೆ ಯತ್ನಿಸಿದವರಿಗೆ ಶಾಸ್ತಿ'

'ಚನ್ನಪಟ್ಟಣದಲ್ಲಿ ನಾನು ನೀಡಿದ್ದ ಹೇಳಿಕೆಯನ್ನು ವಿವಾದ ಮಾಡಿ ರಾಜಕೀಯ ಲಾಭಕ್ಕೆ ಯತ್ನಿಸಿದವರಿಗೆ ತಕ್ಕ ಶಾಸ್ತಿ ಆಗಿದೆ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದ್ದಾರೆ.

'ಈ ಚುನಾವಣೆಯಲ್ಲೂ ಮುಸ್ಲಿಂ ಸಮುದಾಯ ಪೂರ್ಣ ಪ್ರಮಾಣದಲ್ಲಿ ಕಾಂಗ್ರೆಸ್ ಕೈ ಹಿಡಿದು ಬಲಪಡಿಸಿದೆ. ಕಾಂಗ್ರೆಸ್ ಸರ್ಕಾರದ ಪರ ವಿಶ್ವಾಸ ತೋರಿಸಿದೆ' ಎಂದಿದ್ದಾರೆ.

'ಮುಂದೆಯಾದರೂ ವಿರೋಧ ಪಕ್ಷಗಳು ನಮ್ಮ ಅಭಿವೃದ್ಧಿಗೆ ಕೈ ಜೋಡಿಸಲಿ. ನಕಾರಾತ್ಮಕ ರಾಜಕಾರಣವನ್ನು ಕೈಬಿಡಲಿ' ಎಂದರು.

> ಉಪ ಚುನಾವಣೆಯಲ್ಲಿ ಅಧಿಕಾರಿಗಳು, ಗುತ್ತಿಗೆದಾರರು ಸರ್ಕಾರದ ಪರವಾಗಿ ಕೆಲಸ ಮಾಡಿದ್ದಾರೆ ಹಣದ ಹೊಳೆ ಹರಿಸಿದ ಕಾಂಗ್ರೆಸ್ ವಿಜಯ ಸಾಧಿಸಿದೆ
> **ಆರ್. ಅಶೋಕ**, ವಿಧಾನಸಭೆ ವಿರೋಧ ಪಕ್ಷದ ನಾಯಕ

> ಉಪ ಚುನಾವಣೆಯ ಫಲಿತಾಂಶ ನಿರಾಸೆ ಮೂಡಿಸಿದೆ. ಶಿಗ್ಗಾವಿ ಸೋಲು ಆಘಾತ ತಂದಿದೆ. ತಪ್ಪು ಸರಿಪಡಿಸುವ ಕೆಲಸವನ್ನು ಮಾಡುತ್ತೇವೆ'
> **ಬಿ.ವೈ. ವಿಜಯೇಂದ್ರ**, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> ಉಪಚುನಾವಣೆಯಲ್ಲಿ ಬಿಜೆಪಿ ಸೋಲಿನ ಕುರಿತು ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ. ಸೋಲಿಗೆ ಇವಿಎಂ ಯಂತ್ರ ದೋಷ ಎಂದು ಕಾರಣ ನೀಡಲ್ಲ
> **ಪ್ರಲ್ಹಾದ ಜೋಶಿ**, ಕೇಂದ್ರ ಸಚಿವ

> ಶಿಗ್ಗಾವಿಯಲ್ಲಿ ಬಿಜೆಪಿಯಿಂದ ಕಣಕ್ಕಿಳಿಯಲು 60 ಮಂದಿ ತಯಾರಾಗಿದ್ದರು. ಭರತ್ ಸ್ಪರ್ಧಿಸಿದರು. ಆ 60 ಜನರ ಬೇಸರ ಪರಿಣಾಮ ಬೀರಿರಬಹುದು
> **ಅರವಿಂದ ಬೆಲ್ಲದ**, ವಿರೋಧ ಪಕ್ಷದ ಉಪನಾಯಕ

> ಉಪಚುನಾವಣೆ ಫಲಿತಾಂಶದ ಮೂಲಕ ಜಾಗೃತ ಮತದಾರರು ಬಿಜೆಪಿಗೆ ಮಂಗಳಾರತಿ ಮಾಡಿದ್ದಾರೆ. ಸುಳ್ಳು ಪ್ರಚಾರ ನಡೆಸಿ, ಸಮಾಜ ಒಡೆಯುವವರಿಗೆ ಕಪಾಳಮೋಕ್ಷ ಮಾಡಿದ್ದಾರೆ
> **ಎಚ್.ಕೆ.ಪಾಟೀಲ**, ಸಚಿವ

> ಬಿಜೆಪಿಯವರು ಧಾರ್ಮಿಕ ವಿಷಯ ಮುಂದಿರಿಸಿ ಗೆಲ್ಲುತ್ತಿದ್ದರು. ಈ ಸಲ ಅದಕ್ಕೆ ಅವಕಾಶ ನೀಡಲಿಲ್ಲ. ನಮ್ಮ ತಂತ್ರಗಾರಿಕೆಯಿಂದ ಶೇ 70 ಅಹಿಂದ ಮತಗಳು ಕಾಂಗ್ರೆಸ್‌ಗೆ ವಾಲಿದವು
> **ಸತೀಶ ಜಾರಕಿಹೊಳಿ**, ಸಚಿವ

> ಮುಖ್ಯಮಂತ್ರಿ ಕುರ್ಚಿಯನ್ನು ಅಪಮಾನಿಸಿ ಮಾತನಾಡುತ್ತಿದ್ದ ವಿರೋಧ ಪಕ್ಷದವರಿಗೆ ಮತದಾರರು ಉಪಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿದ್ದಾರೆ
> **ಮಧು ಬಂಗಾರಪ್ಪ**, ಸಚಿವ

> ಬಿಜೆಪಿ ಹೀನಾಯ ಸೋಲಿಗೆ ಬಿ.ವೈ.ವಿಜಯೇಂದ್ರ, ಯಡಿಯೂರಪ್ಪ ಕಾರಣ. ಅವರ ಕಾಂಗ್ರೆಸ್ ಜೊತೆಗಿನ ಒಳ ಒಪ್ಪಂದದಿಂದ ಇಂಥ ಸ್ಥಿತಿ ಬಂದಿದೆ
> **ಬಸನಗೌಡ ಪಾಟೀಲ ಯತ್ನಾಳ**, ಶಾಸಕ

ಮಹಾಯುತಿ 'ಮಹಾ' ದಿಗ್ವಿಜಯ

ಒಂದನೇ ಪುಟದಿಂದ...

'ಬಟೇಂಗೆ ತೊ ಕಾಟೇಂಗೆ' (ಒಗ್ಗಟ್ಟು ಇಲ್ಲದಿದ್ದರೆ ನಮ್ಮನ್ನು ಮುಗಿಸುತ್ತಾರೆ) ನಿರೂಪಣೆಯ ಮೂಲಕ ಮತ ಧ್ರುವೀಕರಣದ ಕಿಡಿ ಹೊತ್ತಿಸಿದ್ದರು. ಬಿಜೆಪಿಯ ಉಳಿದ ನಾಯಕರು ಇದೇ ಧಾಟಿಯಲ್ಲಿ ಮಾತನಾಡಿದ್ದರು. ಈ ಮಾತುಗಳು ಮೈತ್ರಿಕೂಟಕ್ಕೆ ಅಚ್ಚರಿಯ ಫಸಲನ್ನು ತಂದುಕೊಟ್ಟಿವೆ. ಉತ್ತರ ಪ್ರದೇಶ ವಿಧಾನಸಭೆಯ ಉಪಚುನಾವಣೆಯಲ್ಲಿ ಪಕ್ಷವನ್ನು ಏಳು ಸ್ಥಾನಗಳಲ್ಲಿ ಗೆಲ್ಲಿಸುವ ಮೂಲಕ ಯೋಗಿ ಅವರು ದೊಡ್ಡ ತೂಗುಗತ್ತಿಯಿಂದಲೂ ಪಾರಾಗಿದ್ದಾರೆ.

ಸುಮಾರು ಶೇ 28ರಷ್ಟಿರುವ ಮರಾಠ ಮತಗಳು, ಶೇ 52ರಷ್ಟಿರುವ ಹಿಂದುಳಿದ ವರ್ಗಗಳ ಮತಗಳು ಹಾಗೂ ಶೇ 15ರಷ್ಟಿರುವ ದಲಿತ ಮತಗಳ ಮೇಲೆ ಕಣ್ಣಿಟ್ಟು ಹೆಣೆದ ಜಾತಿ ಸಮೀಕರಣವೂ ಮೈತ್ರಿಕೂಟಕ್ಕೆ ಭಾರಿ ಲಾಭ ತಂದುಕೊಟ್ಟಿದೆ. ಆರ್‌ಎಸ್‌ಎಸ್‌ನ ಸಹಾಯಹಸ್ತವೂ ಅಭೂತಪೂರ್ವ ಗೆಲುವಿಗೆ ಕಾರಣವಾಗಿದೆ. ಆರ್‌ಎಸ್‌ಎಸ್ ಕಾರ್ಯಕರ್ತರು ರಾಜ್ಯದಲ್ಲಿ 1.25 ಲಕ್ಷದಷ್ಟು ಸಣ್ಣ ಸಣ್ಣ ಸಭೆಗಳನ್ನು ನಡೆಸಿ ಮನೆ ಹಾಗೂ ಜನರ ಮನಗಳನ್ನು ಮುಟ್ಟಿದರು. ಹಿಂದೂ ಮತಗಳ ಕ್ರೋಡೀಕರಣಕ್ಕೆ ಸದ್ದಿಲ್ಲದೆ ಕೆಲಸ ಮಾಡಿದರು.

ಬಿಜೆಪಿ ನಾಯಕರ 'ಸಂವಿಧಾನ ಬದಲು' ಹೇಳಿಕೆಗಳ ವಿರುದ್ಧ ಅಭಿಯಾನ ಹಾಗೂ ಜಾತಿ ಜನಗಣತಿಯಂತಹ 'ಮಂತ್ರದಂಡ'ಗಳನ್ನು ಮುಂದಿಟ್ಟುಕೊಂಡು ಲೋಕಸಭಾ ಚುನಾವಣೆಯಲ್ಲಿ ನೂರರ ಗಡಿಗೆ ತಲುಪಿದ್ದ ಕಾಂಗ್ರೆಸ್ ಪಕ್ಷವು ಮತ್ತೆ ಸೋತು ಸುಣ್ಣವಾಗಿದೆ. ಗೆಲ್ಲುವ ಭರಪೂರ ಅವಕಾಶ ಇರುವ ರಾಜ್ಯಗಳಲ್ಲಿ 'ಕೈ' ಪಾಳಯ ಸೋಲುತ್ತಿರುವುದು ಇದೇ ಮೊದಲಲ್ಲ. ಮಧ್ಯ ಪ್ರದೇಶ, ಛತ್ತೀಸಗಢ ಹಾಗೂ ಹರಿಯಾಣದಲ್ಲಿ ಕಾಂಗ್ರೆಸ್ ಪಕ್ಷವು ಅವಕಾಶಗಳನ್ನು ಕೈಚೆಲ್ಲಿತ್ತು. ಬಿಜೆಪಿಯೊಂದಿಗೆ ನೇರ ಸ್ಪರ್ಧೆ ಅಥವಾ ಇಂಡಿಯಾ ಮೈತ್ರಿಕೂಟದ ಪ್ರಮುಖ ಪಾಲುದಾರರಾಗಿರುವ ರಾಜ್ಯಗಳಲ್ಲಿ ಪಕ್ಷ ಮತ್ತೊಮ್ಮೆ ತನ್ನ ವೈಫಲ್ಯವನ್ನು ಬಟಾಬಯಲು ಮಾಡಿದೆ. ನಾಯಕತ್ವ, ಸಂಘಟನಾ ಸಾಮರ್ಥ್ಯ, ರಾಜಕೀಯ ಜಾಣ್ಮೆ, ರಣತಂತ್ರ ಹಾಗೂ ಗೆಲುವಿನ ಹಸಿವಿನ ಅಗ್ನಿಪರೀಕ್ಷೆಯಲ್ಲಿ ಪಕ್ಷ ಪುನಃ ಎಡವಿದೆ. ಅವಕಾಶಗಳನ್ನು ಕೈಚೆಲ್ಲುವ ತನ್ನ ಹಳೆಯ ಚಾಳಿಯನ್ನು ಪುನರಾವರ್ತಿಸಿದೆ. ಗತವೈಭವದ ಸ್ವಪ್ರತಿಷ್ಠೆಯನ್ನು ಬಿಟ್ಟುಕೊಟ್ಟು ಯಶಸ್ವಿ ಮೈತ್ರಿಕೂಟಗಳನ್ನು ಕಟ್ಟದಿದ್ದರೆ ಪಕ್ಷಕ್ಕೆ ಇನ್ನಷ್ಟು ಸೋಲು ಕಟ್ಟಿಟ್ಟ ಬುತ್ತಿ ಎಂಬುದನ್ನು ಈ ಚುನಾವಣೆ ಮತ್ತೊಮ್ಮೆ ಸಾರಿದೆ.

ಸಣ್ಣ ಪ್ರಾದೇಶಿಕ ಪಕ್ಷವೊಂದನ್ನು ಹಣಿಯಲು ಅತಿರಥ ಮಹಾರಥ ನಾಯಕರನ್ನು ಹಾಗೂ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡರೂ ಜಾರ್ಖಂಡ್‌ನಲ್ಲಿ ಅಧಿಕಾರದ ಗದ್ದುಗೆ ಏರುವ ಕಮಲ ಪಾಳಯದ ಮಹದಾಸೆ ಭಗ್ನಗೊಂಡಿದೆ. ಆಡಳಿತ ವಿರೋಧಿ ಅಲೆ ಮಧ್ಯೆಯೂ ಅನುಕಂಪದ ಅಲೆಯನ್ನು ಊರುಗೋಲಾಗಿ ಬಳಸಿಕೊಂಡು ಆದಿವಾಸಿಗಳ ಮನಗೆದ್ದ ಜೆಎಂಎಂ ನಾಯಕ ಹೇಮಂತ್ ಸೊರೇನ್ ಅವರು ಮತ್ತೆ ಮುಖ್ಯಮಂತ್ರಿ ಗಾದಿಗೆ ಏರಲು ಸಜ್ಜಾಗಿದ್ದಾರೆ. ಜಾರ್ಖಂಡ್ ರಾಜ್ಯ ಸ್ಥಾಪನೆಯಾದ ಬಳಿಕ ಸತತ ಎರಡನೇ ಅವಧಿಗೆ ಯಾವುದೇ ಪಕ್ಷವನ್ನು ಜನರು ಆರಿಸಿದ ಉದಾಹರಣೆ ಇಲ್ಲ. ಈ ಅಲಿಖಿತ ಸಂಪ್ರದಾಯವನ್ನು ಅಲ್ಲಿನ ಮತದಾರರು ಈ ಸಲ ಮುರಿದಿದ್ದಾರೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕ್ಷೇತ್ರಗಳಲ್ಲಿ ಪಾರಮ್ಯ ಮೆರೆದಿರುವ 'ಇಂಡಿಯಾ' ಮೈತ್ರಿಕೂಟವು ಬುಡಕಟ್ಟು ರಾಜ್ಯದಲ್ಲಿ ತನ್ನ ಅತ್ಯುತ್ತಮ ಪ್ರದರ್ಶನ ದಾಖಲಿಸಿದೆ.

ರಾಜ್ಯದಲ್ಲಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜೋಡಿಯು ಪ್ರಚಾರದ ಹೊಣೆಗಾರಿಕೆಯನ್ನು ಹೆಗಲಿಗೇರಿಸಿಕೊಂಡಿತ್ತು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹಾಗೂ ಕೇಂದ್ರ ಕೃಷಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಅವರನ್ನು ಚುನಾವಣಾ ಉಸ್ತುವಾರಿಗಳನ್ನಾಗಿ ನಿಯೋಜಿಸಲಾಗಿತ್ತು. ಬಿಜೆಪಿ ನಾಯಕರು ಒಡಕು ಮಾತುಗಳನ್ನು ಎಗ್ಗಿಲ್ಲದೆ ಆಡಿದ್ದರು. ಬಿಜೆಪಿಯ ಧ್ರುವೀಕರಣದ ರಾಜಕಾರಣಕ್ಕೆ ಹೇಮಂತ್ ಸೊರೇನ್ ಹಾಗೂ ಅವರ ಪತ್ನಿ ಕಲ್ಪನಾ ಸೊರೇನ್ ಅವರು ಸುಮಾರು 200 ರ‍್ಯಾಲಿಗಳನ್ನು ನಡೆಸುವ ಮೂಲಕ ಸಡ್ಡು ಹೊಡೆದರು. ಬುಡಕಟ್ಟು ಜನರ ಅಸ್ಮಿತೆಯ ವಿಷಯ ಮುಂದಿಟ್ಟುಕೊಂಡು ಹೂಡಿದ ಪ್ರತಿತಂತ್ರವು ಭಾರಿ ಫಲ ಕೊಟ್ಟಿದೆ.

ಬಹುಮತದ ಹತ್ತಿರಕ್ಕೆ ಕೇಸರಿ

1990ರ ದಶಕದಿಂದ 2009ರವರೆಗೆ ವಿಧಾನಸಭಾ ಚುನಾವಣೆಗಳಲ್ಲಿ 40–50ರ ಆಜುಬಾಜಿನ ಸ್ಥಾನಗಳಲ್ಲಷ್ಟೇ ಗೆಲ್ಲುತ್ತಿದ್ದ ಬಿಜೆಪಿಯು 2014ರ ಚುನಾವಣೆಯಲ್ಲಿ 122 ಸ್ಥಾನಗಳನ್ನು ಗೆದ್ದಿತ್ತು. ಅಲ್ಲಿಯವರೆಗೆ ಮೈತ್ರಿಕೂಟದ ಕಿರಿಯ ಪಾಲುದಾರನಾಗಿದ್ದ ಪಕ್ಷವು ಹಿರಿಯ ಪಾಲುದಾರನ ಸ್ಥಾನಕ್ಕೆ ಬಡ್ತಿ ಪಡೆದಿತ್ತು. 2019ರ ಚುನಾವಣೆಯಲ್ಲಿ 105 ಸ್ಥಾನಗಳಿಗೆ ತೃಪ್ತಿ ಪಟ್ಟಿತ್ತು. ಪ್ರಾದೇಶಿಕ ಪಕ್ಷಗಳಲ್ಲಿ ಒಡಕು ಸೃಷ್ಟಿಸಿ ಅದರ ಭರ್ಜರಿ ಲಾಭವನ್ನು ಗಳಿಸಿರುವ ಪಕ್ಷವು ಈ ಸಲ 132 ಸ್ಥಾನಗಳಲ್ಲಿ ಜಯ ಸಾಧಿಸಿದೆ. ಪಕ್ಷ ಸ್ಪರ್ಧಿಸಿದ್ದು 148 ಕ್ಷೇತ್ರಗಳಲ್ಲಿ. ಪಕ್ಷದ ಸ್ಟ್ರೈಕ್ ರೇಟ್ ಶೇ 90ರಷ್ಟು. ಪಕ್ಷ ಸರಳ ಬಹುಮತದ ಅಂಚಿಗೆ ಬಂದು ನಿಂತಿದೆ. ರಾಜ್ಯದಲ್ಲಿ ಕಳೆದ 34 ವರ್ಷಗಳಲ್ಲಿ ಯಾವುದೇ ಪಕ್ಷವು ಸ್ವತಂತ್ರವಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಉದಾಹರಣೆ ಇಲ್ಲ.

ಮಹಿಳಾ ಕಟಾಕ್ಷ

ನೇರ ನಗದು ವರ್ಗಾವಣೆಯ ಮಹಿಳಾ ಕೇಂದ್ರಿತ ಯೋಜನೆಗಳ ಬಲದಿಂದ ಆಡಳಿತಾರೂಢ ಪಕ್ಷಗಳು ಮಹಾರಾಷ್ಟ್ರ ಹಾಗೂ ಜಾರ್ಖಂಡ್‌ನಲ್ಲಿ ಗೆಲುವಿನ ದಡ ಮುಟ್ಟಿವೆ. ಕರ್ನಾಟಕದ 'ಗೃಹಲಕ್ಷ್ಮಿ' ಯೋಜನೆಯ ಪರಿಷ್ಕೃತ ರೂಪ 'ಲಾಡ್ಲಿ ಬೆಹನಾ'ವನ್ನು ಬಿಜೆಪಿಯು ಮಧ್ಯಪ್ರದೇಶದಲ್ಲಿ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಜಾರಿಗೊಳಿಸಿತ್ತು. ಪಕ್ಷದ ಗೆಲುವಿನ ಚಮತ್ಕಾರಕ್ಕೆ ಮಹಿಳಾ ಕಟಾಕ್ಷವೇ ಪ್ರಮುಖ ಕಾರಣವಾಗಿತ್ತು. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಕಟುವಾಗಿ ಟೀಕಿಸುತ್ತಲೇ ಮಹಾಯುತಿ ಮೈತ್ರಿಕೂಟವು 'ಲಡ್ಕಿ ಬಹೀಣ್ ಯೋಜನಾ' (ಪ್ರತಿ ಮಹಿಳೆಗೆ ತಿಂಗಳಿಗೆ ₹1,500) ಜಾರಿಗೊಳಿಸಿತು. ಈ ಯೋಜನೆಯ ಮೂಲಕ 2.5 ಕೋಟಿಗೂ ಅಧಿಕ ಮಹಿಳೆಯರ ಖಾತೆಗಳಿಗೆ ನಾಲ್ಕೈದು ತಿಂಗಳು ನಗದು ವರ್ಗಾವಣೆಯಾಯಿತು. ಪ್ರತಿಯಾಗಿ ಮಹಿಳಾ ಮತದಾರರು ಮೈತ್ರಿಕೂಟಕ್ಕೆ ಬಲ ನೀಡಿದರು. ಜಾರ್ಖಂಡ್‌ನಲ್ಲಿ ಸೊರೇನ್ ಅವರೂ ಇದೇ ತಂತ್ರ ಅನುಸರಿಸಿ ಮಹಿಳೆಯರ ಮನ ಗೆದ್ದರು.

'ಕೈ'ಗೆ ಬಲ; ಮೈತ್ರಿ ವಿಫಲ

ಒಂದನೇ ಪುಟದಿಂದ...

ಹಾಗಂತ, ಕಾಂಗ್ರೆಸ್ ಪಕ್ಷಕ್ಕೆ 'ಭೇಷ್' ಎನ್ನುವ ಸಂದೇಶವನ್ನೇನೂ ಮತದಾರರು ನೀಡಿಲ್ಲ. ಸಲೀಸಿನ ಗೆಲುವು ಎಂದು ಕಾಂಗ್ರೆಸ್ ನಾಯಕರು ಅಂದಾಜಿಸಿದ್ದ ಸಂಡೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಎದುರು ಹೆಣಗಾಡಿ ಗೆಲ್ಲುವ ಪರಿಸ್ಥಿತಿ ಎದುರಾಗಿತ್ತು. ಇದು, ಆಳುವ ಪಕ್ಷಕ್ಕೆ ಎಚ್ಚರಿಕೆಯ ಗಂಟೆ. ಆದರೆ, ಫಲಿತಾಂಶವು ಸರ್ಕಾರ ಉರುಳಿಸುವ ಯತ್ನಕ್ಕೆ ಕಡಿವಾಣ ಹಾಕಲಿದ್ದು, ಸಿದ್ದರಾಮಯ್ಯ ನಾಯಕತ್ವಕ್ಕೆ ಮತ್ತಷ್ಟು ಬಲ ಬಂದಂತಾಗಿದೆ.

ಉಪ ಚುನಾವಣೆಯು ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ, ಬಿ.ವೈ. ವಿಜಯೇಂದ್ರ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರಿಗೆ ಪ್ರತಿಷ್ಠೆಯಾಗಿತ್ತು. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ತನ್ನ ತಮ್ಮ ಡಿ.ಕೆ. ಸುರೇಶ್ ಅವರನ್ನು ಸೋಲಿಸಿದ ಬಳಿಕ ರೊಚ್ಚಿಗೆದ್ದಿದ್ದ ಶಿವಕುಮಾರ್, ರಾಮನಗರ ಜಿಲ್ಲೆಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಕುಮಾರಸ್ವಾಮಿಯವರ ಹಸ್ತಕ್ಷೇಪ ಇಲ್ಲದಂತೆ ಮಾಡುವ ಹಟಕ್ಕೆ ಬಿದ್ದಿದ್ದರು. ಹೀಗಾಗಿ, ಚನ್ನಪಟ್ಟಣ ಚುನಾವಣೆ ಎರಡು ಕುಟುಂಬಗಳಿಗೆ ರಾಜಕೀಯ ಅಸ್ತಿತ್ವದ ಕಣವೂ ಆಗಿತ್ತು. ಗ್ಯಾರಂಟಿಗಳೇ ಸುಳ್ಳು ಎಂದು ನಿತ್ಯವೂ ಅಪ ಪ್ರಚಾರ ಮಾಡುತ್ತಾ, ಸಂಪತ್ತಿನ ಅಲ್ಪಪಾಲನ್ನು ದುರ್ಬಲರಿಗೆ ಹಂಚುವ ಜನಪರ ಯೋಜನೆಯನ್ನೇ ಹೀಗಳೆಯುತ್ತಿದ್ದ ಬಿಜೆಪಿ–ಜೆಡಿಎಸ್ ನಾಯಕರಿಗೆ ಉತ್ತರ ನೀಡಿದ್ದಾರೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆಯ ಪ್ರಕರಣವನ್ನು ಮುಂದಿಟ್ಟು, ರಾಜಕೀಯ ಬಿರುಗಾಳಿ ಎಬ್ಬಿಸಿದ್ದ ಬಿಜೆಪಿ–ಜೆಡಿಎಸ್ ನಾಯಕರು ಮೈಸೂರುವರೆಗೆ ಪಾದಯಾತ್ರೆ ನಡೆಸಿದ್ದರು. 'ಸಿದ್ದರಾಮಯ್ಯನವರನ್ನು ಜೈಲಿಗೆ ಕಳುಹಿಸುತ್ತೇವೆ. ಅವರ ಸೊಕ್ಕು ಮುರಿಯಬೇಕು' ಎಂದು ಮಿತ್ರಕೂಟದ ನಾಯಕರು ಹೇಳಿದ್ದರು. 'ಈ ಸರ್ಕಾರ ತೊಲಗಿಸುವವರೆಗೆ ವಿರಮಿಸುವುದಿಲ್ಲ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರು ಹೇಳಿದ್ದರು. ಈ ಎಲ್ಲ ಮಾತು ಮೈತ್ರಿಕೂಟಕ್ಕೆ ತಿರುಗುಬಾಣವಾಗಿದೆ. ಸಿದ್ದರಾಮಯ್ಯನವರನ್ನು ಅಧಿಕಾರದಿಂದ ಇಳಿಸುವ ಮಾತುಗಳಿಂದಾಗಿ, ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ (ಅಹಿಂದ) ಮತಗಳು ಕ್ರೋಡೀಕರಣಗೊಂಡು, ಕಾಂಗ್ರೆಸ್‌ನತ್ತ ವಾಲಿದವು. ಜತೆಗೆ, ಸಣ್ಣ ಸಣ್ಣ ಜಾತಿ–ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡ ಕಾಂಗ್ರೆಸ್ ನಾಯಕರು, ಮೈತ್ರಿಕೂಟದ ವಿರುದ್ಧ ತಂತ್ರ ಹೆಣೆದರು. ಇದು ಯಶಸ್ವಿಯಾದಂತೆ ಗೋಚರಿಸುತ್ತಿದೆ.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ಅಂಗೀಕರಿಸಲಾಗುವುದು ಮತ್ತು ಒಳಮೀಸಲಾತಿ ಜಾರಿ ಮಾಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿಕೊಂಡೇ ಬಂದರು. ಒಕ್ಕಲಿಗರು ಮತ್ತು ವೀರಶೈವ ಲಿಂಗಾಯತರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಚುನಾವಣೆಹೊತ್ತಿನೊಳಗೆ, ಎರಡು ಪ್ರಬಲ ಸಮುದಾಯಗಳು ಹೀಗೆ ವರ್ತಿಸಿದ್ದು, ಅಹಿಂದ ಮತಗಳು ಕಾಂಗ್ರೆಸ್ ಬೆನ್ನಿಗೆ ನಿಲ್ಲಲು ಕಾರಣವಾಯಿತು. ಮೂರು ಕ್ಷೇತ್ರಗಳ ಫಲಿತಾಂಶವನ್ನು ಕಾಂಗ್ರೆಸ್ ಪರವಾಗಿಸಲು ಈ ಬೆಳವಣಿಗೆ ನೆರವಾಯಿತು.

'ಕರ್ನಾಟಕದಲ್ಲಿ ಕೋಮು ಧ್ರುವೀಕರಣ ಮತ್ತು ಮತದ್ವೇಷದ ರಾಜಕಾರಣ ನಡೆಯುವುದಿಲ್ಲ' ಎಂಬುದನ್ನು 2023ರ ಚುನಾವಣೆ ತೋರಿಸಿಕೊಟ್ಟಿತ್ತು. ಅದರಿಂದ ಪಾಠ ಕಲಿಯದ ಬಿಜೆಪಿ ನಾಯಕರು, ಉಪಚುನಾವಣೆಯಲ್ಲಿ ಅದನ್ನೇ ಪ್ರಧಾನ ಅಸ್ತ್ರವಾಗಿ ಬಳಸಿದರು. ವಕ್ಫ್ ಮಂಡಳಿ ನೋಟಿಸ್ ನೀಡಿದ್ದನ್ನು ಬಹುದೊಡ್ಡ ವಿವಾದವಾಗಿಸಿ, ರಾಜಕೀಯ ಬೆಳೆ ತೆಗೆಯಲು ಯತ್ನಿಸಿದರು. ಅದೇನೂ ಫಲ ನೀಡಿದಂತೆ ಕಾಣಿಸುತ್ತಿಲ್ಲ.

ಕುಟುಂಬ ರಾಜಕಾರಣವನ್ನು ದೊಡ್ಡ ಧ್ವನಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರೋಧಿಸುತ್ತಲೇ ಬಂದಿದ್ದಾರೆ. ಈ ಚುನಾವಣೆಯಲ್ಲಿ ಮೈತ್ರಿಕೂಟದ ಅಭ್ಯರ್ಥಿಗಳಾಗಿ ಮಾಜಿ ಮುಖ್ಯಮಂತ್ರಿಗಳ ಮಕ್ಕಳನ್ನೇ ಕಣಕ್ಕೆ ತಳ್ಳಲಾಗಿತ್ತು. ಆ ಪಕ್ಷದ ಮಟ್ಟಿಗೆ ಕುಟುಂಬ ರಾಜಕಾರಣವನ್ನು ಮತದಾರರು ತಿರಸ್ಕರಿಸಿದ್ದಾರೆ. ಕಾಂಗ್ರೆಸ್‌ನ ವಿಷಯದಲ್ಲಿ ಕುಟುಂಬಕ್ಕೆ ಮಣೆ ಹಾಕಿ, ಸಂಸದ ಇ. ತುಕಾರಾಂ ಪತ್ನಿ ಅನ್ನಪೂರ್ಣಾ ಅವರನ್ನು ಗೆಲ್ಲಿಸಿದ್ದಾರೆ.

ಒಕ್ಕಲಿಗ ಸಮುದಾಯದ ಮತಗಳೆಲ್ಲ ತಮ್ಮ ಜೇಬಿನಲ್ಲಿಯೇ ಇವೆ ಎಂಬ ಜೆಡಿಎಸ್ ನಾಯಕರ ಲೆಕ್ಕವನ್ನೂ ಚುನಾವಣೆ ಹುಸಿಗೊಳಿಸಿದೆ. ಚನ್ನಪಟ್ಟಣದಲ್ಲಿ ಒಕ್ಕಲಿಗ ಮತಗಳೆಲ್ಲ ಯೋಗೇಶ್ವರ್‌ಗೆ ಬಿದ್ದವೆಂದು ಹೇಳಲಾಗದು. ಒಕ್ಕಲಿಗರು ನಿರ್ಣಾಯಕವಾಗಿರುವ ಕ್ಷೇತ್ರದಲ್ಲಿ ಅದೇ ಸಮುದಾಯದ ಯೋಗೇಶ್ವರ್ ಗೆದ್ದಿದ್ದಾರೆ.

ಬಿಎಸ್‌ವೈ ನಾಯಕತ್ವಕ್ಕೆ ಧಕ್ಕೆ: ಬಿ.ಎಸ್. ಯಡಿಯೂರಪ್ಪ ಲಿಂಗಾಯತರ ಪ್ರಶ್ನಾತೀತ ನಾಯಕರಲ್ಲ ಎಂಬುದನ್ನು ಈ ಚುನಾವಣೆ ಧೃಢಪಡಿಸಿದೆ. ಲಿಂಗಾಯತರ ಮತಗಳೂ ನಿರ್ಣಾಯಕರಾಗಿರುವ ಸಂಡೂರು, ಶಿಗ್ಗಾವಿಗಳಲ್ಲಿ ಬಿಜೆಪಿ ಸೋತಿದೆ. ಶಿಗ್ಗಾವಿಯಲ್ಲಿ ಪಂಚಮಸಾಲಿ ಸಮುದಾಯದ ಮತಗಳು ಭರತ್‌ಗೆ ಕೈಕೊಟ್ಟಂತೆ ಕಾಣಿಸುತ್ತಿದೆ.

ಬಿಜೆಪಿಯಲ್ಲಿನ ಬಣ ಜಗಳ ಎರಡೂ ಕ್ಷೇತ್ರದಲ್ಲಿ ಪರಿಣಾಮ ಬೀರಿದೆ. ಕಾಂಗ್ರೆಸ್ ನಾಯಕರು ಸಂಘಟಿತ ಪ್ರಯತ್ನದಿಂದ ಚುನಾವಣೆ ಎದುರಿಸಿದರು.

ವಿಜಯೇಂದ್ರಗೆ ತೀವ್ರ ಹಿನ್ನಡೆ: ಬಿಜೆಪಿ ರಾಜ್ಯ ಘಟಕದ ಚುಕ್ಕಾಣಿ ಹಿಡಿದ ಬಳಿಕ ಮೊದಲ ಬಾರಿಗೆ ಎದುರಿಸಿದ ಉಪ ಚುನಾವಣೆಯಲ್ಲಿ ಬಿ.ವೈ. ವಿಜಯೇಂದ್ರ ಮುಗ್ಗರಿಸಿದ್ದಾರೆ.

ಫಲಿತಾಂಶದ ಬಳಿಕ ಪಕ್ಷಗಳ ಬಲಾಬಲ

224	ವಿಧಾನಸಭೆಯ ಒಟ್ಟು ಬಲ	
137	ಸಭಾಧ್ಯಕ್ಷ ಸೇರಿ ಕಾಂಗ್ರೆಸ್	
65	ಬಿಜೆಪಿ	
18	ಜೆಡಿಎಸ್	
2	ಪಕ್ಷೇತರ	
1	ಕೆಆರ್‌ಪಿಪಿ	
1	ಸರ್ವೋದಯ ಕರ್ನಾಟಕ	

ಸಚಿವ ಜಮೀರ್ ಯತ್ನಕ್ಕೆ ಬಲ

ಶಿಗ್ಗಾವಿಯಲ್ಲಿ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ಕೊಡಬೇಕು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಸೇರಿದಂತೆ ಆ ಸಮುದಾಯದ ಮುಖಂಡರು ಪಟ್ಟು ಹಿಡಿದಿದ್ದರು. ಈ ಕ್ಷೇತ್ರದ ಜವಾಬ್ದಾರಿ ಹೊತ್ತುಕೊಂಡ ಜಮೀರ್, ಟಿಕೆಟ್ ಆಕಾಂಕ್ಷಿಯಾಗಿದ್ದ ಅಜ್ಜಂಪೀರ್ ಖಾದ್ರಿಯವರನ್ನು ಜತೆಗಿಟ್ಟುಕೊಂಡು, ಪಠಾಣ ಅವರನ್ನು ಗೆಲ್ಲಿಸಿಕೊಂಡು ಬಂದಿದ್ದಾರೆ. ಬೊಮ್ಮಾಯಿ ಬೆಂಬಲಕ್ಕೆ ಇದ್ದ ಮುಸ್ಲಿಂ ಮತಗಳನ್ನು ಕಾಂಗ್ರೆಸ್ ಕಡೆಗೆ ತಿರುಗಿಸಿದ್ದು, ಹಿಂದುಳಿದವರ ಮತಗಳ ಜತೆಗೆ ಮುಸ್ಲಿಂ ಮತಗಳು ಕೂಡುವಂತೆ ಮಾಡಿದ್ದು ಫಲ ಕೊಟ್ಟಿದೆ.

ಚನ್ನಪಟ್ಟಣದಲ್ಲಿ ಕುಮಾರಸ್ವಾಮಿಯವರನ್ನು 'ಕರಿಯ' ಎಂದು ಕರೆದಿದ್ದ ಜಮೀರ್, ಮೈ ಬಣ್ಣವನ್ನು ಅವಹೇಳನ ಮಾಡುವ ಕೆಲಸ ಮಾಡಿದ್ದರು. ಇದು ಬಾರಿ ಹೊಡೆತ ನೀಡುತ್ತದೆ ಎಂದು ಅಂದಾಜಿಸಲಾಗಿತ್ತು. ಅದಕ್ಕೆ ಪ್ರತಿಯಾಗಿ ಸಮುದಾಯ ಮತಗಳು ಚದುರದಂತೆ ಜಮೀರ್ ತಂತ್ರ ಹೆಣೆದರು. ಇದು ಎರಡು ಕ್ಷೇತ್ರಗಳು ಕಾಂಗ್ರೆಸ್ ದಕ್ಕಲು ನೆರವಾಯಿತು.

ಸೈದ್ಧಾಂತಿಕ ಸ್ಥಿತ್ಯಂತರ; ಸೋಲು–ಗೆಲುವು

• ಮೃತ್ಯುಂಜಯ ಬೋಸ್

ಮುಂಬೈ: ಮಹಾರಾಷ್ಟ್ರದಲ್ಲಿ ಶಿವಸೇನಾ–ಬಿಜೆಪಿ ಮೈತ್ರಿಕೂಟದ ಸರ್ಕಾರವಿದ್ದ ಕಾಲವದು (1995–99). ಶಿವಸೇನಾ ಸ್ಥಾಪಕ ಬಾಳಾ ಸಾಹೇಬ್ ಠಾಕ್ರೆ ಅವರು, ಅವರೇ ಹೇಳುತ್ತಿದ್ದ ಹಾಗೆ 'ರಿಮೋಟ್ ಕಂಟ್ರೋಲ್' ಮೂಲಕ ಸರ್ಕಾರದ ಮೂಗುದಾರವನ್ನು ಹಿಡಿದುಕೊಂಡಿರು-ತ್ತಿದ್ದರು.

ಇನ್ನು ಅಟಲ್ ಬಿಹಾರಿ ವಾಜಪೇಯಿ ಹಾಗೂ ಲಾಲ್‌ಕೃಷ್ಣ ಅಡ್ವಾಣಿ ಅವರ ಜೋಡಿಯು ಬಿಜೆಪಿಯನ್ನು ಮುನ್ನ-ಡೆಸುತ್ತಿದ್ದರು. ಇವರ ಕಟ್ಟಾಳುಗಳಾಗಿ ಪ್ರಮೋದ್ ಮಹಾಜನ್ ಹಾಗೂ ಗೋಪಿನಾಥ ಮುಂಡೆ ಅವರಿದ್ದರು. ಈ ಇಬ್ಬರಿಗೂ ಬಾಳಾ ಸಾಹೇಬ್ ಅವರ ಜೊತೆ ನೇರ ಸಂಪರ್ಕವಿತ್ತು.

ಬಾಳಾ ಸಾಹೇಬ್ ಠಾಕ್ರೆ ಅವರ ಮರಣದ ನಂತರ ಉದ್ಧವ್ ಠಾಕ್ರೆ ಅವರು ಶಿವಸೇನಾದ ಕಾರ್ಯಕಾರಿ ಅಧ್ಯಕ್ಷರಾದ ಮೇಲೆ ಬದಲಾವಣೆಗಳು ಆಗಲಾರಂಭಿಸಿದವು. ಪಕ್ಷದೊಳಗೆ ಹೊಸ ಹೊಸ ವಿಚಾರಗಳನ್ನು ಪರಿಚಯಿಸಿದರು. 2014–19ರ ಐದು ವರ್ಷಗಳಲ್ಲಿ ಶಿವಸೇನಾ ಹಾಗೂ ಬಿಜೆಪಿಯ ಸಂಬಂಧವೂ ಹಳಸಿತು.

2019ರ ವಿಧಾನಸಭೆ ಚುನಾವಣೆ ಬಳಿಕವಂತೂ ಬಿಜೆಪಿಯ ಜೊತೆಗಿನ 30 ವರ್ಷಗಳ ಮೈತ್ರಿಯನ್ನು ಉದ್ಧವ್ ಕಡಿದುಕೊಂಡರು. ಕಾಂಗ್ರೆಸ್–ಎನ್‌ಸಿಪಿ ಪಕ್ಷದೊಂದಿಗೆ ಸೇರಿ ಸರ್ಕಾರ ರಚಿಸಿ ಮುಖ್ಯಮಂತ್ರಿಯಾದರು. ಉದ್ಧವ್ ಅವರ ಈ ನಿರ್ಧಾರವು ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ಅಸಮಾಧಾನಕ್ಕೆ ಕಾರಣವಾಯಿತು.

ಯಾರದ್ದು ನೈಜ ಶಿವಸೇನಾ?

ನಿಜವಾದ ಶಿವಸೇನಾ ಯಾರದ್ದು, ಯಾರು ಬಾಳಾ ಸಾಹೇಬ್ ಅವರ ಪರಂಪರೆಯನ್ನು ಮುಂದುವರೆಸಿದ್ದಾರೆ ಎನ್ನುವುದು ಈ ಫಲಿತಾಂಶದಲ್ಲಿ ಪ್ರತಿಫಲಿಸಿದೆ

ಏಕನಾಥ ಶಿಂದೆ
ಮುಖ್ಯಮಂತ್ರಿ

ನಾನು ಸುಪ್ರೀಂ ಕೋರ್ಟ್‌ನ ತೀರ್ಪಿಗಾಗಿ ಕಾಯುತ್ತಿದ್ದೇನೆ. ಚುನಾವಣೆ ಮುಗಿದಿದೆ. ಆದರೂ ತೀರ್ಪು ಹೊರಬರದಿರುವುದು ನನ್ನಲ್ಲಿ ಆಶ್ಚರ್ಯ ಮೂಡಿಸಿದೆ

ಉದ್ಧವ್ ಠಾಕ್ರೆ
ಶಿವಸೇನಾ (ಉದ್ಧವ್‌ಬಣ) ಮುಖ್ಯಸ್ಥ

'ರಿಮೋಟ್ ಕಂಟ್ರೋಲ್'ನಿಂದ 'ಡೈರೆಕ್ಟ್ ಕಂಟ್ರೋಲ್'ವರೆಗೆ

ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿ ಆದ ಬಳಿಕ, ಬಾಳಾ ಸಾಹೇಬ್ ಠಾಕ್ರೆ ಅವರ 'ರಿಮೋಟ್ ಕಂಟ್ರೋಲ್' ಕಾರ್ಯವಿಧಾನವು 'ಡೈರೆಕ್ಟ್ ಕಂಟ್ರೋಲ್' ಕಾರ್ಯವಿಧಾನಕ್ಕೆ ಬದಲಾಯಿತು. ಕಳೆದ ಐದು ವರ್ಷಗಳಲ್ಲಿ ಠಾಕ್ರೆ ಕುಟುಂಬವು ಅಸ್ತಿತ್ವ ಉಳಿಸಿಕೊಳ್ಳುವ ಸಂಘರ್ಷದಲ್ಲಿದೆ. ಏಕನಾಥ ಶಿಂದೆ ಅವರು ಸರ್ಕಾರವನ್ನು ಬೀಳಿಸಿ, ತಮ್ಮದೇ ನಿಜವಾದ ಶಿವಸೇನೆ ಎಂದು ಗಟ್ಟಿ ದನಿಯಲ್ಲಿ ವಾದಿಸುತ್ತಿರುವಾಗಲೇ ಉದ್ಧವ್ ಅವರು ತಮ್ಮ ಬಣದ ಶಿವಸೇನಾವನ್ನು ಮುನ್ನಡೆಸುತ್ತಿದ್ದಾರೆ. ಶಿಂದೆ ಅವರದ್ದೇ ನಿಜವಾದ ಶಿವಸೇನೆ ಎಂದು ಸ್ಪೀಕರ್ ಮುದ್ರೆ ಒತ್ತಿದ್ದಾರೆ. ಆದರೆ, ಈ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ.

ಉದ್ಧವ್ ಬಣ: ಒಗ್ಗಟ್ಟು ಕಷ್ಟಸಾಧ್ಯ

'ಈ ವಿಧಾನಸಭಾ ಫಲಿತಾಂಶದ ಕಾರಣದಿಂದ ಉದ್ಧವ್ ಠಾಕ್ರೆ ಅವರಿಗೆ ತಮ್ಮ ಪಕ್ಷದ ಎಲ್ಲರನ್ನೂ ಒಗ್ಗಟ್ಟಿನಿಂದ ಇರಿಸಿಕೊಂಡು ಪಕ್ಷವನ್ನು ಮುನ್ನಡೆಸುವುದು ಕಷ್ಟಸಾಧ್ಯ-ವಾಗಬಹುದು' ಎನ್ನುತ್ತಾರೆ ರಾಜಕೀಯ ವಿಶ್ಲೇಷಕ ಪ್ರಕಾಶ್ ಅಂಕೋಲ್ಕರ್.

ಫಲಿತಾಂಶವು ಉದ್ಧವ್ ಠಾಕ್ರೆ ಅವರಿಗೆ ತೀವ್ರ ಹಿನ್ನಡೆಯನ್ನೇ ಉಂಟುಮಾಡಿದೆ. ತೀವ್ರ ಮುಖಭಂಗವೂ ಆಗಿದೆ. ಇಂಥ ಹೊತ್ತಿನಲ್ಲಿ ಠಾಕ್ರೆ ಅವರು ಮತ್ತೊಮ್ಮೆ ಎದ್ದು ಬರುವುದು ಕಷ್ಟವಾಗಬಹುದು. ಉದ್ಧವ್ ಬಣದ ಶಾಸಕರನ್ನು ಏಕನಾಥ ಶಿಂದೆ ಅವರು ಸಂಪರ್ಕಿಸಬಹುದು. ಮುಂದಿನ ದಿನಗಳಲ್ಲಿ ಉದ್ಧವ್ ಬಣದ ಶಾಸಕರು ಬೇರೆಯದೇ ನಿರ್ಧಾರವನ್ನು ತೆಗೆದುಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಉದ್ಧವ್ ಅವರ ಮಗ ಆದಿತ್ಯ ಠಾಕ್ರೆ ಅವರು ವರ್ಲಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಹೇಗೊ ಗೆಲುವು ಸಾಧಿಸಿದ್ದಾರೆ. ಆದಿತ್ಯ ಅವರ ತಾಯಿಯ ಸಂಬಂಧಿಯ ಮಗ ವರುಣ್ ಸರ್ದೇಸಾಯಿ ಅವರೂ ಪೂರ್ವ ಬಾಂದ್ರಾ ಕ್ಷೇತ್ರದಿಂದ ಜಯಗಳಿಸಿದ್ದಾರೆ.



ಸೋಲು, ಅಸ್ತಿತ್ವದ ಪ್ರಶ್ನೆ

ಶರದ್ ಪವಾರ್

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಬಣವು ಲೋಕಸಭಾ ಚುನಾವಣೆಯಲ್ಲಿ ಭರ್ಜರಿ ಜಯಗಳಿಸಿದ ಐದು ತಿಂಗಳ ಅಂತರದಲ್ಲೇ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿದೆ. ಐದು ದಶಕದಿಂದ ಮರಾಠ ರಾಜಕಾರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಈ ಹಿರಿಯ ನೇತಾರನಿಗೆ ದೊಡ್ಡ ಹಿನ್ನಡೆಯಾಗಿದೆ.

ಫಲಿತಾಂಶದ ಬೆನ್ನಲ್ಲೇ, ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಬಣದ ಭವಿಷ್ಯದ ರಾಜಕೀಯದ ಕುರಿತು ಹಲವು ಪ್ರಶ್ನೆಗಳು ಎದ್ದಿವೆ. 2023ರ ಜುಲೈನಲ್ಲಿ ಎನ್‌ಸಿಪಿ ವಿಭಜಿಸಿ, 'ಮಹಾಯುತಿ' ಒಕ್ಕೂಟಕ್ಕೆ ಸೇರಿ ಉಪಮುಖ್ಯಮಂತ್ರಿಯಾದ ಅಜಿತ್ ಪವಾರ್ ಅವರೇ ಚಿಕ್ಕಪ್ಪನ ಮುಂದಿನ ರಾಜಕೀಯ ಉತ್ತರಾಧಿಕಾರಿ ಎಂದು ಮತದಾರರು ತೀರ್ಪು ನೀಡಿದ್ದಾರೆ.

ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯು 59 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, 41 ವಿಧಾನಸಭಾ ಕ್ಷೇತ್ರಗಳಲ್ಲಿ ಜಯಗಳಿಸಿದೆ. ಶರದ್ ಪವಾರ್ ನೇತೃತ್ವದ ಎನ್‌ಸಿಪಿ 86 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, 10 ಕ್ಷೇತ್ರಗಳಲ್ಲಿ ಗೆಲುವು ಪಡೆದಿದೆ.

ಮುಖಭಂಗ: ಎಂವಿಎ ಒಕ್ಕೂಟ ಸ್ಥಾಪನೆಯ ಹಿಂದಿನ ರೂವಾರಿ ಶರದ್ ಪವಾರ್. ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ 48 ಲೋಕಸಭಾ ಕ್ಷೇತ್ರಗಳ ಪೈಕಿ 30ರಲ್ಲಿ ಎಂವಿಎ ಗೆಲುವು ಪಡೆದಿತ್ತು. ಆದರೆ, ವಿಧಾನಸಭಾ ಚುನಾವಣೆಯಲ್ಲಿ ಮತದಾರರು ಭಿನ್ನ ತೀರ್ಪು ನೀಡಿದ್ದಾರೆ.

ವೈಯಕ್ತಿಕವಾಗಿಯೂ ಶರದ್ ಪವಾರ್ ಹಿನ್ನಡೆ ಕಂಡಿದ್ದಾರೆ. ಬಾರಾಮತಿ ವಿಧಾನಸಭಾ ಕ್ಷೇತ್ರದಲ್ಲಿ ಉಪಮುಖ್ಯಮಂತ್ರಿ, ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರು ಒಂದು ಲಕ್ಷ ಮತಗಳ ಅಂತರದಿಂದ ಸಂಬಂಧಿ ಯುಗೇಂದ್ರ ಪವಾರ್ ಅವರನ್ನು ಮಣಿಸಿದ್ದಾರೆ.

57 ವರ್ಷದ ರಾಜಕೀಯ ಜೀವನದಲ್ಲಿ ಶರದ್ ಪವಾರ್ ಅವರಿಗೆ ಬಾರಾಮತಿ ರಾಜಕೀಯ ಅಖಾಡವಾದ ಕ್ಷೇತ್ರ. ಅಲ್ಲಿಂದ ಶಾಸಕರಾಗಿ, ಸಂಸದರಾಗಿಯೂ ಆಯ್ಕೆಯಾಗಿದ್ದರು. ಈಗ ರಾಜ್ಯಸಭಾ ಸದಸ್ಯರಾ-ಗಿದ್ದು, ಮುಂದಿನ ವರ್ಷ ಸಂಸತ್ ಸದಸ್ಯತ್ವದ ಅವಧಿ ಮುಗಿಯಲಿದೆ. ಆನಂತರ ಚುನಾವಣಾ ರಾಜಕೀಯದಿಂದ ದೂರ ಸರಿಯುವುದಾಗಿ ಚುನಾವಣಾ ಪ್ರಚಾರದಲ್ಲಿ ಅವರು ಸುಳಿವು ನೀಡಿದ್ದರು.

ನಾಲ್ಕು ಬಾರಿ ಮುಖ್ಯಮಂತ್ರಿ ಹಾಗೂ ಎರಡು ಅವಧಿಗೆ ಕೇಂದ್ರ ಸಚಿವರಾಗಿರುವ ಶರದ್ ಪವಾರ್ ಅವರ ರಾಜಕೀಯ ಮುಸ್ಸಂಜೆಯಲ್ಲಿ ಅವರ ಪಕ್ಷದ ಭವಿಷ್ಯವು ಅನಿಶ್ಚಿತತೆಯತ್ತ ವಾಲಿದೆ.

ಮಹಾರಾಷ್ಟ್ರ ಸೋಲು ಅನಿರೀಕ್ಷಿತವಾಗಿದೆ. ಎಂವಿಎಗೆ ಮತ ನೀಡಿದ ಜನತೆಗೆ ಕೃತಜ್ಞತೆಗಳು. ಬಹುದೊಡ್ಡ ಜನಾದೇಶ ನೀಡಿದ ಜಾರ್ಖಂಡ್ ಮತದಾರರಿಗೆ ಹಾಗೂ ನಮ್ಮ ಗೆಲುವಿಗಾಗಿ ಶ್ರಮಿಸಿದ ಎಲ್ಲ ಕಾರ್ಯಕರ್ತರಿಗೂ ಧನ್ಯವಾದಗಳು

ರಾಹುಲ್ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ

ಮಹಾರಾಷ್ಟ್ರ ಚುನಾವಣಾ ಫಲಿತಾಂಶವು ನಮ್ಮ ಅಭಿವೃದ್ಧಿ ಕಾರ್ಯಗಳು ಹಾಗೂ ಮಾದರಿ ಆಡಳಿತಕ್ಕೆ ಸಿಕ್ಕ ಗೆಲುವು. ರಾಜ್ಯದ ಅಭಿವೃದ್ಧಿಗೆ ನಮ್ಮ ಕೊಡುಗೆಗೂ ಸಂದ ಜಯ. ಕಾಂಗ್ರೆಸ್‌ನ ಸುಳ್ಳಿಗೆ ಆಗಿರುವ ಸೋಲು

ನರೇಂದ್ರ ಮೋದಿ, ಪ್ರಧಾನಿ

ಸೊರೇನ್ ದಂಪತಿ ಛಲ ಜೆಎಂಎಂಗೆ ಗೆಲುವಿನ ಫಲ

ರಾಂಚಿ (ಪಿಟಿಐ): ಜಾರ್ಖಂಡ್ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಹೇಮಂತ್ ಸೊರೇನ್ ದಂಪತಿ ಜೆಎಂಎಂ ಪಕ್ಷವನ್ನು ಗೆಲುವಿನ ದಡ ಮುಟ್ಟಿಸುವ ಮೂಲಕ ತಮ್ಮ ಟೀಕಾಕಾರರಿಗೆ ತಿರುಗೇಟು ನೀಡಿದ್ದಾರೆ. 'ಇಂಡಿಯಾ' ಮೈತ್ರಿಕೂಟದ ಭಾಗವಾದ ಜೆಎಂಎಂ ಸತತ ಎರಡನೇ ಅವಧಿಗೆ ಅಧಿಕಾರದ ಚುಕ್ಕಾಣಿ ಹಿಡಿಯುವಂತೆ ಮಾಡಿದ್ದಾರೆ.

ಚುನಾವಣೆ ಪ್ರಚಾರದ ವೇಳೆ, ಜೆಎಂಎಂ ಮುಖ್ಯಸ್ಥ ಹೇಮಂತ್ ಸೊರೇನ್ ಹಾಗೂ ಪತ್ನಿ ಕಲ್ಪನಾ ಸೊರೇನ್ ಅವರನ್ನು ವಿರೋಧ ಪಕ್ಷ ಬಿಜೆಪಿಯು 'ಬಂಟಿ ಔರ್ ಬಬ್ಲಿ' ಎಂದು ಮೂದಲಿಸುತ್ತಿತ್ತು. ಕಲ್ಪನಾ ಅವರನ್ನು 'ಹೆಲಿಕಾಪ್ಟರ್ ಮೇಡಂ' ಎಂದು ಟೀಕಿಸುವ ಮೂಲಕ ಅವರು ಗಂಡೆ ವಿಧಾನಸಭಾ ಕ್ಷೇತ್ರಕ್ಕೆ ಹೊರಗಿನಿಂದ ಬಂದವರು ಎಂದು ಕೂಡ ವಾಗ್ದಾಳಿ ನಡೆಸಿತ್ತು. ಅದನ್ನು ಸೊರೇನ್ ದಂಪತಿ ಮೆಟ್ಟಿ ನಿಂತಿದ್ದಾರೆ.

ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇತ್ತು. ಅದರ ಲಾಭ ಪಡೆದು, ಸರ್ಕಾರ ರಚನೆಗೆ ಅಗತ್ಯವಿರುವಷ್ಟು ಸ್ಥಾನಗಳನ್ನು ಗೆಲ್ಲುವಲ್ಲಿ ಬಿಜೆಪಿ ವಿಫಲವಾಗಿದೆ.

ಹೇಮಂತ್ ಅವರು ಬರ್ಹೈತ್ ಕ್ಷೇತ್ರದಿಂದ, ಪತ್ನಿ ಕಲ್ಪನಾ ಸೊರೇನ್ ಅವರು ಗಂಡೆ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ತಮಗೆ ಎದುರಾಗಿದ್ದ ಸವಾಲುಗಳನ್ನು ಮೆಟ್ಟಿನಿಂತ ಸೊರೇನ್ ದಂಪತಿ, ಪಕ್ಷವನ್ನು ಗೆಲುವಿನ ದಡ ಮುಟ್ಟಿಸಿದ್ದಾರೆ.

ಭೂ ಹಗರಣದ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಜನವರಿ 31ರಂದು ಹೇಮಂತ್ ಸೊರೇನ್ ಅವರನ್ನು ಬಂಧಿಸಿತ್ತು.

ಈ ಸಂಗತಿಯನ್ನೇ ಕಲ್ಪನಾ ಅವರು ಸವಾಲಾಗಿ ಸ್ವೀಕರಿಸಿದರು. ಪತಿಯ ಬಂಧನವಾದ ನಂತರ ಪಕ್ಷ ಸಂಘಟನೆಗೆ ಧುಮುಕಿದರು. ವಿಧಾನಸಭೆಗೆ ಚುನಾವಣೆ ಘೋಷಣೆಯಾದ ನಂತರ ರಾಜ್ಯದಲ್ಲಿ 200ರಷ್ಟು ರ‍್ಯಾಲಿಗಳನ್ನು ಆಯೋಜಿಸಿದ ಸೊರೇನ್ ದಂಪತಿ, ಪಕ್ಷದ ಪರವಾಗಿ ಅನುಕಂಪದ ಅಲೆ ಸೃಷ್ಟಿಯಾಗುವಂತೆ ಹಾಗೂ ಬುಡಕಟ್ಟು ಸಮುದಾಯದ ಮತಗಳು ಹಂಚಿಹೋಗದಂತೆ ನೋಡಿಕೊಂಡಿದ್ದಾರೆ.

ಹೇಮಂತ್ ಅವರು ಜೈಲಿನಿಂದ ಬಿಡುಗಡೆಗೊಂಡ ನಂತರ ಕಂಡುಬಂದ ರಾಜಕೀಯ ಬೆಳವಣಿಗೆಗಳಲ್ಲಿ, ನಾಯಕರಾದ ಚಂಪೈ ಸೊರೇನ್, ಸೀತಾ ಸೊರೇನ್ ಹಾಗೂ ಲೊಬಿನ್ ಹೆಮ್‌ಬ್ರೊಮ್ ಅವರು ಜೆಎಂಎಂ ತೊರೆದು, ಬಿಜೆಪಿ ಸೇರಿದರು. ಶಾಸಕರಾದ ನಳಿನ್ ಸೊರೇನ್ ಹಾಗೂ ಜೋಬಾ ಮಾಝಿ ಅವರು ಲೋಕಸಭೆಗೆ ಆಯ್ಕೆಯಾದರು. ಈ ಬೆಳವಣಿಗೆಗಳು ಒಡ್ಡಿದ್ದ ಸವಾಲನ್ನು ಕೂಡ ಸೊರೇನ್ ದಂಪತಿ ಮೆಟ್ಟಿ ನಿಂತು, ಗೆಲುವಿನ ನಗೆ ಬೀರಿದ್ದಾರೆ.

ಹೇಮಂತ್ ಮತ್ತು ಕಲ್ಪನಾ

ಹಲವು ಭರವಸೆ: ಪ್ರಚಾರದ ವರಸೆ

ಜೆಎಂಎಂ ಮುಖಂಡರು ಹಲವಾರು ಕಲ್ಯಾಣ ಕಾರ್ಯಕ್ರಮಗಳ ಕುರಿತು ಪ್ರಚಾರದ ವೇಳೆ ಭರವಸೆ ನೀಡಿದ್ದರು. ವಿರೋಧ ಪಕ್ಷಗಳ ನಾಯಕರನ್ನು ಹಣಿಯಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಇ.ಡಿ ಮತ್ತು ಸಿಬಿಐಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಎಂಬ ಆರೋಪ ಮಾಡಿದರು.

'ನನ್ನ ವಿರುದ್ಧ ದುರುದ್ದೇಶಪೂರಿತ ಪ್ರಚಾರ ನಡೆಸುವುದಕ್ಕಾಗಿ ಬಿಜೆಪಿ ₹500 ಕೋಟಿಗೂ ಹೆಚ್ಚು ಹಣ ಖರ್ಚು ಮಾಡುತ್ತಿದೆ' ಎಂದು ಹೇಮಂತ್ ಸೊರೇನ್ ಆರೋಪಿಸಿದ್ದರು. ಈ ಎಲ್ಲ ಅಂಶಗಳು ಜಾರ್ಖಂಡ್ ಮತದಾರರು ಜೆಎಂಎಂ ಪರ ವಾಲುವಂತೆ ಮಾಡಿರುವಂತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಎನ್‌ಡಿಎ ಘಟಾನುಘಟಿ ನಾಯಕರು ಪ್ರಚಾರ ನಡೆಸಿದ್ದರು. ಜೆಎಂಎಂ ನೇತೃತ್ವದ ಮೈತ್ರಿಕೂಟದ ವಿರುದ್ಧ ಭ್ರಷ್ಟಾಚಾರ, ನುಸುಳುಕೋರರಿಗೆ ನೆರವು ನೀಡುತ್ತಿರುವ ಆರೋಪ ಮಾಡಿದ್ದರು.

ಹೇಮಂತ್ ಸೊರೇನ್ ಜೈಲಿನಿಂದ ಬಿಡುಗಡೆಗೊಂಡ ನಂತರ, ಚಂಪೈ ಸೊರೇನ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದನ್ನೇ ಬಿಜೆಪಿ ಪಾಳಯ ಪ್ರಚಾರದ ಪ್ರಮುಖ ಅಸ್ತ್ರವನ್ನಾಗಿ ಮಾಡಿಕೊಂಡಿತ್ತು. ಚಂಪೈ ಅವರಂತಹ ಬುಡಕಟ್ಟು ನಾಯಕನಿಗೆ ಹೇಗೆ ಅವಮಾನ ಮಾಡಲಾಗಿದೆ ಎಂಬುದನ್ನೇ ಪ್ರಮುಖ ವಿಷಯವನ್ನಾಗಿ ಮಾಡಿತ್ತು.



ಜಾರ್ಖಂಡ್

ಗೆದ್ದ ಪ್ರಮುಖರು

ಪಕ್ಷ	ನಾಯಕರು
ಜೆಎಂಎಂ	ಹೇಮಂತ್ ಸೊರೇನ್, ಕಲ್ಪನಾ ಸೊರೇನ್, ಬಸಂತ್ ಸೊರೇನ್, ರಾಮದಾಸ್ ಸೊರೇನ್
ಬಿಜೆಪಿ	ಬಾಬುಲಾಲ್ ಮರಾಂಡಿ, ಚಂಪೈ ಸೊರೇನ್,
ಕಾಂಗ್ರೆಸ್	ರಾಮೇಶ್ವರ ಉರಾಂವ್

ಸೋತ ಪ್ರಮುಖರು

ಪಕ್ಷ	ನಾಯಕರು
ಜೆಎಂಎಂ	ಮಹುವಾ ಮಾಜಿ
ಬಿಜೆಪಿ	ಬಾಬುಲಾಲ್ ಸೊರೇನ್, ಮೀರಾ ಮುಂಡಾ, ಗಮ್ಲಿಯೇಲ್ ಹೆಮ್‌ಬ್ರೊಮ್, ಸೀತಾ ಸೊರೇನ್

ಮಹಾರಾಷ್ಟ್ರ

ಗೆದ್ದ ಪ್ರಮುಖರು

ಪಕ್ಷ	ನಾಯಕರು
ಶಿವಸೇನಾ (ಶಿಂದೆ)	ಏಕನಾಥ ಶಿಂದೆ
ಶಿವಸೇನಾ (ಯುಬಿಟಿ)	ಆದಿತ್ಯ ಠಾಕ್ರೆ
ಬಿಜೆಪಿ	ದೇವೇಂದ್ರ ಫಡಣವೀಸ್, ಚಂದ್ರಶೇಖರ ಬಾವಾಂಕುಳೆ
ಎನ್‌ಸಿಪಿ (ಎ ಪಿ)	ಅಜಿತ್ ಪವಾರ್, ಧನಂಜಯ್ ಮುಂಡೆ, ಛಗನ್ ಭುಜಬಲ್, ಜಯಂತ್ ಪಾಟೀಲ

ಸೋತ ಪ್ರಮುಖರು

ಪಕ್ಷ	ನಾಯಕರು
ಕಾಂಗ್ರೆಸ್	ಪೃಥ್ವಿರಾಜ್ ಚವಾಣ್
ಎನ್‌ಸಿಪಿ (ಎಸ್ ಪಿ)	ಯುಗೇಂದ್ರ ಪವಾರ್
ಎನ್‌ಸಿಪಿ (ಎಪಿ)	ಜೀಶನ್ ಸಿದ್ದೀಕಿ,ನವಾಬ್ ಮಲಿಕ್
ಎಂಎನ್‌ಎಸ್	ಅಮಿತ್ ಠಾಕ್ರೆ
ಶಿವಸೇನಾ (ಶಿಂದೆ)	ಮಿಲಿಂದ್ ದೇವ್ರಾ

'ಗೆಲುವು ಶಂಕಾಸ್ಪದ, ದೊಡ್ಡ ಪಿತೂರಿ'

ಮುಂಬೈ (ಪಿಟಿಐ): 'ಮಹಾರಾಷ್ಟ್ರದಲ್ಲಿ ಮಹಾಯುತಿ ಗೆಲುವಿನ ಹಿಂದೆ 'ದೊಡ್ಡ ಪಿತೂರಿ'ಯಿದ್ದು, ಗೆಲುವು ಶಂಕಾಸ್ಪದವಾಗಿದೆ' ಎಂದು ಶಿವಸೇನಾ (ಯುಬಿಟಿ) ಪಕ್ಷದ ನಾಯಕ, ರಾಜ್ಯಸಭಾ ಸಂಸದ ಸಂಜಯ್ ರಾವುತ್ ಅನುಮಾನ ವ್ಯಕ್ತಪಡಿಸಿದ್ದಾರೆ.

ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಜನರ ತೀರ್ಪು ಫಲಿತಾಂಶದಲ್ಲಿ ವ್ಯಕ್ತವಾಗಿಲ್ಲ. ತಳಮಟ್ಟದಲ್ಲಿ ಹಾಲಿ ಸರ್ಕಾರದ ವಿರುದ್ಧ ಜನರು ಆಕ್ರೋಶ ಹೊಂದಿದ್ದಾರೆ. ಇದರ ಹಿಂದೆ ದೊಡ್ಡ ಪಿತೂರಿ ನಡೆದಿರುವ ಅನುಮಾನವಿದೆ. ಇದು ಮರಾಠಿ 'ಮನೂಸ್' ಅಥವಾ ರೈತರು ನೀಡಿದ ತೀರ್ಪಲ್ಲ. ಇದು ಜನರು ನೀಡಿದ ತೀರ್ಪು ಎಂಬುದನ್ನು ನಾವು ಒಪ್ಪುವುದಿಲ್ಲ, ಗೆಲುವು ಶಂಕಾಸ್ಪಂದವಾಗಿದೆ' ಎಂದು ತಿಳಿಸಿದರು.

'ಈ ಚುನಾವಣೆಯಲ್ಲಿ ಹಣದ ಬಳಕೆ ವ್ಯಾಪಕವಾಗಿದೆ. ಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವ ಪಕ್ಷದ ಎಲ್ಲ ಶಾಸಕರು ಗೆಲ್ಲಲು ಹೇಗೆ ಸಾಧ್ಯ? ದ್ರೋಹವೆಸಗಿದ ಅಜಿತ್ ಪವಾರ್ ಹೇಗೆ ಗೆಲುವು ಪಡೆಯಲು ಸಾಧ್ಯ' ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಮುಖಂಡ ಉದಿತ್ ರಾಜ್ ಅವರೂ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಬಳಸಿಕೊಂಡು ಫಲಿತಾಂಶವನ್ನು ಮಹಾಯುತಿ ತಕ್ಕಂತೆ ಬದಲಿಸಿರುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಡೆಯದ ಮೋದಿ ಮೋಡಿ

ಪಟ್ನಾ: ಜಾರ್ಖಂಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಮಾಂತ್ರಿಕತೆ ಬಿಜೆಪಿ ನೇತೃತ್ವದ ಎನ್‌ಡಿಎಗೆ ಬಲ ತುಂಬಿ, ಗೆಲುವಿನ ದಡ ಮುಟ್ಟಿಸಲು ಯಶಸ್ವಿಯಾಗಿಲ್ಲ.

'ಬಟೇಂಗೆ ತೊ ಕಾಟೇಂಗೆ' (ಒಗ್ಗಟ್ಟಾಗಿರದಿದ್ದರೆ ನಾಶವಾಗಿ ಹೋಗುತ್ತೇವೆ) ಎಂಬ ಘೋಷಣೆ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿ ಬಿಜೆಪಿ ಎಲ್ಲ ಹಿರಿಯ ನಾಯಕರಿಂದ ಕೇಳಿಬಂತು. ಬುಡಕಟ್ಟು ಜನರು ಹಾಗೂ ಮುಸ್ಲಿಮರಲ್ಲಿ ಒಡಕು ಉಂಟುಮಾಡಲು ನಡೆಸಿದ ಈ ತಂತ್ರ ಕೂಡ ಫಲಿಸಲಿಲ್ಲ' ಎಂದು ವಿಶ್ಲೇಷಿಸಲಾಗುತ್ತಿದೆ.

'ಹಣ ಅಕ್ರಮ ವರ್ಗಾವಣೆ ಆರೋಪದಡಿ ಹೇಮಂತ್ ಅವರನ್ನು ಬಂಧಿಸುವ ಮೂಲಕ ತಾನು ಎಂತಹ ರಾಜಕೀಯ ಪ್ರಮಾದ ಮಾಡಿದೆ ಎಂಬುದನ್ನು ಬಿಜೆಪಿಯ ವರಿಷ್ಠರು ಅರಿಯಲಿಲ್ಲ' ಎಂದು ರಾಂಚಿ ಮೂಲದ ರಾಜಕೀಯ ವಿಶ್ಲೇಷಕ ಧರ್ಮವೀರ ಸಿನ್ಹಾ ಹೇಳುತ್ತಾರೆ.

ಜಾರ್ಖಂಡ್ ಗೆಲುವು 'ಮಹಾ' ಸೋಲಿಗೆ ಮದ್ದಾಗದು

ನವದೆಹಲಿ: ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭೆಗಳ ಚುನಾವಣಾ ಫಲಿತಾಂಶಗಳು 'ಇಂಡಿಯಾ' ಮೈತ್ರಿಕೂಟ, ಅದರಲ್ಲೂ ಕಾಂಗ್ರೆಸ್‌ಗೆ ಉತ್ಸಾಹಕ್ಕಿಂತ ಆಘಾತವನ್ನೇ ನೀಡಿವೆ.

ಜಾರ್ಖಂಡ್‌ನಲ್ಲಿ 'ಇಂಡಿಯಾ' ಮೈತ್ರಿಕೂಟಕ್ಕೆ ಸಿಕ್ಕ ಗೆಲುವಿನ ಶ್ರೇಯ ಜೆಎಂಎಂಗೆ ಸಲ್ಲುತ್ತದೆ. ಜಾರ್ಖಂಡ್‌ನ-ಲ್ಲಿನ ಗೆಲುವು, ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಸೇರಿದಂತೆ ಮೈತ್ರಿಕೂಟಕ್ಕೆ ಆಗಿರುವ ಹೀನಾಯ ಸೋಲೆಂಬ ಗಾಯಕ್ಕೆ ಮುಲಾಮು ಆಗುವುದಿಲ್ಲ.

ಈ ಚುನಾವಣೆಯಲ್ಲಿನ ಹಿನ್ನಡೆಗೆ ಏನು ಕಾರಣ ಎಂಬ ಬಗ್ಗೆ ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳ-ಬೇಕಿದೆ.

ಸಂಸತ್‌ನ ಚಳಿಗಾಲದ ಅಧಿವೇಶನದ ಮೇಲೆಯೂ ಈ ಫಲಿತಾಂಶ ಪರಿಣಾಮ ಬೀರುವುದು ಖಚಿತ. ಮಣಿಪುರ ವಿದ್ಯಮಾನ, ಗೌತಮ್ ಅದಾನಿ ವಿರುದ್ಧದ ಲಂಚದ ಆರೋಪಗಳನ್ನು ಮುಂದಿಟ್ಟುಕೊಂಡು ಕೇಂದ್ರ ಸರ್ಕಾರದ ಬೆವರಿಳಿಸಲು ವಿಪಕ್ಷಗಳು ಸಜ್ಜಾಗಿದ್ದವು. ಈಗ, ಈ ಲೆಕ್ಕಾಚಾರ ಉಲ್ಟಾ ಆದರೂ ಅಚ್ಚರಿಪಡಬೇಕಿಲ್ಲ. ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ಕೂಡ ಕಾಂಗ್ರೆಸ್‌ನ ಸಾಧನೆ ಕಳಪೆಯಾಗಿತ್ತು.

ಹೀಗಾಗಿ, ಬಿಜೆಪಿಯನ್ನು ಎದುರಿಸಲು ಕಾಂಗ್ರೆಸ್ ಸಮರ್ಥವಾಗಿಲ್ಲ ಎಂಬ ವಾದ ಮುಂದಿಡುವುದಕ್ಕೆ ಮಿತ್ರಪಕ್ಷಗಳಿಗೆ ಈ ಫಲಿತಾಂಶ ಮತ್ತೊಮ್ಮೆ ಅಸ್ತ್ರ ಒದಗಿಸಿದಂತಾಗಿದೆ.

ಕಾರ್ಪೊರೇಟರ್ ಗಾದಿಯಿಂದ ಸಿ.ಎಂ. ಹಾದಿಯವರೆಗೆ...

ಪ್ರಜಾವಾಣಿ ವಾರ್ತೆ

ಮುಂಬೈ: 'ನಾನು ಆಧುನಿಕ ಅಭಿಮನ್ಯು, ಚಕ್ರವ್ಯೂಹದೊಳಗೆ ನುಗ್ಗುವುದಷ್ಟೇ ಅಲ್ಲ; ಹೊರಬರುವುದೂ ನನಗೆ ಗೊತ್ತು' ಎಂದು ದೇವೇಂದ್ರ ಫಡಣವೀಸ್ ನಗು ತುಳುಕಿಸುತ್ತಾ ಶನಿವಾರ ಹೇಳುವ ಹೊತ್ತಿಗೆ ಬಿಜೆಪಿ ನೇತೃತ್ವದ ಮಹಾಯುತಿ–ಎನ್‌ಡಿಎ ಒಕ್ಕೂಟವು ಚುನಾವಣೆಯಲ್ಲಿ ಭಾರಿ ಮುನ್ನಡೆ ಗಳಿಸಿತ್ತು.

ಚುನಾವಣೆಯಲ್ಲಿ ತಮ್ಮ ಪಾತ್ರ ಏನಾಗಿತ್ತೆಂದು ಹೇಳಲು ದೇವೇಂದ್ರ ಫಡಣವೀಸ್ ಮಹಾಭಾರತದ ಒಂದು ಎಳೆಯನ್ನು ಎತ್ತಿಕೊಂಡರು.

'ನಮ್ಮ ಒಕ್ಕೂಟದವರು, ಕಾರ್ಯಕರ್ತರಿಗೆ ಧನ್ಯವಾದ ಹೇಳುತ್ತೇನೆ. ನನ್ನ ಪಾತ್ರ ಸಣ್ಣದಷ್ಟೆ' ಎಂದು ಅವರು ಪ್ರತಿಕ್ರಿಯಿಸಿದರು.

ಸದ್ಯಕ್ಕೆ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಆಗಿರುವ ಫಡಣವೀಸ್, ಈ ಹಿಂದೆ ಮುಖ್ಯಮಂತ್ರಿಯಾಗಿ ಹಾಗೂ ಅದಕ್ಕೂ ಮೊದಲು ವಿರೋಧ ಪಕ್ಷದ ನಾಯಕರಾಗಿ ಅನುಭವ ಉಳ್ಳವರು.

ಸಾಮಾನ್ಯ ಕುಟುಂಬವೊಂದರಿಂದ ಬಂದ ಫಡಣವೀಸ್ (54) ರಾಜಕೀಯ ಕ್ಷೇತ್ರದಲ್ಲಿ ಕಾರ್ಪೊರೇಟರ್ ಆದಮೇಲೆ ಜನ ವಿಶ್ವಾಸಗಳಿಸಿದರು. 'ದೇವೇಂದ್ರ' ಎನ್ನುವುದು 'ದೇವೇಂದ್ರ ಜೀ' ಎಂದಾಗಿ, ಅದು 'ದೇವೇಂದ್ರ ಭಾವೂ' (ದೇವೇಂದ್ರಣ್ಣ ಎಂಬಂಥ ಧ್ವನಿ) ಎಂದು ಬದಲಾದದ್ದನ್ನು ಕಂಡಿದ್ದೇವೆ. ಸದ್ಯ ಅವರೇ ಮಹಾ-ರಾಷ್ಟ್ರದಲ್ಲಿ ಬಿಜೆಪಿ ಪಾಲಿನ ಕಣ್ಮಣಿ.

'ಮೈ ಸಮಂದರ್ ಹೂಂ...'

'ಮೈ ಸಮಂದರ್ ಹೂಂ, ಲೌಟ್‌ಕರ್ ವಾಪಸ್ ಆವೂಂಗಾ' (ನಾನೊಂದು ಸಮುದ್ರ... ಮರಳಿ ಬರುತ್ತೇನೆ) ಎಂದು ಆಗ ಅವರು ಹೇಳಿದ್ದ ಮಾತು ಜನಪ್ರಿಯವಾಗಿತ್ತು. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ 'ಮೀ ಪುನಃ ಯೇಇನ್' ಎಂಬ ಅವರ ಮಾತಿನ ಕುರಿತು ಗಮನಸೆಳೆದಿದ್ದಾಗ, 'ಹೌದು, ಎರಡು ಪಕ್ಷಗಳನ್ನು ಒಡೆದ ನಂತರ ನಾನು ಮರಳಿದ್ದೇನೆ' ಎಂದು ಉತ್ತರಿಸಿದ್ದರು. ಶಿವಸೇನಾ ಹಾಗೂ ಎನ್‌ಸಿಪಿ ಒಡಕನ್ನು ಉಲ್ಲೇಖಿಸಿ ಅವರು ಹಾಗೆ ಹೇಳಿದ್ದರು.

ಲೋಕಸಭಾ ಚುನಾವಣೆ ನಂತರ ಸೋಲಿನ ಹೊಣೆ ಹೊತ್ತು ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಫಡಣವೀಸ್ ರಾಜೀನಾಮೆ ನೀಡಲು ಮುಂದಾಗಿದ್ದರು. ಬಿಜೆಪಿ ಹೈಕಮಾಂಡ್ ಅದನ್ನು ತಿರಸ್ಕರಿಸಿತ್ತು.

ಸಂಘರ್ಷದ ಹಾದಿಯ ನಾಯಕ

ರಾಂಚಿ (ಪಿಟಿಐ): ಮತ್ತೊಂದು ಅವಧಿಗೆ ಮುಖ್ಯಮಂತ್ರಿ ಪಟ್ಟ ಏರಲಿರುವ ಜೆಎಂಎಂ ನಾಯಕ ಹೇಮಂತ್ ಸೊರೇನ್, ಕಾನೂನು ಹೋರಾಟದಿಂದ ಹಿಡಿದು ಪಕ್ಷದಲ್ಲಿನ ಆಂತರಿಕ ಕಚ್ಚಾಟದವರೆಗೆ ಎದುರಾದ ಸವಾಲುಗಳನ್ನು ಮೆಟ್ಟಿನಿಂತ ಬುಡಕಟ್ಟು ನಾಯಕ ಎಂದೇ ಗುರುತಿಸಿಕೊಳ್ಳುತ್ತಾರೆ.

49 ವರ್ಷದ ಸೊರೇನ್, ಜಾರ್ಖಂಡ್‌ನ ಅತ್ಯಂತ ಕಿರಿಯ ಮುಖ್ಯಮಂತ್ರಿ. ಹಜಾರಿಬಾಗ್ ಸಮೀಪದ ನೆಮ್ರಾ ಗ್ರಾಮದಲ್ಲಿ 1975ರ ಆಗಸ್ಟ್ 10ರಂದು ಜನಿಸಿದ್ದಾರೆ. ಪಟ್ನಾ ಹೈಸ್ಕೂಲ್‌ನಲ್ಲಿ ಇಂಟರ್‌ಮೀಡಿಯೇಟ್ ಪೂರೈಸಿದ ಸೊರೇನ್, ರಾಂಚಿಯ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ಯಲ್ಲಿ ಪ್ರವೇಶ ಪಡೆದರೂ, ಶಿಕ್ಷಣ ಪೂರ್ಣಗೊಳಿಸಿಲ್ಲ.

2009ರಲ್ಲಿ ರಾಜ್ಯಸಭಾ ಸದಸ್ಯರಾದರು. 2010ರಲ್ಲಿ ರಾಜ್ಯಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ, ಬಿಜೆಪಿ ನೇತೃತ್ವದ ಮುಖ್ಯಮಂತ್ರಿ ಅರ್ಜುನ್ ಮುಂಡಾ ಸರ್ಕಾರದಲ್ಲಿ ಡಿಸಿಎಂ ಆಗಿದ್ದರು.

ಈ ಮೈತ್ರಿ ಸರ್ಕಾರ 2012ರಲ್ಲಿ ಪತನಗೊಂಡು, ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ಬಂದಿತ್ತು. ಸೊರೇನ್ ಅವರು ಮತ್ತೆ ರಾಜಕೀಯ ಹೋರಾಟ ಮುಂದುವರಿಸಿ, 2013ರಲ್ಲಿ ರಾಜ್ಯದ ಮುಖ್ಯಮಂತ್ರಿ-ಯಾಗಿ ಅಧಿಕಾರ ವಹಿಸಿಕೊಂಡರು. ಈ ಸರ್ಕಾರವೂ ಬಹಳ ದಿನ ಉಳಿಯಲಿಲ್ಲ. 2014ರಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗ, ಸೊರೇನ್ ವಿರೋಧ ಪಕ್ಷದ ನಾಯಕರಾದರು.

2016ರಲ್ಲಿ ಬಿಜೆಪಿ ಸರ್ಕಾರ, ಛೋಟಾನಾಗ್ಪುರ ಗೇಣಿ ಕಾಯ್ದೆ ಹಾಗೂ ಸಂತಾಲ್ ಪರಗಣ ಗೇಣಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಾದಾಗ, ಸೊರೇನ್ ಬೃಹತ್ ಪ್ರತಿಭಟನೆ ನಡೆಸಿದರು. ಬುಡಕಟ್ಟು ಜನರ ಹಕ್ಕುಗಳಿಗಾಗಿ ನಡೆಸಿದ ಈ ಹೋರಾಟದಿಂದಾಗಿ ಸೊರೇನ್ ಅವರಿಗೆ ಭಾರಿ ಬೆಂಬಲ ದೊರೆಯಿತಲ್ಲದೇ, 2019ರಲ್ಲಿ ಮುಖ್ಯಮಂತ್ರಿಯಾಗಲು ನೆರವಾಯಿತು

ಲೋಕಸಭೆಯ 2, 14 ರಾಜ್ಯಗಳಲ್ಲಿ 48 ವಿಧಾನಸಭೆ ಕ್ಷೇತ್ರಗಳಿಗೆ ಉಪಚುನಾವಣೆ

ಆಡಳಿತ ಪಕ್ಷಗಳಿಗೆ ಗೆಲುವಿನ ಟಾನಿಕ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇರಳ, ಮಹಾರಾಷ್ಟ್ರದಲ್ಲಿ ಲೋಕಸಭೆಯ ತಲಾ ಒಂದು, 14 ರಾಜ್ಯಗಳ 48 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಗಳಲ್ಲಿ ಬಹುತೇಕ ಆಡಳಿತ ಪಕ್ಷಗಳು ಗೆಲುವಿನ ನಗೆ ಬೀರಿವೆ.

ಹಾಲಿ ಸದಸ್ಯರ ರಾಜೀನಾಮೆ ಅಥವಾ ನಿಧನದಿಂದಾಗಿ ಈ ಸ್ಥಾನಗಳು ತೆರವಾಗಿದ್ದವು.

ಕಾಂಗ್ರೆಸ್ ಪಕ್ಷ ಲೋಕಸಭೆಯ ಎರಡೂ ಕ್ಷೇತ್ರ ಗೆದ್ದುಕೊಂಡಿತು. ವಿಧಾನ ಸಭೆಗಳ 48 ಕ್ಷೇತ್ರಗಳಲ್ಲಿ ಎನ್‌ಡಿಎ ಮೈತ್ರಿಕೂಟವು 28, 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು 20 ಕ್ಷೇತ್ರಗಳಲ್ಲಿ ಜಯಗಳಿಸಿದವು.

ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪ್ರಿಯಾಂಕಾ ಗಾಂಧಿ ಗೆಲುವು ಸಾಧಿಸಿದರು. ನಾಂದೇಡ್‌ನಲ್ಲಿ ಕಾಂಗ್ರೆಸ್ ಸದಸ್ಯ ವಸಂತ ಚವಾಣ್ ನಿಧನದಿಂದಾಗಿ ಉಪ ಚುನಾವಣೆ ನಡೆಯಿತು. ಇಲ್ಲಿ ವಸಂತ ಚವಾಣ್ ಅವರ ಪುತ್ರ ರವೀಂದ್ರ ಕಣದಲ್ಲಿದ್ದರು.

ಕಡೆಯವರೆಗೂ ಕುತೂಹಲ ಮೂಡಿಸಿದ್ದ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಂತಿಮವಾಗಿ ಗೆಲುವಿನ ನಗೆ ಬೀರಿತು. ರವೀಂದ್ರ ಚವಾಣ್ 1,457 ಮತಗಳಿಂದ ಜಯಗಳಿಸಿದರು.

ಉತ್ತರ ಪ್ರದೇಶದಲ್ಲಿ 9 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆದಿದ್ದು, ಆಡಳಿತಾರೂಢ ಬಿಜೆಪಿಯು 6 ಕ್ಷೇತ್ರದಲ್ಲಿ ಗೆದ್ದಿದೆ. ಅಂತೆಯೇ, ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಎಲ್ಲ ಆರು ಕ್ಷೇತ್ರಗಳು, ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಎಲ್ಲ 3 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿವೆ.

ರಾಜಸ್ಥಾನದಲ್ಲಿ ಏಳು ಕ್ಷೇತ್ರಗಳಿಗೆ ಚುನಾವಣೆ ನಡೆದಿದ್ದು, ಬಿಜೆಪಿಯು ಐದು ಕ್ಷೇತ್ರಗಳು, ಕಾಂಗ್ರೆಸ್ ಮತ್ತು ಭಾರತ್ ಆದಿವಾಸಿ ಪಾರ್ಟಿ (ಬಿಎಪಿ) ತಲಾ ಒಂದು ಕ್ಷೇತ್ರದಲ್ಲಿ ಗೆದ್ದಿತು.

ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷ ಉಪ ಚುನಾವಣೆ ನಡೆದ ಎಲ್ಲ 6 ಕ್ಷೇತ್ರಗಳಲ್ಲಿ ಜಯಗಳಿಸಿದೆ. ಅಸ್ಸಾಂನಲ್ಲಿ ಚುನಾವಣೆ ನಡೆದ ಐದು ಕ್ಷೇತ್ರಗಳಲ್ಲಿ ಬಿಜೆಪಿ ಮೂರು, ಅಸ್ಸಾಂ ಗಣ ಪರಿಷತ್ ಮತ್ತು ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್ (ಯುಪಿಪಿಎಲ್) ತಲಾ ಒಂದು ಕ್ಷೇತ್ರ ಗೆದ್ದುಕೊಂಡವು.

ಪಂಜಾಬ್‌ನಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಉಪ ಚುನಾವಣೆ ನಡೆದಿದ್ದು, ಎಎಪಿ ಮೂರು ಕ್ಷೇತ್ರಗಳಲ್ಲಿ, ಕಾಂಗ್ರೆಸ್ ಒಂದು ಕ್ಷೇತ್ರದಲ್ಲಿ ಜಯಗಳಿಸಿತು.

ಮೇಘಾಲಯದ ಗಂಬೆಗ್ರೆ ಕ್ಷೇತ್ರದಲ್ಲಿ ನಡೆದ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಂಗ್ಮಾ ಅವರ ಅವರ ಪತ್ನಿ ಮೆಹ್ತಾಬ್ ಚಾಂಡೀ ಅಗಿಟೊಕ್ ಸಂಗ್ಮಾ ಜಯಗಳಿಸಿದರು.

ಫಲಿತಾಂಶವು ಇನ್ನಷ್ಟು ಕೆಲಸ ಮಾಡುವ ಉತ್ಸಾಹ ನೀಡಿದೆ. ನಾವೆಲ್ಲರೂ ಸಾಮಾನ್ಯ ಜನರು. ಅದೇ ನಮ್ಮ ಗುರುತು. ನಾವು ಜಮೀನ್ದಾರರಲ್ಲ

ಮಮತಾ ಬ್ಯಾನರ್ಜಿ
ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

ರಾಷ್ಟ್ರ ಮತ್ತು ಉತ್ತರ ಪ್ರದೇಶ ಚುನಾವಣೆ ರಾಜಕಾರಣದ ಈ ವಿಕೃತ ಸ್ವರೂಪವನ್ನು ನೋಡಿದೆ. ಇದು, ಸುಳ್ಳುಗಳ ಕಾಲವಿರಬಹುದು. ಆದರೆ, ಸುಳ್ಳಿನ ಯುಗವಲ್ಲ

ಅಖಿಲೇಶ್ ಯಾದವ್
ಸಮಾಜವಾದಿ ಪಕ್ಷದ ಮುಖ್ಯಸ್ಥ

ಉಪ ಚುನಾವಣಾ ಫಲಿತಾಂಶ

ರಾಜ್ಯ	ಒಟ್ಟುಸ್ಥಾನ	ಗೆದ್ದ ಪಕ್ಷಗಳು
ಲೋಕಸಭೆ		
ಕೇರಳ	01	ಕಾಂಗ್ರೆಸ್
ಮಹಾರಾಷ್ಟ್ರ	01	ಕಾಂಗ್ರೆಸ್
ವಿಧಾನಸಭೆ		
ಉತ್ತರ ಪ್ರದೇಶ	09	ಬಿಜೆಪಿ–6, ಎಸ್‌ಪಿ–02, ಆರ್‌ಎಲ್‌ಡಿ–01
ರಾಜಸ್ಥಾನ	07	ಬಿಜೆಪಿ–5, ಕಾಂಗ್ರೆಸ್–01, ಬಿಎಪಿ–01
ಪಶ್ಚಿಮ ಬಂಗಾಳ	06	ಟಿಎಂಸಿ–06
ಅಸ್ಸಾಂ	05	ಬಿಜೆಪಿ–03, ಯುಪಿಪಿಎಲ್–01, ಎಜಿಪಿ–01
ಬಿಹಾರ	04	ಬಿಜೆಪಿ–2, ಎಚ್‌ಎಎಂ–01, ಜೆಡಿಯು–01
ಪಂಜಾಬ್	04	ಎಎಪಿ–03, ಕಾಂಗ್ರೆಸ್–01
ಕರ್ನಾಟಕ	03	ಕಾಂಗ್ರೆಸ್–03
ಛತ್ತೀಸಗಢ	01	ಬಿಜೆಪಿ–1
ಗುಜರಾತ್	01	ಬಿಜೆಪಿ–01
ಕೇರಳ	02	ಕಾಂಗ್ರೆಸ್–01, ಸಿಪಿಎಂ–01
ಮಧ್ಯಪ್ರದೇಶ	02	ಬಿಜೆಪಿ–01, ಕಾಂಗ್ರೆಸ್–01
ಮೇಘಾಲಯ	01	ಎನ್‌ಪಿಪಿ–01
ಸಿಕ್ಕಿಂ	02	ಎಸ್‌ಕೆಎಂ–02
ಉತ್ತರಾಖಂಡ	01	ಬಿಜೆಪಿ–01
ಒಟ್ಟು	48	ಎನ್‌ಡಿಎ–28, 'ಇಂಡಿಯಾ'–20

ಕೆಳಮನೆಯಲ್ಲಿ ಅಣ್ಣ–ತಂಗಿ, ಮೇಲ್ಮನೆಯಲ್ಲಿ ತಾಯಿ

ನವದೆಹಲಿ (ಪಿಟಿಐ): ಕೇರಳದ ವಯನಾಡ್ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ 4.1 ಲಕ್ಷ ಮತಗಳ ಅಂತರದಿಂದ ಜಯಗಳಿಸಿದ್ದು, ಲೋಕಸಭೆಗೆ ಇದೇ ಮೊದಲ ಬಾರಿಗೆ ಪ್ರವೇಶಿಸಲು ಸಜ್ಜಾಗಿದ್ದಾರೆ.

ಇವರ ಆಯ್ಕೆ ಲೋಕಸಭೆಯಲ್ಲಿ ಪ್ರತಿಪಕ್ಷಗಳ ದನಿಗೆ ಇನ್ನಷ್ಟು ಬಲ ನೀಡಲಿದೆ ಎನ್ನಲಾಗಿದೆ. ತಾಯಿ ಸೋನಿಯಾಗಾಂಧಿ, ಅಣ್ಣ ರಾಹುಲ್ ಸ್ಪರ್ಧಿಸಿದ್ದಾಗ, ಹಿನ್ನೆಲೆಯಲ್ಲಿ ನಿಂತು ಗೆಲುವಿಗೆ ಶ್ರಮಿಸಿದ್ದ ಪ್ರಿಯಾಂಕಾ, ಈಗ ಮುನ್ನೆಲೆಗೆ ಬಂದಿದ್ದಾರೆ.

ಗೆಲುವಿನೊಂದಿಗೆ ಅಣ್ಣ–ತಂಗಿ ಒಟ್ಟಿಗೇ ಲೋಕಸಭೆಯಲ್ಲಿ ಆಸೀನರಾಗಲಿದ್ದಾರೆ. ತಾಯಿ ಸೋನಿಯಾ ಸದ್ಯ ಪ್ರಸ್ತುತ ರಾಜ್ಯಸಭೆ ಸದಸ್ಯೆ. ಏಕ ಕಾಲದಲ್ಲಿ ಒಂದೇ ಕುಟುಂಬದ ಮೂವರು ಸಂಸತ್ತಿನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಸಂಸತ್ತಿನಲ್ಲಿ ವಯನಾಡ್ ಮತದಾರರ ಧ್ವನಿಯಾಗಿರುತ್ತೇನೆ. ಇದು, ವಯನಾಡ್ ಕ್ಷೇತ್ರದ ಮತದಾರರ ಗೆಲುವು ಎಂಬುದನ್ನು ಬರುವ ದಿನಗಳಲ್ಲಿ ಖಂಡಿತವಾಗಿ ನಿರೂಪಿಸುತ್ತೇನೆ

ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ನಾಯಕಿ

ಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ರಾಯಬರೇಲಿ, ವಯನಾಡ್ ಕ್ಷೇತ್ರಗಳಿಂದ ಆಯ್ಕೆಯಾಗಿದ್ದ ರಾಹುಲ್‌ಗಾಂಧಿ ಬಳಿಕ ವಯನಾಡ್ ಕ್ಷೇತ್ರದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ತೆರವಾಗಿದ್ದ ಕ್ಷೇತ್ರದಿಂದ ಪ್ರಿಯಾಂಕಾ ಗೆದ್ದಿದ್ದಾರೆ.

ಪ್ರಿಯಾಂಕಾ ಅವರು 4,10,931 ಮತಗಳಿಂದ ಗೆಲುವು ಸಾಧಿಸಿದರು. ಪ್ರಿಯಾಂಕಾ 6,22,338 ಮತ ಪಡೆದರೆ, ಸಮೀಪದ ಅಭ್ಯರ್ಥಿ ಎಲ್‌ಡಿಎಫ್‌ನ ಸತ್ಯನ್ ಮೊಕೇರಿ 2,11,407, ಎನ್‌ಡಿಎಯ ನವ್ಯಾ ಹರಿದಾಸ್ 1,09,939 ಮತ ಪಡೆದರು.

ಸಾರ್ವತ್ರಿಕ ಚುನಾವಣೆಯಲ್ಲಿ ರಾಹುಲ್‌ಗಾಂಧಿ ಒಟ್ಟು 6,47,445 ಮತ ಪಡೆದಿದ್ದು, 3,64,422 ಮತಗಳಿಂದ ಗೆಲುವು ಸಾಧಿಸಿದ್ದರು. ಈ ಚುನಾವಣೆಯಲ್ಲಿ ಪ್ರಿಯಾಂಕಾ ಅವರು ಗೆಲುವಿನ ಅಂತರವನ್ನು ಇನ್ನಷ್ಟು ಹಿಗ್ಗಿಸಿದ್ದಾರೆ.

'ವಯನಾಡ್ ಕ್ಷೇತ್ರದ ಸೋದರ, ಸೋದರಿಯರೇ ನಿಮ್ಮ ಬೆಂಬಲ, ವಿಶ್ವಾಸದಿಂದ ಮನಸ್ಸು ತುಂಬಿ ಬಂದಿದೆ. ನಿಮ್ಮ ಕನಸು ಈಡೇರಿಸಲು, ಹಕ್ಕುಗಳ ಸಾಕಾರಕ್ಕಾಗಿ ಹೋರಾಡಲಿದ್ದೇನೆ' ಎಂದೂ ಅವರು ಪ್ರತಿಕ್ರಿಯಿಸಿದ್ದಾರೆ.

ಉಪಚುನಾವಣೆಯಲ್ಲಿ ಜಯಗಳಿಸಿದ ಪ್ರಿಯಾಂಕಾ ಗಾಂಧಿ ಅವರಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಭಿನಂದಿಸಿದರು – ಪಿಟಿಐ ಚಿತ್ರ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹600
12 ಕ್ಕೆ ₹80
ಮೈಸೂರು
100ಕ್ಕೆ ₹602

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹177
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹172

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹453-557
ದ್ವಿತಳಿ (ಬಿ.ವಿ) ₹225-766

ಸಂಕ್ಷಿಪ್ತ ಸುದ್ದಿ

ಭಾರತ–ಆಸಿಯಾನ್ ವ್ಯಾಪಾರ ಚರ್ಚೆ

ನವದೆಹಲಿ (ಪಿಟಿಐ): ಭಾರತ ಮತ್ತು ಆಸಿಯಾನ್ ಮುಕ್ತ ವ್ಯಾಪಾರ ಒಪ್ಪಂದ ಕುರಿತ ಪರಾಮರ್ಶೆ ಸಭೆಯು ಮುಂದಿನ ವರ್ಷದ ಫೆಬ್ರುವರಿ ಯಲ್ಲಿ ಇಂಡೊನೇಷ್ಯಾದ ಜಕಾರ್ತದಲ್ಲಿ ನಡೆಯಲಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.



ಪ್ರಸಕ್ತ ತಿಂಗಳಿನಲ್ಲಿ ನಾಲ್ಕನೇ ಸುತ್ತಿನ ಸಮಾಲೋಚನೆಯು ಮುಕ್ತಾಯ ಗೊಂಡಿದೆ.

ಸುಸ್ಥಿರ ಮಾದರಿಯಲ್ಲಿ ಆರ್ಥಿಕ ವಹಿವಾಟಿಗೆ ಪೂರಕವಾಗಿ ಸರಕುಗಳ ವಹಿವಾಟು ನಡೆಸಲು ಈ ಒಪ್ಪಂದವು ನೆರವಾಗಲಿದೆ ಎಂದು ಹೇಳಿದೆ.

ಸರಕುಗಳಿಗೆ ಸಂಬಂಧಿಸಿದ ಆಸಿಯಾನ್ ಇಂಡಿಯಾ ವ್ಯಾಪಾರದ ಜಂಟಿ ಸಮಿತಿಯಡಿ ಎಂಟು ಉಪ ಸಮಿತಿಗಳನ್ನು ರಚಿಸಲಾಗಿದೆ. ಮಾರುಕಟ್ಟೆಯ ಲಭ್ಯತೆ, ನಿಯಮಾವಳಿ, ತಾಂತ್ರಿಕ ನಿಯಮ, ಕಸ್ಟಮ್ಸ್, ಆರ್ಥಿಕ ಮತ್ತು ತಾಂತ್ರಿಕ ಸಹಕಾರ, ಕಾನೂನು ಹಾಗೂ ಸಾಂಸ್ಥಿಕ ನಿಬಂಧನೆಗಳ ಬಗ್ಗೆ ಈ ಸಮಿತಿಗಳು ಚರ್ಚಿಸಲಿವೆ.

ದೇಶದಲ್ಲಿ 1,400 ಜಪಾನ್ ಕಂಪನಿ ಕಾರ್ಯಾಚರಣೆ

ಕೋಲ್ಕತ್ತ (ಪಿಟಿಐ): 'ಭಾರತದಲ್ಲಿ ಜಪಾನ್ ದೇಶದ 1,400ಕ್ಕೂ ಹೆಚ್ಚು ಕಂಪನಿಗಳು ಕಾರ್ಯಾಚರಣೆ ನಡೆಸುತ್ತಿದ್ದು, ಇದರಿಂದ ಉಭಯ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿದೆ' ಎಂದು ಜಪಾನ್‌ನ ಕಾನ್ಸುಲೇಟ್ ಜನರಲ್ ನಕಗಾವಾ ಕೊಯಿಚಿ ತಿಳಿಸಿದ್ದಾರೆ.

ಇಲ್ಲಿ ಶನಿವಾರ ನಡೆದ ಸಮಾವೇಶದಲ್ಲಿ ಮಾತನಾಡಿದ ಅವರು, 'ಭದ್ರತೆ, ಹವಾಮಾನ ಬದಲಾವಣೆ ತಡೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಎರಡೂ ದೇಶಗಳು ಒಟ್ಟಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.

'ಭಾರತದಲ್ಲಿ ಬಂಡವಾಳ ಹೂಡುವ ರಾಷ್ಟ್ರಗಳ ಪೈಕಿ ಜಪಾನ್ ಐದನೇ ಅತಿದೊಡ್ಡ ದೇಶವಾಗಿದೆ. 2000ರಿಂದ ಪ್ರಸಕ್ತ ವರ್ಷದ ಇಲ್ಲಿಯವರೆಗೆ ₹3.54 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ ಹೂಡಿಕೆಯಾಗಿದೆ' ಎಂದು ವಿವರಿಸಿದರು. 20ನೇ ಶತಮಾನದ ಆರಂಭದಲ್ಲಿ ಜಪಾನ್ ಮತ್ತು ಭಾರತದ ನಡುವೆ ಬೌದ್ಧಿಕ ಮತ್ತು ಸಾಂಸ್ಕೃತಿಕ ವಿನಿಮಯದ ಮೂಲಕ ಬಾಂಧವ್ಯ ಆರಂಭಗೊಂಡಿತು ಎಂದು ಸ್ಮರಿಸಿದರು.

ಶಿರಸಿ: ಕಾರ್ಯಾಗಾರದಲ್ಲಿ ಮ್ಯಾಮ್ಕೋಸ್ ಅಧ್ಯಕ್ಷ ಎಚ್.ಎಸ್. ಮಂಜಪ್ಪ ಕಳವಳ

ಅಡಿಕೆಗೆ ಮಧ್ಯವರ್ತಿಗಳ ಉಪಟಳ

ಪ್ರಜಾವಾಣಿ ವಾರ್ತೆ

ಶಿರಸಿ: 'ಅಡಿಕೆ ಉತ್ಪಾದಕರು ಮತ್ತು ಬಳಕೆದಾರರ ನಡುವೆ ಮಧ್ಯವರ್ತಿಗಳಿದ್ದು, ಅವರ ಮೇಲೆ ಯಾರ ನಿಯಂತ್ರಣ ಇಲ್ಲ. ಅಡಿಕೆಗೆ ಕೆಟ್ಟ ಹೆಸರು ಬರಲು ಇಂಥವರು ಕಾರಣ' ಎಂದು ಮಲ್ನಾಡ್ ಅರೆಕಾ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿ (ಮ್ಯಾಮ್ಕೋಸ್) ಅಧ್ಯಕ್ಷ ಎಚ್.ಎಸ್. ಮಂಜಪ್ಪ ಹೇಳಿದರು.

ನಗರದಲ್ಲಿ ಶನಿವಾರ 'ಉತ್ಪಾದನೆಯಿಂದ ಬಳಕೆಯವರೆಗೆ' ಗುಣಮಟ್ಟದ ಅಡಿಕೆ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 'ಅಡಿಕೆ ಕ್ಯಾನ್ಸರ್‌ಕಾರಕ ಎಂಬ ವಿಷಯ ಮೂರು ದಶಕಗಳಿಂದ ಚರ್ಚೆಯಾಗುತ್ತಿದೆ. ಪ್ರಕರಣ ಕೋರ್ಟ್‌ನಲ್ಲಿದೆ. ಈ ಬಗ್ಗೆ ಅಂತಿಮ ತೀರ್ಪು ಬಂದಿಲ್ಲ' ಎಂದರು.

'ವಿಶ್ವಸಂಸ್ಥೆಯ ಅಂಗ ಸಂಸ್ಥೆಯು ಅಡಿಕೆ ಕ್ಯಾನ್ಸರ್‌ಕಾರಕ ಎಂಬ ವರದಿ ಬಿಡುಗಡೆ ಮಾಡಿದೆ. ಜಾಗತಿಕವಾಗಿ ಭಾರತದ ಅಡಿಕೆ ವಹಿವಾಟು ಹೆಚ್ಚಿದ್ದು, ಅದನ್ನು ನಿಯಂತ್ರಿಸಲು ಇಂಥ ವರದಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಇವುಗಳನ್ನು ತಡೆಯಲು ವೈಜ್ಞಾನಿಕ ವರದಿ ಸಿದ್ಧಪಡಿಸುವ ಅಗತ್ಯವಿದೆ' ಎಂದರು.

ಶಿರಸಿಯಲ್ಲಿ ಗುಣಮಟ್ಟದ ಅಡಿಕೆ ಕಾರ್ಯಾಗಾರವನ್ನು ಎಚ್.ಎಸ್. ಮಂಜಪ್ಪ ಉದ್ಘಾಟಿಸಿದರು. ಮುಖಂಡರಾದ ನಾರಾಯಣ ಹೆಗಡೆ, ಎಂ.ವಿ. ಹೆಗಡೆ, ಸಿಪಿಸಿಆರ್‌ಐ ವಿಜ್ಞಾನಿ ರವಿ ಭಟ್, ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್ ಕೊಡ್ಗಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಜಿ.ವಿ. ಜೋಶಿ ಇದ್ದರು

'ಕ್ಯಾನ್ಸರ್‌ಕಾರಕ ತಂಬಾಕು ಉತ್ಪನ್ನಗಳ ಮೇಲೆ ನಿಷೇಧ ಇಲ್ಲ. ಆದರೆ, ಅಡಿಕೆ ಮೇಲೆ ಈ ತೂಗುಗತ್ತಿ ಇದೆ. ಇದಕ್ಕೆ ಅಡಿಕೆ ಬೆಳೆಗಾರರ ಪ್ರಬಲ ಲಾಬಿ ಇಲ್ಲದಿರುವುದು ಕಾರಣ. ಗುಟ್ಕಾ, ಪಾನ್ ಮಸಾಲಾ ಕಂಪನಿಗಳು ನೇರವಾಗಿ ಸಹಕಾರಿ ಸಂಘಗಳ ಬದಲು ಮಧ್ಯವರ್ತಿಗಳಿಂದ ಅಡಿಕೆ ಖರೀದಿಸುತ್ತಾರೆ. ಹೀಗೆ ಮಧ್ಯವರ್ತಿ ಹಂತದಲ್ಲಿ ಅಡಿಕೆ ಕಲಬೆರಕೆ ಸಾಧ್ಯತೆಯಿದ್ದು, ಅಂಥ ಅಡಿಕೆ ಪರೀಕ್ಷಿಸಿದರೆ ಹಾನಿಕಾರಕ ಅಂಶ ಕಂಡುಬರುವ ಸಾಧ್ಯತೆಯಿದೆ' ಎಂದರು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, 'ಅಡಿಕೆ ಕ್ಯಾನ್ಸರ್‌ಕಾರಕ ಎನ್ನುವ ಷಡ್ಯಂತ್ರದ ವಿರುದ್ಧ ಜನಾಭಿಪ್ರಾಯ ರೂಪಿಸಬೇಕು. ಸರ್ಕಾರ, ತಜ್ಞರು, ವಿಜ್ಞಾನಿಗಳ ಸಹಕಾರದಿಂದ ವೈಜ್ಞಾನಿಕ ವರದಿ ಸಿದ್ಧಪಡಿಸಬೇಕು ಎಂದು ಹೇಳಿದರು.

ಕಾರ್ಯಾಗಾರದ ನಿರ್ಣಯಗಳು

- ಅಡಿಕೆಯ ಸಮಗ್ರ ಗುಣ ಧರ್ಮಗಳ ಕುರಿತು ವಿಸ್ತೃತ ಸಂಶೋಧನೆ ನಡೆಸಬೇಕು
- ದೇಶದಲ್ಲಿ ಒಳನುಸುಳುವ ಅಡಿಕೆಗೆ ಸಂಪೂರ್ಣ ಕಡಿವಾಣ ಹಾಕಬೇಕು
- ಅಡಿಕೆ ಜಗಿಯುವುದು ಆರೋಗ್ಯಕ್ಕೆ ಹಾನಿಕರ ಎಂದು ಅಡಿಕೆ ಪೊಟ್ಟಣದ ಮೇಲೆ ಕಡ್ಡಾಯವಾಗಿ ಬರೆಯುವುದು ರದ್ದಾಗಬೇಕು
- ಅಡಿಕೆ ಮತ್ತು ಸಾಂಬಾರು ಬೆಳೆ ಅಭಿವೃದ್ಧಿ ನಿರ್ದೇಶನಾಲಯ ಹಾಗೂ ಆಹಾರ ಸುರಕ್ಷತೆ ಮತ್ತು ಮಾನದಂಡ ನಿರ್ವಹಣಾ ಪ್ರಾಧಿಕಾರ ಸಮಗ್ರವಾಗಿ ನಿಯಮಾವಳಿ ರೂಪಿಸಿ, ಜಾರಿಗೆ ತರಬೇಕು
- ಆಹಾರ ವಸ್ತು ಹಾಗೂ ಅಡಿಕೆಯ ಗುಣಮಟ್ಟದ ಮೇಲ್ವಿಚಾರಣೆಗೆ ತಾಲ್ಲೂಕು ಮಟ್ಟದಲ್ಲಿ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆ
- ಅಡಿಕೆಯಲ್ಲಿರುವ ಔಷಧೀಯ ಗುಣಗಳನ್ನು ಬಳಸಲು ನೀತಿನಿಯಮಗಳನ್ನು ರೂಪಿಸಬೇಕು
- ತಂಬಾಕುರಹಿತ ಮೌಲ್ಯವರ್ಧಿತ ಅಡಿಕೆ ಉತ್ಪನ್ನಗಳಿಗೆ ಹಾಗೂ ಬದಲಿ ವಾಣಿಜ್ಯ ಉಪಯೋಗಗಳಿಗೆ ಉತ್ತೇಜನ ನೀಡಬೇಕು
- ಉತ್ಪಾದಕರಿಂದ ಗ್ರಾಹಕರವರೆಗಿನ ಅಡಿಕೆಯ ಸಂಗ್ರಹ, ಸಂಸ್ಕರಣೆ, ಮಾರಾಟ ಜೋಡಣೆಯಲ್ಲಿ ಸಹಕಾರಿ ರಂಗಕ್ಕೆ ಪ್ರೋತ್ಸಾಹ ನೀಡಬೇಕು. ಇಂತಹ ಸಂಸ್ಥೆಗಳಿಗೆ ತೆರಿಗೆ ರಿಯಾಯಿತಿ ಸಿಗಬೇಕು
- ಅಡಿಕೆ ಕುರಿತ ಎಲ್ಲ ನೀತಿ-ನಿಯಮಾವಳಿ ರೂಪಿಸುವಾಗ ಕೇಂದ್ರ ಹಾಗೂ ರಾಜ್ಯ ಸರ್ಕಾರ, ಸಹಕಾರಿ ಸಂಘಟನೆಗಳ ಅಭಿಪ್ರಾಯ ಪಡೆದು ಮುಂದುವರಿಯಬೇಕು
- ಅಡಿಕೆ ಬೆಳೆಯುವ ಪ್ರದೇಶದ ಸಹಕಾರಿ ಸಂಘಗಳ ಪ್ರತಿನಿಧಿಗಳನ್ನೂ ಒಳಗೊಂಡಿರುವ ತಜ್ಞರ ತಾಂತ್ರಿಕ ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಬೇಕು
- ಅಡಿಕೆ ಬೆಳೆಯುವ ಪ್ರದೇಶದ ಸಂಸದರ ಸಮಿತಿ ರಚಿಸಬೇಕು

ಅದಾನಿ ಸಮೂಹದ ಸಿಎಫ್‌ಒ ಜುಗೇಶಿಂದರ್ ಪ್ರತಿಕ್ರಿಯೆ

'ಎಜಿಇಎಲ್ ಮೇಲಷ್ಟೇ ಆರೋಪ'

ನವದೆಹಲಿ (ಪಿಟಿಐ): 'ಅದಾನಿ ಸಮೂಹದಲ್ಲಿ 11 ಕಂಪನಿಗಳಿವೆ. ಈ ಪೈಕಿ ಅದಾನಿ ಗ್ರೀನ್ ಎನರ್ಜಿ ಕಂಪನಿ (ಎಜಿಇಎಲ್) ಮೇಲಷ್ಟೇ ಆರೋಪ ಪಟ್ಟಿ ಸಲ್ಲಿಕೆಯಾಗಿದೆ. ಆಡಳಿತ ಮಂಡಳಿಯಲ್ಲಿ ಚರ್ಚಿಸಿದ ಬಳಿಕ ಲಂಚ ಪ್ರಕರಣದ ಬಗ್ಗೆ ಸವಿವರವಾಗಿ ಪ್ರತಿಕ್ರಿಯೆ ನೀಡಲಾಗುವುದು' ಎಂದು ಅದಾನಿ ಸಮೂಹದ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಜುಗೇಶಿಂದರ್ ರಾಬಿ ಸಿಂಗ್ ತಿಳಿಸಿದ್ದಾರೆ.

'ಲಂಚ ಪ್ರಕರಣ ಕುರಿತಂತೆ ಸಾಕಷ್ಟು ಸುದ್ದಿಗಳು ಪ್ರಕಟವಾಗುತ್ತಿವೆ. ಪ್ರಕರಣಕ್ಕೆ ಸಂಬಂಧಿಸಿಲ್ಲದ ವಿಷಯಗಳು ಹೆಡ್‌ಲೈನ್ ರೂಪ ಪಡೆಯುತ್ತಿವೆ. ಪ್ರಕರಣ ಕುರಿತು ಅಮೆರಿಕದ ಕೋರ್ಟ್‌ನಲ್ಲಿ ನಮ್ಮ ಅಭಿಪ್ರಾಯ ಮಂಡಿಸಿದ ಬಳಿಕ ಇದರ ಬಗ್ಗೆ ಸ್ಪಷ್ಟನೆ ನೀಡುತ್ತೇವೆ' ಎಂದು 'ಎಕ್ಸ್'ನಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ.

adani
Renewables

ಆರೋಪ ಪಟ್ಟಿ ಆಧರಿಸಿ ಯಾವುದೇ ನ್ಯಾಯಾಲಯವು ತೀರ್ಪು ನೀಡಲು ಸಾಧ್ಯವಿಲ್ಲ. ಯಾವುದೇ, ಅಪರಾಧ ಪ್ರಕರಣದಲ್ಲಿ ಆರೋಪಿಯು ತಪ್ಪಿತಸ್ಥ ಎಂದು ಸಾಬೀತು ಆಗುವವರೆಗೂ ಆತನನ್ನು ನಿರಪರಾಧಿ ಎಂದು ಪರಿಗಣಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

'ಅದಾನಿ ಗ್ರೀನ್ ಎನರ್ಜಿ ಕಂಪನಿಯು ಮಾಡಿಕೊಂಡಿರುವ ಒಪ್ಪಂದಗಳ ಪೈಕಿ ಶೇ 10ರಷ್ಟು ಒಪ್ಪಂದಕ್ಕಷ್ಟೇ ಈ ಆರೋಪ ಪಟ್ಟಿ ಸೀಮಿತವಾಗಿದೆ. ಸೂಕ್ತ ವೇದಿಕೆಯಲ್ಲಿ ಪ್ರಕರಣದ ಬಗ್ಗೆ ನಿಖರ ಹಾಗೂ ಸಮಗ್ರವಾಗಿ ವಿವರಣೆ ನೀಡುತ್ತೇವೆ ಎಂದು ಹೇಳಿದ್ದಾರೆ.

ಜುಗೇಶಿಂದರ್ ಅವರು ಅದಾನಿ ಸಮೂಹದ ಮೊದಲ ಸ್ತರದಲ್ಲಿರುವ ಪ್ರಮುಖ ವ್ಯಕ್ತಿಯಾಗಿದ್ದಾರೆ. ಕಳೆದ ವರ್ಷದ ಜನವರಿಯಲ್ಲಿ ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡನ್‌ಬರ್ಗ್ ರಿಸರ್ಚ್‌ನಿಂದ ಅದಾನಿ ಸಮೂಹದ ವಿರುದ್ಧ ವರದಿ ಪ್ರಕಟವಾಗಿತ್ತು. ಆ ವೇಳೆ ಸಿಎಫ್‌ಒ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿ ಸಮೂಹವನ್ನು ಸಮರ್ಥಿಸಿಕೊಂಡಿದ್ದರು.

ಈಗ ಗೌತಮ್ ಅದಾನಿ ವಿರುದ್ಧ ಕೇಳಿಬಂದಿರುವ ಲಂಚ ಆರೋಪದ ಬಗ್ಗೆ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದ್ದಾರೆ.

ಮಾಧ್ಯಮ ವರದಿ ಆಧರಿಸಿ ತನಿಖೆ ನಡೆಸಲ್ಲ: ಸಿಸಿಐ

ಕೋಲ್ಕತ್ತ (ಪಿಟಿಐ): 'ಉದ್ಯಮಿ ಗೌತಮ್ ಅದಾನಿ ವಿರುದ್ಧ ಅಮೆರಿಕದ ಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣ ಕುರಿತು ಮಾಧ್ಯಮಗಳಲ್ಲಿ ಬಂದಿರುವ ವರದಿ ಆಧರಿಸಿ ಆಯೋಗವು ತನಿಖೆಗೆ ಕ್ರಮ ಕೈಗೊಳ್ಳುವುದಿಲ್ಲ' ಎಂದು ಭಾರತೀಯ ಸ್ಪರ್ಧಾತ್ಮಕ ಆಯೋಗದ (ಸಿಸಿಐ) ಅಧ್ಯಕ್ಷೆ ರವನೀತ್ ಕೌರ್ ತಿಳಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸ್ಪರ್ಧಾತ್ಮಕ ಕಾಯ್ದೆಯಡಿ ರೂಪಿಸಿರುವ ನಿಯಮಾವಳಿಗಳ ಅನ್ವಯ ಆಯೋಗವು ಕಾರ್ಯ ನಿರ್ವಹಿಸಲಿದೆ. ಸುಸ್ಥಿರ ಸ್ಪರ್ಧೆಗೆ ಒತ್ತು ನೀಡುವುದು ಆಯೋಗದ ಗುರಿ. ಕಾಯ್ದೆಯಡಿ ಒಳಪಡುವ ವಿಷಯವಿದ್ದರೆ ತನಿಖೆಗೆ ಕ್ರಮ ವಹಿಸಲಿದೆ' ಎಂದು ಹೇಳಿದರು.

'ಅದಾನಿ ವಿರುದ್ಧ ದಾಖಲಾಗಿರುವ ಪ್ರಕರಣ ಯಾವ ಸ್ವರೂಪದ್ದು ಎಂಬುದು ನನಗೆ ತಿಳಿದಿಲ್ಲ. ಮಾಧ್ಯಮ ಗಳಲ್ಲಿ ಬಂದಿರುವ ವರದಿ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಹೇಳಿದರು.

'ಕಾಯ್ದೆಯಡಿ ಬರುವ ವಿಷಯಗಳ ಬಗ್ಗೆ ಆಯೋಗದ ಮುಂದೆ ಸಲ್ಲಿಕೆಯಾಗುವ ಮಾಹಿತಿ ಆಧರಿಸಿ ನಿಯಮಾವಳಿ ಅನ್ವಯವೇ ಕ್ರಮಕೈಗೊಳ್ಳಲಾಗುತ್ತದೆ' ಎಂದರು.

ಷೇರು ವಿನಿಮಯ ಕೇಂದ್ರಕ್ಕೆ ವಿವರಣೆ ಸಲ್ಲಿಕೆ

ಕೆನ್ಯಾ ಜೊತೆ ಒಪ್ಪಂದ ಮಾಡಿಕೊಂಡಿಲ್ಲ: ಅದಾನಿ

ನವದೆಹಲಿ (ಪಿಟಿಐ): ಕೆನ್ಯಾದ ನೈರೋಬಿ ನಗರದಲ್ಲಿರುವ ವಿಮಾನ ನಿಲ್ದಾಣದ ನಿರ್ವಹಣೆಯ ಗುತ್ತಿಗೆ ಪಡೆಯುವ ಸಂಬಂಧ ಅಲ್ಲಿನ ಸರ್ಕಾರದ ಜೊತೆಗೆ ಯಾವುದೇ ಒಪ್ಪಂದ ಮಾಡಿಕೊಂಡಿಲ್ಲ ಎಂದು ಅದಾನಿ ಸಮೂಹವು ಶನಿವಾರ ಸ್ಪಷ್ಟಪಡಿಸಿದೆ.

ಜೋಮೊ ಕೆನ್ಯಾಟಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಜೆಕೆಐಎ) ನಿರ್ವಹಣೆ ಸಂಬಂಧ ₹21 ಸಾವಿರ ಕೋಟಿ ವೆಚ್ಚದ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ವರದಿಯಾಗಿತ್ತು. ಗೌತಮ್ ಅದಾನಿ ವಿರುದ್ಧದ ಲಂಚ ಪ್ರಕರಣ ಆರೋಪದ ಬೆನ್ನಲ್ಲೇ ಈ ಒಪ್ಪಂದ ರದ್ದುಪಡಿಸಿರುವುದಾಗಿ ಕೆನ್ಯಾ ಸರ್ಕಾರ ಕೂಡ ಪ್ರಕಟಿಸಿತ್ತು.

ಈ ಪ್ರಕರಣದಲ್ಲಿ ದೇಶದ ಷೇರುಪೇಟೆ ನಿಯಮಾವಳಿಗಳು ಉಲ್ಲಂಘನೆಯಾಗಿವೆಯೇ ಎನ್ನುವ ಬಗ್ಗೆ ವಿವರಣೆ ನೀಡುವಂತೆ ಅದಾನಿ ಸಮೂಹಕ್ಕೆ, ಷೇರು ವಿನಿಮಯ ಕೇಂದ್ರಗಳು ಸೂಚಿಸಿದ್ದವು.

'ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ವಿಮಾನ ನಿಲ್ದಾಣದ ನಿರ್ವಹಣೆಯ ಗುತ್ತಿಗೆಗೆ ಮುಂದಾಗಿತ್ತು. ಆದರೆ, ಪ್ರಸಕ್ತ ವರ್ಷದ ಆಗಸ್ಟ್‌ನಲ್ಲಿ ನಿಲ್ದಾಣದ ನವೀಕರಣ ಮತ್ತು ನಿರ್ವಹಣೆಗೆ ಸಂಬಂಧಿಸಿದ ಒಪ್ಪಂದವನ್ನು ಕೈಬಿಡಲಾಗಿದೆ' ಎಂದು ಸಮೂಹವು ಸ್ಪಷ್ಟಪಡಿಸಿದೆ.

ಅದಾನಿ ಎನರ್ಜಿ ಸಲ್ಯೂಷನ್ಸ್ ಲಿಮಿಟೆಡ್ ಕೆನ್ಯಾ ವಿದ್ಯುತ್ ಪ್ರಸರಣ ಕಂಪನಿ ಜೊತೆಗೆ ಕಳೆದು ತಿಂಗಳು ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದಡಿ ಮೂರು ವಿದ್ಯುತ್ ಲೈನ್‌ಗಳು ಮತ್ತು ಎರಡು ಉಪ ಕೇಂದ್ರಗಳನ್ನು ನಿರ್ಮಿಸಲಿದ್ದು, 30 ವರ್ಷದವರೆಗೆ ನಿರ್ವಹಣೆ ಮಾಡಲಿದೆ. ಈ ಒಪ್ಪಂದದಲ್ಲಿ ಷೇರುಪೇಟೆ ನಿಯಮಾವಳಿಗಳನ್ನು ಉಲ್ಲಂಘಿಸಿಲ್ಲ ಎಂದು ಸ್ಪಷ್ಟನೆ ನೀಡಿದೆ.

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಅನುಮತಿ

ವಿಮಾ ವಹಿವಾಟಿಗೆ ಒಪ್ಪಿಗೆ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ವಿಮಾ ವ್ಯವಹಾರ ಕ್ಷೇತ್ರ ಪ್ರವೇಶಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನುಮತಿ ನೀಡಿದೆ.

ಫ್ಯೂಚರ್ ಜನರಲ್ ಇಂಡಿಯಾ ಇನ್ಶೂರೆನ್ಸ್ ಕಂಪನಿ (ಎಫ್‌ಜಿಐಐಸಿಎಲ್) ಮತ್ತು ಫ್ಯೂಚರ್ ಜನರಲ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪನಿಯ (ಎಫ್‌ಜಿಐಎಲ್‌ಐಸಿಎಲ್) ಜಂಟಿ ಸಹಭಾಗಿತ್ವದಡಿ ವಿಮಾ ವಹಿವಾಟು ನಡೆಸಲು ಒಪ್ಪಿಗೆ ನೀಡಿದೆ ಎಂದು ಬ್ಯಾಂಕ್, ಷೇರುಪೇಟೆಗೆ ತಿಳಿಸಿದೆ.

ಎಫ್‌ಜಿಐಐಸಿಎಲ್ ಸಾಮಾನ್ಯ ವಿಮೆ, ವಾಣಿಜ್ಯ ವಿಮೆ, ಸಾಮಾಜಿಕ ಹಾಗೂ ಗ್ರಾಮೀಣ ವಿಮಾ ಸೌಲಭ್ಯವನ್ನು ಒದಗಿಸಲಿದೆ.

ಉಳಿತಾಯ ವಿಮೆ, ವಿಶಿಷ್ಟ ವಿಮೆ ಉತ್ಪನ್ನ (ಯುಲಿಪ್), ಅವಧಿ ವಿಮೆ, ಆರೋಗ್ಯ ವಿಮೆ, ಮಕ್ಕಳ ವಿಮೆ, ನಿವೃತ್ತಿ ವಿಮೆ, ಗ್ರಾಮೀಣ ಮತ್ತು ಗುಂಪು ವಿಮಾ ಸೌಲಭ್ಯವನ್ನು ಎಫ್‌ಜಿಐಎಲ್‌ಐಸಿಎಲ್ ಕಲ್ಪಿಸಲಿದೆ.

ಈ ಎರಡು ಕಂಪನಿಗಳಿಂದ ಷೇರುಗಳ ಸ್ವಾಧೀನಕ್ಕೆ ಅಕ್ಟೋಬರ್‌ನಲ್ಲಿ ಭಾರತೀಯ ಸ್ಪರ್ಧಾತ್ಮಕ ಆಯೋಗವು (ಸಿಸಿಐ) ಬ್ಯಾಂಕ್‌ಗೆ ಒಪ್ಪಿಗೆ ಸೂಚಿಸಿತ್ತು.

ಸಿಂಡಿಕೇಟ್ ಬ್ಯಾಂಕ್‌ನಲ್ಲಿ ವಂಚನೆ: ₹52 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಮತ್ತು ಇತರೆ ಸಾಲ ವಿತರಣೆಯಲ್ಲಿ ₹12.63 ಕೋಟಿ ವಂಚನೆ ಎಸಗಿದ್ದ ಪ್ರಕರಣದಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಇಬ್ಬರು ಸಿಬ್ಬಂದಿ ಸೇರಿ ಮೂವರಿಗೆ ಸಿಬಿಐ ವಿಶೇಷ ನ್ಯಾಯಾಲಯವು 1 ವರ್ಷದಿಂದ 3 ವರ್ಷದವರೆಗೆ ಜೈಲು ಶಿಕ್ಷೆ ಮತ್ತು ಒಟ್ಟು ₹52 ಲಕ್ಷ ದಂಡ ವಿಧಿಸಿದೆ.

ಸುಳ್ಳು ದಾಖಲೆ ಸೃಷ್ಟಿಸಿ ಮತ್ತು ಅನರ್ಹ ವ್ಯಕ್ತಿಗಳಿಗೆ ಸಾಲ ವಿತರಣೆ ಮಾಡಿದ ಸಂಬಂಧ 2009ರಲ್ಲಿ ಪ್ರಕರಣ ದಾಖಲಾಗಿತ್ತು. ಸಿಂಡಿಕೇಟ್ ಬ್ಯಾಂಕ್‌ನ ಮಂಡ್ಯ ಶಾಖೆಯ ಅಂದಿನ ವ್ಯವಸ್ಥಾಪಕ ಎಚ್.ಎಂ.ಸ್ವಾಮಿ, ಕೊಳ್ಳೇಗಾಲ ಶಾಖೆಯ ಅಂದಿನ ವ್ಯವಸ್ಥಾಪಕ ವಿಠ್ಠಲ ದಾಸ್ ವಿರುದ್ಧ ಬ್ಯಾಂಕ್‌ನ ಮುಖ್ಯ ಜಾಗೃತ ಅಧಿಕಾರಿ ಸಿಬಿಐಗೆ ದೂರು ನೀಡಿದ್ದರು.

'ಸಿಂಡಿಕೇಟ್ ಜೈ ಕಿಸಾನ್ ಸಾಲ ಯೋಜನೆ ಮತ್ತು ಇತರೆ ಸಾಲ ಯೋಜನೆಗಳಲ್ಲಿ ಇಬ್ಬರು ವ್ಯವಸ್ಥಾಪಕರು ಅಕ್ರಮ ಎಸಗಿದ್ದಾರೆ. ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಅನರ್ಹರಿಗೆ ಸಾಲ ನೀಡುವ ಮೂಲಕ ಬ್ಯಾಂಕ್‌ಗೆ ನಷ್ಟ ಉಂಟು ಮಾಡಿದ್ದಾರೆ' ಎಂದು ದೂರಿನಲ್ಲಿ ವಿವರಿಸಿದ್ದರು. ಅದರಂತೆ 2009ರ ಏಪ್ರಿಲ್‌ನಲ್ಲಿ ಸಿಬಿಐ ಎಫ್‌ಐಆರ್ ದಾಖಲಿಸಿತ್ತು.

ಅಕ್ರಮದಲ್ಲಿ ಮತ್ತೊಬ್ಬ ಖಾಸಗಿ ವ್ಯಕ್ತಿ ಭಾಗಿಯಾಗಿರುವುದು ಸಿಬಿಐ ತನಿಖೆಯಲ್ಲಿ ಪತ್ತೆಯಾಗಿತ್ತು. 2010ರ ಡಿಸೆಂಬರ್‌ನಲ್ಲಿ ಸಿಬಿಐ ಆರೋಪ ಪಟ್ಟಿ ಸಲ್ಲಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯವು ಈಚೆಗೆ ತೀರ್ಪು ನೀಡಿತ್ತು. ಈಗ ಶಿಕ್ಷೆ ಪ್ರಕಟಿಸಿದೆ.

ಶಿಕ್ಷೆ ವಿವರ

ಎಚ್.ಎಂ. ಸ್ವಾಮಿ
ಸಿಂಡಿಕೇಟ್ ಬ್ಯಾಂಕ್ ಮಂಡ್ಯ ಶಾಖೆಯ ಅಂದಿನ ವ್ಯವಸ್ಥಾಪಕ
3 ವರ್ಷ ಜೈಲು ಶಿಕ್ಷೆ
₹1.50 ಲಕ್ಷ ದಂಡ

ವಿಠ್ಠಲ ದಾಸ್
ಸಿಂಡಿಕೇಟ್ ಬ್ಯಾಂಕ್ ಕೊಳ್ಳೇಗಾಲ ಶಾಖೆಯ ಅಂದಿನ ವ್ಯವಸ್ಥಾಪಕ
1 ವರ್ಷ ಜೈಲು ಶಿಕ್ಷೆ
₹50,000 ದಂಡ

ಅಸಾದುಲ್ಲಾ ಖಾನ್
3 ವರ್ಷ ಜೈಲು ಶಿಕ್ಷೆ
₹50 ಲಕ್ಷ ದಂಡ

ಮುಖ್ಯಾಂಶಗಳು

- ₹12.63 ಕೋಟಿ ವಂಚನೆ ಪ್ರಕರಣ
- ಸಿಬಿಐ ವಿಶೇಷ ನ್ಯಾಯಾಲಯದಿಂದ ಶಿಕ್ಷೆ ಪ್ರಕಟ
- ಸಿಬ್ಬಂದಿ ಸೇರಿ ಮೂವರಿಗೆ 3 ವರ್ಷದವರೆಗೆ ಜೈಲು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ

Business Offers

General

CONTRACTORS, AGENTS, BROKERS To Arrange Manpower and Manage 100 Vendors Hawkers, Push-Cart Sellers. Door To Door SALES B2B Line SALESMAN CUM DRIVER For Consumer Goods Bangalore City and Rural. Salary Plus Commission 6366936485

ಉದ್ಯೋಗಾವಕಾಶ

Marketing & Sales

VELAANS ENERGY
Smart Lubricant Solutions
LUBRICANTS
SALES MANAGER
Male - 3 Nos. Any Degree with Good Communication Skills, Min 2 yrs + Exp. in Sales Field
SALARY UPTO ₹30K
97503 31152
63838 52788

ಕರ್ನಾಟಕದ ವಿವಿದ ಸ್ಥಳಗಳಲ್ಲಿ ಸಪ್ಲೈ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ ಅವಕಾಶ! 10ನೇ ಅಥವಾ 12ನೇತರಗತಿ ಪಾಸಾದವರು ಅರ್ಜಿಸಲ್ಲಿಸಬಹುದು. +91 7892297550| sharathkumar.hn@letstransport.team

Drivers

ಸ್ಥಳ: ಮುದ್ದಾಪುರ (ಬಾಗಲಕೋಟೆ) ಗಿಣಿಗೇರ (ಕೊಪ್ಪಳ) ಸಂಬಳ: 20000 ದಿಂದ 35000 ಸಾವಿರದವರಗೆ ಇಎಸ್‌ಐ and ಇನ್ಸೂರೆನ್ಸ್ ಸೌಲಭ್ಯವಿದೆ ಮೊದಲುಬಂದವರಿಗೆ ಆದ್ಯತೆ! ಕರೆಮಾಡಿ : +91 6366853922 ಇಮೇಲ್ ಕಳಿಸುವುದು: vijay.varma@letstransport.team

ಎಂ.ಎನ್.ಸಿ ಕಂಪನಿಗೆ, ಟ್ರೇಲರ್ ಲಾರಿ (14 ಚಕ್ರ ಮೇಲ್ಪಟ್ಟ) & ಬಸ್ ಚಾಲನೆಯಲ್ಲಿ 5ವರ್ಷಗಳ ಅನುಭವವಿರುವ ಡ್ರೈವರ್ ಗಳು ಬೇಕಾಗಿದ್ದಾರೆ ತಿಂಗಳ ಸಂಬಳ ದೊಂದಿಗೆ ಆಕರ್ಷಕ ಭತ್ಯೆ ನಿಡಲಾಗುತ್ತದೆ. ವಯಸ್ಸು 20 to 45ವರಗೆ MOB: 9566295100

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ಪುಸ್ತಕ ಬರೆಯುವ ಹಾಗು ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಇದೆ. 9611874742, 9611574742.

Teachers / Professors

WAYANAMAC EDUCATION TRUST®
DON BOSCO INSTITUTE OF TECHNOLOGY
(Approved by AICTE, Affiliated to VTU, Belagavi, NBA & NAAC Accredited)
KUMBALAGODU, MYSORE ROAD, BANGALORE – 560074.
Ph. : 080 - 28437028 / 29 / 30. Website: www.dbit.co.in
We are looking for talented, competent, qualified faculty & professionals for the following positions:
Dean - Academic / IQAC / Student Affairs, COE
PROFESSORS, ASSOCIATE PROFESSORS & ASSISTANT PROFESSORS
In following Disciplines:
- Artificial Intelligence & Machine Learning
- Artificial Intelligence & Data Science
- Computer Science & Engineering
- Electronics & Communication Engineering
- Information Science & Engineering
- MBA
- Mathematics, Physics, Chemistry

NON - TEACHING STAFF
- Senior Accounts Assistant
- Senior Placement Officer
- Placement Officer
- Asst. Librarian
- Office Assistant – Examination Section
- Lab Instructors - CS/IS/ECE/EE
- Foreman - (Electrical & Electronics)
- Warden - Boys / Girls Hostel

1. The institution provides professional work environment and ample opportunities for career development includes Research.
2. Qualification & Experience as per the AICTE Norms.
3. Candidates with Aptitude for Research and ability to conduct industrial consultancy shall be preferred.
4. Candidates with knowledge of quality process and relevant industry experience shall be preferred for suitable positions in IQAC.
5. Candidates from premier institutions and retired employees from research oriented institutions like IISc, IITs, NITs and other organizations of eminence are preferred.

E-mail- Recruitment@dbit.co.in your CV with copies of supporting documents or post them in a sealed envelope with two passport-size of Photographs superscribed with the post applied for within 15 days.
Principal

Security & Detectives

ಕನಕಪುರ ತಾಲೂಕಿನ ಹಾರೋಹಳ್ಳಿಯಲ್ಲಿರುವ ಕಾರ್ಖಾನೆಗೆ ಭದ್ರತಾ ಸಿಬ್ಬಂದಿಗಳು ಬೇಕಾಗಿದ್ದಾರೆ. 8073958288, 8971242039

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

Kanakapura Road

ಕನಕಪುರ ರಸ್ತೆ ಮತ್ತು ಬನ್ನೇರುಘಟ್ಟ ಅರಣ್ಯದ ಗಡಿಗೆ ಹೊಂದಿಕೊಂಡಂತೆ 10 ಎಕರೆವರೆಗೆ ಕೃಷಿ ಭೂಮಿ ಖರೀದಿಸಲು ಉದ್ದೇಶಿಸಲಾಗಿದೆ.ಸಂಪರ್ಕಿಸಿ : 9916690774

ಭವಿಷ್ಯ

Astrology

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೀಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

ಸಮಾಜಸೇವೆ

Old Age Home

ಆಶೀರ್ವಾದ ಹಿರಿಯರ ಹಾರೈಕೆ ಕೇಂದ್ರ ಜನತಾ ಕಾಲೋನಿ 3ನೇ ಕ್ರಾಸ್ ಗಣಪತಿಹಳ್ಳಿ ದೊಡ್ಡಆಲದಮರ ರೋಡ್ ಬೆಂಗಳೂರು 9945202179 / 9945782935

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಯೊಂದಿಗೆ 22.12.2024 20.01.2025 ರಿಂದ 7 ದಿನಗಳ ತಮಿಳುನಾಡು ಕೇರಳ 23.12.2024, 19.01.2025 ರಿಂದ 7 ದಿನಗಳ ಹೈದರಾಬಾದ್ ಮಂತ್ರಾಲಯ ಶ್ರೀಶೈಲಂ 4-12-2024 28-01-2025 ರಿಂದ 17/11/8 ದಿನಗಳ ರಾಜಸ್ಥಾನ್ ಗುಜರಾತ್ ಪ್ರವಾಸಳು. 12.12.2024, 04.02.2025, ರಿಂದ 7/11 ದಿನಗಳ ಸಿಂಗಾಪುರ್. ಮಲೇಶಿಯಾ. 19.12.2024 ರಿಂದ5 ದಿನಗಳ ಥೈಲ್ಯಾಂಡ್. 16.01.2025 ರಿಂದ 10ದಿನಗಳ ವಿಯೆಟ್ನಾಮ್, ಕಾಂಬೋಡಿಯ 23.1.2025, 07.02.2025 ರಿಂದ 6ದಿನಗಳ ದುಬೈ, ಅಬುಧಾಬಿ ಪ್ರವಾಸಗಳು ಮಾರ್ಚ್ ತಿಂಗಳಲ್ಲಿ ಕಾಶಿ,ಗಯಾ ಚಾರ್ ದಾಮ್ ಪ್ರವಾಸಗಳಿಗೆ ಆನಂದ್ ವಿಹಾರಿ ಬೆಂಗಳೂರು 23. 080- 23385837, 8088887677

04.12.2024 ರಿಂದ ಅಷ್ಟ ಜ್ಯೋತಿರ್ಲಿಂಗಗಳ ಪ್ರವಾಸ. 20.12.2024 ರಿಂದ ಕಾಶಿ,ಗಯಾ,ಅಯೋಧ್ಯ ಚಿತ್ರಕೂಟ ಬೈದ್ಯನಾಥ ನೈಮಿಷಾರಣ್ಯ 18.01.2024 ಆಗ್ರಾ ಮಥುರಾ ಜೈಪುರ್ ಪುಷ್ಕರ್ ಜೈಸೆಲ್‌ಮೇರ್ ಬಿಕಾನೇರ್ ಕಾರಣಿಮಾತ ಜೋದ್ ಪುರ್ ನಾಥದ್ವಾರ್ ಉದಯಪುರ್ ಮೌಂಟ್‌ಅಬು 12 ದಿನಗಳ ಪ್ರವಾಸ. 10.02.2025 ಕೊನಾರ್ಕ್ ಭುವನೇಶ್ವರ್ ಪುರಿಜಗನ್ನಾಥ್ ಕಾಶಿ,ನೇಪಾಳ ಮುಕ್ತಿನಾಥ ಪ್ರವಾಸ 17 ದಿನಗಳು ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು70. 9342287551 8050629305

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560| +91 9901641752 | 080-45557163/164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ
ಶ್ರೀ ಕೆ.ಸಿ. ಈರಪ್ಪ ರೆಡ್ಡಿ
ಭಗವದ್ಗೀತೆ
'ನಾನು' ಮತ್ತು 'ನನ್ನದು' ಎಂಬ ಎಲ್ಲಾ ಆಲೋಚನೆಗಳಿಂದ ಮುಕ್ತವಾಗಿ, ಮನುಷ್ಯನು ಸಂಪೂರ್ಣ ಶಾಂತಿಯನ್ನು ಕಂಡುಕೊಳ್ಳುತ್ತಾನೆ.
ನಿಮ್ಮ ಸವಿನೆನಪಲ್ಲಿ :
ಧರ್ಮಪತ್ನಿ ಲಕ್ಷ್ಮಮ್ಮ ಈರಪ್ಪರೆಡ್ಡಿ
ಸಹೋದರರು, ಸಹೋದರಿಯರು
ಮಕ್ಕಳು : ರೇಣುಕಾ, ರಾಜು ರೆಡ್ಡಿ, ರಾಘವೇಂದ್ರ ರೆಡ್ಡಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

2013ರ ಗುರುಪಾಲ್ ಸಿಂಗ್ ಅಪಹರಣ, ಹತ್ಯೆ ಪ್ರಕರಣದ ವಿಚಾರಣೆ: ಸುಪ್ರೀಂ ಕೋರ್ಟ್ ಅಭಿಪ್ರಾಯ

‘ನೈತಿಕತೆಯಿಂದ ಅಪರಾಧ ನಿರ್ಣಯ ಅಸಾಧ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾನೂನುಬದ್ಧ ಸಾಕ್ಷ್ಯಗಳು ಲಭ್ಯವಿದ್ದರೆ ಮಾತ್ರ ಆರೋಪಿಯನ್ನು ದೋಷಿ ಎಂದು ಪರಿಗಣಿಸಲು ಸಾಧ್ಯ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಒಕಾ, ಅಹಸಾನುದ್ದೀನ್ ಅಮಾನುಲ್ಲಾ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ನ್ಯಾಯಪೀಠವು, ಅಪಹರಣ ಮತ್ತು ಕೊಲೆ ಪ್ರಕರಣದಲ್ಲಿ ರಣದೀಪ್ ಸಿಂಗ್ ಅಲಿಯಾಸ್ ರಾಣಾ ಮತ್ತು ಮತ್ತೊಬ್ಬ ಆರೋಪಿಯನ್ನು ಖಲಾಸೆಗೊಳಿಸಿತು.

ಈ ಮೂಲಕ ದೋಷಿಗಳು ಎಂಬ ತೀರ್ಪನ್ನು ಎತ್ತಿಹಿಡಿದಿದ್ದ ಪಂಜಾಬ್–ಹರಿಯಾಣ ಹೈಕೋರ್ಟ್ ತೀರ್ಪು ಮತ್ತು ಜೀವಾವಧಿ ಶಿಕ್ಷೆ ವಿಧಿಸಿದ್ದ ಅಂಬಾಲಾ ಕೋರ್ಟ್ ತೀರ್ಪನ್ನು ವಜಾಗೊಳಿಸಿತು.

ವಿಚಾರಣೆ ಸಂದರ್ಭದಲ್ಲಿ ಸರ್ಕಾರದ ಪರ ವಕೀಲರು, ‘ಇದೊಂದು ಭೀಕರ ಹತ್ಯೆ ಪ್ರಕರಣ’ ಎಂದು ವಾದಿಸಿದರು.

ಆಗ ನ್ಯಾಯಪೀಠವು, ‘ಹೌದು, ಇದೊಂದು ಭೀಕರ ಹತ್ಯೆ ಪ್ರಕರಣ. ಆದರೆ ಅಪರಾಧದ ಭೀಕರತೆಯನ್ನು ಸಾಬೀತುಪಡಿಸುವ, ಸಂಶಯಕ್ಕೆ ಆಸ್ಪದ ನೀಡದ ಸಾಕ್ಷ್ಯಗಳು ಲಭ್ಯವಿಲ್ಲ. ಈ ಪ್ರಕರಣದಲ್ಲಿ ಆರೋಪಿಗಳ ಪಾತ್ರವನ್ನು ಸಾಬೀತು ಮಾಡುವ ಕಾನೂನುಬದ್ಧ ಸಾಕ್ಷ್ಯಗಳೂ ಇಲ್ಲ. ನ್ಯಾಯಾಲಯವೊಂದು ನೈತಿಕತೆಯ ಆಧಾರದಲ್ಲಿ ಅಪರಾಧ ನಿರ್ಣಯ ಮಾಡಿ ಶಿಕ್ಷೆ ನೀಡಲು ಸಾಧ್ಯವಿಲ್ಲ’ಎಂದು ಪ್ರತಿಪಾದಿಸಿತು.

ಘಟನಾ ಸ್ಥಳದಲ್ಲಿ ವಶಪಡಿಸಿಕೊಂಡ ಸಾಕ್ಷ್ಯಗಳ ಆಧಾರದಲ್ಲಿಯೂ ಅಪರಾಧ ನಿರ್ಣಯ ಮಾಡಿ ಶಿಕ್ಷೆ ವಿಧಿಸಲು ಸಾಧ್ಯವಿಲ್ಲ ಎಂದು ತಿಳಿಸಿತು.

ಪ್ರತ್ಯಕ್ಷಸಾಕ್ಷಿ ಆಗಿರುವ ಕೊಲೆಯಾದ ವ್ಯಕ್ತಿಯ ಸಹೋದರಿಯ ಹೇಳಿಕೆಯಲ್ಲಿ ಹಲವು ಲೋಪದೋಷಗಳು ಇವೆ ಎಂದು ಕೋರ್ಟ್ ಹೇಳಿತು.

2013 ಜುಲೈ 8ರಂದು ಗುರುಪಾಲ್ ಸಿಂಗ್ ಅವರನ್ನು ಅಪಹರಿಸಿ ಹತ್ಯೆ ಮಾಡಲಾಗಿತ್ತು. ಮರುದಿನ ಕಾಲುವೆಯಲ್ಲಿ ಅವರ ಮೃತದೇಹ ಪತ್ತೆಯಾಗಿತ್ತು. ಸಿಂಗ್ ಸಹೋದರಿ, ‘ನನ್ನನ್ನು ಭೇಟಿಯಾಗಲು ಬರುವ ಸಂದರ್ಭದಲ್ಲಿ ಆರೋಪಿಗಳು ಕಾರಿನಲ್ಲಿ ಅಪಹರಿಸಿದ್ದಾರೆ’ ಎಂದು ದೂರಿದ್ದರು.

ಅಕ್ರಮ ವಲಸಿಗರ ಸಾವು: ಇಬ್ಬರು ದೋಷಿ

ಅಹಮದಾಬಾದ್: ಕೆನಡಾ-ಅಮೆರಿಕ ಗಡಿಯಲ್ಲಿ ಗುಜರಾತಿ ಕುಟುಂಬದ ನಾಲ್ವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯರೊಬ್ಬರು ಸೇರಿದಂತೆ ಇಬ್ಬರನ್ನು ಅಮೆರಿಕದ ಫೆಡೆರಲ್ ಕೋರ್ಟ್ ದೋಷಿಗಳು ಎಂದು ಘೋಷಿಸಿದೆ.

ಎರಡು ವರ್ಷಗಳ ಹಿಂದೆ ಗುಜರಾತ್ ರಾಜ್ಯದ ಗಾಂಧಿನಗರ ಜಿಲ್ಲೆಯ ಡಿಂಗುಚಾ ಗ್ರಾಮದ ಒಂದೇ ಕುಟುಂಬದ ನಾಲ್ವರು, ಕೆನಡಾದಿಂದ ಅಮೆರಿಕಕ್ಕೆ ಅಕ್ರಮವಾಗಿ ಗಡಿ ದಾಟುವಾಗ ತೀವ್ರ ಚಳಿಯಿಂದಾಗಿ ಮೃತಪಟ್ಟಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಮಾನವ ಕಳ್ಳಸಾಗಣೆ ದಂಧೆಯಲ್ಲಿದ್ದ ಗುಜರಾತ್ ಮೂಲದ ವ್ಯಕ್ತಿ ಸೇರಿದಂತೆ ಇಬ್ಬರನ್ನು ಅಮೆರಿಕದ ಫೆಡರಲ್ ಕೋರ್ಟ್ ದೋಷಿಗಳು ಎಂದು ಘೋಷಿಸಿದೆ.

29 ವರ್ಷದ ಹರ್ಷಕುಮಾರ್ ರಮಣ್‌ಲಾಲ್ ಪಟೇಲ್, 50ರ ಸ್ಟೀವ್ ಆಂಟನಿ ಶಾಂಡ್ ಅವರೇ ದೋಷಿಗಳು. ಫೆಡೆರಲ್ ನ್ಯಾಯಾಧೀಶರು ಅಮೆರಿಕದ ಶಿಕ್ಷಾ ಮಾರ್ಗಸೂಚಿಗಳು ಮತ್ತು ಇತರ ಶಾಸನಬದ್ಧ ಅಂಶಗಳನ್ನು ಪರಿಗಣಿಸಿದ ಬಳಿಕ ಎಂತಹ ಶಿಕ್ಷೆ ವಿಧಿಸಬೇಕು ಎಂದು ನಿರ್ಧರಿಸಲಿದ್ದಾರೆ ಎಂದು ಸಾರ್ವಜನಿಕ ವ್ಯವಹಾರಗಳ ಅಮೆರಿಕದ ನ್ಯಾಯಾಲಯ ಕಚೇರಿ ಪ್ರಕಟಣೆ ತಿಳಿಸಿದೆ.

‘ಪಟೇಲ್ ಹಾಗೂ ಶಾಂಡ್ ಅವರು ಭಾರತೀಯ ಪ್ರಜೆಗಳನ್ನು ವಿದ್ಯಾರ್ಥಿ ವೀಸಾ ಮೇಲೆ ಕೆನಡಾಕ್ಕೆ ಕರೆತಂದು, ಬಳಿಕ ಅಮೆರಿಕಕ್ಕೆ ಕಳ್ಳಸಾಗಣೆ ಮಾಡುತ್ತಿದ್ದರು’ ಎಂದು ಪ್ರಕಟಣೆ ತಿಳಿಸಿದೆ. ಗಡಿ ದಾಟುವಾಗ ಮೃತಪಟ್ಟ ಡಿಂಗುಚಾ ಗ್ರಾಮದವರನ್ನು ಜಗದೀಶ್ ಪಟೇಲ್ (39), ಪತ್ನಿ ವೈಶಾಲಿಬೆನ್ ಪಟೇಲ್ (37), ಮಕ್ಕಳಾದ ವಿಹಾಂಗಿ ಪಟೇಲ್ (11) ಮತ್ತು ಧಾರ್ಮಿಕ್ ಪಟೇಲ್ (3) ಎಂದು ಗುರುತಿಸಲಾಗಿದೆ.

ಗುಜರಾತ್ ಪೊಲೀಸರ ತನಿಖೆ: ಅಹಮದಾಬಾದ್‌ನ ಅಪರಾಧ ಪತ್ತೆ ವಿಭಾಗ (DCB) ಮೂವರು ಶಂಕಿತ ಮಾನವ ಕಳ್ಳ ಸಾಗಣೆದಾರರ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದೆ. ಭವೇಶ್ ಪಟೇಲ್, ದಶರಥ್ ಪ್ರತಾಪ್ ಚೌಧರಿ, ಕುಡಸನ್, ಯೋಗೇಶ್ ಪಟೇಲ್ ಎಂಬವರು 11 ಗುಜರಾತಿಗಳ ತಂಡವನ್ನು ಕೆನಡಾ ಗಡಿ ಮೂಲಕ ಅಮೆರಿಕಗೆ ಕಳ್ಳಸಾಗಣೆ ಮಾಡಿದ ಆರೋಪವನ್ನು ಆರೋಪ ಪಟ್ಟಿಯಲ್ಲಿ ದಾಖಲಿಸಲಾಗಿದೆ.

ಮಣಿಪುರ: ಇಂಟರ್‌ನೆಟ್ ನಿರ್ಬಂಧ ಮುಂದುವರಿಕೆ

ಮಣಿಪುರದ ಗುಡ್ಡಗಾಡು ಜಿಲ್ಲೆಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದ ಭದ್ರತಾ ಸಿಬ್ಬಂದಿ–ಪಿಟಿಐ ಚಿತ್ರ

ಇಂಫಾಲ್ (ಪಿಟಿಐ): ರಾಜ್ಯದ ಏಳು ಜಿಲ್ಲೆಗಳಲ್ಲಿ ಮೊಬೈಲ್ ಇಂಟರ್‌ನೆಟ್ ಮೇಲೆ ಹೇರಿದ್ದ ನಿಷೇಧವನ್ನು ಎರಡು ದಿನಗಳ ಕಾಲ ವಿಸ್ತರಿಸಿ ಮಣಿಪುರ ಸರ್ಕಾರವು ಶನಿವಾರ ಆದೇಶ ಹೊರಡಿಸಿದೆ.

ನ.16ರಂದು ಹಿಂಸಾಚಾರವು ಭುಗಿಲೆದ್ದ ಬಳಿಕ ಸಮಾಜ ವಿರೋಧಿ ಸಂದೇಶ ಹರಡುವುದನ್ನು ತಪ್ಪಿಸಲು ರಾಜ್ಯ ಸರ್ಕಾರವು ಮೊಬೈಲ್ ಇಂಟರ್‌ನೆಟ್ ಮೇಲೆ ನಿಷೇಧ ಹೇರಿತ್ತು. ಇದಾದ ಬಳಿಕ ಹಲವು ಬಾರಿ ನಿಷೇಧದ ಅವಧಿಯನ್ನು ವಿಸ್ತರಿಸಿತ್ತು.

‘ಕಾನೂನು ಹಾಗೂ ಸುವ್ಯವಸ್ಥೆಯನ್ನು ಗಮನದಲ್ಲಿರಿಸಿಕೊಂಡು, ರಾಜ್ಯ ಸರ್ಕಾರ ಇಂಫಾಲ್ ಪಶ್ಚಿಮ, ಇಂಫಾಲ್ ಪೂರ್ವ, ಬಿಷ್ಣುಪುರ್, ತೌಬಾಲ್, ಚುರಾಚಾಂದಪುರ, ಕಂಗ್‌ಪೋಕ್ಪಿ ಜಿಲ್ಲೆಯಲ್ಲಿ ಜನರ ಹಿತದೃಷ್ಟಿಯಿಂದ ಮೊಬೈಲ್ ಇಂಟರ್‌ನೆಟ್ ಮೇಲಿನ ನಿಷೇಧವನ್ನು ಎರಡು ದಿನಗಳ ಕಾಲ ವಿಸ್ತರಿಸಿದೆ’ ಎಂದು ಕೇಂದ್ರ ಗೃಹ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ನ.16ರಂದು ಮೂವರು ಮಹಿಳೆಯರು ಹಾಗೂ ಮೂವರು ಮಕ್ಕಳ ಮೃತದೇಹ ಪತ್ತೆಯಾದ ಬಳಿಕ ರಾಜ್ಯದಲ್ಲಿ ಹಿಂಸಾಚಾರ ತಲೆದೋರಿದ್ದರಿಂದ ಇಂಟರ್‌ನೆಟ್ ಸ್ಥಗಿತಗೊಳಿಸಲಾಗಿತ್ತು. ಆರೋಗ್ಯ ಸೇವೆ, ಶೈಕ್ಷಣಿಕ ಸಂಸ್ಥೆ ಹಾಗೂ ಇತರೆ ಕಚೇರಿಗಳ ದೈನಂದಿನ ಕೆಲಸಕ್ಕೆ ಅಡಚಣೆ ಉಂಟಾಗಿದ್ದರಿಂದ ಬ್ರಾಡ್‌ಬ್ಯಾಂಡ್ ಮೇಲಿನ ನಿಷೇಧವನ್ನು ಸರ್ಕಾರ ನ.19ರಂದೇ ಹಿಂದೆ ಪಡೆದಿತ್ತು.

ಇನ್ನೂ ಇಬ್ಬರ ಬಂಧನ: ಶಾಸಕರ ಮನೆಗಳ ಮೇಲೆ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಇಬ್ಬರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಇದುವರೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 34 ಮಂದಿಯನ್ನು ಬಂಧಿಸಿದಂತಾಗಿದೆ.

‘ಉದಯನಿಧಿ ತಮ್ಮ ಏಳ್ಗೆಗೆ ತ್ಯಾಗ ಮಾಡಿಲ್ಲ’

ಉದಯನಿಧಿ ಸ್ಟಾಲಿನ್

ಧರ್ಮಪುರಿ (ಪಿಟಿಐ): ‘ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು ಈಗಿರುವ ಸ್ಥಾನಮಾನ ಹೊಂದಲು ಯಾವುದೇ ತ್ಯಾಗ ಮಾಡಿಲ್ಲ. ಆಡಳಿತಾರೂಢ ಡಿಎಂಕೆ ‘ಕುಟುಂಬ ರಾಜಕೀಯ’ದಲ್ಲಿ ತೊಡಗಿದೆ’ ಎಂದು ಎಐಎಡಿಎಂಕೆ ಆರೋಪಿಸಿದೆ.

ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಎಐಎಡಿಎಂಕೆ ಉಪ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮುನುಸಾಮಿ, ‘ಉದಯನಿಧಿ ಕುಟುಂಬದವರು ರಾಜಕಾರಣದ ಸಂಕೇತದಂತಿದ್ದಾರೆ. ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರನ್ನು ಯಾವುದೇ ಸಂದರ್ಭದಲ್ಲಿ ಅವರ ಹುದ್ದೆಯಿಂದಲೇ ಕಿತ್ತೊಗೆಯಬಹುದಾಗಿದೆ. ನಟ ವಿಜಯ್ ಈಗಷ್ಟೇ ಹೊಸ ಪಕ್ಷವನ್ನು ಸ್ಥಾಪಿಸಿದ್ದಾರೆ’ ಎಂದು ತಿಳಿಸಿದರು.

ಪಕ್ಷವನ್ನು 70 ವರ್ಷದ ಇ. ಪಳನಿಸ್ವಾಮಿ ಮುಂದುವರಿಸುತ್ತಿದ್ದು, ಯುವ ನಾಯಕರಿಗೆ ಪಕ್ಷದಲ್ಲಿ ಅವಕಾಶ ನೀಡುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಉದಯನಿಧಿ ಸ್ಟಾಲಿನ್ ಯಾರು? ಅಜ್ಜ, ತಂದೆ ಹಾಗೂ ಮಗ ರಾಜಕೀಯದಲ್ಲಿದ್ದು, ಕುಟುಂಬ ರಾಜಕಾರಣ ಮಾಡುತ್ತಿದ್ದಾರೆ. ಆತ ಆ ಹುದ್ದೆಗೆ ಬರಲು ಯಾವುದೇ ತ್ಯಾಗ ಮಾಡಿಲ್ಲ’ ಎಂದರು. ‘ಎಐಎಡಿಎಂಕೆಯಲ್ಲಿ ಕುಟುಂಬ ರಾಜಕಾರಣಕ್ಕೆ ಆಸ್ಪದ ಇಲ್ಲ’ ಎಂದರು.

ಮನರಂಜನೆ... ಅಂತರರಾಷ್ಟ್ರೀಯ ವಿದೂಷಕರ ಉತ್ಸವದ ಅಂಗವಾಗಿ ಚೆನ್ನೈನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿದೂಷಕರ ವೇಷ ಧರಿಸಿದ ಕಲಾವಿದರು ಪ್ರೇಕ್ಷಕರನ್ನು ರಂಜಿಸಿದರು –ಎಎಫ್‌ಪಿ ಚಿತ್ರ

ಪೊಲೀಸ್ ದೌರ್ಜನ್ಯ: ಮಾನವ ಹಕ್ಕುಗಳ ಆಯೋಗದಿಂದ ತನಿಖೆ

ತೆಲಂಗಾಣದ ಲಗಚರ್ಲಾ ಗ್ರಾಮಸ್ಥರಿಂದ ದಾಖಲಾದ ದೂರು

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಭೂ ಸ್ವಾಧೀನ ಹಾಗೂ ಪೊಲೀಸರ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ತೆಲಂಗಾಣದ ಲಗಚರ್ಲಾ ಗ್ರಾಮಸ್ಥರು ನೀಡಿದ ದೂರಿನ ಸಂಬಂಧ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ತನಿಖೆ ಆರಂಭಿಸಿದೆ.

ಆಯೋಗವು ವಿಚಾರಣೆ ಕೈಗೊಳ್ಳಲು ಶನಿವಾರ ತೆಲಂಗಾಣದ ವಿಕಾರಾಬಾದ್ ಜಿಲ್ಲೆಗೆ ಆಗಮಿಸಿದ್ದು, ಭಾನುವಾರ ಲಗಚರ್ಲಾ ಗ್ರಾಮಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ. ಆಯೋಗವು ಶನಿವಾರ ರೋಟಿಬಂಡ ತಾಂಡದ ನಿವಾಸಿಗಳೊಂದಿಗೆ ಮಾತುಕತೆ ನಡೆಸಿತು. ಪೊಲೀಸರು ದೌರ್ಜನ್ಯ, ಹಲ್ಲೆ ನಡೆಸಿ, ಸುಳ್ಳು ಅಪರಾಧಗಳ ಆರೋಪವನ್ನು ತಮ್ಮ ಮೇಲೆ ಹೊರಿಸಿದ್ದಾರೆ ಎಂದು ಲಗಚರ್ಲಾ ಗ್ರಾಮದ ರೈತರು ಆರೋಪಿಸಿದರು.

ಉದ್ದೇಶಿತ ‘ಫಾರ್ಮಾ ಗ್ರಾಮ’ ನಿರ್ಮಾಣಕ್ಕೆ ಸರ್ಕಾರ ಭೂಸ್ವಾಧೀನ ಮಾಡುತ್ತಿರುವುದನ್ನು ವಿರೋಧಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ ಬಳಿಕ ಪೊಲೀಸ್ ದೌರ್ಜನ್ಯ ನಡೆದಿದೆ ಎಂದು ಹೇಳಲಾಗಿದೆ. ದೌರ್ಜನ್ಯಕ್ಕೊಳಗಾದ ಹೆಚ್ಚಿನವರು ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ಸಮುದಾಯಗಳಿಗೆ ಸೇರಿದವರು ಎನ್ನಲಾಗಿದೆ. ಕೆಲವು ದಿನಗಳ ಹಿಂದೆ ದೆಹಲಿಯಲ್ಲಿ ಆಯೋಗವನ್ನು ಸಂಪರ್ಕಿಸಿದ್ದ ಕನಿಷ್ಠ 12 ಮಂದಿ ಸಂತ್ರಸ್ತರು ಘಟನೆ ಸಂಬಂಧ ಮಧ್ಯ ಪ್ರವೇಶಿಸಬೇಕು ಎಂದು ಮನವಿ ಮಾಡಿ ದೂರು ಸಲ್ಲಿಸಿದ್ದರು.

ಉದ್ದೇಶಿತ ಫಾರ್ಮಾ ಯೋಜನೆಗೆ ಭೂ ಸ್ವಾಧೀನ ಆಗಿರುವುದನ್ನು ಘೋಷಿಸಲು ನ.11ರಂದು ಜಿಲ್ಲಾಧಿಕಾರಿ ಪ್ರತೀಕ್ ಜೈನ್ ಅವರು ಇತರೆ ಅಧಿಕಾರಿ ಗಳೊಂದಿಗೆ ಆಗಮಿಸಿದ್ದರು. ಸರ್ಕಾರದ ಈ ನಿರ್ಧಾರವನ್ನು ಖಂಡಿಸಿ ಕೆಲವು ಗ್ರಾಮಸ್ಥರು, ಜಿಲ್ಲಾಧಿಕಾರಿ ಹಾಗೂ ಇತರೆ ಸರ್ಕಾರಿ ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು. ಅದೇ ದಿನ ಸಂಜೆ ನೂರಾರು ಪೊಲೀಸರು ಕೆಲವು ಸ್ಥಳೀಯ ಗೂಂಡಾಗಳೊಂದಿಗೆ ಗ್ರಾಮದ ಮೇಲೆ ದಾಳಿ ನಡೆಸಿ ಪ್ರತಿಭಟನಾನಿರತ ಗ್ರಾಮಸ್ಥರ ಮೇಲೆ ಹಲ್ಲೆ ನಡೆಸಿದರು ಎಂದು ಆರೋಪಿಸಲಾಗಿದೆ.

ಯಾರೊಂದಿಗೂ ಗ್ರಾಮಸ್ಥರು ಸಂಪರ್ಕ ಸಾಧಿಸದೇ ಇರಲಿ ಎಂದು ಇಂಟರ್‌ನೆಟ್ ಸೇವೆ ಮತ್ತು ವಿದ್ಯುತ್ ಸಂಪರ್ಕ ಕಡಿತ ಗೊಳಿಸಲಾಗಿದೆ ಎಂದು ಆರೋಪಿಸಲಾಗಿದೆ. ಗ್ರಾಮಸ್ಥರ ದೂರಿನಲ್ಲಿರುವ ಮಾಹಿತಿ ನಿಜವೇ ಆಗಿದ್ದರೆ ಇದು ಮಾನವ ಹಕ್ಕುಗಳನ್ನು ಉಲ್ಲಂಘಿಸಿದ ಗಂಭೀರ ಪ್ರಕರಣ ವಾಗಲಿದೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ. ಎರಡು ವಾರಗಳಲ್ಲಿ ಈ ಸಂಬಂಧ ವಿಸ್ತೃತ ವರದಿ ನೀಡುವಂತೆ ತೆಲಂಗಾಣದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ಆಯೋಗ ನೋಟಿಸ್ ನೀಡಿದೆ.

ಲೆಬನಾನ್‌ನ ಬೈರೂತ್ ಮೇಲೆ ಶನಿವಾರ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಿಂದಾಗಿ ದಟ್ಟ ಹೊಗೆ ಆವರಿಸಿತ್ತು – ಎಎಫ್‌ಪಿ ಚಿತ್ರ

ಇಸ್ರೇಲ್ ದಾಳಿ: 17 ಸಾವು

ಬೈರೂತ್ (ಎಪಿ): ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 11 ಜನರು ಸಾವಿಗೀಡಾಗಿದ್ದು, 63 ಜನ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಘಟನೆ ನಡೆದ ಸ್ಥಳದಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಮೃತರ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಡಿಎನ್‌ಎ ಪರೀಕ್ಷೆ ಮೂಲಕ ಮೃತರ ಗುರುತು ಪತ್ತೆ ಮಾಡಲಾಗುತ್ತಿದೆ. ಒಂದು ವಾರದ ಅವಧಿಯಲ್ಲಿ ಬೈರೂತ್ ಮೇಲೆ ಇಸ್ರೇಲ್ ನಡೆಸಿದ ನಾಲ್ಕನೆಯ ದಾಳಿ ಇದಾಗಿದೆ’ ಎಂದು ಲೆಬನಾನ್‌ನ ಆರೋಗ್ಯ ಸಚಿವರು ತಿಳಿಸಿದರು.

ಈವರೆಗೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಲೆಬನಾನ್‌ನ 3,500 ಜನರು ಸಾವಿಗೀಡಾಗಿದ್ದು, 15,000 ಜನರು ಗಾಯಗೊಂಡಿದ್ದಾರೆ. ಅಲ್ಲದೇ 12 ಲಕ್ಷ, ಅಥವಾ ಲೆಬನಾನ್‌ನ ಒಟ್ಟು ಜನಸಂಖ್ಯೆಯ ಶೇ 25ರಷ್ಟು ಜನರು ಬೇರೆಡೆ ಸ್ಥಳಾಂತರಗೊಂಡಿದ್ದಾರೆ. ಉತ್ತರ ಇಸ್ರೇಲ್ ಮೇಲೆ ಲೆಬನಾನ್ ನಡೆಸಿದ ದಾಳಿಯಲ್ಲಿ 50 ಜನ ನಾಗರಿಕರು ಹಾಗೂ 90 ಇಸ್ರೇಲಿ ಸೈನಿಕರು ಸಾವಿಗೀಡಾಗಿದ್ದಾರೆ.

ಗಾಜಾದಲ್ಲಿ 6 ಮಂದಿ ಬಲಿ: ಗಾಜಾ ಮೇಲೆಯೂ ಇಸ್ರೇಲ್ ದಾಳಿ ಮುಂದುವರಿದಿದ್ದು, ಶನಿವಾರ ಖಾನ್ ಯೂನಿಸ್ ಮೇಲೆ ನಡೆದ ದಾಳಿಯಲ್ಲಿ ಇಬ್ಬರು ಮಹಿಳೆಯರು ಮತ್ತು ಮೂವರು ಮಕ್ಕಳು ಸೇರಿದಂತೆ 6 ಜನರು ಸಾವಿಗೀಡಾಗಿದ್ದಾರೆ.

ಕಳೆದ 13 ತಿಂಗಳುಗಳಿಂದ ನಡೆಯುತ್ತಿರುವ ಹಮಾಸ್ ಮತ್ತು ಇಸ್ರೇಲ್ ನಡುವಿನ ಯುದ್ಧದಲ್ಲಿ ಈವರೆಗೆ ಒಟ್ಟು 44,000 ಜನರು ಸಾವಿಗೀಡಾಗಿದ್ದಾರೆ ಎಂದು ಸ್ಥಳೀಯ ಆರೋಗ್ಯ ಅಧಿಕಾರಿಗಳು ಮಾಹಿತಿ ನೀಡಿದರು.

ಈವರೆಗೆ ತಾನು 17,000 ಬಂಡುಕೋರರನ್ನು ಹೊಡೆದುರುಳಿಸಿರುವುದಾಗಿ ಇಸ್ರೇಲ್ ಹೇಳಿಕೊಂಡಿದೆ.

ಅಮೆರಿಕ: ಭಾರತ ಮೂಲದ ವ್ಯಕ್ತಿ ಬಂಧನ

ವಾಷಿಂಗ್ಟನ್ (ಪಿಟಿಐ): ವಿಮಾನಯಾನದ ಪರಿಕರಗಳನ್ನು ರಷ್ಯಾಗೆ ಅಕ್ರಮವಾಗಿ ಪೂರೈಕೆ ಮಾಡಿದ ಆರೋಪದ ಮೇಲೆ ಭಾರತ ಮೂಲದ ವ್ಯಕ್ತಿಯೊಬ್ಬರನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ.

ಸಂಜಯ್ ಕೌಶಿಕ್ ಬಂಧಿತ ವ್ಯಕ್ತಿ. ದೆಹಲಿ ಮೂಲದ ಏರ್ ಚಾರ್ಟರ್ ಸರ್ವೀಸ್ ಒದಗಿಸುವ ಸಂಸ್ಥೆ ಅರೆಜೊ ಏವಿಯೇಷನ್‌ನಲ್ಲಿ ವ್ಯವಸ್ಥಾಪಕ ಪಾಲುದಾರ ರಾಗಿ ಇವರು ಕೆಲಸ ಮಾಡುತ್ತಿದ್ದರು. ಭಾರತಕ್ಕೆ ಅಧಿಕೃತ ಪ್ರವಾಸಕ್ಕೆ ಬಂದು ವಾಪಸಾದ ನಂತರ ಅಕ್ಟೋಬರ್ 17ರಂದು ಮಿಯಾಮಿಯಲ್ಲಿ ಬಂಧಿಸಲಾಗಿದೆ ಎಂದು ನ್ಯಾಯಾಂಗ ಇಲಾಖೆ ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

‘ಕೌಶಿಕ್ ಅವರು ಅಮೆರಿಕದಿಂದ ವಿಮಾನಯಾನಕ್ಕೆ ಸಂಬಂಧಿಸಿದ ಪರಿಕರಗಳು ಮತ್ತು ತಂತ್ರಜ್ಞಾನವನ್ನು ರಷ್ಯಾದ ಸಂಸ್ಥೆಗಳಿಗೆ ಅಕ್ರಮವಾಗಿ ಪೂರೈಕೆ ಮಾಡುತ್ತಿದ್ದರು’ ಎಂದು ಫೆಡರಲ್ ಪ್ರಾಸಿಕ್ಯೂಟರ್ ಕೋರ್ಟ್‌ಗೆ ತಿಳಿಸಿದ್ದಾರೆ.

ಕೌಶಿಕ್ ಅವರ ಮೇಲಿನ ಆರೋಪ ದೃಢಪಟ್ಟು ಅವರು ದೋಷಿ ಎಂದು ಸಾಬೀತಾದಲ್ಲಿ, ಅವರಿಗೆ ಗರಿಷ್ಠ 20 ವರ್ಷ ಜೈಲು ಶಿಕ್ಷೆ ಮತ್ತು 10 ಲಕ್ಷ ಡಾಲರ್ ದಂಡ ವಿಧಿಸಬಹುದಾಗಿದೆ.

ಟ್ರಂಪ್ ಆಡಳಿತದ ವಿವಿಧ ಹುದ್ದೆಗೆ ನಾಮನಿರ್ದೇಶನ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಖ್ಯಾತ ಅಂತರರಾಷ್ಟ್ರೀಯ ಹೂಡಿಕೆದಾರ ಸ್ಕಾಟ್ ಬೆಸ್ಸೆಂಟ್ ಅವರನ್ನು ಖಜಾಂಚಿ ಕಾರ್ಯದರ್ಶಿಯಾಗಿ ನಾಮನಿರ್ದೇಶನ ಮಾಡಿರುವುದಾಗಿ ಶುಕ್ರವಾರ ಘೋಷಿಸಿದ್ದಾರೆ.

ಸಂಸದೆ ಲೋರಿ ಚಾವೇಜ್ ಡಿರೇಮರ್ ಅವರನ್ನು ಲೇಬರ್ ಕಾರ್ಯದರ್ಶಿಯಾಗಿ ಮತ್ತು ಡಾ.ಜನ್ಯಾಟ್ ನೆಶಿವಾಟ್ ಅವರನ್ನು ಅಮೆರಿಕದ ಮುಂದಿನ ಸರ್ಜನ್ ಜನರಲ್ ಆಗಿ ಆಯ್ಕೆ ಮಾಡಿರುವುದಾಗಿ ತಿಳಿಸಿದ್ದಾರೆ.

ಅಲೆಕ್ಸ್ ವಾಂಗ್ ಅವರನ್ನು ಪ್ರಧಾನ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಮತ್ತು ಡಾ. ಸೆಬ್ಯಾಸ್ಟೀನ್ ಗೋರ್ಕಾ ಅವರನ್ನು ಭಯೋತ್ಪಾದನೆ ನಿಗ್ರಹ ದಳದ ಹಿರಿಯ ನಿರ್ದೇಶಕರಾಗಿ ನೇಮಕ ಮಾಡಿದ್ದಾರೆ. ರೋಗ ನಿಯಂತ್ರಣ ಮತ್ತು ತಡೆ ಕೇಂದ್ರದ ನಿರ್ದೇಶಕರಾಗಿ ಮಾಜಿ ಸಂಸದ ಡಾ.ಡೇವ್ ವೆಲ್ಡನ್ ಅವರನ್ನು ಮತ್ತು ಆಹಾರ ಮತ್ತು ಔಷಧ ಮಂಡಳಿಯ (ಎಫ್‌ಡಿಎ) ನಿರ್ದೇಶಕರಾಗಿ ಮಾರ್ಟಿ ಮಾಕರೆ ಅವರನ್ನು ಆಯ್ಕೆ ಮಾಡಿದ್ದಾರೆ.

ಜೆಡಿಎಸ್ ನಾಯಕರೇ ನನಗೆ ನಿವೃತ್ತಿ ಕೊಟ್ಟಿದ್ದಾರೆ: ಜಿಟಿಡಿ

ಮೈಸೂರು: ‘ಜಿ.ಟಿ. ದೇವೇಗೌಡರ ರಾಜಕೀಯ ಸಾಕು, ಅವರ ಮಗ ಬೇಕು ಎಂದು ಎಚ್‌.ಡಿ. ಕುಮಾರಸ್ವಾಮಿ ಕುಟುಂಬ ತೀರ್ಮಾನಿಸಿದಂತಿದೆ. ಕಾಂಗ್ರೆಸ್‌ನಲ್ಲಿ ಮುಖಂಡರು ಭರ್ತಿಯಾಗಿದ್ದಾರೆ. ಬಿಜೆಪಿ–ಜೆಡಿಎಸ್‌ನಲ್ಲೂ ಜಾಗವಿಲ್ಲ. ಹೀಗಾಗಿ, ರಾಜಕೀಯ ನಿವೃತ್ತಿ ತೆಗೆದುಕೊಳ್ಳಿ ಎಂಬುದು ಅವರ ಆದೇಶ’ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಹೇಳಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ವಿಧಾನಸಭೆ ಚುನಾವಣೆಗೆ ಮುನ್ನ ಕಾಂಗ್ರೆಸ್ ನಾಯಕರು ನನ್ನನ್ನು ಸಂಪರ್ಕಿಸಿದ್ದು ನಿಜ. ಆದರೆ, ನಂತರದಲ್ಲಿ ಕಾಂಗ್ರೆಸ್ ಸೇರ್ಪಡೆ ಸಂಬಂಧ ಸಿದ್ದರಾಮಯ್ಯ ಸೇರಿದಂತೆ ಯಾರೂ ನನ್ನೊಂದಿಗೆ ಮಾತನಾಡಿಲ್ಲ. ಅಲ್ಲಿಂದ ಆಹ್ವಾನ ಬಂದಿಲ್ಲ. ಅಲ್ಲಿಗೆ ಹೋಗುವುದೂ ಇಲ್ಲ’ ಎಂದರು.

‘ಚನ್ನಪಟ್ಟಣ ಉಪಚುನಾವಣೆಯಲ್ಲಿ ನಿಖಿಲ್ ಗೆಲ್ಲಬೇಕಿತ್ತು. ಆದರೆ, ಸೋಲು–ಗೆಲುವು ಸಹಜ. ಮೂರು ಬಾರಿ ಸೋತವರು ಮತ್ತೆ ಗೆದ್ದು ಮಂತ್ರಿಯಾದ ಉದಾಹರಣೆ ಇದೆ. ನಿಖಿಲ್ ಇದನ್ನೇ ಸವಾಲಾಗಿ ಸ್ವೀಕರಿಸಿ ಪಕ್ಷ ಕಟ್ಟಬೇಕು’ ಎಂದು ಸಲಹೆ ನೀಡಿದರು.

ದೆಹಲಿಯಲ್ಲಿ ಮುಂದುವರಿದ ‘ಅಪಾಯದ ಸ್ಥಿತಿ’

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯೂಐ) ಶನಿವಾರ ಬೆಳಿಗ್ಗೆ 420ಕ್ಕೂ ಹೆಚ್ಚಿದ್ದು, ‘ಅಪಾಯದ ಸ್ಥಿತಿ’ ಮುಂದುವರಿದಿದೆ. ಕನಿಷ್ಠ ತಾಪಮಾನ 11.4 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

38 ನಿಗಾ ಕೇಂದ್ರಗಳ ಪೈಕಿ 9 ಕೇಂದ್ರಗಳಲ್ಲಿ ಎಕ್ಯೂಐ 450ಕ್ಕೂ ಹೆಚ್ಚಿದ್ದು, ‘ತೀವ್ರ ಅಪಾಯ’ದ ಸ್ಥಿತಿ ಇದೆ. 19 ಕೇಂದ್ರಗಳಲ್ಲಿ 400–450 ರ ಆಸುಪಾಸಿನಲ್ಲಿದೆ. ಉಳಿದೆಡೆಯೂ ವಾಯು ಗುಣಮಟ್ಟವು ಕಳಪೆ ಮಟ್ಟದಲ್ಲಿಯೇ ಇದೆ. ದೆಹಲಿಯಲ್ಲಿ ಭಾನುವಾರದಿಂದ ವಾಯು ಗುಣ ಮಟ್ಟವು ತೀವ್ರ ಅಪಾಯಕಾರಿ ಹಂತಕ್ಕೆ ಕುಸಿದಿತ್ತು. ಗುರುವಾರ ತುಸು ಇಳಿಕೆಯಾಗಿತ್ತಾದರೂ, ಶುಕ್ರವಾರದಿಂದ ಪರಿಸ್ಥಿತಿ ಮತ್ತೆ ಬಿಗಡಾಯಿಸಿದೆ.

ಮತ್ತೊಬ್ಬನನ್ನು ಮದುವೆಯಾಗಲು ಮಗಳನ್ನೇ ಕೊಂದ ತಾಯಿ

ನವದೆಹಲಿ (ಪಿಟಿಐ): ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ವ್ಯಕ್ತಿಯೊಬ್ಬರನ್ನು ಮದುವೆಯಾಗಲು ಮಹಿಳೆಯೊಬ್ಬರು ತನ್ನ ಐದು ವರ್ಷದ ಮಗಳನ್ನೇ ಕತ್ತು ಹಿಸುಕಿ ಕೊಲೆ ಮಾಡಿದ ಪ್ರಕರಣ ವಾಯವ್ಯ ದೆಹಲಿಯಲ್ಲಿ ನಡೆದಿದೆ.

‘ಸಂಬಂಧಿಕರ ಜೊತೆ ಮಹಿಳೆ ಹಿಮಾಚಲ ಪ್ರದೇಶದಲ್ಲಿ ನೆಲಸಿದ್ದರು. ನಂತರ, ದೆಹಲಿಗೆ ವಾಸಸ್ಥಳವನ್ನು ಬದಲಾಯಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆಸ್ಪತ್ರೆಗೆ ಕರೆತರುವ ವೇಳೆಯೇ ಮಗು ಮೃತಪಟ್ಟಿದೆ ಎಂದು ದೀಪ್‌ಚಂದ್ ಬಂಧು ಆಸ್ಪತ್ರೆಯ ಸಿಬ್ಬಂದಿಯು ಶುಕ್ರವಾರ ಪೊಲೀಸರಿಗೆ ತಿಳಿಸಿದ್ದರು. ಆಸ್ಪತ್ರೆಗೆ ಭೇಟಿ ನೀಡಿದ ಪೊಲೀಸರು, ಮಗುವಿನ ಮೃತದೇಹ ಪರಿಶೀಲಿಸಿದ ವೇಳೆ ಕತ್ತಿನ ಭಾಗದಲ್ಲಿ ಗಾಯದ ಕಲೆಗಳಿದ್ದವು. ತಕ್ಷಣವೇ ಪ್ರಕರಣ ದಾಖಲಿಸಿ, ತಾಯಿ ಹಾಗೂ ಸಂಬಂಧಿಕರನ್ನು ವಿಚಾರಣೆಗೆ ಒಳಪಡಿಸಲಾಯಿತು. ಆ ವೇಳೆ ತಾನೇ ಮಗಳನ್ನು ಕೊಂದಿರುವುದಾಗಿ ತಾಯಿ ತಪ್ಪೊಪ್ಪಿಕೊಂಡರು’ ಎಂದರು.

ಮಹಿಳೆಯ ಮೊದಲ ಪತಿ ಹಲವು ವರ್ಷಗಳ ಹಿಂದೆಯೇ ತ್ಯಜಿಸಿದ್ದರು. ಇದಾದ ಬಳಿಕ ಇನ್‌ಸ್ಟಾಗ್ರಾಂನಲ್ಲಿ ರಾಹುಲ್‌ನ ಪರಿಚಯವಾಗಿತ್ತು. ಆತನನ್ನು ಮದುವೆಯಾಗುವ ಉದ್ದೇಶದಿಂದಲೇ ದೆಹಲಿಗೆ ಬಂದಿದ್ದರು. ಆದರೆ, ಮಗು ಹೊಂದಿದ ಮಹಿಳೆಯನ್ನು ಮದುವೆಯಾಗಲು ರಾಹುಲ್ ನಿರಾಕರಿಸಿದ್ದ. ಇದರಿಂದ ಹತಾಶೆಗೊಳಗಾದ ಮಹಿಳೆಯು ಮಗಳನ್ನೇ ಕೊಂದು ಹಾಕಿದ್ದಾರೆ’ ಎಂದು ವಿವರಿಸಿದರು. ಮಹಿಳೆಯ ವಿರುದ್ಧ ಕೊಲೆ ಪ್ರಕರಣ ದಾಖಲಿಸಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

‘9ರಂದು ಸುವರ್ಣಸೌಧಕ್ಕೆ ಮುತ್ತಿಗೆ’

ಪ್ರಜಾವಾಣಿ ವಾರ್ತೆ

ಗುಣಧರನಂದಿ ಮಹಾರಾಜ

ಹುಬ್ಬಳ್ಳಿ: ‘ಜೈನರಿಗೆ ನಿಗಮ ಮಂಡಳಿ, ಬಡವರಿಗೆ ನಿವೇಶನ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಡಿಸೆಂಬರ್ 9ರಂದು ಬೆಳಗಾವಿಯ ಸುವರ್ಣಸೌಧಕ್ಕೆ ಮುತ್ತಿಗೆ ಹಾಕಲಾಗುವುದು. ಚಳಿಗಾಲದ ಅಧಿವೇಶನ ನಡೆಯುವ ವೇಳೆ ಬೃಹತ್ ಪ್ರತಿಭಟನೆ ನಡೆಸಲಾಗುವುದು’ ಎಂದು ವರೂರು ನವಗ್ರಹ ತೀರ್ಥಕ್ಷೇತ್ರದ ಗುಣಧರನಂದಿ ಮಹಾರಾಜ ಹೇಳಿದರು.

‘ಹುಬ್ಬಳ್ಳಿಯಿಂದ ಪಾದಯಾತ್ರೆ ಹೊರಟು ಡಿಸೆಂಬರ್ 9ರಂದು ಬೆಳಗಾವಿಯ ಬಸ್ತವಾಡ ಗ್ರಾಮದಿಂದ ಸಮಾಜದ 30 ಸಾವಿರ ಮಂದಿ ಸುವರ್ಣ ವಿಧಾನಸೌಧ ಮುತ್ತಿಗೆ ಹಾಕುವರು’ ಎಂದು ಅವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸರ್ಕಾರ ಎಲ್ಲ ಸಮಾಜಕ್ಕೂ ನಿಗಮ ಮಂಡಳಿ ನೀಡುತ್ತಿದೆ. ಆದರೆ, ಅತಿ ಚಿಕ್ಕ ಜೈನ ಸಮುದಾಯಕ್ಕೆ ಇನ್ನೂ ನೀಡಿಲ್ಲ. ಗೃಹಸಚಿವ ಜಿ. ಪರಮೇಶ್ವರ ಆಶ್ವಾಸನೆ ನೀಡಿ ಒಂದೂವರೆ ವರ್ಷವಾದವು. ಇದರ ಬಗ್ಗೆ ಪ್ರಶ್ನಿಸಿದರೆ ವಿಧಾನಸೌಧದಲ್ಲಿ ಕಡತ ಪರಿಶೀಲನೆಯ ಪ್ರಕ್ರಿಯೆಯಲ್ಲಿ ಇದೆ ಎನ್ನುತ್ತಾರೆ. ಈ ಅವಧಿಯಲ್ಲಿ ಮೂರು-ನಾಲ್ಕು ಸಮಾಜಕ್ಕೆ ನಿಗಮ, ಮಂಡಳಿ ನೀಡಲಾಗಿದೆ. ನಮಗೆ ನೀಡಲು ಸಮಸ್ಯೆ ಏನಿದೆ’ ಎಂದು ಅವರು ಪ್ರಶ್ನಿಸಿದರು.

‘ವರೂರು ತೀರ್ಥ ಕ್ಷೇತ್ರದಲ್ಲಿ ಜನವರಿಯಲ್ಲಿ ಮಹಾಮಸ್ತಾಕಾಭಿಷೇಕ ನಡೆಯಲಿದ್ದು, ತಮಿಳನಾಡು, ಕೇರಳ, ಗುಜರಾತ ರಾಜ್ಯಗಳಿಂದ ಅಸಂಖ್ಯಾತ ಭಕ್ತರು ಬರುತ್ತಾರೆ. ಚಳಿಗಾಲದ ಸಮಯವಾಗಿರುವುದರಿಂದ ರಾತ್ರಿವೇಳೆ ವಿಶ್ರಾಂತಿ ಪಡೆಯಲು ಸರ್ಕಾರಿ ಕಟ್ಟಡಗಳನ್ನು ಒದಗಿಸಬೇಕು’ ಎಂದರು.

ಜೈನ ಮುಖಂಡರಾದ ಸಂದೀಪ ಸೈಬಣ್ಣವರ, ದೇವೇಂದ್ರಪ್ಪ ಕಾಗೇನವರ, ರಾಜೇಂದ್ರ ಬಿಳಗಿ, ಮುರುಗಿ ಪಾಟೀಲ, ವಿಮಲ ತಾಳಿಕೋಟೆ ಇದ್ದರು.

ವೈಯಕ್ತಿಗತ ದಾಳಿ: ವಿಜಯೇಂದ್ರ ವಿರುದ್ಧ ಕಿಡಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ನನಗೆ ಕನ್ನಡ ಮಾತನಾಡಲು ಬರುವುದಿಲ್ಲ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಾಯೋಜಿತ ಟ್ರೋಲ್ ಪಡೆ ಇದರ ಹಿಂದೆ ಕೆಲಸ ಮಾಡುತ್ತಿದೆ’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಆರೋಪಿಸಿದರು.

‘ಹಿಂಬಾಗಿಲ ಮೂಲಕ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿರುವ ವಿಜಯೇಂದ್ರ, ಹಣದ ದರ್ಪದಿಂದ ಈ ರೀತಿ ವರ್ತಿಸುತ್ತಿದ್ದಾರೆ. ಖಾಸಗಿಯಾಗಿ ಟ್ರೋಲ್ ಪಡೆ ಇಟ್ಟುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಿಗತವಾಗಿ ದಾಳಿ ಮಾಡಿಸುತ್ತಿದ್ದಾರೆ. ಯಾವ ವಿಳಾಸದಿಂದ ನನ್ನ ವಿರುದ್ಧ ಟ್ರೋಲ್ ಮಾಡಿಸಲಾಗುತ್ತಿದೆ ಎಂಬ ಮಾಹಿತಿಯನ್ನು ಕಲೆಹಾಕಿದ್ದೇನೆ. ಅಗತ್ಯ ಬಿದ್ದಾಗ ದಾಖಲೆ ಬಹಿರಂಗಗೊಳಿಸುತ್ತೇನೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಸಿಇಟಿ ಪರೀಕ್ಷೆಗಾಗಿ ಇಲಾಖೆಯಿಂದ ಪ್ರಸಕ್ತ ವರ್ಷದಿಂದ 25,000 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ತರಬೇತಿಯಿಂದ ತಮಗೆ ಆಗಿರುವ ಅನುಕೂಲಕ್ಕಾಗಿ ಮುಖ್ಯಮಂತ್ರಿ ಹಾಗೂ ನನಗೆ ವಿದ್ಯಾರ್ಥಿಗಳು ಕಾರ್ಯಕ್ರಮವೊಂದರಲ್ಲಿ ಧನ್ಯವಾದ ಹೇಳಿದರು. ಆ ವಿಚಾರ ಬಿಟ್ಟು ಬೇರೆ ಏನನ್ನೋ ಟ್ರೋಲ್ ಮಾಡಲಾಯಿತು’ ಎಂದು ಕಿಡಿಕಾರಿದರು.

‘ಮೊಟ್ಟೆ ಬೆಲೆ ದುಬಾರಿ ಆಗಿದೆ. ಸರ್ಕಾರ ಕೊಡುತ್ತಿರುವ ಹಣ ಸಾಕಾಗುತ್ತಿಲ್ಲ. ಮೊಟ್ಟೆ ವಿತರಣೆ ಕೆಲಸದಿಂದಾಗಿ ಶಿಕ್ಷಕರ ದೈನಂದಿನ ಕರ್ತವ್ಯಕ್ಕೆ ಅಡಚಣೆಯಾಗುತ್ತಿದೆ ಎಂಬ ಆರೋಪಗಳು ಕೇಳಿಬಂದಿವೆ. ಈ ಸಮಸ್ಯೆ ನಿವಾರಿಸಲು ಅಗತ್ಯವಿರುವ ಕಡೆ ಗ್ರಾಮ ಪಂಚಾಯಿತಿ ನೆರವಿನೊಂದಿಗೆ ಮೊಟ್ಟೆ ವಿತರಣೆ ಕೆಲಸವನ್ನು ಹೊರಗುತ್ತಿಗೆಗೆ ನೀಡುವ ಚಿಂತನೆಯೂ ನಡೆದಿದೆ’ ಎಂದರು.

ಅನುಭವ ಮಂಟಪ ಉತ್ಸವದಲ್ಲಿ ಮೇಘಾಲಯದ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ಭರವಸೆ

ರಾಷ್ಟ್ರಮಟ್ಟದಲ್ಲಿ ಬಸವ ಜಯಂತಿ ಆಚರಣೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ‘ಬಸವ ಜಯಂತಿಯನ್ನು ರಾಷ್ಟ್ರಮಟ್ಟದಲ್ಲಿ ಆಚರಿಸಬೇಕು. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾನು ಪತ್ರ ಬರೆಯುವೆ’ ಎಂದು ಮೇಘಾಲಯದ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ಭರವಸೆ ನೀಡಿದರು.

ವಿಶ್ವ ಬಸವಧರ್ಮ ಟ್ರಸ್ಟ್‌ನಿಂದ ಇಲ್ಲಿನ ಅನುಭವ ಮಂಟಪದ ಪ್ರಾಂಗಣದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ 45ನೇ ಶರಣ ಕಮ್ಮಟ ಹಾಗೂ ಅನುಭವ ಮಂಟಪ ಉತ್ಸವವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಬಸವ ಜಯಂತಿ ರಾಷ್ಟ್ರಮಟ್ಟದಲ್ಲಿ ಆಚರಿಸಬೇಕು ಎಂಬ ಬೇಡಿಕೆಗೆ ಖಂಡಿತವಾಗಿಯೂ ನನ್ನ ಸಹಮತವಿದೆ. ಈ ಸಂಬಂಧ ಪ್ರಧಾನಿಗೆ ಪತ್ರ ಬರೆದು ಚರ್ಚಿಸುವೆ. ಜಯಂತಿ ಆಚರಣೆಗೆ ಅವರಲ್ಲಿ ವಿಶೇಷ ಪ್ರಾರ್ಥನೆ ಮಾಡುತ್ತೇನೆ’ ಎಂದು ಹೇಳಿದರು.

‘ಬಸವಕಲ್ಯಾಣದ ಅನುಭವ ಮಂಟಪದ ಪರಿಸರದಲ್ಲಿ ವಚನ ವಿಶ್ವವಿದ್ಯಾಲಯ ಸ್ಥಾಪಿಸಬೇಕು ಎಂಬ ಸ್ವಾಮೀಜಿಗಳ ಬೇಡಿಕೆ ಬಹಳ ಅರ್ಥಪೂರ್ಣವಾಗಿದೆ. ಶರಣರ ತತ್ವಾದರ್ಶ, ಸಂದೇಶಗಳು ಇಡೀ ಭರತ ಭೂಮಿಗೆ ತಲುಪಬೇಕಾದರೆ ಈ ಕೆಲಸ ಆಗಬೇಕಾದದ್ದು ಅತ್ಯಗತ್ಯ.

> **12ನೇ ಶತಮಾನದಲ್ಲಾದ ವಚನ ಕ್ರಾಂತಿ ಕನ್ನಡ ಭಾಷೆಯ ಬದಲು ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲಾಗಿದ್ದರೆ ಜಗತ್ತಿನ ಅತಿದೊಡ್ಡ ಕ್ರಾಂತಿ ಅನಿಸಿಕೊಳ್ಳುತ್ತಿತ್ತು**
> **ಸಿ.ಎಚ್. ವಿಜಯಶಂಕರ್**
> ಮೇಘಾಲಯದ ರಾಜ್ಯಪಾಲ

ಈ ದೇಶದ ಸಂಸತ್ತು ಪ್ರಜಾಪ್ರಭುತ್ವದ ದೇಗುಲವಾದರೆ, ಅನುಭವ ಮಂಟಪ ಈ ದೇಶದ ಧಾರ್ಮಿಕ ದೇಗುಲ’ ಎಂದು ವ್ಯಾಖ್ಯಾನಿಸಿದರು.

‘ಕನ್ನಡ ನಾಡಿನ ಇನ್ನೊಂದು ಹೆಸರೇ ಶರಣರ ನಾಡು. ಕನ್ನಡ ನಾಡನ್ನು ಶರಣರ ನಾಡಾಗಿ ಪರಿವರ್ತಿಸಿದವರು 12ನೇ ಶತಮಾನದ ಬಸವಾದಿ ಶರಣರು. ಲೋಕಕಲ್ಯಾಣ ಹಾಗೂ ಮನುಕುಲದ ಒಳಿತಿಗಾಗಿ ಶರಣರು ಅವರ ಬದುಕು ಸವೆಸಿದ್ದರು. ಶರಣ ಸಂಸ್ಕೃತಿ ಈ ನಾಡಿನಿಂದ ಮರೆಯಾಗಲು ಸಾಧ್ಯವಿಲ್ಲ. ಎಲ್ಲ ಸಮಸ್ಯೆಗಳಿಗೆ ಶರಣ ಮಾರ್ಗದಲ್ಲಿ ಪರಿಹಾರವಿದೆ. ಈ ನಾಡಿನ ಸುಭಿಕ್ಷೆಗಾಗಿ ಇರುವ ಏಕೈಕ ಮಾರ್ಗವೆಂದರೆ ಶರಣ ಮಾರ್ಗ. ಮನುಕುಲದ ಒಳಿತಿಗಾಗಿ ಹುಟ್ಟಿಕೊಂಡಿದ್ದೇ ಶರಣ ಸಂಸ್ಕೃತಿ’ ಎಂದು ಅಭಿಪ್ರಾಯಪಟ್ಟರು.

ಬಸವಾದಿ ಶರಣರು 12ನೇ ಶತಮಾನದಲ್ಲಿ ಸ್ಥಾಪಿಸಿದ್ದ ಸಮ ಸಮಾಜ, ಸಮೃದ್ಧಿ, ಶಾಂತಿಯ ವಾತಾವರಣ ಪುನಃ ಸೃಷ್ಟಿಯಾಗಬೇಕು. ಆ ಶಕ್ತಿ ಕಲ್ಯಾಣ ನಾಡು ಪುನಃ ಜಗತ್ತಿಗೆ ಕೊಡಲಿ ಎಂದು ಹಾರೈಸಿದರು.

ಅನುಭವ ಮಂಟಪ ಉತ್ಸವದಲ್ಲಿ ಮಹಾರಾಷ್ಟ್ರ ಕೊಲ್ಹಾಪುರದ ಬಸವ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಬಿ.ಎಂ. ಪಾಟೀಲ ಅವರಿಗೆ ‘ಬಸವಭಾಸ್ಕರ’ ಪ್ರಶಸ್ತಿ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರಿಗೆ ಡಾ.ಎಂ.ಎಂ. ಕಲಬುರಗಿ ಸಾಹಿತ್ಯ ಸಂಶೋಧನಾ ಪ್ರಶಸ್ತಿ, ಕೆ.ಎಸ್ ರಾಜಣ್ಣ ಅವರಿಗೆ ಡಾ.ಚನ್ನಬಸವ ಪಟ್ಟದ್ದೇವರು ಅನುಭವ ಮಂಟಪ ಪ್ರಶಸ್ತಿ ಹಾಗೂ ಬಸವ ಟಿ.ವಿ. ಸಂಸ್ಥಾಪಕ ಈ. ಕೃಷ್ಣಪ್ಪ ಅವರಿಗೆ ಅನುಭವ ಮಂಟಪ ರಾಷ್ಟ್ರೀಯ ಪ್ರಶಸ್ತಿಯನ್ನು ಮೇಘಾಲಯದ ರಾಜ್ಯಪಾಲ ಸಿ.ಎಚ್ ವಿಜಯಶಂಕರ್ ಅವರು ಪ್ರದಾನ ಮಾಡಿದರು. ಡಾ.ಎಂ.ಎಂ. ಕಲಬುರಗಿ ರಾಷ್ಟ್ರೀಯ ಪ್ರಶಸ್ತಿ ₹50 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದ್ದರೆ, ಇನ್ನುಳಿದ ಮೂರು ಪ್ರಶಸ್ತಿಗಳು ತಲಾ ₹1 ಲಕ್ಷ ನಗದು, ಪ್ರಶಸ್ತಿ ಫಲಕ ಒಳಗೊಂಡಿವೆ ಪ್ರಜಾವಾಣಿ ಚಿತ್ರ: ಲೋಕೇಶ ವಿ. ಬಿರಾದಾರ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ ಮಾತನಾಡಿ, ‘ಬಸವಕಲ್ಯಾಣದಲ್ಲಿ ವಚನ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂಬ ದಶಕಗಳ ಕೂಗು ಇದೆ. ಬರುವ ದಿನಗಳಲ್ಲಿ ನಮ್ಮ ಸರ್ಕಾರ ವಚನ ವಿ.ವಿ. ಸ್ಥಾಪಿಸಲಿದೆ’ ಎಂದು ಆಶ್ವಾಸನೆ ನೀಡಿದರು.

ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಗದಗ ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ದರಾಮ ಸ್ವಾಮೀಜಿ, ಇಳಕಲ್ ಗುರುಮಹಾಂತ ಸ್ವಾಮೀಜಿ, ಹಾರಕೂಡ ಹಿರೇಮಠ ಸಂಸ್ಥಾನದ ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಹುಲಸೂರಿನ ಗುರು ಬಸವೇಶ್ವರ ಸಂಸ್ಥಾನ ಮಠದ ಶಿವಾನಂದ ಸ್ವಾಮೀಜಿ, ನೆಲಮಂಗಲದ ಪವಾಡಶ್ರೀ ಬಸವಣ್ಣ ದೇವರ ಮಠದ ಅಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ, ಭಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದ್ದೇವರು, ಶಾಸಕರಾದ ಶರಣು ಸಲಗರ, ಎಂ.ಜಿ. ಮುಳೆ, ಶಶಿಲ್ ಜಿ. ನಮೋಶಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಮುಖಂಡ ವಿಜಯ್ ಸಿಂಗ್ ಹಾಜರಿದ್ದರು.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 24 ನವೆಂಬರ್ 2024

ಬಹು ಸಂಕರಗಳ ಕಲಾತ್ಮಕ ಅಭಿವ್ಯಕ್ತಿ 11

ಅಪೂರ್ವ ಮಕ್ಕಳ ಕುಂಚ ಹೇಳಿದ ಕತೆ 12

ಸಪ್ತ ಸುಂದರಿಯರ ನಾಡಿನಲ್ಲಿ... 13

ಹೋರಿಗಳ ಮಿಂಚಿನಓಟ...!

ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಕೆಲಭಾಗಗಳಲ್ಲಿ ಹೋರಿ ಹಬ್ಬ ವರ್ಷದಿಂದ ವರ್ಷಕ್ಕೆ ಜನಪ್ರಿಯತೆ ಗಳಿಸುತ್ತಿದೆ. ಹಿಂದೆ ರೈತರು ಸಂಪ್ರದಾಯದಂತೆ ಆಚರಿಸಿಕೊಂಡು ಬರುತ್ತಿದ್ದ ಈ ಹಬ್ಬ, ಈಗ ಜಲ್ಲಿಕಟ್ಟು, ಕಂಬಳ ರೀತಿ ಇವೆಂಟ್ ರೂಪ ಪಡೆದುಕೊಂಡಿದೆ.

ಮಂಜುನಾಥ್ ಭದ್ರಶೆಟ್ಟಿ

ಆ ಹೋರಿಗೆ ಆಕರ್ಷಕವಾಗಿ ಅಲಂಕಾರ ಮಾಡಲಾಗಿತ್ತು. ಕುತ್ತಿಗೆ ಮತ್ತು ಕೊಂಬುಗಳಿಗೆ ಒಣಕೊಬ್ಬರಿ ಸರಗಳನ್ನು ಹಾಕಲಾಗಿತ್ತು. ಅದರ ಕಣ್ಣುಗಳು ಕೆಂಡ ಕಾರುತ್ತಿದ್ದವು. ಬಾಲ ಚಾಟಿಯಂತೆ ಆಟವಾಡುತ್ತಿತ್ತು. ಅದರ ಓಟ ಹುಸೇನ್ ಬೋಲ್ಟ್ ನೆನಪಿಸುವಂತೆಯೂ ಇತ್ತು! ಟ್ರ್ಯಾಕ್‌ನ ಎರಡೂ ಬದಿಯಲ್ಲಿ ನಿಂತಿದ್ದ ಸಾವಿರಾರು ಜನರು ಒಂದೇ ಸಮನೆ ಜೋರಾಗಿ ಕೂಗುತ್ತಿದ್ದರು. ಹೋರಿ ಮತ್ತಷ್ಟು ಕಿವಿ ನಿಮಿರಿಸಿ, ಚಿಗರೆಯಂತೆ ಚಿಮ್ಮುತ್ತಾ, ಹಾರುತ್ತಾ ಓಡುತ್ತಿತ್ತು. ಅದೆಲ್ಲಿದ್ದನೋ ಆ ಹೀರೊ ಒಮ್ಮೆಗೆ ಗಾಳಿಯಲ್ಲಿ ಹಾರಿ, ಹೋರಿಯ ಡುಬ್ಬವನ್ನು ಹಿಡಿದು ಕೊಬ್ಬರಿ ಸರಕ್ಕೆ ಕೈ ಹಾಕುವಷ್ಟರಲ್ಲಿ ಹೋರಿ ಮಿಂಚಿನಂತೆ ತಪ್ಪಿಸಿಕೊಂಡಿತು! ಜನರೋ ಹುಚ್ಚೆದ್ದು ಕೇಕೆ ಹಾಕಿ ಕುಣಿದು ಕುಪ್ಪಳಿಸಿದರು. ನಾನು ಇಂತಹ ದೃಶ್ಯಗಳನ್ನು ಸಿನಿಮಾಗಳಲ್ಲಿ ನೋಡಿದ್ದೆ. ನೇರವಾಗಿ ನೋಡಿದ್ದು ಅದೇ ಮೊದಲು. ಈ ರೋಮಾಂಚನಕಾರಿ ಅನುಭವ ದಕ್ಕಿದ್ದು ಹೋರಿ ಹಬ್ಬದಲ್ಲಿ.

ಇತ್ತೀಚಿನ ವರ್ಷಗಳಲ್ಲಿ ಹೋರಿ ಹಬ್ಬ ನಮ್ಮ ರೈತರ ಸಾಂಸ್ಕೃತಿಕ ಸಾಹಸ ಕ್ರೀಡೆಯಾಗಿ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಕೆಲಭಾಗಗಳಲ್ಲಿ ಜನಪ್ರಿಯವಾಗುತ್ತಿದೆ. ಹಾವೇರಿ, ಹಾನಗಲ್, ಹಿರೇಕೆರೂರು, ರಾಣೆಬೆನ್ನೂರು, ಬ್ಯಾಡಗಿ, ರಟ್ಟಿಹಳ್ಳಿ, ಶಿಕಾರಿಪುರ, ಆನವಟ್ಟಿ, ನ್ಯಾಮತಿ, ಶಿಗ್ಗಾವಿ, ಶಿರಸಿ, ಮುಂಡಗೋಡ, ಸವಣೂರು, ದಾವಣಗೆರೆ, ಹರಿಹರ, ಹೊನ್ನಾಳಿ, ಶಿವಮೊಗ್ಗಗಳಲ್ಲಿ ಹೋರಿ ಹಬ್ಬ ಇವೆಂಟ್ ಆಗಿ ರೂಪುಗೊಳ್ಳುತ್ತಿದೆ.

ದೀಪಾವಳಿ ಬಂದರೆ ಈ ಭಾಗದ ಹಲವು ಊರುಗಳಲ್ಲಿ ಹೋರಿಗಳು ಗುಟುರು ಹಾಕುತ್ತವೆ. ಅನೇಕ ಗ್ರಾಮಸ್ಥರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಹಬ್ಬ ಆಯೋಜಿಸಿ ಗಮನ ಸೆಳೆಯುತ್ತಾರೆ.

ಸಂಕ್ರಾಂತಿ ಸಮಯದಲ್ಲಿ ದಕ್ಷಿಣ ಕರ್ನಾಟಕದ ಹಲವೆಡೆ ದನಕರುಗಳನ್ನು ಕಿಚ್ಚು ಹಾಯಿಸುವುದು ರೂಢಿ. ಉತ್ತರ ಕರ್ನಾಟಕದಲ್ಲಿ ಕಾರ ಹುಣ್ಣಿಮೆಯಲ್ಲಿ ಎತ್ತುಗಳ ಕೋಡುಗಳಿಗೆ ಕೋಡುಬಳೆ ಕಟ್ಟಿ ಓಡಿಸುವುದು ಸಂಪ್ರದಾಯ. ಬೇಸಿಗೆಯಲ್ಲಿ ಚಕ್ಕಡಿ ಓಟದ ಸ್ಪರ್ಧೆಯೂ ಒಂದು ಜನಪ್ರಿಯ ಸಾಂಸ್ಕೃತಿಕ ಕ್ರೀಡೆ.

ದೀಪಾವಳಿ ಸಮಯದಲ್ಲಿ ಮಧ್ಯ ಕರ್ನಾಟಕದಲ್ಲಿ ಹೋರಿ ಹಬ್ಬದ ಹೆಸರಿನಲ್ಲಿ ಹೋರಿಗಳನ್ನು ಬೆದರಿಸುವ ಸಂಪ್ರದಾಯ ಹಿಂದಿನಿಂದಲೂ ಇದೆ. ಆದರೆ ಈಗ ಈ ಹಬ್ಬ ಸಂಪ್ರದಾಯಕ್ಕೇ ಸೀಮಿತವಾಗಿಲ್ಲ. ಜಲ್ಲಿಕಟ್ಟು, ಕಂಬಳದ ರೀತಿ ಸ್ಪರ್ಧಾತ್ಮಕ ಇವೆಂಟ್ ಆಗಿ ರೂಪುಗೊಳ್ಳುತ್ತಿದೆ. ತಿಂಗಳುಗಟ್ಟಲೇ ಶ್ರಮ ಹಾಕಿ ಹೋರಿ ಹಬ್ಬ ಆಯೋಜನೆ ಮಾಡುತ್ತಾರೆ.

ಹೋರಿ ಹಬ್ಬ ತಯಾರಿ ಹೇಗೆ?

ಹೋರಿ ಹಬ್ಬದಲ್ಲಿ ಒಂದೇ ಊರಿನ ಹೋರಿಗಳು ಪಾಲ್ಗೊಳ್ಳುತ್ತಿಲ್ಲ. ಈಗ ನಡೆಯುತ್ತಿರುವ ಹೋರಿ ಹಬ್ಬದ ವಿಶೇಷವೇ ಇದು. ಸುತ್ತಮುತ್ತಲಿನ, ದೂರ ದೂರದ ಹತ್ತಾರು ಹಳ್ಳಿಗಳ ಹೋರಿಗಳು ಇನ್ನೊಂದು ಊರಿನ ಹಬ್ಬದಲ್ಲಿ ಪಾಲ್ಗೊಳ್ಳುತ್ತಿವೆ. ಒಂದೇ ದಿನ ನಡೆಯುವ ಹಬ್ಬಕ್ಕೆ ಕನಿಷ್ಠ 300 ಹೋರಿಗಳಾದರೂ ಹೆಸರು ನೋಂದಾಯಿಸಿಕೊಂಡರೇ ಆ ಹೋರಿ ಹಬ್ಬ ನೋಡಲು ರೋಚಕವಾಗಿರುತ್ತದೆ. ಟ್ರ್ಯಾಕ್ ತಯಾರಾದ ನಂತರ ಹೋರಿ ಮಾಲೀಕರು ಕಮಿಟಿ ಬಳಿ ಹಣ ಪಾವತಿಸಿ ನಂಬರ್‌ಗಳನ್ನು ಪಡೆದುಕೊಳ್ಳಬೇಕು. ಇಷ್ಟದ ನಂಬರ್ ಬೇಕಾದರೆ ಹೆಚ್ಚು ಹಣ ಕೊಡಬೇಕು. ಬಗೆಬಗೆಯಾಗಿ ಸಿಂಗರಿಸಿದ ಹೋರಿಗಳನ್ನು ಗೇಟ್ ತೆರೆದು ಒಂದೊಂದಾಗಿ ಬೀಡುತ್ತಾರೆ. ಇದರ ಟ್ರ್ಯಾಕ್ ಕೆಲವು ಕಡೆ 100, 150 ಮೀಟರ್, ಇನ್ನೂ ಕೆಲವು ಕಡೆ 300 ಮೀಟರ್ ಇರುತ್ತವೆ. ಹೋರಿ ಬಿಟ್ಟ ತಕ್ಷಣ ಅದು ಯಾರ ಕೈಗೂ ಸಿಗದಂತೆ ಓಡುವುದನ್ನು ನೋಡಬೇಕು! ಹೋರಿ ಬೆದರಿಸುವವರು ಆ ಹೋರಿ ಮೈಮೇಲೆ ಏರಿ, ಅದರ ವೇಗವನ್ನು ನಿಯಂತ್ರಿಸಿ ಅದರ ಕೊರಳಿಗೆ ಕಟ್ಟಿರುವ ಒಣಕೊಬ್ಬರಿಯನ್ನು ಕಿತ್ತುಕೊಳ್ಳಬೇಕು. ಆ ವೇಳೆ ಹೋರಿಯ ಓಟಕ್ಕೆ

ಪೀಪಿ ಹೋರಿಯ ಮಿಂಚಿನಓಟ... ಚಿತ್ರಗಳು:ಸತೀಶ್ ಬಡಿಗೇರ

‘ನಾನು ಹೋರಿ ಬೆದರಿಸಲು ಹೋಗುತ್ತಿದ್ದೇನೆ. ಎರಡು ವರ್ಷದಲ್ಲಿ ಎಂಟು ಬಾರಿ ಪ್ರಶಸ್ತಿ ತೆಗೆದುಕೊಂಡಿದ್ದೇನೆ. ಹೋರಿ ಹಿಡಿದ ಒಬ್ಬನಿಗೆ ಮಾತ್ರ ಪ್ರಶಸ್ತಿ ಕೊಡುತ್ತಾರಾದರೂ ನಮ್ಮ ಸಹಾಯಕ್ಕೆ ಸಂಗಡಿಗರು ಇರುತ್ತಾರೆ’
ಶಿವು, ಬುಲ್ ಕ್ಯಾಚರ್, ಶಿರಸಿ

ಕೊಬ್ಬರಿ ಹರಿಯುವ ಯತ್ನದಲ್ಲಿ ಸಾಹಸಿ ಯುವಕ

ಉದ್ದೇಶಪೂರ್ವಕವಾಗಿ ತೊಂದರೆ ಮಾಡುವಂತಿಲ್ಲ. ಇನ್ನೊಂದೆಡೆ ಆಕ್ರಮಣಕಾರಿ ಎಂದು ಗುರುತಾದ ಹೋರಿಗಳನ್ನು ಕಮಿಟಿಯವರೂ ಭಾಗವಹಿಸಲು ಬಿಡುವುದಿಲ್ಲ. ಹೋರಿ ಟ್ರ್ಯಾಕ್‌ನಲ್ಲಿ ಏನಾದರೂ ತೊಂದರೆ ಆಗಿ ಬಿದ್ದರೆ ಅದನ್ನು ಮುಟ್ಟುವಂತಿಲ್ಲ. ಈ ವೇಳೆ ಕಮಿಟಿಯವರು ಹೋರಿ ನುಗ್ಗಿ ಹೋಗುವ ವೇಗ, ಜಾರಿಕೊಳ್ಳುವ ಪರಿ, ಅದರ ಅಲಂಕಾರ, ಆಕ್ರಮಣಶೀಲತೆಯನ್ನು ಗುರುತಿಸುತ್ತಾರೆ. ಆಗ ಹೋರಿ ಯಾರಿಗೂ ಬಗ್ಗದೇ ಕೊಬ್ಬರಿ ಕೊಡದೇ ತಪ್ಪಿಸಿಕೊಂಡು ಟ್ರ್ಯಾಕ್ ದಾಟಿ ಹೋದಾಗ ಅದನ್ನು ಮುಂದಿನ ಹಂತಕ್ಕೆ ಆಯ್ಕೆ ಮಾಡುತ್ತಾರೆ. ಎಲ್ಲ ಸುತ್ತುಗಳಲ್ಲೂ (ಸಾಮಾನ್ಯವಾಗಿ ಐದಾರು ಸುತ್ತು) ಜಯಶಾಲಿಯಾದರೆ ಆ ಹೋರಿ, ‘ಹಬ್ಬ’ ಮಾಡಿತು ಎಂದರ್ಥ. ಅವುಗಳಿಗೆ ನಗದು, ಟ್ರ್ಯಾಕ್ಟರ್, ಕಾರು, ಬುಲೆಟ್ ಬೈಕ್, ಸಾಮಾನ್ಯ ಬೈಕ್, ರೆಫ್ರಿಜಿರೇಟರ್, ಸ್ಮಾರ್ಟ್ ಟಿವಿ, ಇತ್ಯಾದಿಗಳನ್ನು ಬಹುಮಾನವಾಗಿ ಕೊಡಲಾಗುತ್ತದೆ.

ಹೋರಿ ಬೆದರಿಸುವವರು ತಂಡ ಕಟ್ಟಿಕೊಂಡಿರುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಹೋರಿಗಳನ್ನು ಪಳಗಿಸುವುದರಲ್ಲಿ ಆಸಕ್ತಿ ಇರುವ ಯುವಕರೇ ಇರುತ್ತಾರೆ. ಆವೇಶದಲ್ಲಿ ಹೋರಿ ಓಡಿ ಬರುವಾಗ ಅದರ ಮೈಮೇಲೆ ಎರಗಿ ಕೊಬ್ಬರಿ ಹರಿದುಕೊಳ್ಳುವುದು ಇವರ ಗುರಿ. ಹೋರಿಯನ್ನು ತಡೆದು ಕೊಬ್ಬರಿ ಕಿತ್ತುಕೊಂಡು ಅದನ್ನು ಕಮಿಟಿಯವರ ಬಳಿ ತೋರಿಸಿ ಹೆಸರು ಬರೆಸಬೇಕು. ಅವರಿಗೂ ಕೂಡ ಬಹುಮಾನಗಳಿರುತ್ತವೆ. ಬಹುತೇಕ ಸಂದರ್ಭಗಳಲ್ಲಿ ಅನುಭವದೊಂದಿಗೆ ಮುನ್ನುಗ್ಗುವ ಛಾತಿಯುಳ್ಳವ ಬುಲ್ ಕ್ಯಾಚರ್‌ಗಳು ಇದರಲ್ಲಿ ಯಶಸ್ವಿಯಾಗುತ್ತಾರೆ.

ಆಕರ್ಷಕ ಹೆಸರುಗಳು

ಇನ್ನೊಂದು ವಿಶೇಷವೆಂದರೆ ಹೋರಿಗಳಿಗೆ ಬಗೆ ಬಗೆಯಾದ ಹೆಸರುಗಳನ್ನು ಮಾಲೀಕರು, ಅಭಿಮಾನಿಗಳು ಕೊಟ್ಟಿರುತ್ತಾರೆ. ಕೆಲವು ಹೋರಿಗಳ ಹೆಸರುಗಳು ಹೀಗಿವೆ- ರಾಣೆಬೆನ್ನೂರು ಕಾ ರಾಜಾ, ಬಸ್ಮಾಸುರ, ಕುರುಕ್ಷೇತ್ರ, ಕರ್ನಾಟಕ ನಂದಿ, ಉಪ್ಪುಣಸಿ ರಾಷ್ಟ್ರಪತಿ, ಸಾಮ್ರಾಟ್, ರಾವಣ, ಬ್ಯಾಡಗಿ ಹೊಯ್ಸಳ, ಉಪ್ಪುಣಸಿ ಕನಸುಗಾರ, ಹಾವೇರಿ ಸಿಎಂ, ಆರ್. ಸಿ.ಬಿ, ದುಬೈ ಡಾನ್, ಕಲ್ಮನೆ ಕೊಲೆಗಾರ, ತಡಸನಹಳ್ಳಿ ಡಾನ್, ನಿರ್ಭಯಾ. ವೈಭವ್, ಚಾಂಪಿಯನ್, ಕೆಡಿಎಂ ಕಿಂಗ್, ಎನ್‌ಟಿಸಿ ಸರ್ಕಾರ್, ಎನ್‌ಟಿಸಿ ಅಧಿಪತಿ.

ಯಾಕಿಷ್ಟು ಟ್ರೆಂಡ್?

ಮಧ್ಯ ಕರ್ನಾಟಕದಲ್ಲಿ ಹೋರಿ ಹಬ್ಬ ಯಾಕಿಷ್ಟು ಜನಮನ್ನಣೆಗಳಿಸಿಕೊಂಡಿದೆ ಎಂಬುದಕ್ಕೆ ಸ್ಪಷ್ಟ ಕಾರಣಗಳನ್ನು ಹುಡುಕುವುದು ಕಷ್ಟ. ಕೊರೊನಾ ನಂತರ ಹೋರಿ ಹಬ್ಬ ಜನಪ್ರಿಯವಾಗುತ್ತಿದೆ. ಕೃಷಿಯಲ್ಲಿ ಟ್ರ್ಯಾಕ್ಟರ್ ಸೇರಿದಂತೆ ಅನೇಕ ಆಧುನಿಕ ಯಂತ್ರೋಪಕರಣಗಳ ಬಳಕೆ ಹೆಚ್ಚುತ್ತಿರುವುದರಿಂದ ಎತ್ತುಗಳ ಬಳಕೆಯೂ ಕಡಿಮೆಯಾಗುತ್ತಿದೆ. ಹೀಗಾಗಿ ರೈತರು ತಮ್ಮ ಅವಿಭಾಜ್ಯ ಅಂಗಗಳೇ ಆಗಿದ್ದ ಹೋರಿಗಳನ್ನು, ಎತ್ತುಗಳನ್ನು ಉಳಿಸಿಕೊಳ್ಳಬೇಕು ಎಂಬ ಇರಾದೆಗೋಸ್ಕರ ಹೋರಿ ಹಬ್ಬ ಮಾಡಲೆಂದೇ ಹೋರಿಗಳನ್ನು ಕಟ್ಟುತ್ತಿದ್ದಾರೆ.

‘ನಮಗೆ ಹೊಲ ಇದೆ, ಕಮತ ಜೋರು ಇದೆ. ಆದರೆ, ಇದಕ್ಕಾಗಿ ಹೋರಿ, ಎತ್ತುಗಳ ಬಳಕೆ ತುಂಬಾ ಕಡಿಮೆ. ಆದರೂ ದನಕರುಗಳನ್ನು ಉಳಿಸಬೇಕು. ಅದಕ್ಕೆ ಹೋರಿ ಹಬ್ಬವೇ ಸ್ಫೂರ್ತಿ’ ಎನ್ನುವ ಹೋರಿಗಳ ಮಾಲೀಕರು ಇದ್ದಾರೆ. ಬೇರೆ ಬೇರೆ ತಳಿಯ ಹೋರಿಗಳನ್ನು ತಮ್ಮ ಕೊಟ್ಟಿಗೆಯಲ್ಲಿ ಕಟ್ಟುವುದು ಇಲ್ಲಿನ ಅನೇಕ ಯುವಕರಿಗೆ ಪ್ಯಾಷನ್ ಆಗಿದೆ.

ಹೋರಿಗಳ ತಯಾರಿ

ಹೋರಿ ಹಬ್ಬದ ಹೋರಿಗಳನ್ನು ನೋಡುವುದೇ ಚೆಂದ. ಸ್ಥಳೀಯ ಹೋರಿಗಳೂ ಸೇರಿದಂತೆ ಮಧುರೈ ಭಾಗದ ಕಂಗಾಯಂ (ಅಮೃತ್ ಮಹಲ್), ಹಳೇ ಮೈಸೂರು ಭಾಗದಿಂದ ಹಳ್ಳಿಕಾರ್ ಹೋರಿಗಳನ್ನು ಪಳಗಿಸುವುದು ರೂಢಿ. ಇದಕ್ಕಾಗಿ ಹೋರಿ ಮಾಲೀಕರು ಲಕ್ಷಾಂತರ ರೂಪಾಯಿಯನ್ನು ಖರ್ಚು ಮಾಡುತ್ತಿದ್ದಾರೆ. ಹಬ್ಬಕ್ಕೆ ಬಳಸುವ ಹೋರಿ ಎಂದು ಖಚಿತವಾದ ಮೇಲೆ ಅದರ ವಿಶೇಷ ಆರೈಕೆ ಶುರುವಾಗುತ್ತದೆ. ಯುವ ರೈತರು ಹೋರಿಗಳ ಮೇಲೆ ವಿಶೇಷ ನಿಗಾವಹಿಸುತ್ತಾರೆ. ಹೋರಿಗೆ ಮೂರೂ ಹೊತ್ತು ಏಳೆಂಟು ಕಾಳುಗಳ ಸಮ್ಮಿಶ್ರಣದ ಹಿಂಡಿ ತಿನ್ನಿಸುತ್ತಾರೆ. ಅದರ ಜೊತೆ ಹಲವು ಬಗೆಯ ಸತ್ವಯುತ ಹೊಟ್ಟು ಹಾಕುತ್ತಾರೆ. ಪ್ರತಿದಿನ ಬೆಳಿಗ್ಗೆ ಎರಡ್ಮೂರು ಕಿಲೊಮೀಟರ್ ಓಡಿಸುವುದು, ಕೆರೆಯಲ್ಲಿ ಈಜಿಸುವುದು, ಬಿಸಿಲಿಗೆ ಕೆಲಹೊತ್ತು ನಿಲ್ಲಿಸುವುದನ್ನು ಮಾಡುತ್ತಾರೆ. ಹಬ್ಬಕ್ಕೆ ಹೋಗುವ ಹೋರಿ ವಿಶೇಷ ಆರೈಕೆಯಲ್ಲಿಯೇ ಇರುತ್ತದೆ. ಅಷ್ಟೇ ಅಲ್ಲದೇ ಅದು ಆ ಊರಿನ ಆಕರ್ಷಣೆ ಕೂಡ.

11ನೇ ಪುಟಕ್ಕೆ

ನೂರು ಪಾಲಿಸಿ, ಮಕ್ಕಳ ಕಲಿಕೆಯ ಬೆಳಕು...

ಜೆ.ಸಿ.ಜಾಧವ

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ನೀರಲಕೇರಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಸರ್ಕಾರಿ ಶಾಲೆಯ ಮುಂದೆ ‘ಸಂಪೂರ್ಣ ವಿಮಾ ಗ್ರಾಮ’ ಅನುದಾನ: ಸೋಲಾರ್ ವಿದ್ಯುತ್‌ದೀಪ’ ಎನ್ನುವ ಬೋರ್ಡ್ ಕಾಣಿಸಿತು. ಕುತೂಹಲದಿಂದ ಶಾಲೆಗೆ ಹೋಗಿ ವಿಚಾರಿಸಿದಾಗ ಗೊತ್ತಾಗಿದ್ದು ದಿನವಿಡೀ ವಿದ್ಯುತ್ ಇಲ್ಲದಿದ್ದರೂ ಸ್ಮಾರ್ಟ್‌ಕ್ಲಾಸ್ ಮೂಲಕ ಪಾಠ ಮಾಡುತ್ತಿದ್ದರು ರಘು ಹೊಸಟ್ಟಿ ಹಾಗೂ ಕೊಣ್ಣೂರ್ ಮಾಸ್ತರರು.

ಇದು ತೋಟದ ಶಾಲೆಯಾದ ಕಾರಣ, ಸುತ್ತಮುತ್ತಲಿರುವ ಹೊಲ, ತೋಟಗಳಲ್ಲಿ ಕೃಷಿ ಕೆಲಸ ಮಾಡುವ ರೈತರು, ಕೂಲಿ ಕಾರ್ಮಿಕರ ಮಕ್ಕಳು ಈ ಶಾಲೆಯಲ್ಲಿ 1ರಿಂದ 5ನೇ ತರಗತಿಯವರೆಗೆ ಕಲಿಯಲು ಬರುತ್ತಾರೆ. ಇವರಿಗೆ ಸ್ಮಾರ್ಟ್‌ಕ್ಲಾಸ್ ಮಾಡಬೇಕು ಎಂದರೆ ಕರೆಂಟಿನ ಸಮಸ್ಯೆ. ಈ ಸಮಸ್ಯೆ ನೀಗಿಸಬೇಕು ಎಂದರೆ ಸೋಲಾರ್ ವ್ಯವಸ್ಥೆ ಬೇಕಿತ್ತು. ಆದರೆ ಇದಕ್ಕೆ ಅಂದಾಜು ಒಂದು ಲಕ್ಷ ರೂಪಾಯಿಗಳಾದರೂ ಬೇಕಿತ್ತು. ಇಷ್ಟು ಹಣವನ್ನು ಹೇಗೆ ಜೋಡಿಸಿಬೇಕು ಎನ್ನುವುದು ತೋಚದೇ ಇದ್ದಾಗ ಆಪತ್ಬಾಂಧವನಂತೆ ಸಹಾಯ ಹಸ್ತ ಚಾಚಿದ್ದು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ).

ಅದೇ ಗ್ರಾಮದವರಾದ ಎಲ್‌ಐಸಿ ಪ್ರತಿನಿಧಿಗಳಾದ ಬೀರಪ್ಪ, ಸಿದ್ದಪ್ಪ ಹಾಗೂ ದಾನೇಶ್ವರ ಅವರು ಊರಿನ ಪ್ರಮುಖರೊಂದಿಗೆ ಕುಳಿತು, ‘ಒಂದು ಆರ್ಥಿಕ ವರ್ಷದಲ್ಲಿ ನಮ್ಮ ಗ್ರಾಮದಿಂದ ನೂರು ಪಾಲಿಸಿಗಳನ್ನು ಮಾಡಿಸಿದರೆ, ಎಲ್‌ಐಸಿಯಿಂದ ವಿಮಾ ಗ್ರಾಮ ಯೋಜನೆ ಅಡಿಯಲ್ಲಿ ಒಂದು ಲಕ್ಷ ರೂಪಾಯಿ ಆರ್ಥಿಕ ಸಹಾಯ ಸಿಗುತ್ತದೆ’ ಎನ್ನುವುದನ್ನು ಮನವರಿಕೆ ಮಾಡಿಕೊಟ್ಟರು. ಈ ಅನುದಾನವನ್ನು ಶೌಚಾಲಯ, ಶುದ್ಧ ಕುಡಿಯುವ ನೀರು, ಸೋಲಾರ್ ದೀಪ ಅಳವಡಿಸಿಕೊಳ್ಳಲು ಅಥವಾ ಗ್ರಂಥಾಲಯ ಹೀಗೆ ಜನೋಪಯೋಗಿ ಕಾರ್ಯಗಳಿಗೆ ಬಳಸಿಕೊಳ್ಳಬಹುದು ಎನ್ನುವುದನ್ನೂ ಒತ್ತಿ ಹೇಳಿದರು. ಈ ಪ್ರಸ್ತಾಪ ಗ್ರಾಮದ ಮುಖಂಡರಿಗೂ ಸರಿ ಅನಿಸಿತು.

ತಮ್ಮ ಆರ್ಥಿಕ ಉಳಿತಾಯದ ಜೊತೆಗೆ ವಿಮಾ ರಕ್ಷಣೆ ಹಾಗೂ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯವಾಗುವುದರಿಂದ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ಪಾಲಿಸಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಗ್ರಾಮಸ್ಥರು ಬಂದರು. ಹೀಗೆ 2022-23ರ ಆರ್ಥಿಕ ವರ್ಷದಲ್ಲಿ ನೂರಕ್ಕೂ ಹೆಚ್ಚು ಪಾಲಿಸಿಗಳನ್ನು ಮಾಡಿಸಿ ಗುರಿಯನ್ನು ಸಾಧಿಸಿಯೇ ಬಿಟ್ಟರು!

ಈಗ ತೋಟದ ಶಾಲೆಯಲ್ಲಿ ಸೋಲಾರ್ ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದ ಬೇಕಾದ ಕಡೆಗೆ ಲೈಟ್‌ಗಳು, ಫ್ಯಾನ್, ಸ್ಮಾರ್ಟ್‌ಕ್ಲಾಸ್, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸೌಂಡ್ ಸಿಸ್ಟಮ್ ಹೀಗೆ ಎಲ್ಲದಕ್ಕೂ ಅನುಕೂಲವಾಗಿದೆ. ಇದರಿಂದ ವಿದ್ಯುತ್ ಉಳಿತಾಯ ಹಾಗೂ ಸೌರ ವಿದ್ಯುತ್ ಉಪಯೋಗಿಸಿಕೊಂಡ ಶಾಲೆ ಎಂದು ಹೆಗ್ಗಳಿಕೆ ಪಡೆದಿದೆ.

11ನೇ ಪುಟಕ್ಕೆ

‘ಮುನ್ನುಡಿ’ಯಿಂದ ‘ಮೋಹನದಾಸ’ನವರೆಗೆ

ರಘುನಾಥ ಚ.ಹ.

‘ಮುನ್ನುಡಿ’ಗೆ ಬೆಳ್ಳಿಹಬ್ಬ. ‘ಮುನ್ನುಡಿ’ಕಾರರಿಗೆ ಷಷ್ಟ್ಯಬ್ದಿ. ಸಿನಿಮಾ ಪ್ರದರ್ಶನ, ಚರ್ಚೆ, ಪುಸ್ತಕ ಬಿಡುಗಡೆ – ಇದು ‘ಶೇಷಾದ್ರಿ ಸಂಭ್ರಮ.’

ಇಪ್ಪತ್ತೊಂದನೇ ಶತಮಾನದ ಕನ್ನಡ ಚಿತ್ರರಂಗದ ಅತ್ಯಂತ ಯಶಸ್ವೀ ನಿರ್ದೇಶಕ ಯಾರು? ಗಲ್ಲಾಪೆಟ್ಟಿಗೆ ಲೆಕ್ಕಾಚಾರಗಳ ಬದಲು ಪ್ರಶಸ್ತಿಗಳ ಆಧಾರದಲ್ಲಿ ಸಿನಿಮಾಗಳ ಯಶಸ್ಸನ್ನು ಗುರ್ತಿಸುವುದಾದರೆ, ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಕನ್ನಡ ಚಿತ್ರರಂಗ ಕಂಡ ಅತ್ಯಂತ ಯಶಸ್ವೀ ನಿರ್ದೇಶಕ ಪಿ. ಶೇಷಾದ್ರಿ. ಅವರ ನಿರ್ದೇಶನದ ಚೊಚ್ಚಿಲ ಸಿನಿಮಾ ‘ಮುನ್ನುಡಿ’ ತೆರೆಕಂಡು ನವೆಂಬರ್ 10ಕ್ಕೆ 24 ವರ್ಷಗಳು ತುಂಬಿದವು. ‘ಮುನ್ನುಡಿ’ಯ ಬೆಳ್ಳಿಹಬ್ಬದ ಸಂಭ್ರಮದಲ್ಲಿ ನಿಂತುನೋಡಿದರೆ, ಆ ಸಿನಿಮಾ ಶೇಷಾದ್ರಿ ಅವರ ವೃತ್ತಿಬದುಕಿಗೆ ಬರೆದ ಮುನ್ನುಡಿಯಂತಿದೆ.

ಅಂಕಿಅಂಶಗಳ ಸ್ವಾರಸ್ಯ ನೋಡಿ. ಕನ್ನಡ ಚಿತ್ರರಂಗಕ್ಕೆ ತೊಂಬತ್ತು ತುಂಬಿದೆ. ಶೇಷಾದ್ರಿ ಅವರಿಗೆ ಅರವತ್ತು ತುಂಬಿ ಒಂದು ದಿನವಷ್ಟೇ ಆಗಿದೆ (ಜನನ: ನ. 23, 1963). ಅವರ ಸಿನಿಮಾ ನಂಟಿಗೆ ಮೂವತ್ತೈದು; ‘ಮುನ್ನುಡಿ’ ಚಿತ್ರಕ್ಕೆ ಇಪ್ಪತ್ತೈದು. ಈ ತ್ರಿವಳಿ ಸಂಭ್ರಮದಲ್ಲಿ ಶೇಷಾದ್ರಿ ಅವರ ಕಾಲು ಶತಮಾನದ ವೃತ್ತಿಜೀವನ ಅವಲೋಕಿಸಿದರೆ, ಅಲ್ಲಿ ಪ್ರಶಸ್ತಿಗಳ ಸಾಲುದೀಪಗಳು!

ಶೇಷಾದ್ರಿ ತುಮಕೂರು ಜಿಲ್ಲೆಯ ದಂಡಿನಶಿವರದವರು. ನಿರ್ದೇಶಕರ ರೂಪದಲ್ಲಿ ಸಿದ್ದಲಿಂಗಯ್ಯ, ಕೆ.ಎಂ. ಶಂಕರಪ್ಪ, ಬರಗೂರು ರಾಮಚಂದ್ರಪ್ಪನವರನ್ನು ಕನ್ನಡ ಚಿತ್ರರಂಗಕ್ಕೆ ಕೊಟ್ಟ ಮಣ್ಣಿಗೆ ಸೇರಿದ ಶೇಷಾದ್ರಿ, ಕಲಾತ್ಮಕ ನೆಲೆಗಟ್ಟಿನ ಪ್ರಯೋಗಶೀಲ ಸಿನಿಮಾ ಪರಂಪರೆಗೆ ಸಲ್ಲುವವರು.

ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಶೇಷಾದ್ರಿ ಕನ್ನಡ ಮೇಷ್ಟ್ರಾಗುವ ಬದಲು ಪತ್ರಕರ್ತರಾಗಿ ವೃತ್ತಿಜೀವನ ಆರಂಭಿಸಿದರು. ಚಿತ್ರಕಲಾವಿದ ಎನ್ನುವ ವಿಶೇಷಣವೂ ಅವರ ಹೆಸರಿನೊಂದಿಗಿತ್ತು. ಬರವಣಿಗೆ ಹಾಗೂ ಚಿತ್ರೋತ್ಸವಗಳ ಮೂಲಕ ಶುರುವಾದ ಸಿನಿಮಾ ಸೆಳೆತ, ಕಥೆ–ಚಿತ್ರಕಥೆ–ಸಂಭಾಷಣೆಕಾರರಾಗಿ ಚಿತ್ರರಂಗದಲ್ಲಿ ಗುರ್ತಿಸಿಕೊಳ್ಳಲು ದಾರಿಯಾಯಿತು. ಸ್ವತಂತ್ರ ನಿರ್ದೇಶನದ ಹಂಬಲದಲ್ಲಿ ರೂಪುಗೊಂಡಿದ್ದು ಬೊಳುವಾರರ ಕಥನ ಆಧರಿಸಿದ ‘ಮುನ್ನುಡಿ.’

‘ಮುನ್ನುಡಿ’ ತೆರೆಕಂಡಾಗ ಶೇಷಾದ್ರಿ ಅವರು ತಮ್ಮ ಸಿನಿಮಾ ನೋಡುವಂತೆ ಕನ್ನಡದ ನೂರಾರು ಲೇಖಕರಿಗೆ ‘ಕಾರ್ಡ್’ ಬರೆದಿದ್ದರು. ಆ ಸಾಹಿತ್ಯದ ನಂಟು ಸಾಹಿತ್ಯ ಕೃತಿಗಳನ್ನು ಸಿನಿಮಾಕ್ಕೆ ಅಳವಡಿಸುವ ರೂಪದಲ್ಲೂ ಮುಂದುವರೆಯಿತು. ಶಿವರಾಮ ಕಾರಂತರ ‘ಮೂಕಜ್ಜಿಯ ಕನಸುಗಳು’ ಹಾಗೂ ‘ಬೆಟ್ಟದ ಜೀವ’ ಕಾದಂಬರಿಗಳನ್ನು ಸಿನಿಮಾ ಮಾಡಿದ ಕೀರ್ತಿ ಅವರದು. ಅವರ ಇತ್ತೀಚಿನ ಸಿನಿಮಾ ‘ಮೋಹನದಾಸ’ದ ಕಥೆ ಬೊಳುವಾರರದು.

ಕನ್ನಡದ ಪ್ರಯೋಗಶೀಲ ಸಿನಿಮಾಗಳ ಬಹುತೇಕ ಯುವ ನಿರ್ದೇಶಕರಿಗೆ ಗಿರೀಶ ಕಾಸರವಳ್ಳಿ ಚುಂಬಕವಿದ್ದಂತೆ. ಆ ಚುಂಬಕ ವರ್ತುಲದೊಳಗಿದ್ದೂ ತಮ್ಮದೇ ಆದ ನಿರೂಪಣಾ ಕ್ರಮವೊಂದನ್ನು ಶೇಷಾದ್ರಿ ಕಂಡುಕೊಂಡಿದ್ದಾರೆ. ಸಾಹಿತ್ಯ ಕೃತಿಗಳಿಗೆ ನಿಷ್ಠವಾದ ಶೈಲಿ ಅವರದು. ‘ಡಿಸೆಂಬರ್ 31’ ಸಿನಿಮಾದಲ್ಲಿನ ರಾಜಕೀಯಪ್ರಜ್ಞೆ ಹಾಗೂ ದೃಶ್ಯವ್ಯಾಕರಣ ಗಮನಸೆಳೆಯುವಂತಹದ್ದು. ‘ಮೋಹನದಾಸ’ ಚಿತ್ರದ ನೇರ–ಸರಳ ನಿರೂಪಣೆಯೂ ವಿಶೇಷವಾದುದು.

ಶೇಷಾದ್ರಿ ಅವರ ಚೊಚ್ಚಿಲ ಸಿನಿಮಾ ತೆರೆಕಂಡ ಸಂದರ್ಭ ಪ್ರಯೋಗಶೀಲ ಸಿನಿಮಾಗಳ ಹೊಸ ಅಲೆಯೊಂದು ಹರಳುಗಟ್ಟುತ್ತಿದ್ದ ಸಮಯ. ಈ ಶತಮಾನದ ಮೊದಲ ಹತ್ತು ವರ್ಷಗಳಲ್ಲಿ ಎದ್ದುಕಾಣಿಸುವುದು ನಿರ್ದೇಶಕರೇ. ಆ ‘ನಿರ್ದೇಶಕರ ದಶಕ’ದಲ್ಲಿ ಮುಖ್ಯವಾಹಿನಿ ಸಿನಿಮಾಗಳಲ್ಲಿ ಯೋಗರಾಜ ಭಟ್, ಸೂರಿ ಅಂಥವರು ನೆಲೆ–ಬೆಲೆ ಕಂಡುಕೊಂಡರೆ, ಪ್ರಯೋಗಶೀಲ ಸಿನಿಮಾಗಳಲ್ಲಿ ಯಶಸ್ಸು ಕಂಡಿದ್ದು ಶೇಷಾದ್ರಿ. ಈ ಯಶಸ್ಸು ಪ್ರಶಸ್ತಿಗಳಿಗಷ್ಟೇ ಸೀಮಿತವಾದುದಲ್ಲ; ಸಂಖ್ಯಾ ದೃಷ್ಟಿಯಿಂದಲೂ ಮುಖ್ಯವಾದುದು. ‘ಮುನ್ನುಡಿ’ಯಿಂದ ‘ಮೋಹನದಾಸ’ ಚಿತ್ರದವರೆಗೆ ಹನ್ನೆರಡು ಸಿನಿಮಾಗಳು ಅವರ ನಿರ್ದೇಶನದ ಪಟ್ಟಿಯಲ್ಲಿವೆ. ಸತತವಾಗಿ ಎಂಟು ಸಿನಿಮಾಗಳಿಗೆ (‘ಮುನ್ನುಡಿ’, ‘ಅತಿಥಿ’, ‘ಬೇರು’, ‘ತುತ್ತೂರಿ’, ‘ವಿಮುಕ್ತಿ’, ‘ಬೆಟ್ಟದ ಜೀವ’, ‘ಭಾರತ್ ಸ್ಟೋರ್ಸ್’, ‘ಡಿಸೆಂಬರ್ 31’) ರಾಷ್ಟ್ರಪ್ರಶಸ್ತಿ ಪಡೆದ ದೇಶದ ಏಕೈಕ ನಿರ್ದೇಶಕ ಎನ್ನುವ ಹಿರಿಮೆ ಅವರದ್ದು.

ನಿರ್ದೇಶಕರಾಗಿ ಜೀವಮಾನ ಸಾಧನೆಗೆ ಸಲ್ಲುವ ‘ಪುಟ್ಟಣ್ಣ ಕಣಗಾಲ್ ಪ್ರಶಸ್ತಿ’ (2018) ಪಡೆದ ಹೆಮ್ಮೆಯ ಶೇಷಾದ್ರಿ, ‘ಬೆಳ್ಳಿತೆರೆಯಲ್ಲಿ ಪ್ರಯೋಗ, ಕಿರುತೆರೆಯಲ್ಲಿ ಅನ್ನದಯೋಗ’ ಎನ್ನುವುದನ್ನು ಕಾಯಕಮಂತ್ರವಾಗಿ ನಂಬಿರುವಂತಿದೆ. ಕಿರುತೆರೆ ಧಾರಾವಾಹಿಗಳ ನಿರ್ದೇಶಕರಾಗಿಯೂ ಅವರು ಜನಪ್ರಿಯರು. ಕನ್ನಡದ ಪ್ರಸಿದ್ಧ ಕಥೆಗಳನ್ನು ಆಧರಿಸಿದ ‘ಕಥೆಗಾರ’ ಧಾರಾವಾಹಿಯ ನಿರ್ದೇಶಕರಲ್ಲಿ ಅವರೂ ಒಬ್ಬರು. ಮಾಸ್ತಿಯವರ ‘ಸುಬ್ಬಣ್ಣ’ ಕಾದಂಬರಿಯನ್ನು ಕಿರುತೆರೆಗೆ ಒಗ್ಗಿಸಿದ್ದು ಅವರ ಇನ್ನೊಂದು ಸಾಧನೆ. ಟಿ.ಎನ್. ಸೀತಾರಾಮ್ ಅವರೊಂದಿಗೆ ನಿರ್ದೇಶಿಸಿದ ‘ಮಾಯಾಮೃಗ’ ಅವರ ಮತ್ತೊಂದು ಜನಪ್ರಿಯ ಮನೆ ಮನೆ ಕಥನ.

ಸಾಕ್ಷ್ಯಚಿತ್ರಗಳ ನಿರ್ದೇಶಕರಾಗಿಯೂ ಶೇಷಾದ್ರಿ ಗುರ್ತಿಸಿಕೊಂಡವರು. ಟಿ.ಪಿ. ಕೈಲಾಸಂ, ದೇವುಡು, ಕೆ.ಎಸ್. ನರಸಿಂಹಸ್ವಾಮಿ, ಎ.ಎನ್. ಮೂರ್ತಿರಾವ್, ಎಸ್.ಎಲ್. ಭೈರಪ್ಪನವರು ಸೇರಿದಂತೆ ಸಾರಸ್ವತ ಲೋಕದ ಹಲವರ ಕುರಿತು ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ಸೃಜನಶೀಲ ನಿರ್ದೇಶಕನೊಬ್ಬನ ಸಮಕಾಲೀನ ಸ್ಪಂದನಗಳ ರೂಪದಲ್ಲಿಯೂ ಶೇಷಾದ್ರಿ ಅವರ ಸಿನಿಮಾಗಳನ್ನು ನೋಡಬಹುದು. ಅಮಾಯಕ ಹೆಣ್ಣುಮಕ್ಕಳ ಶೋಷಣೆ, ಭಯೋತ್ಪಾದನೆ, ದಯಾಮರಣ, ಜಾಗತೀಕರಣ, ಹುಟ್ಟು–ಸಾವಿನ ಜಿಜ್ಞಾಸೆ, ‘ಗ್ರಾಮವಾಸ್ತವ್ಯ’ ಹೆಸರಿನ ರಾಜಕಾರಣ, ಹಿರಿಯ ನಾಗರಿಕರ ತಲ್ಲಣ – ಹೀಗೆ ವರ್ತಮಾನಕ್ಕೆ ಬೆಳಕು ಚೆಲ್ಲುವ ಕೆಲಸವನ್ನು ಶೇಷಾದ್ರಿ ನಿರಂತರವಾಗಿ ಮಾಡುತ್ತಿದ್ದಾರೆ. ಅವರ ಇತ್ತೀಚಿನ ಸಿನಿಮಾ ‘ಮೋಹನದಾಸ’ ಗಾಂಧಿಯ ಬಾಲ್ಯಜೀವನವನ್ನು ಧ್ಯಾನಿಸಿರುವ ದೇಶದ ಏಕೈಕ ಸಿನಿಮಾ.

11ನೇ ಪುಟಕ್ಕೆ

ಬೆಂಗಳೂರಿನ ಸುಚಿತ್ರಾ ಫಿಲಂ ಸೊಸೈಟಿ ಆವರಣದಲ್ಲಿ ನ. 24ರ ಸಂಜೆ ಪಿ. ಶೇಷಾದ್ರಿ ಸಿನಿಮಾವಲೋಕನ ಕುರಿತ ನಾಲ್ಕು ಪುಸ್ತಕಗಳ (‘ಚಿತ್ರ ಮಂಥನ’, ‘ಕಣ್ಣು ಕಂಡ ಕ್ಷಣಗಳು’, ‘ಸಿನಿಮಾಯಾನದಲ್ಲಿ ದಕ್ಕಿದ್ದು–ಮಿಕ್ಕಿದ್ದು’, ‘Frames of Conscience’) ಬಿಡುಗಡೆ.


ಪಿ. ಶೇಷಾದ್ರಿ

‘ಶೇಷಗ್ರಸ್ತರು’ ನಾಟಕವು ವಾಸ್ತವವಾದಿ ನಾಟಕದಂತೆ ಕಂಡರೂ ಒಳ ಮತ್ತು ಹೊರಗೆ ಅಸಂಗತತೆಯನ್ನು ಮೈಗೂಡಿಸಿಕೊಂಡಂತೆ ಅನಿಸುತ್ತದೆ. ಜೊತೆಗೆ ವ್ಯಕ್ತಿ ಮತ್ತು ಭೂಪ್ರದೇಶದ ಸಂಕರದ ಅನನ್ಯತೆಯೂ ಇದೆ.

ಬಹು ಸಂಕರಗಳ ಕಲಾತ್ಮಕ ಅಭಿವ್ಯಕ್ತಿ

ರಂಗಭೂಮಿ

ಬೇಲೂರು ರಘುನಂದನ್

ಕೋವಿಡ್ ಮಹಾರೋಗದ ಒತ್ತಡ ಮತ್ತು ಸಂಘರ್ಷ, ಲಿವಿಂಗ್ ರಿಲೇಶನ್‌ಶಿಪ್, ಕ್ಯಾನ್ಸರ್ ಮತ್ತು ಲೈಂಗಿಕ ಅಲ್ಪಸಂಖ್ಯಾತ (ಟ್ರಾನ್ಸ್ ಜೆಂಡರ್) ನಾಲ್ಕು ಪ್ರಧಾನ ಧಾರೆಗಳಲ್ಲಿ ‘ಶೇಷಗ್ರಸ್ತರು’ ನಾಟಕದ ವಸ್ತು ವಿನ್ಯಾಸಗೊಂಡಿದೆ. ಮಹಾಭಾರತದ ಪಾತ್ರಗಳು ಸಾಂಗತ್ಯ ಧರ್ಮದ ಸಾಧ್ಯತೆಗಳನ್ನು ಮತ್ತು ವಿವಾಹದ ಕಟ್ಟಳೆಗಳನ್ನು ಮೀರಿ ಕುಟುಂಬವನ್ನು ಅಥವಾ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡ ಬಗೆ, ವರ್ತಮಾನದ ಸಾಧ್ಯತೆಗಳಾಗಿ ಹೊಸರೂಪಾಗಿ ಮೈದಳೆದ ನವಚರಿತ್ರೆಯಂತೆ ನಾಟಕ ಕಟ್ಟಿಕೊಡುತ್ತದೆ.

ಕಲ್ಲಯ್ಯ ಮತ್ತು ಅವನ ಮಗ ಶ್ರೀಕಾಂತ ಇಬ್ಬರ ಹುಡುಕಾಟಗಳು ಮೇಲ್ನೋಟಕ್ಕೆ ಬೇರೆಬೇರೆಯಾಗಿ ಕಂಡರೂ ಅಂತಿಮವಾಗಿ ತಮ್ಮ ವ್ಯಕ್ತಿ ಚರಿತ್ರೆಯ ವಂಶವಾಹಿಗಳನ್ನು ಹುಡುಕಾಟ ಮಾಡುವುದು ನಾಟಕದ ಮೂಲಭಿತ್ತಿಯಾಗಿ ಕಾಣುತ್ತದೆ. ಆಸ್ತಿ ಹಕ್ಕನ್ನು ಮಗನಿಗೆ ವರ್ಗಾಯಿಸಲು ಬಯಸುವ ತಂದೆ, ಅದನ್ನು ನಿರಾಕರಿಸುವ ಮಗ, ವಿವಾಹ ಮಾಡಿಕೊಳ್ಳುವಂತೆ ಒತ್ತಾಯಿಸುವ ತಂದೆ ತಾಯಿ, ಅದನ್ನೂ ನಿರಾಕರಿಸುವ ಮಗ ಕಾಲದ ಯುವ ತಲೆಮಾರಿನ ರೂಪಕವಾಗಿಯೂ, ಭೂತಕಾಲದ ಶೇಷವಾಗಿಯೂ ಕಾಣುತ್ತಾನೆ. ಕಲ್ಲಯ್ಯ ತಾನು ಕಷ್ಟಪಟ್ಟು ಸಂಪಾದಿಸಿದ ಆಸ್ತಿಯನ್ನು ಮಗನ ನಿರಾಕರಣೆಯ ನಂತರ ಲಿಂಗತ್ವ ಅಲ್ಪಸಂಖ್ಯಾತೆಯಾದ ತಂಗಿಯನ್ನು ಹುಡುಕಿಕೊಂಡು ಹೋಗುವ ದೃಶ್ಯ ವಾಸ್ತವಕ್ಕೆ ದೂರವಾದರೂ, ನಾಟಕದ ಆಶಯವನ್ನು ಗಟ್ಟಿಗೊಳಿಸುತ್ತದೆ.

ನಾಟಕದ ಕಥಾ ಹಂದರ ಆಧುನಿಕವೆನಿಸಿದರೂ ಮನುಷ್ಯನ ಜೈವಿಕ, ಭೌಗೋಳಿಕ ಮತ್ತು ರಾಜಕೀಯ ಚರಿತ್ರೆ, ಸಂಕರಗೊಂಡ ಕಥನ ನಾಟಕದ ಆವರಣವನ್ನು ಬಹು ಬಗೆಯಲ್ಲಿ ಪ್ರಶ್ನಿಸುತ್ತಲೇ ನಮ್ಮ ಪುರಾಣ, ಮಹಾಕಾವ್ಯ, ಜಾನಪದ, ಚರಿತ್ರೆ ಮತ್ತು ವರ್ತಮಾನಕ್ಕೆ ಲೇಪಿಸಿ ಸಮರ್ಥವಾಗಿ ಪರಿಶೀಲಿಸುತ್ತದೆ.

ನಾಟಕ ಒಂದು ವಾಸ್ತವವಾದಿ ನಾಟಕದಂತೆ ಕಂಡರೂ ತನ್ನ ಅಂತರಂಗ ಮತ್ತು ಬಹಿರಂಗದಲ್ಲಿ ಅಸಂಗತತೆಯನ್ನು ಮೈವೆತ್ತಿದೆ. ಕಥನದೊಳಗಿರುವ ಪ್ರತಿಮೆ, ಸಂಕೇತಗಳು ವಸ್ತುವಿನ ಪ್ರಸ್ತುತಿಗೆ ಪೂರಕವಾದ ಸಾಮಗ್ರಿಗಳಾಗಿ ದುಡಿಯುತ್ತವೆ. ವಿಕಾಸವಾದದ ಸೂತ್ರ ವ್ಯಕ್ತಿ ಸಂಕರದ, ಭೂಪ್ರದೇಶ ಸಂಕರದ ಅನನ್ಯತೆಯಲ್ಲಿದೆ ಎಂಬ ವೈಚಾರಿಕ ಮತ್ತು ವೈಜ್ಞಾನಿಕ ತಿಳಿವಳಿಕೆ ಮಾನವ ಚರಿತ್ರೆಯನ್ನು ಹೇಳಲು ನಾಟಕ ಪ್ರಯತ್ನಪಟ್ಟಿದೆ. ಇದೆಲ್ಲದರ ನಡುವೆ ಮನುಷ್ಯನ ಅಭದ್ರತೆಗಳನ್ನು ಬಳಸಿಕೊಳ್ಳುವ ಶಕ್ತಿ ರಾಜಕಾರಣ ಹೇಗೆಲ್ಲಾ ವ್ಯಕ್ತಿಯ ಅಸ್ಮಿತೆಯನ್ನು ಜಟಿಲ ಅಥವಾ ಜಡ ಮಾಡುತ್ತದೆ ಎಂಬ ಹುನ್ನಾರಗಳನ್ನು ‘ಶೇಷಗ್ರಸ್ತರು’ ರಂಗ ಪ್ರಯೋಗ ತೆರೆದಿಡುತ್ತದೆ.

ವರ್ತಮಾನದ ಭ್ರಮಾತ್ಮಕ ಜಗತ್ತನ್ನು ಗೇಲಿ ಮಾಡುತ್ತಲೇ, ಅದರ ಸಾಧ್ಯತೆಗಳನ್ನು ವಿವರಿಸುತ್ತಲೇ ವರ್ಚುವಲ್ ಜಗತ್ತಿನ ಅನ್ವೇಷಣೆಗಳು ಮತ್ತು ಅದರ ಸಾಧಕ ಬಾಧಕಗಳು ಮನುಷ್ಯ ಜಗತ್ತನ್ನು ನಿರ್ವಹಿಸುತ್ತಿರುವ ಮತ್ತು ಪೋಷಿಸುತ್ತಿರುವ ರೀತಿ ನಾಟಕದಲ್ಲಿ ಅತ್ಯಂತ ಕಲಾತ್ಮಕವಾಗಿ ಅಭಿವ್ಯಕ್ತಿಗೊಂಡಿದೆ.

ಕನ್ನಡ ರಂಗಭೂಮಿಯ ಅತ್ಯಂತ ಪ್ರತಿಷ್ಠಿತ ರಂಗತಂಡ ರಂಗಸಂಪದ ಈಗಾಗಲೇ ಐದು ದಶಕಕ್ಕೂ ಹೆಚ್ಚು ಕಾಲ ಕನ್ನಡಕ್ಕೆ ಅತ್ಯಂತ ಮಹತ್ವದ ರಂಗಪ್ರಯೋಗಗಳನ್ನು ನೀಡಿದೆ. ‘ಶೇಷಗ್ರಸ್ತರು’ ನಾಟಕದ ಆಯ್ಕೆ ಮತ್ತು ಅದರ ಮಂಡನೆಗೆ ತಾತ್ವಿಕ ಮುನ್ನುಡಿಯನ್ನು ಸಮರ್ಥವಾಗಿ ರಂಗಸಂಪದ ಬರೆದಿದೆ. ರಮೇಶ್ ಚಂದ್ ಎಚ್.ಸಿ ‘ಶೇಷಗ್ರಸ್ತರು’ ನಾಟಕವನ್ನು ರಚಿಸಿ ನಿರ್ದೇಶಿಸಿದ್ದಾರೆ. ಅವರ ಪರಿಕಲ್ಪನೆ ಮತ್ತು ವಿನ್ಯಾಸ, ತಂತ್ರ ಮತ್ತು ರೂಪಕಾತ್ಮಕವಾದ ಬಂಧವನ್ನು ದೃಶ್ಯಗೊಳಿಸಲು ಶಕ್ತ ರಂಗ ಮಾರ್ಗವಾಗಿದೆ. ಮಾತು ಭಾಷಣವಾಗುವ ಸಾಧ್ಯತೆಗಳನ್ನು ಮೀರಿ ನಿರ್ದೇಶಕರು ನಾಟಕವನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಕಲ್ಲಯ್ಯನ ಪಾತ್ರಧಾರಿ ಚಂದ್ರಕಾಂತ ಅವರು ಕನ್ನಡ ರಂಗಭೂಮಿಯಲ್ಲಿ ಹಲವು ವರ್ಷಗಳು ರಂಗದ ಕಸುಬು ಮಾಡಿರುವ ಕಲಾವಿದರು. ನೇಪಥ್ಯದಲ್ಲಿ ಬಹುವಾಗಿ ದುಡಿದಿದ್ದಾರೆ. ಚಂದ್ರಕಾಂತ ಅವರೊಳಗಿನ ಕಲಾವಿದನಿಗೆ ತನ್ನ ಅನುಭವಜನ್ಯ ಭಾವಭಿವ್ಯಕ್ತಿಯನ್ನು ಮಾಡಲು ಸೂಕ್ತ ಅವಕಾಶ ದೊರಕಿದೆ. ಪಾತ್ರ ಎಲ್ಲೂ ಲಘುವಾಗದಂತೆ ಹದವಾಗಿ ಮತ್ತು ಪ್ರೌಢವಾಗಿ ಚಂದ್ರಕಾಂತರು ಅನುಭವಿಸಿ ಜೀವಿಸಿದ್ದಾರೆ. ಗಂಗಮ್ಮ ಮತ್ತು ಗಂಗಾಂಬೆಯ ಪಾತ್ರವನ್ನು ನಿರ್ವಹಿಸಿರುವ ಸೌಭಾಗ್ಯ ಅವರು ತಮ್ಮ ಅಭಿವ್ಯಕ್ತಿಯನ್ನು ಪಾತ್ರಕ್ಕೆ ಪೂರಕವಾಗಿ ಪ್ರಕಟಿಸಿದ್ದಾರೆ. ಕಲ್ಪನಾ ಜಗತ್ತಿನಲ್ಲಿ ವಿಹರಿಸುವ ಅವರ ಅಭಿನಯ ಮನಮುಟ್ಟುತ್ತದೆ. ಶ್ರೀಕಾಂತ ಮತ್ತು ನಿತ್ಯ ಪಾತ್ರಧಾರಿಗಳು ನಾಟಕದ ಓಘವನ್ನು ಮುನ್ನಡೆಸುತ್ತಾರೆ. ಶಶಿಧರ ಅಡಪ ಮತ್ತು ಅಪ್ಪಯ್ಯ ಅವರ ರಂಗ ಸಜ್ಜಿಕೆ ರಂಗ ಪ್ರಯೋಗದ ಅಗತ್ಯದ ಅಳತೆಯನ್ನು ಮೀರದೆ, ಪೂರಕವಾಗಿದೆ. ಶಂಕರ್ ಬಿಲ್ಲೇಮನೆಯವರ ಹಿನ್ನೆಲೆ ಸಂಗೀತ ಮತ್ತು ಧ್ವನಿಮುದ್ರಿತ ಸಂಗೀತ ರಂಗ ಕಥನ ಲೋಕದೊಳಗೆ ಪ್ರವೇಶಿಸಲು ಸಹಾಯ ಮಾಡುತ್ತದೆ. ಅಕ್ಷರ. ವಿ ಅವರ ಬೆಳಕಿನ ವಿನ್ಯಾಸ ಕಥೆಯನ್ನು ಶಕ್ತವಾಗಿ ನೋಡುಗನಲ್ಲಿ ಬೆಳಗಿಸುತ್ತದೆ. ಕೋವಿಡ್ ನಂತಹ ವಾಚ್ಯವಾಗಬಲ್ಲ ವಸ್ತುವನ್ನು ಕಲೆಯನ್ನಾಗಿಸುವ ಪ್ರಯತ್ನವನ್ನು ಮಾಡುವ ಮೂಲಕ ವಿಷಾದದೊಳಗೆ ಆತ್ಮ ವಿಮರ್ಶೆಯ ಚಲನೆಯನ್ನು ಪ್ರೇಕ್ಷಕನ ಬುದ್ಧಿಭಾವಗಳಲ್ಲಿ ಮರು ಪ್ರತಿಷ್ಠಾಪಿತಗೊಳ್ಳುವಂತೆ ನಾಟಕದ ನಿರ್ದೇಶನ, ಅಭಿನಯ ಸೇರಿದಂತೆ ಒಟ್ಟು ಮಂಡನೆಯಿದೆ.

ಶಿಕಾರಿಪುರ ತಾಲ್ಲೂಕಿನ ತರಲಘಟ್ಟ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಹೋರಿ ಹಬ್ಬದ ರೋಚಕ ಕ್ಷಣ ಚಿತ್ರ: ಎಚ್.ಎಸ್. ರಘು, ಶಿಕಾರಿಪುರ

ಹೋರಿಗಳ ಮಿಂಚಿನಓಟ...!

10ನೇ ಪುಟದಿಂದ...

ಪೀಪಿ ಹೋರಿ, ಗಗ್ಗರಿ ಹೋರಿ!

ಹೋರಿ ಹಬ್ಬದ ಪ್ರಮುಖ ಆಕರ್ಷಣೆಯೇ ಪೀಪಿ ಹೋರಿ. ಎರಡೂ ಕೋಡುಗಳಿಗೆ ಸುಮಾರು 8–10 ಅಡಿ ಎತ್ತರದ ವೆಲ್ಡಿಂಗ್ ಮಾಡಿಸಿದ ಕಬ್ಬಿಣದ ಪೈಪುಗಳನ್ನು ಕಟ್ಟಿ ಅದಕ್ಕೆ ಬಲೂನಗಳಿಂದ ಸಿಂಗರಿಸಿದರೆ ಅದು ಪೀಪಿ ಹೋರಿ. ಟ್ರ್ಯಾಕ್‌ನಲ್ಲಿ ಕಾಲು ಕೆದರಿ ಹೋಗುವ ಪೀಪಿ ಹೋರಿಯನ್ನು ನೋಡುವುದೇ ಚಂದ. ಇನ್ನು, ಗಗ್ಗರಿ ಹೋರಿಗೆ ತಲೆಯ ಮೇಲೆ ಪೀಪಿ ಇರುವುದಿಲ್ಲ. ಅದಕ್ಕೂ ಕೂಡ ಹೋರಿ ಮಾಲೀಕರು ತಮ್ಮ ಇಷ್ಟದಂತೆ ಬಗೆಬಗೆಯಾಗಿ ಸಿಂಗರಿಸಿ ಓಡಿಸುತ್ತಾರೆ.

‘ಹೋರಿ ಹಬ್ಬ ಆಯೋಜಿಸಲು ಮುಖ್ಯವಾಗಿ ರೈತರು, ಯುವಕರೇ ಕಾರಣ. ನಮ್ಮ ಭಾಗದ ಸಾಂಸ್ಕೃತಿಕ ಸಾಹಸ ಕ್ರೀಡೆಯಾಗಿ ರಾಜ್ಯ, ಹೊರ ರಾಜ್ಯದಲ್ಲಿ ಗಮನ ಸೆಳೆಯುತ್ತಿದೆ’ ಎನ್ನುತ್ತಾರೆ ರಾಣೆಬೆನ್ನೂರು ಕಾ ರಾಜಾ ಹೋರಿ ಮಾಲೀಕ ಪ್ರಕಾಶ್ ಬುರಡಿಕಟ್ಟಿ.

ಫ್ಯಾನ್ ಪೇಜ್

ಸಾಕಷ್ಟು ಹೋರಿಗಳು ಸುತ್ತಮುತ್ತಲಿನ ಊರುಗಳಲ್ಲಿ ಅಭಿಮಾನಿಗಳಷ್ಟೇ ಅಲ್ಲದೇ ಸೋಷಿಯಲ್ ಮೀಡಿಯಾದಲ್ಲಿ ಫ್ಯಾನ್ ಪೇಜ್‌ಗಳನ್ನು ಸೃಷ್ಟಿಸಿಕೊಂಡಿವೆ. ತಮ್ಮ ನೆಚ್ಚಿನ ಹೋರಿಗಳ ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಅದಕ್ಕೆ ಅಭಿಮಾನಿಗಳ ನಡುವೆ ಜಗಳ ನಡೆಯುವುದುಂಟು.

ಜಲ್ಲಿಕಟ್ಟು ರೀತಿ ಹೋರಿ ಹಬ್ಬವೂ ಅಪಾಯಕಾರಿ. ಹೋರಿ ಬೆದರಿಸುವಾಗ ಕೆಲವರು ಸತ್ತಿರುವ, ಇನ್ನೂ ಕೆಲವರು ಗಂಭೀರವಾಗಿ ಗಾಯಗೊಂಡಿರುವ ನಿದರ್ಶನಗಳಿವೆ. ಹಬ್ಬ ಆಯೋಜಿಸುವರು ಪೊಲೀಸರ ಅನುಮತಿ ಪಡೆದುಕೊಳ್ಳಬೇಕು, ಮುನ್ನೆಚ್ಚರಿಕೆ ಕ್ರಮಗಳ ಜೊತೆ ಪಶು ವೈದ್ಯರೂ ಸ್ಥಳದಲ್ಲಿರಬೇಕು. ಆದರೂ ಅವಘಡಗಳು ತಪ್ಪಿಲ್ಲ.

ಗ್ರಾಮೀಣ ಪ್ರದೇಶದ ರೈತಾಪಿಗಳು ಮನೋರಂಜನೆಗೆಗಾಗಿ ಸಾಹಸ ಕ್ರೀಡೆಗಳನ್ನು ಮೈಗೂಡಿಸಿಕೊಂಡಿದ್ದಾರೆ. ಕಾಲ ಬದಲಾದಂತೆ ಅವುಗಳು ಮೆಲ್ಲಗೆ ತೆರೆಗೆ ಸರಿಯುತ್ತಿವೆ. ಆದರೆ, ಹೋರಿ ಹಬ್ಬದ ಹೋರಿ ಬೆದರಿಸುವ ಸ್ಪರ್ಧೆ ಈಗ ಇವೆಂಟ್ ಆಯಾಮ ಪಡೆದುಕೊಳ್ಳುತ್ತಿರುವುದು ಯುವಜನಾಂಗದ ಅಭಿರುಚಿಯನ್ನು ಹೇಳುತ್ತದೆ.

‘ಮುನ್ನುಡಿ’ಯಿಂದ ‘ಮೋಹನದಾಸ’ನವರೆಗೆ

10ನೇ ಪುಟದಿಂದ...

ನಿರ್ದೇಶನ ಮಾತ್ರವಲ್ಲ, ನಿರ್ಮಾಣಕ್ಕೆ ಸಂಬಂಧಿಸಿದಂತೆಯೂ ಅವರ ಪ್ರಯೋಗಶೀಲತೆಯನ್ನು ಗುರ್ತಿಸಬೇಕು. ಸಮಾನಮನಸ್ಕ ಗೆಳೆಯರೊಂದಿಗೆ ತಾವೂ ಸೇರಿಕೊಂಡು ಬಂಡವಾಳ ಹೂಡುವ ಮೂಲಕ ಸಿನಿಮಾಗಳನ್ನು ರೂಪಿಸಿರುವ ಅವರ ಮಾದರಿ, ಯುವ ಸಿನಿಮಾ ನಿರ್ಮಾತೃಗಳಿಗೆ ಪಾಠದಂತಿದೆ.

ಸಿನಿಮಾಗಳ ಮೂಲಕ ಮಾತ್ರವಲ್ಲದೆ, ಮಾತು–ಬರಹ ಹಾಗೂ ಸಂಘಟನೆಯ ಮೂಲಕವೂ ಸಿನಿಮಾ ಸಂಸ್ಕೃತಿ ರೂಪಿಸುವಲ್ಲಿ ಶೇಷಾದ್ರಿ ಸಕ್ರಿಯರು. ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಚಿತ್ರೋತ್ಸವಗಳಲ್ಲಿ ಪರಿಚಿತ ಕನ್ನಡ ಮುಖವಾದ ಶೇಷಾದ್ರಿ, ‘ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ’ದ ಕಳೆದೆರಡು ಋತುಗಳಲ್ಲಿ ಸಂಘಟನೆಯ ಮುಂಚೂಣಿಯಲ್ಲಿದ್ದಾರೆ.

ಕನ್ನಡ ಚಿತ್ರೋದ್ಯಮ ಉಳಿವಿನ ಬೆಳಕಿನ ಕಂಡಿಯ ಹುಡುಕಾಟದಲ್ಲಿದ್ದಾರೆ. ಪ್ರಯೋಗಶೀಲ ಸಿನಿಮಾ ನಿರ್ಮಾತೃಗಳು ಯಾಕಾಗಿ ಸಿನಿಮಾ ಮಾಡಬೇಕು ಎನ್ನುವ ಗೊಂದಲದಲ್ಲಿದ್ದಾರೆ. ಈ ಸಂದಿಗ್ಧಗಳ ಜೊತೆಗೇ, ಶೇಷಾದ್ರಿ ಅರವತ್ತು ದಾಟಿದ್ದಾರೆ. ಅರವತ್ತರ ಸಂಕ್ರಮಣ ಸಂದರ್ಭ ಅವರ ಸಿನಿಮಾಗಳ ಪ್ರದರ್ಶನ, ಚರ್ಚೆ ಹಾಗೂ ಪುಸ್ತಕಗಳ ಬಿಡುಗಡೆಯ ರೂಪ ಪಡೆದಿದೆ. ಈ ಕ್ರಿಯಾಶೀಲ ಸಂಭ್ರಮ ಶೇಷಾದ್ರಿ ಅವರಲ್ಲಿ ಹೊಸ ಸಿನಿಮಾದ ಕನಸನ್ನು ಮೊಳೆಯಿಸಬಹುದೇನೊ?


2ನೇ ಸಂಪುಟ
ಇದೀಗ ಲಭ್ಯ
ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ
ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಸ್ಮಾರ್ಟ್ ಕ್ಲಾಸ್‌ನಲ್ಲಿ ವಿದ್ಯಾರ್ಥಿಗಳು

ನೂರು ಪಾಲಿಸಿ, ಮಕ್ಕಳ ಕಲಿಕೆಯ ಬೆಳಕು...

10ನೇ ಪುಟದಿಂದ...

‘ನಮ್ಮ ಮಕ್ಕಳಿಗೆ ತುಂಬಾ ಅನುಕೂಲವಾಗಿದೆ. ಪಟ್ಟಣದ ಶಾಲೆಯ ಮಕ್ಕಳಿಗೆ ಸರಿಸಮನಾಗಿ ಪಾಠ ಕಲಿಯುವುದು ಖುಷಿಯ ವಿಚಾರವಾಗಿದೆ’ ಎಂದು ಗ್ರಾಮಸ್ಥರಾದ ಶಿವಾನಂದ ಕಳಸದ, ನಿಂಗಯ್ಯ ಒಡೆಯರ್, ಮಲ್ಲಪ್ಪ ಹಾವೋಜಿ ಹಾಗೂ ಭೀಮಪ್ಪ ನಂದ್ಯಾಳ ಹೆಮ್ಮೆಯಿಂದ ಹೇಳುತ್ತಾರೆ.

ಇದರಿಂದ ಮಕ್ಕಳು ಮುಂದಿನ ದಿನಗಳಲ್ಲಿ ನಾಯಕರಾಗಿ, ಅಧಿಕಾರಿಗಳಾಗಿ, ಡಾಕ್ಟರ್ ಅಥವಾ ಎಂಜಿನಿಯರ್ ಇಲ್ಲವೇ ಉತ್ತಮ ಕೃಷಿಕರಾಗಿ ಹೊರಹೊಮ್ಮುತ್ತಾರೋ ಗೊತ್ತಿಲ್ಲ. ಒಟ್ಟಾರೆಯಾಗಿ ಗ್ರಾಮೀಣ ಭಾಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗದಿರುವಂತೆ ಮಾಡುವುದು ಎಲ್ಲರ ಜವಾಬ್ದಾರಿ. ಇದನ್ನು ಈ ಗ್ರಾಮಸ್ಥರು ಹೆಚ್ಚಾಗಿ ಅರಿತಿದ್ದಾರೆ. ಇವರಿಗೆ ಅಭಿನಂದನೆಗಳು.

ಮುನ್ನೋಟ 24-11-2024 ರಿಂದ 30-11-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ನಿಮ್ಮ ನಿರ್ಧಾರಗಳಲ್ಲಿ ಹಠವಿರುತ್ತದೆ. ಆದಾಯವು ನಿಮ್ಮನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮ ಕಾರ್ಯಗಳಿಗೆ ಕೆಲ ಹಿರಿಯರು ಅಡ್ಡಿಯಾಗಬಹುದು. ಸ್ಥಿರಾಸ್ತಿಯನ್ನು ಮಾಡಿಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಈಗ ನಿರೀಕ್ಷಿತ ಫಲಿತಾಂಶವಿರುತ್ತದೆ. ಹೊಟ್ಟೆಯಲ್ಲಿನ ಸಮಸ್ಯೆಗಳು ಉಲ್ಬಣಗೊಳ್ಳಬಹುದು. ಸಂಗಾತಿ ವ್ಯವಹಾರಗಳಲ್ಲಿ ಏರುಪೇರಾಗಬಹುದು. ವೃತ್ತಿಯಲ್ಲಿದ್ದ ಸಂಘರ್ಷಗಳು ಕೊನೆಯಾಗುತ್ತವೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಬಹಳ ಗೌರವಯುತವಾಗಿ ನಡೆದುಕೊಳ್ಳುವಿರಿ. ಕುಟುಂಬದಲ್ಲಿನ ಆದಾಯ ಏರಿಕೆಯಾಗುತ್ತದೆ. ಹೈನುಗಾರಿಕೆ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ತಾಯಿಯ ಸಹಕಾರ ನಿಮಗೆ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ಹಣಕಾಸು ವ್ಯವಹಾರ ಅಷ್ಟು ಒಳ್ಳೆಯದಲ್ಲ. ಸಂಗಾತಿ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಪ್ರಸೂತಿ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ನಿಮ್ಮ ಅತಿಯಾದ ವ್ಯವಹಾರದ ಬುದ್ಧಿ ನಿಮಗೆ ಮುಜುಗರ ತರಬಹುದು. ಕೃಷಿಯಿಂದ ಲಾಭವಿರುತ್ತದೆ. ತಾಯಿಯ ಮತ್ತು ಸಹೋದರಿಯರ ಸಹಾಯ ನಿಮಗೆ ದೊರೆಯುತ್ತದೆ. ಆಸ್ತಿಯನ್ನು ಮಾಡುವ ಆತುರ ಸದ್ಯಕ್ಕೆ ಬೇಡ. ವಿದ್ಯಾರ್ಥಿಗಳಿಗೆ ಈಗ ನಿರೀಕ್ಷಿತ ಯಶಸ್ಸು ಇರುತ್ತದೆ. ಕಣ್ಣಿನ ತೊಂದರೆ ಇರುವವರು ಎಚ್ಚರವಹಿಸಿ. ಸಂಗಾತಿಯಿಂದ ಆರ್ಥಿಕ ಸಹಕಾರ ದೊರೆಯುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಶಿಸ್ತುಬದ್ಧ ಜೀವನವನ್ನು ರೂಪಿಸಿಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಆಸ್ತಿ ಖರೀದಿ ವಿಚಾರದಲ್ಲಿ ಹೆಚ್ಚು ಹಣ ಖರ್ಚಾಗಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಸಂಗಾತಿಯ ಅಲಂಕಾರಿಕ ವಸ್ತುಗಳಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಸಂಗಾತಿಯ ಕೆಲವೊಂದು ಮಾತು ನಿಮ್ಮನ್ನು ಚುಚ್ಚುವಂತಿರುತ್ತದೆ. ಕ್ರೀಡಾಪಟುಗಳಿಗೆ ಹೆಚ್ಚು ಸಂಭಾವನೆ ಸಿಗುತ್ತದೆ.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ವಾರದ ಆರಂಭ ಬಹಳ ಆನಂದದಾಯಕವಾಗಿರುತ್ತದೆ. ಮಾತಿನಲ್ಲಿ ಸರಳತೆ ಇದ್ದರೂ ಅದರಲ್ಲಿ ವ್ಯಂಗ್ಯವಿರುತ್ತದೆ. ಸ್ತ್ರೀಯರ ಸಹಾಯದಿಂದ ಕೆಲವು ಕೆಲಸ ಕಾರ್ಯಗಳನ್ನು ಪೂರೈಸಬಹುದು. ಸಂಗಾತಿಯು ಸಂಸಾರಕ್ಕಾಗಿ ದುಡಿಯುತ್ತಾರೆ. ಹಿರಿಯರ ಕೃಷಿಯನ್ನು ಮುಂದುವರೆಸಿಕೊಂಡು ಹೋಗುವಿರಿ. ವಾಹನ ರಿಪೇರಿ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಆಲಸ್ಯದಿಂದ ಯಾವುದೇ ಕೆಲಸ ಮಾಡಲು ಮನಸ್ಸಿರುವುದಿಲ್ಲ. ಸಂಗೀತಗಾರರಿಗೆ ಉತ್ತಮ ಅವಕಾಶವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಭೂಮಿಯ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಮಕ್ಕಳಿಂದ ನಿರೀಕ್ಷಿತ ಸಹಾಯ ಸಿಗುವುದು ಕಷ್ಟ. ಸರ್ಕಾರಿ ವ್ಯವಹಾರಗಳಲ್ಲಿ ನಿರೀಕ್ಷಿತ ಆದಾಯ ಇರುವುದಿಲ್ಲ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ನಿಮ್ಮ ಕೆಲಸ ಮಾಡಿಕೊಳ್ಳಲು ಸಾಕಷ್ಟು ಚುರುಕುತನ ಪ್ರದರ್ಶಿಸುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಸಾಂಪ್ರದಾಯಿಕ ಬೆಳೆಗಳಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಕೀಲು ನೋವುಗಳು ಕೆಲವರನ್ನು ಕಾಡಬಹುದು. ಪಾಲುದಾರರ ಸಹಾಯದಿಂದ ಗಣಿಗಾರಿಕೆಯನ್ನು ಮಾಡಬಹುದು. ಕೀಲು ನೋವು ಕೆಲವರನ್ನು ಕಾಡಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಅತಿಯಾದ ಆತ್ಮಾಭಿಮಾನ ನಿಮ್ಮಲ್ಲಿ ಇರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಆರಕ್ಷಕರಿಗೆ ತಮ್ಮಶತ್ರುಗಳನ್ನು ಹಿಡಿಯುವ ಕಲೆ ಸಿದ್ಧಿಸುತ್ತದೆ. ಹಿರಿಯರ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ. ಸಂಗಾತಿಯಿಂದ ಸಲಹೆ ಮತ್ತು ಉತ್ತಮ ಸಹಕಾರ ದೊರೆಯುತ್ತದೆ. ವೃತ್ತಿಯಲ್ಲಿ ಕಿರಿಕಿರಿಗಳಿದ್ದರೂ ಅನುಸರಿಸಿಕೊಂಡು ನಡೆಯುವಿರಿ. ಬಾಣಸಿಗರಿಗೆ ಬೇಡಿಕೆ ಹೆಚ್ಚಾಗುತ್ತದೆ.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸ್ನೇಹಿತರ ಸಹಾಯದಿಂದ ಶತ್ರುಗಳನ್ನು ಸದೆ ಬಡಿಯುವಿರಿ. ಕಮಿಷನ್ ವ್ಯವಹಾರ ಮಾಡುವವರಿಗೆ ಆದಾಯ ಕಡಿಮೆಯಾಗಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಪಲಿತಾಂಶವಿರುತ್ತದೆ. ಅಜೀರ್ಣ ಕೆಲವರನ್ನು ಕಾಡಬಹುದು. ಸಂಗಾತಿ ಕಡೆಯ ಹಿರಿಯರಗಾಗಿ ಹಣ ಖರ್ಚಾಗುತ್ತದೆ. ಕೃಷಿಯಿಂದ ಅನಿರೀಕ್ಷಿತ ಆದಾಯ ಬರುವ ಸಾಧ್ಯತೆ ಇದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಒತ್ತಡದ ನಡುವೆಯೂ ಕೆಲಸ ಮಾಡುವ ಹುಮ್ಮಸ್ಸನ್ನು ಇಟ್ಟುಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ಬದಲಿ ಮೂಲಗಳಿಂದ ಆದಾಯ ಪಡೆಯುವ ಪ್ರಯತ್ನ ಮಾಡುವಿರಿ. ಸಂಗಾತಿಗೆ ಈಗ ಅವರ ಕಡೆಯಿಂದ ಆಸ್ತಿ ಬರುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ದೊರೆಯುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಸ್ಥಿತಪ್ರಜ್ಞರಾಗಿ ಇರುವುದು ಬಹಳ ಒಳ್ಳೆಯದು. ವಿದೇಶದಲ್ಲಿರುವವರಿಗೆ ಆದಾಯ ಹೆಚ್ಚುತ್ತದೆ. ಸಮೂಹದಲ್ಲಿ ಮಾತನಾಡುವಾಗ ಎಚ್ಚರಿಕೆ ಇರಲಿ. ನಿಮ್ಮ ಆಹಾರ ಪದ್ಧತಿಯಿಂದ ಆರೋಗ್ಯ ವ್ಯತ್ಯಾಸವಾಗಬಹುದು. ಹಣಕಾಸಿನ ವ್ಯವಹಾರ ಮಾಡುವವರಿಗೆ ಆದಾಯವಿದೆ. ಪಾಲುದಾರಿಕೆ ವ್ಯವಹಾರಗಳಿಂದ ಲಾಭವಿರುತ್ತದೆ. ಬೆಂಕಿಯೊಡನೆ ಕೆಲಸ ಮಾಡುವವರು ಎಚ್ಚರದಿಂದ ಕೆಲಸ ಮಾಡಿ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಸಮಾಧಾನದಿಂದ ಇರುವುದು ಬಹಳ ಒಳ್ಳೆಯದು. ಆದಾಯವು ಸಾಮಾನ್ಯವಾಗಿರುತ್ತದೆ. ಮಾತು ಮೃದುವಾಗಿರಲಿ. ಹಿರಿಯರ ಸಹಕಾರ ಪಡೆಯಲು ಪ್ರಯತ್ನಪಡುವಿರಿ. ಕ್ರೀಡಾಪಟುಗಳಿಗೆ ಉತ್ತಮ ಯಶಸ್ಸು ಇರುತ್ತದೆ. ಶೀತಬಾಧೆ ಇರುವವರು ಎಚ್ಚರವಹಿಸಿ. ನಿಮ್ಮ ನಿಲುವುಗಳಿಗೆ ಸಂಗಾತಿ ವಿರೋಧ ವ್ಯಕ್ತಪಡಿಸುವರು. ವೃತ್ತಿಯಲ್ಲಿ ಪರಿಚಿತರಿಂದ ಅನುಕೂಲವಾಗುತ್ತದೆ.

ಪದಬಂಧ 2867



ಮೇಲಿನಿಂದ ಕೆಳಕ್ಕೆ

1. ಕೃಷ್ಣಪ್ರೇಯಸಿ ಧರಿಸುವ ಶ್ರೀಗಂಧ 5
2. ನೆಲಮಾಳಿಗೆಗೆ ಇರುವ ಬಾಗಿಲು 5
3. ಭೀತಿಯನ್ನುಂಟು ಮಾಡುವವ 5
4. ಸೂರ್ಯನ ಜೊತೆ ಈಶ್ವರ ಸೇರಿ ಒಳ್ಳೆಯದು ಮಾಡುತ್ತಾನೆ 5
5. ಬಳಿ ಸಾರಿ ಬರುವ ಹುಡುಗಿಯ ಹೆಸರು ಹೀಗಿರಬಹುದೆ? 3
7. ಉತ್ತಮ ಹಣ್ಣಿನ ಬೆಳೆಗೆ ಬಳಸುವ ರಾಸಾಯನಿಕ ಗೊಬ್ಬರ 3
10. ರಸಭರಿತ ಮಾವನ್ನು ಸಾಲವಾಗಿ ಪಡೆಯಬಹುದೆ? 3
11. ಕೆಳಗಿನಿಂದ ಮೇಲಕ್ಕೆ ಲಾಲಿಸಿ ಪೋಷಿಸು 3
13. ಲೈಲಾ ಪ್ರಿಯತಮ 3
14. ಚಿಂದಿಯಾದ ಬಾಯಿ, ಬಟ್ಟೆ 3
15. ಹೊರಗಿನ ಪ್ರಪಂಚಕ್ಕೆ ಕಾಣುವ ಜೀವನ 5
16. ವ್ಯಾಘ್ರ ಧರಿಸುವ ಹಸು ವೇಷ 3
17. ಇವು ಸುಂದರ ಸರಳ ‘ಕಲೆ’ಯಾದರೂ ಕಲಿಕೆ ಕಷ್ಟ 5
18. ಜಾತಿ ಓಟಿನ ಲೆಕ್ಕ 5
19. ಜಗತ್ತಿದಲ್ಲಿ ಸಾಮಾನ್ಯವಾಗಿ ನಡೆಯುವ ಕಲಹ ವ್ಯಾಜ್ಯ 3
20. ನೂರು ಸಾವಿರ ದೇವ ಮಂದಿರ 5

ಎಡದಿಂದ ಬಲಕ್ಕೆ

1. ಗುಂಡನ್ನು ಖೊವಿಯಿಂದ ಚಿಮ್ಮಿಸು 5
3. ಬದುಕೆಂಬುದು ಇಹದ ಸಮುದ್ರ, ದಾಟಲು ಕಷ್ಟವೆ! 5
5. ಜಿಂಕೆ ಜಾತಿಗೆ ಸೇರಿದ ರಾಗ 3
6. ಪೀಡಿಸಿ ತೊಂದರೆಕೊಡು 3
8. ಕೃಷ್ಣ ಯುಗ 3
9. ಹದಿನಾರು ಸಾವಿರ ನಾರಿಯರನ್ನು ಬಂಧಿಸಿದ ದಾನವ 5
12. ತಾವರೆಯನ್ನು ಅಪಹರಿಸುವವ 5
15. ಪುಚ್ಛವಿರುವ ಹಸು ಕಾಯುವವನ ಬಾಲ್ಯರೂಪ 5
18. ಮನುವಿನಿಂದ ಹುಟ್ಟಿಬಂದ ನರ ಜಾತಿ 5
21. ಇದು ಬರೆದಿಟ್ಟದ್ದು 3
22. ಕರಾರುವಾಕ್ಕನ್ನು ದೃಢಪಡಿಸುವ ಪದ 3
23. ಗರ ಬಡಿದಿರುವ ವಿಷ ಕೊರಳಿಗೆ ಏರಬಹುದು 3
24. ಹೂವಿನ ಎಸಳಿನಂತೆ ಎಳಸಾದ ಮುಗ್ಧೆ 5
25. ಈ ಭೂಮಿ ಶುಭದಾಯಿ ಊರು 5

ಪದಬಂಧ ಉತ್ತರ -2866

ಮೇಲಿಂದ ಕೆಳಕ್ಕೆ

1.ಚಕಿತ 2.ಕರಾಳ 3.ಮಾನಮತಿ 4.ತಳಹದಿ 7.ಮಕರ 8.ಸಹಸ್ರನಾಮ 9.ನವಜಾತ 10.ಮಠಾಧೀಶ 12.ಡಿಗರಿ 13.ದಮನಕ 14.ರಕ್ಷಾಪಡೆ 15.ಪತ್ರಕ 16.ಸಕಾಲ

ಎಡದಿಂದ ಬಲಕ್ಕೆ

1.ಚಕ್ರವಾಕ 2.ಮಾರುತ 5.ರಾಜೀವಲೋಚನ 6.ತಳಮಳ 8.ಸರಸ್ವತಿನದಿ 10.ಮರಸಮೂಹ 11.ನಾಡಿಮಿಡಿತ 13.ದಶರಥರಾಮ 15.ಪರಿಹಾಸ 17.ಪಲಾಯನಸೂತ್ರ 18.ಕವಡೆ 19.ಕಷ್ಟಕಾಲ

ಅಪೂರ್ವ ಮಕ್ಕಳ ಕುಂಚ ಹೇಳಿದ ಕತೆ

ಆಟಿಸಂಗೆ ಒಳಗಾಗಿರುವ ಮಕ್ಕಳು ಮತ್ತು ಯುವಕರು ಚಿತ್ರಿಸಿದ ಬಗೆ ಬಗೆಯ ಕಲಾಕೃತಿಗಳ ಪ್ರದರ್ಶನ ಈಚೆಗೆ ಬೆಂಗಳೂರಿನಲ್ಲಿ ನಡೆಯಿತು. ಅಲ್ಲಿದ್ದ ಪ್ರತಿಯೊಂದು ಕಲಾಕೃತಿಗಳು ಈ ವಿಶಿಷ್ಟ ಕಲಾವಿದರ ಭಾವನೆ ಮತ್ತು ಪ್ರತಿಭೆಯನ್ನು ಅನಾವರಣಗೊಳಿಸಿದವು.

ಮಂಜುಶ್ರೀ ಕಡಕೋಳ

ಅಲ್ಲಿನ ಗೋಡೆಗಳ ಮೇಲೆ ತೂಗು ಹಾಕಿದ್ದ ಒಂದೊಂದು ಕಲಾಕೃತಿಯೂ ಭಿನ್ನ ಭಾವಾಭಿವ್ಯಕ್ತಿಯನ್ನು ಹೊರಸೂಸುತ್ತಿತ್ತು. ದಟ್ಟ ಬಣ್ಣಗಳಲ್ಲಿ ಮೇಳೈಸಿದ್ದ ಆ ಚಿತ್ರಗಳಲ್ಲಿ ಕೆಲವು ಸರಳವಾಗಿದ್ದರೆ, ಮತ್ತೆ ಕೆಲವು ಸಂಕೀರ್ಣತೆಯನ್ನು ಬಿಂಬಿಸುತ್ತಿದ್ದವು. ಏಕತಾನತೆಯನ್ನು ಮೀರಿ ಎಲ್ಲರೊಳಗೆ ಒಂದಾಗುವ ಆಶಯ ಕಲಾವಿದರದ್ದಾಗಿತ್ತು.

ಕಡು ನೀಲಿ, ರಕ್ತಗೆಂಪು, ಕಾಡಿಗೆ ಕಪ್ಪು, ಗಿಡದ ಹಸುರು ಬಣ್ಣಗಳೇ ಹೆಚ್ಚಾಗಿದ್ದ ಆ ಕಲಾಕೃತಿಗಳು ನೋಡುಗರನ್ನು ಥಟ್ಟನೆ ಸೆಳೆದು ಕೆಲ ಕಾಲ ನಿಲ್ಲುವಂತೆ ಮಾಡಿದ್ದವು. ಇಂಥ ವಿಶಿಷ್ಟ ಚಿತ್ರಕಲಾ ಲೋಕದ ಪಯಣಕ್ಕೆ ಬೆಂಗಳೂರಿನ ದೊಮ್ಮಲೂರಿನಲ್ಲಿರುವ ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ ಕಳೆದ ವಾರ ಸಾಕ್ಷಿಯಾಗಿತ್ತು.

ಕೇರಳದ 'ಕೇಡರ್' ಸಂಸ್ಥೆಯು 'ಕೇಡರ್ ಸ್ಪೆಕ್ಟ್ರಮ್ ಆಫ್ ಆರ್ಟ್' ಶೀರ್ಷಿಕೆ ಅಡಿಯಲ್ಲಿ ಆಯೋಜಿಸಿದ್ದ ಚಿತ್ರಕಲಾ ಪ್ರದರ್ಶನವು ಹಲವು ಕಾರಣಗಳಿಗಾಗಿ ವಿಶಿಷ್ಟವಾಗಿತ್ತು. 'ಸೆಲೆಬ್ರೇಟಿಂಗ್ ಆಟಿಸಂ ಟ್ಯಾಲೆಂಟ್' ಟ್ಯಾಗ್‌ಲೈನ್ ಹೊಂದಿದ್ದ ಈ ಚಿತ್ರಕಲಾ ಪ್ರದರ್ಶನದಲ್ಲಿ ಆಟಿಸಂ ಮಕ್ಕಳ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಮೂರು ವರ್ಷದ ಮಗುವಿನಿಂದ ಹಿಡಿದು ಮೂವತ್ತು ವರ್ಷದ ಯುವಕರವರೆಗಿನ ಮನಸಿನ ತಾಕಲಾಟಗಳು, ಭಾವಬಿಂಬಗಳು ಅಲ್ಲಿನ ಕಲಾಕೃತಿಗಳಲ್ಲಿ ಒಡಮೂಡಿದ್ದವು. ಚಿತ್ರಕಲಾ ಪರಿಭಾಷೆಯ ಚೌಕಟ್ಟನ್ನು ಮೀರಿದ ಆ ಕಲಾಕೃತಿಗಳು ಕಲಾವಿದರ ಅಂತರಂಗದ ತುಡಿತವನ್ನು ತೆರೆದಿಡುವಂತಿದ್ದವು.

ಕೇರಳದ ಸಾಂಪ್ರದಾಯಿಕ ಕಲೆ, ಸಂಸ್ಕೃತಿಯ ಜತೆಗೆ ಮಕ್ಕಳ ಕಾರ್ಟೂನ್ ಅನ್ನು ಹೋಲುವಂಥ ಪಾತ್ರಗಳ ಚಿತ್ರಣವೂ ಅಲ್ಲಿತ್ತು. ಕ್ರಿಸ್‌ಮಸ್‌ನ ರಾತ್ರಿಯ ಆಗಸ ಅಲ್ಲಿ ಕಪ್ಪಾಗದೇ ದಟ್ಟ ನೀಲಿ ಬಣ್ಣ ಪಡೆದಿತ್ತು. ಆ ಆಗಸದಲ್ಲಿ ಫಳಫಳ ಹೊಳೆಯುವ ನಕ್ಷತ್ರಗಳು, ಕ್ರಿಸ್‌ಮಸ್ ಮರದ ಜತೆಗೆ ಮಂಜಿನಲ್ಲಿ ಆಡುತ್ತಿರುವ ಪಾತ್ರಗಳು ಮಕ್ಕಳ ಮನೋಅಂಗಳಕ್ಕೆ ಕನ್ನಡಿ ಹಿಡಿದಿದ್ದವು. ಹವಳ ಕೆಂಬಣ್ಣದ ಆವರಣದಲ್ಲಿ ಹಾರಾಡುತ್ತಿದ್ದ ತಿಳಿ ನೀಲಿ ಚಿಟ್ಟೆಯ ಕಲಾಕೃತಿ ಒಳನೋಟ ನೀಡುತ್ತಿತ್ತು. ಬ್ಲಾಕ್ ಪ್ರಿಂಟ್ ಮಾದರಿಯ ಕಲಾಕೃತಿಗಳು ಬಾಂದನಿ ದುಪಟ್ಟಾದ ನೆನಪು ತಂದರೆ ಮತ್ತೆ ಕೆಲವು ಅಮೂರ್ತ ಸ್ಥಿತಿಯ ಪಡಿಯಚ್ಚಿನಂತಿದ್ದವು. ಮಕ್ಕಳ ಕಣ್ಣಲ್ಲಿ ಕಂಡ ಭಿನ್ನಲೋಕ ಅಲ್ಲಿನ ಚಿತ್ರಗಳಲ್ಲಿ ಒಡಮೂಡಿತ್ತು.

ಮಾತಿನಲ್ಲಿ ಹೇಳಲಾಗದ, ಅಕ್ಷರಗಳಲ್ಲಿ ಹಿಡಿದಿಡಲಾಗದ, ಇಂಥದ್ದೇ ಭಾವ ನನ್ನ ಮನದಲ್ಲಿದೆ ಎಂದು ತಮ್ಮೆದುರಿಗೆ ಇರುವವರೊಂದಿಗೆ ಸಂವಹನ ಮಾಡಲಾಗದ ಆ ಮಕ್ಕಳು ತಮ್ಮ ಭಾವಾಭಿವ್ಯಕ್ತಿಗೆ ಚಿತ್ರಕಲೆಯನ್ನೇ ಮಾಧ್ಯಮವಾಗಿಸಿಕೊಂಡಿದ್ದರು. ಎಂದೂ ತಮ್ಮೊಂದಿಗೆ ಸ್ಪಷ್ಟವಾಗಿ ಮಾತನಾಡಲಾರದ ತಮ್ಮ ಮಕ್ಕಳು ಬಣ್ಣಗಳಲ್ಲಿ ಮನದ ಬಿಂಬಗಳನ್ನು ಮೂಡಿಸಿದ್ದು ಪೋಷಕರಿಗೂ ಅಚ್ಚರಿಯಷ್ಟೇ ಅಲ್ಲ, ಹೆಮ್ಮೆಯ ಭಾವ ಮೂಡಿಸಿತ್ತು.

ತಿರುವನಂತಪುರಂನ 'ಕೇಡರ್' ಆಟಿಸಂ ಮಕ್ಕಳಿಗಾಗಿಯೇ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ. ಆಟಿಸಂ ಆರಂಭಿಕ ಹಂತದಲ್ಲಿರುವ ಮಕ್ಕಳಿಗೆ ಇಲ್ಲಿ ನಿತ್ಯದ ಚಟುವಟಿಕೆಗಳನ್ನು ನಿರ್ವಹಿಸುವಂತೆ, ಓದಲು, ಬರೆಯಲು, ಕನಿಷ್ಠ ಮಟ್ಟದ ಸಂವಹನ ನಡೆಸುವುದಕ್ಕೆ ತರಬೇತಿ ನೀಡಲಾಗುತ್ತದೆ. ಅಷ್ಟೇ ಅಲ್ಲ, ಆ ಮಕ್ಕಳಲ್ಲಿನ ಸೃಜನಾತ್ಮಕ ಚಟುವಟಿಕೆಗಳಿಗೂ ಇಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.

ಚಿತ್ರಕಲಾ ಪ್ರದರ್ಶನದಲ್ಲಿ ಮೆಚ್ಚುಗೆ ಪಡೆದ ಕೆಲ ಕಲಾಕೃತಿಗಳು ಕಲಾಪ್ರೇಮಿಗಳ ಮನೆಯ ಗೋಡೆಗಳನ್ನು ಅಲಂಕರಿಸಿದವು. ನಿಮ್ಮ ಮನೆಯ ಗೋಡೆಯ ಮೇಲೂ ಈ ಮಕ್ಕಳ ಅಪರೂಪದ ಕಲಾಕೃತಿ ಇರಬೇಕು ಎನಿಸಿದರೆ ಸಂಸ್ಥೆಯನ್ನು ಸಂಪರ್ಕಿಸಬಹುದು. ಅಂದಹಾಗೆ ಖರೀದಿಯಾದ ಕಲಾಕೃತಿಗಳ ಮೊತ್ತದ ಕೆಲಭಾಗ ಆ ಮಕ್ಕಳಿಗೂ, ಕೆಲಭಾಗ ಸಂಸ್ಥೆಯ ಚಟುವಟಿಕೆಗಳಿಗೂ ವಿನಿಯೋಗವಾಗಲಿದೆ.

ವಾಟ್ಸ್‌ಆ್ಯಪ್ ನಂಬರ್: 9207450001

ಆಟಿಸಂ ಎಂದರೆ...

'ಆಟಿಸಂ' ಪದದ ಮೂಲ ಗ್ರೀಕ್ ಭಾಷೆಯ 'ಆಟೊಸ್'ನಿಂದ ಬಂದಿದೆ. 'ಆಟೊಸ್' ಎಂದರೆ ತನ್ನ ಪಾಡಿಗೆ ತಾನಿರುವುದು, ಸ್ವಕೇಂದ್ರೀತವಾಗಿರುವುದು ಎಂದರ್ಥ. ಪುಟ್ಟ ಮಕ್ಕಳು ಸದಾ ತಮ್ಮದೇ ಲೋಕದಲ್ಲಿ ಮುಳುಗಿದ್ದರೆ, ಕಾರಣವಿಲ್ಲದೇ ಪುಳಕಿತರಾದಂತೆ ಚಪ್ಪಾಳೆ ತಟ್ಟಿ, ತಾವೇ ಮಾತನಾಡಿಕೊಳ್ಳುವ, ಕೈಬೆರಳುಗಳ ಲೆಕ್ಕಾಚಾರದಲ್ಲಿ ಮುಳುಗಿದ್ದರೆ, ಸಂವಹನದ ಸಮಸ್ಯೆ ಎದುರಿಸುತ್ತಿದ್ದರೆ ಅಂತಹ ಸ್ಥಿತಿಯನ್ನು ವೈದ್ಯಲೋಕ 'ಆಟಿಸಂ' ಎಂದು ಗುರುತಿಸುತ್ತದೆ. ಕೆಲ ಮಕ್ಕಳಿಗೆ ಮೂರು ವರ್ಷ ಆಗುವಷ್ಟರಲ್ಲಿ ಆಟಿಸಂನ ಲಕ್ಷಣಗಳು ಗೋಚರಿಸಬಹುದು.

ಆಟಿಸಂ ಸ್ಥಿತಿಯ ಬಹುತೇಕರು ತಮ್ಮ ಕೆಲಸ ತಾವು ಮಾಡಿಕೊಳ್ಳಲಾಗದ, ತಮ್ಮ ಮನದ ಭಾವನೆಗಳನ್ನು ಮತ್ತೊಬ್ಬರೊಂದಿಗೆ ಸಂಭಾಷಣೆ, ಸಂಜ್ಞೆ ರೂಪದಲ್ಲೂ ಹಂಚಿಕೊಳ್ಳಲಾರರು. ಈ ಸ್ಥಿತಿಗೆ ಅವರ ಮಿದುಳಿನಲ್ಲಿ ಸಂವಹನ, ವರ್ತನೆ ಹಾಗೂ ಸಾಮಾಜಿಕ ನಡವಳಿಕೆಗೆ ಸಂಬಂಧಿಸಿದ ನ್ಯೂನತೆಯೇ ಕಾರಣ ಎನ್ನುತ್ತಾರೆ ವೈದ್ಯರು.

ಆದರೆ, ಆ ನ್ಯೂನತೆಯಾಚೆಗೂ ಆಟಿಸಂ ಸ್ಥಿತಿ ಎದುರಿಸುತ್ತಿರುವವರು ಸಾಮಾನ್ಯರಿಗಿಂತ ಹೆಚ್ಚು ಸೃಜನಶೀಲರು, ಕ್ರಿಯಾಶೀಲರಾಗಿರಬಲ್ಲರು.



ಆಟಿಸಂ ಮಕ್ಕಳು ರಚಿಸಿದ ಕಲಾಕೃತಿ

ಸೂಫಿ ಆಧ್ಯಾತ್ಮಿಕ ನಾಯಕನ ನೆನಪು

ರೆಹಮಾನ್ ಪಟೇಲ್

ಕಲಬುರಗಿಯ ಐತಿಹಾಸಿ ಮತ್ತು ಪ್ರಸಿದ್ಧ ಧಾರ್ಮಿಕ ಕೇಂದ್ರವಾದ ಖಾಜಾ ಬಂದಾನವಾಜ್ ದರ್ಗಾದ 23ನೇ ಸಜ್ಜಾದ ನಶೀನ್ (ಆಧ್ಯಾತ್ಮಿಕ ಮುಖ್ಯಸ್ಥ) ಸೈಯದ್ ಶಾಹಾ ಖುಸ್ರೊ ಹುಸೇನಿ ಅವರು ಸೂಫಿ ಆಧ್ಯಾತ್ಮಿಕ ನಾಯಕ ಮತ್ತು ಸಂಶೋಧನಾ ವಿದ್ವಾಂಸರಾಗಿದ್ದರು. ಭಾರತ ಮತ್ತು ಇತರೆ ದೇಶಗಳಲ್ಲಿ ನಡೆದ ವಿಚಾರ ಸಂಕಿರಣಗಳಲ್ಲಿ ಸೂಫಿ ಪರಂಪರೆ ಕುರಿತಾದ ಹಲವಾರು ಅರ್ಥಪೂರ್ಣ ಉಪನ್ಯಾಸಗಳನ್ನು ನೀಡಿದ್ದರು.

ಇವರಿಗೆ ತಂದೆ ಸೈಯದ್ ಶಾಹಾ ಮೊಹಮ್ಮದ್ ಅಲ್ ಹುಸೇನಿ ಅವರೇ ಪ್ರೇರಣೆ. ಅವರು 1958 ರಲ್ಲಿ ಖಾಜಾ ಎಜುಕೇಷನ್ ಸೊಸೈಟಿಯನ್ನು ಸ್ಥಾಪಿಸಿದರು. ಪ್ರಾಥಮಿಕ ಶಾಲೆಯಿಂದ ಪದವಿಪೂರ್ವ, ಪದವಿ ಕಾಲೇಜು, ವೈದ್ಯಕೀಯ, ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿದರು.

ಚಿಕ್ಕ ವಯಸ್ಸಿನಿಂದಲೇ ಖುಸ್ರೊ ಹುಸೇನಿ ಅವರು ತಂದೆಯೊಂದಿಗೆ ಕೈಜೋಡಿಸಿದರು. ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿದವರು. ತಂದೆಯ ನಿಧನದ ನಂತರ, 2007 ರಿಂದ ಸಂಘಟನೆ, ಆಡಳಿತ ಮತ್ತು ಕಾರ್ಯಾತ್ಮಕ ಮಟ್ಟದಲ್ಲಿ ಹಲವಾರು ಬದಲಾವಣೆಗಳನ್ನು ತಂದರು. ಇರುವ ಸಂಸ್ಥೆಗಳನ್ನು ವಿಸ್ತರಿಸಿದರು. 2000 ರಲ್ಲಿ ಖಾಜಾ ಬಂದಾನವಾಜ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. 'ಕೆಬಿಎನ್ ಟೈಮ್ಸ್' ಎನ್ನುವ ಉರ್ದು ದಿನಪತ್ರಿಕೆ ಪ್ರಾರಂಭಿಸಿದರು. ಕ್ರೀಡೆ ಮೇಲಿನ ಅಪಾರ ಆಸಕ್ತಿಯಿಂದ ಕೆಬಿಎನ್ ಹೌಸ್ ಆಫ್ ಸ್ಪೋರ್ಟ್ಸ್ ಅನ್ನು ಸ್ಥಾಪಿಸಲು ಪ್ರೇರಣೆ ನೀಡಿತು. ಇದು ಇದೀಗ ಕಲಬುರಗಿಯಲ್ಲಿ ರಾಷ್ಟ್ರ ಮಟ್ಟದ ಕ್ರಿಕೆಟ್ ಪಂದ್ಯಗಳನ್ನು ನಡೆಸುತ್ತದೆ. ಮಾಜಿ ಕ್ರಿಕೆಟರ್ ಅಜರುದ್ದೀನ್ ಹೌಸ್ ಆಫ್ ಸ್ಪೋರ್ಟ್ಸ್ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದಾರೆ.

2018ರಲ್ಲಿ ಸ್ಥಾಪನೆಯಾದ ಖಾಜಾ ಬಂದಾನವಾಜ್ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿದ್ದರು. ಇಸ್ಲಾಮಿಕ್ ವಾಸ್ತುಶಿಲ್ಪವನ್ನು ವಿಶ್ವವಿದ್ಯಾಲಯದ ಕಟ್ಟಡ ವಿನ್ಯಾಸದಲ್ಲಿ ಮಾದರಿಯಾಗಿ ಬಳಸಿದ್ದರು ಆದರ್ಶವಾಗಿ ಒದಗಿಸಿದರು.

ಸೈಯದ್ ಶಾಹಾ ಖುಸ್ರೊ ಹುಸೇನಿ ಅವರು ಹೈದರಾಬಾದ್‌ನ ಒಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಅರೇಬಿಕ್, ಸಮಾಜಶಾಸ್ತ್ರ ಮತ್ತು ಇಂಗ್ಲಿಷ್ ಸಾಹಿತ್ಯದಲ್ಲಿ ಪದವಿ ಪಡೆದರು. ಅದೇ ವಿಶ್ವವಿದ್ಯಾಲಯದಲ್ಲಿ ಅರೇಬಿಕ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದರು. 1971 ರಿಂದ 1972 ರವರೆಗೆ ಉಪನ್ಯಾಸಕರಾಗಿ ಕೆಲಸ ಮಾಡಿದರು. ಆ ವರ್ಷವೇ ಅವರು ಕೆನಡಾಗೆ ತೆರಳಿದರು. ಮೊಂಟ್ರಿಯಾಲ್‌ನ ಮೆಕ್‌ಗಿಲ್ ವಿಶ್ವವಿದ್ಯಾಲಯದಿಂದ ಇಸ್ಲಾಮಿಕ್ ಸ್ಟಡೀಸ್‌ನಲ್ಲಿ ಮಾಸ್ಟರ್ ಆಫ್ ಆರ್ಟ್ಸ್ ಪದವಿ ಗಳಿಸಿದರು.

ಸೈಯದ್ ಶಾಹಾ ಖುಸ್ರೊ ಹುಸೇನಿ

ಸೂಫಿಸಂನ ಮೇಲಿನ ಆಸಕ್ತಿ ಅವರನ್ನು ಆ ವಿಷಯದಲ್ಲಿ ಆಳವಾದ ಅಧ್ಯಯನಕ್ಕೆ ನೂಕಿತು. ಅದರಲ್ಲಿ ಗೆಸುದರಾಜ್ ಅವರ ಬರಹಗಳನ್ನು ಅನುವಾದಿಸಿದರು ಮತ್ತು ವಿಶ್ಲೇಷಿಸಿದರು. ಸ್ನಾತಕೋತ್ತರ ಪದವಿ ಪೂರ್ಣಗೊಂಡ ನಂತರ, ಅವರಿಗೆ ಮೊಂಟ್ರಿಯಾಲಿನಲ್ಲಿ ವಾಸಿಸಲು ಮನಸ್ಸಾಯಿತು. ಸೂಫಿಸಂ ಅಧ್ಯಯನದಲ್ಲಿ ನಿಷ್ಠೆ ಅವರು ಮೆಕ್‌ಗಿಲ್ ವಿಶ್ವವಿದ್ಯಾಲಯದ ಪಾಶ್ಚಾತ್ಯ ಸೂಫಿ ಪಂಡಿತರೊಂದಿಗೆ ಸಂವಹನ ಮಾಡಲು ಸಹಾಯ ಮಾಡಿತು.

'ಹಜಾಇರ್ ಅಲ್ ಕುಡ್ಸ್' ಎಂಬ ಶೀರ್ಷಿಕೆಯಡಿ, ಅವರು ತಮ್ಮ ಡಾಕ್ಟರೇಟ್ ಪ್ರಬಂಧಕ್ಕಾಗಿ ವಿಭಿನ್ನ ಸೂಫಿ ಪರಿಕಲ್ಪನೆಗಳನ್ನೂ ಅಧ್ಯಯನ ಮಾಡಿದರು. ಇದು ಖಾಜಾ ಬಂದಾನವಾಜ್ ಗೆಸುದರಾಜ್ 550ನೇ ವಾರ್ಷಿಕ ಉರ್ಸ್ ಸಂದರ್ಭದಲ್ಲಿ ಪ್ರಕಟಿಸಲಾಯಿತು.

ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್‌ನ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 2017 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯು ದೊರೆತಿದೆ. ಇವರು ನವೆಂಬರ್ 6 ರಂದು ತಮ್ಮ 79 ನೇ ವಯಸ್ಸಿನಲ್ಲಿ ನಿಧನರಾದರು.

ಸೂಫಿಯ ಹಾದಿ...

ಸೂಫಿಸಂ ಡೆಕ್ಕನ್ ಪ್ರದೇಶದಲ್ಲಿ ಜನರನ್ನು ಒಗ್ಗೂಡಿಸಲು ಮಹತ್ವದ ಪಾತ್ರ ವಹಿಸಿದೆ. ವಿಶೇಷವಾಗಿ ಬಹಮನಿ ಸಾಮ್ರಾಜ್ಯದ ಆಡಳಿತದ ಸಮಯದಲ್ಲಿ. ಆ ಸಮಯದಲ್ಲಿ ರಾಜರು ತಮ್ಮ ನ್ಯಾಯಾಲಯಗಳಿಗೆ ಹಲವಾರು ಸೂಫಿ ಸಂತರನ್ನು ಆಹ್ವಾನಿಸಿದರು. ಅವರಿಂದ ಅಧ್ಯಾತ್ಮವನ್ನು ಕಲಿಸಲು, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸೌಹಾರ್ದತೆಯನ್ನು ಉತ್ತೇಜಿಸಲು ವಿಶೇಷ ಆಸಕ್ತಿವಹಿಸಿ ಕರೆತಂದರು.

ಹಜರತ್ ಖಾಜಾ ಬಂದಾನವಾಜ್ ಗೆಸುದರಾಜ್ ಇಂತಹ ಹಲವಾರು ಸೂಫಿಗಳಲ್ಲಿ ಒಬ್ಬರು. ಅವರು ಸೂಫಿ ಭಾವನೆ ಮತ್ತು ಕಲಬುರಗಿಯಲ್ಲಿ ತಮ್ಮ ಆಧ್ಯಾತ್ಮಿಕ ಬೋಧನೆಗಳಿಗಾಗಿ ಪ್ರಸಿದ್ಧರಾಗಿದ್ದಾರೆ. ದರ್ಗಾ ಸಂಕೀರ್ಣವನ್ನು ಬಹಮನಿ ರಾಜರು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಿಸಿದ್ದಾರೆ. ಅದನ್ನು ಅದಿಲ್ ಶಾಹಿ ಹಾಗೂ ಮೊಘಲ್ ಚಕ್ರವರ್ತಿ ಔರಂಗಜೇಬ್ ವಿಸ್ತರಿಸಿದ್ದಾರೆ.

ಈಗ ಗೆಸುದರಾಜ್ ಅವರ ವಂಶಸ್ಥರು ಅವರ ಹಾದಿಯನ್ನು ಅನುಸರಿಸುತ್ತಿದ್ದಾರೆ. ನಗರದಲ್ಲಿ ಸಾಮಾಜಿಕ ಕಾರ್ಯಗಳಿಗಾಗಿ ಕೆಲಸ ಮಾಡುತ್ತಿದ್ದಾರೆ.

ಮೊದಲ ಓದು

ಹವ್ಯಕ ಸಂಸ್ಕೃತಿಯ ಅನಾವರಣ

ಇದು ರಸ್ತೆ ಇರದ ಕಾಲದ ಕತೆ. ಮಂಗಳೂರು ಹೆಂಚುಗಳು ಆಗ ಹೊಸತಾಗಿ ತಯಾರಿಸುತ್ತಿದ್ದ ಕಾಲದ ಕತೆ. ದಕ್ಷಿಣ ಕನ್ನಡದ ಹವ್ಯಕ ಸಂಸ್ಕೃತಿಯನ್ನು ಪದರಪದರವಾಗಿ ಬಿಚ್ಚಿಡುತ್ತ ಹೋಗುತ್ತದೆ. ಹವ್ಯಕರ ಭಾಷೆ, ಆಹಾರ, ಆಚರಣೆ, ಮನೆ, ಒಡವೆ, ಒಡ್ಯಾಣ, ಪೀಠೋಪಕರಣ, ಅಡಕೆ, ತೆಂಗಿನ ತೋಟ, ಆಳುಮಕ್ಕಳು, ದೇವರು, ದೈವ ಹೀಗೆ ಒಂದು ಸಮುದಾಯದ ಸಮಗ್ರ ಚಿತ್ರಣವನ್ನು ಈ ಕಾದಂಬರಿ ಕಟ್ಟಿಕೊಡುತ್ತದೆ. ಜೊತೆಗೆ ಗಾಂಧಿ ಪ್ರಭಾವ ದಟ್ಟವಾಗಿ ಕಾಣುತ್ತದೆ. ಎರಡನೆಯ ತಲೆಮಾರು ಗಾಂಧಿಯನ್ನು ಕಾಣದಿದ್ದರೂ ಗಾಂಧಿಗಿರಿಗೆ ಒಳಗಾಗುವುದು, ಸಮಾಜ ಸುಧಾರಣೆಯತ್ತ ಆಗುವ ಬದಲಾವಣೆ ಯಾವತ್ತಿಗೂ ನಿಧಾನವೆಂಬುದು ನಿರೂಪಿತವಾಗುತ್ತ ಹೋಗುತ್ತದೆ.

ವೈಧವ್ಯ, ಪರಿತ್ಯಕ್ತ, ವಿಧುರ, ಧರ್ಮಬೀರು ದಾಂಪತ್ಯ, ಪಟೇಲಿಕೆ, ಒಡೆತನ, ಆಳುಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆ ಇವೆಲ್ಲವೂ ಕೊಪ್ಪರಿಗೆ ಮನೆಯ ಮೂಲಕ ಸಮಕಾಲೀನ ಬಾಂಧವ್ಯಗಳನ್ನೂ ನಿಕಷಕ್ಕೆ ಒಡ್ಡುತ್ತವೆ.

ಎರಡು ತಲೆಮಾರುಗಳ ಕತೆಯನ್ನು ನಿರೂಪಿಸುತ್ತಲೇ ಸ್ವಾತಂತ್ರ್ಯ ಸಂಗ್ರಾಮ, ಸ್ತ್ರೀಪಾತ್ರಗಳನ್ನು ಗೌರವದಿಂದಲೇ ನಡೆಸಿಕೊಳ್ಳುವ ಈ ಕಥನದಲ್ಲಿ ಸ್ತ್ರೀಪರ ಧೋರಣೆಯನ್ನು ಕಾದಂಬರಿ ಎತ್ತಿಹಿಡಿಯುತ್ತದೆ. ಪರಿತ್ಯಕ್ತರಾಗಿದ್ದಕ್ಕೆ, ಬಂಜೆತನ ಅನುಭವಿಸಿದ್ದಕ್ಕೆ ಸ್ವಹತ್ಯೆಯ ಪಾತ್ರಗಳಿದ್ದರೂ ಆ ಕಾಲದ ಚಿತ್ರಣವನ್ನು ಸಶಕ್ತವಾಗಿ ಕಟ್ಟಿಕೊಡುವಲ್ಲಿ ಇವು ಅಗತ್ಯವೆನಿಸುತ್ತವೆ.

ಓದನ್ನು ಆರಂಭಿಸುವುದಷ್ಟೆ ಓದುಗರ ಕೆಲಸ. ಮುಗಿಸಿಕೊಳ್ಳುವುದು ಈ ಕಥನದ ವಿಶೇಷವಾಗಿದೆ. ಕೊಪ್ಪರಿಗೆ ಮನೆಯ ಪರಿಸರ ಓದುಗನನ್ನು ಆವರಿಸಿಕೊಳ್ಳುತ್ತದೆ.

ಪು: 400
₹500

ಕೊಪ್ಪರಿಗೆ ಮನೆ
ಲೇ: ಡಾ. ನಾ. ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ
ಸಂ: 9448110034

ನಗರಕೇಂದ್ರಿತ ಬದುಕಿನ ಚಿತ್ರಣ

ಕಿಲಿಗ್ ಕಾದಂಬರಿಯು ನಗರ ಕೇಂದ್ರಿತ ಬದುಕನ್ನು ಅನಾವರಣಗೊಳಿಸುತ್ತದೆ. ಮೆಟ್ರೊ ನಿಲ್ದಾಣಗಳು, ಪ್ರಯಾಣಗಳೆಲ್ಲವೂ ಇಲ್ಲಿ ಚಿತ್ರಣಗಳಾಗಿವೆ. ಮೆಟ್ರೊ ಹಳಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡವನ ಕಥೆಯ ಬಗ್ಗೆ ಲೋಕ ಯೋಚಿಸುವಾಗ, ಆತ್ಮಹತ್ಯೆಯನ್ನು ಕಣ್ಣಾರೆ ಕಂಡ ಮೆಟ್ರೊ ಚಾಲಕನ ಮನಸ್ಸಿನ ಮೇಲೆ ಎಂಥ ಗಾಢ ಪರಿಣಾಮ ಬೀರಬಲ್ಲದು ಎಂಬುದನ್ನು ಕಾದಂಬರಿಕಾರ ಸಣ್ಣ ಎಳೆಯಲ್ಲಿ ಹೇಳಿದ್ದಾರೆ.

ಒಂದೇ ಗುಟುಕಿನಲ್ಲಿ ಓದಿ ಮುಗಿಸಬಹುದಾದ ಕಾದಂಬರಿ ಇದಾಗಿದ್ದು, ಪಾತ್ರಗಳೆಲ್ಲವೂ ನಮ್ಮ ನಡುವೆಯೇ ಇರಬಹುದಾದ ಚದುರಿದ ಬಿಂಬದಂತೆ ಭಾಸವಾಗುತ್ತದೆ.

ಕಿಲಿಗ್ ಎನ್ನುವ ಕಾದಂಬರಿಯ ಹೆಸರು ಕುತೂಹಲ ಹುಟ್ಟಿಸುತ್ತಾದರೂ, ಕಾದಂಬರಿಯ ಹೂರಣ ಅಷ್ಟೇನೂ ರುಚಿಸುವುದಿಲ್ಲ. ಒಂದು ಕಾದಂಬರಿಯ ಕೇಂದ್ರವಸ್ತು ಯಾವುದು ಎಂಬ ಪ್ರಶ್ನೆಗೆ ಸರಿಯಾದ ಉತ್ತರವೇನೂ ಸಿಗುವುದಿಲ್ಲ.

ಮನುಷ್ಯ ಲೋಕದ ಸಹಜ ವಾಂಛೆಗಳಾದ ಪ್ರೀತಿ, ಪ್ರೇಮ, ಕಾಮಗಳೆಲ್ಲವೂ ಈ ಕಾದಂಬರಿಯ ಚೌಕಟ್ಟಾಗಿದ್ದು, ಇವುಗಳ ಸುತ್ತ ಸುತ್ತುವ ಪಾತ್ರಗಳು ಗಟ್ಟಿತನದಿಂದ ಕೂಡಿಲ್ಲ. ಓದುಗರನ್ನು ಹಿಡಿದಿಡುವ ಭಾಷೆ ಕಾದಂಬರಿಕಾರರಿಗೆ ದಕ್ಕಿರುವುದರಿಂದ ಇನ್ನಷ್ಟು ಪ್ರಯೋಗಗಳನ್ನು ಮಾಡಲಡ್ಡಿಯಿಲ್ಲ.



ಪು: 120
₹145

ಕಿಲಿಗ್
ಲೇ: ಜಯರಾಮಚಾರಿ
ಪ್ರ: ಸಸಿ

ಅಸಮಾನತೆಯ ಆತ್ಮಾವಲೋಕನ

ದಕ್ಷಿಣ ಆಫ್ರಿಕಾದ ಲೇಖಕ ಲೂಯಿ ನಕೋಸಿ, ವೃತ್ತಿಯಿಂದ ಅಧ್ಯಾಪಕ ಮತ್ತು ಪತ್ರಕರ್ತ ಕೂಡ. ವಸಾಹತು ಆಡಳಿತಕ್ಕೆ ತುತ್ತಾದ ತನ್ನ ತಾಯಿನಾಡಿನ ಕಾನೂನು ಅವರನ್ನು ದೇಶ ಬಿಟ್ಟು ಅಲೆದಾಡುವಂತೆ ಮಾಡಿತ್ತು. ಸಾಹಿತ್ಯದ ವಿವಿಧ ಪ್ರಕಾರದಲ್ಲಿ ಬರೆದ ಅವರ ನಾಟಕ 'ದ ರಿದಮ್ ಆಫ್ ವಯಲೆನ್ಸ್' ನ ಕನ್ನಡ ರೂಪ 'ಆ ಲಯ ಈ ಲಯ'.

ಹಲವು ಯಶಸ್ವಿ ಪ್ರದರ್ಶನಗಳನ್ನು ಕಂಡಿರುವ ಈ ನಾಟಕವನ್ನು ರಂಗಕರ್ಮಿ ನಟರಾಜ್ ಹೊನ್ನವಳ್ಳಿ ಕನ್ನಡಕ್ಕೆ ತಂದಿದ್ದಾರೆ. ವಾಸ್ತವ ರಾಜಕೀಯ ವಿಡಂಬನೆಯ ಈ ನಾಟಕ ಸೃಜನಶೀಲ ಚಿಂತನೆಗೆ ಒಡ್ಡುವ ವಸ್ತು ವಿವರಣೆಯನ್ನು ಒಳಗೊಂಡಿದೆ.

ನಾಟಕ ಮೂರು ಅಂಕಗಳ, ಎಂಟು ದೃಶ್ಯಗಳನ್ನು ಒಳಗೊಂಡಿದೆ. ಜನಾಂಗೀಯ ಅಸಮಾನತೆಯನ್ನು ಧ್ವನಿಸುವ ಇದು ವಿಶ್ವದ ಎಲ್ಲೆಡೆಯಲ್ಲಿ ನಡೆಯುತ್ತಿರುವ ದಮನಕಾರಿ ಆಡಳಿತದ ಹಿಂಸೆಯನ್ನು ನೆನಪಿಗೆ ತರುವಂತೆ ಇದೆ. ವಸ್ತು–ನಿರೂಪಣೆ ವ್ಯಕ್ತಿ ಮತ್ತು ಸಿದ್ಧಾಂತದ ಆದರ್ಶವನ್ನು ಸಂಘರ್ಷಾತ್ಮಕವಾಗಿ ಅನಾವರಣ ಮಾಡಿದೆ. ಈ ಮೂಲಕ ದೇಶ ಗಡಿಗಳ ಆಚೆ ಜನಾಂಗೀಯ ದ್ವೇಷ ಮತ್ತು ಅಸಮಾನತೆಯ ಬಗ್ಗೆ ಆತ್ಮಾವಲೋಕನವನ್ನು ಮಾಡಿಸುತ್ತದೆ. ಆರು ದಶಕಗಳ ಹಿಂದಿನ ರಂಗ ಪಠ್ಯವೊಂದು ಇವತ್ತಿಗೂ ಪ್ರಸ್ತುತ ಆಗುತ್ತಿದೆ.



ಪು: 176
₹200

ಆ ಲಯ ಈ ಲಯ
ಮೂಲ: ಲೂಯಿ ನಕೋಸಿ
ಕನ್ನಡಕ್ಕೆ: ನಟರಾಜ್ ಹೊನ್ನವಳ್ಳಿ
ಪ್ರ: ಮಿಸ್‌ರೆಡ್ ಬುಕ್ಸ್, ತುಮಕೂರು

'ಅನಂತಮೂರ್ತಿ ವಿರುದ್ಧ ಆರೋಪ ಇಲ್ಲ'

ಪ್ರತಿಕ್ರಿಯೆ

ಅನುರಾಧ ಅನಂತಮೂರ್ತಿಯವರ ಪತ್ರ (17.11.2024) ಹೇಳುವಂತೆ ನನ್ನ ಬರಹದಲ್ಲಿ ಅನಂತಮೂರ್ತಿಯವರ ವಿರುದ್ಧ ಯಾವ ಆರೋಪವೂ ಇಲ್ಲ. ಅನಂತಮೂರ್ತಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಸ್ವೀಡನ್ ಲೇಖಕರ ನಿಯೋಗವನ್ನು ಭಾರತಕ್ಕೆ ಆಹ್ವಾನಿಸಿದ್ದರು. ಆ ಕಾಲಕ್ಕಾಗಲೇ ಲೋಕಪ್ರಸಿದ್ಧ ಸಾಹಿತಿಗಳನ್ನು ಸೃಷ್ಟಿಸಿದ್ದ ಆಫ್ರಿಕಾ, ಲ್ಯಾಟಿನ್ ಅಮೆರಿಕಾ, ಆಫ್ರೋ ಅಮೆರಿಕನ್ ಲೇಖಕರ ನಿಯೋಗದ ಬದಲು, ಸ್ವೀಡನ್ನಿನ ಸಾಧಾರಣ ಲೇಖಕರ ನಿಯೋಗವನ್ನು ಅಕಾಡೆಮಿ ಕರೆಸಿಕೊಂಡಾಗಲೇ ತಮಾಷೆಯ ತರಂಗಗಳೆದ್ದಿದ್ದವು. ಆ ನಿಯೋಗದ ಜೊತೆಗೆ ಮೂರು ದಿನ ಪ್ರವಾಸ-ಸಂವಾದ ಮಾಡುವ ಜವಾಬ್ದಾರಿಯನ್ನೂ ಅಕಾಡೆಮಿಯ ಕಾರ್ಯದರ್ಶಿ ಅಗ್ರಹಾರ ಕೃಷ್ಣಮೂರ್ತಿ ನನಗೆ ವಹಿಸಿದ್ದರಿಂದ ಈ ವಿವರಗಳ ಪರಿಚಯ ನನಗಿದೆ.

ಇದಾದ ನಂತರ ಸ್ವೀಡನ್ ಹಾಗೂ ಭಾರತೀಯ ಕೃತಿಗಳ ಪರಸ್ಪರ ಅನುವಾದ ಯೋಜನೆಯಲ್ಲಿ ಕನ್ನಡದ ಇತರ ಶ್ರೇಷ್ಠ ಕೃತಿಗಳನ್ನು ಬದಿಗಿಟ್ಟು ತಮ್ಮ ಕಾದಂಬರಿಯನ್ನೇ ಆರಿಸಿದ್ದು ಕನಿಷ್ಠ ನೈತಿಕತೆಯುಳ್ಳ ಅಕಾಡೆಮಿಯ ಅಧ್ಯಕ್ಷರೊಬ್ಬರು ಮಾಡುವ ಕೆಲಸವಲ್ಲ. ಅನುರಾಧ ಆರೋಪಿಸುವಂತೆ ನಾನು ಸಾಹಿತ್ಯ ವಿಮರ್ಶಕನಲ್ಲ. ಆದರೂ ನೊಬೆಲ್ ಬಹುಮಾನ ಡೆಯಲು ಕೃತಿಯೊಂದು ಸ್ವೀಡಿಶ್‌ಗೆ ಅನುವಾದವಾಗಬೇಕಿಲ್ಲ ಎಂಬ ಅರಿವಿದೆ. ಸ್ವೀಡಿಶ್ ಅಕಾಡೆಮಿಯಿರುವ ಸ್ವೀಡನ್‌ಗೆ ಹತ್ತಿರವಾಗುವ ಅನಂತಮೂರ್ತಿಯವರ ಒಳಕಾತರ ಸಾಧಾರಣ ಸ್ವೀಡಿಶ್ ಲೇಖಕರ ನಿಯೋಗವನ್ನು ಭಾರತಕ್ಕೆ ಕರೆಸಿಕೊಳ್ಳುವುದರಿಂದ ಹಿಡಿದು, ಸ್ವೀಡಿಷ್ ಭಾಷೆಗೆ 'ಸಂಸ್ಕಾರ' ಅನುವಾದವಾಗುವುದರವರೆಗೂ ಹಬ್ಬಿರುವುದರ ಅರಿವೂ ಇದೆ. ಸಾರ್ವಜನಿಕ ಉತ್ತರದಾಯಿತ್ವವಿರುವ ಸಾಹಿತ್ಯ ಅಕಾಡೆಮಿಯ ಅಸಾಹಿತ್ಯಕ ನಡವಳಿಕೆಗಳ ಬಗ್ಗೆ ಕನಿಷ್ಠ ತಿಳಿವಳಿಕೆಯೂ ಅನುರಾಧರಿಗಿದ್ದಂತಿಲ್ಲ.

ಕೆ.ಎಂ. ಶ್ರೀನಿವಾಸಗೌಡರ 'ಮಲೆಗಳಲ್ಲಿ ಮದುಮಗಳು' ಅನುವಾದ ಪ್ರಕಟವಾದ ಮಾಹಿತಿ ಕೊಟ್ಟ ಎಲ್ಲರಿಗೂ ಧನ್ಯವಾದಗಳು.

ನಟರಾಜ್ ಹುಳಿಯಾರ್ ಬೆಂಗಳೂರು

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕಬ್ಬಗಣ್

ಕಬ್ಬಗಣ್ (ನಾ). ಕಾವ್ಯದೃಷ್ಟಿ (ಕಬ್ಬ + ಕಣ್)

ವಜ್ರರೋಮ ಮಹರ್ಷಿಗಳ ಕೃಪೆಯಿಂದ ಮತ್ತು ಅವರ ಶಿಷ್ಯರ ಸಹಾಯದಿಂದ ಲಕ್ಷ್ಮಣನು ಚಿತ್ರಕೂಟದಲ್ಲಿ ಪರ್ಣಶಾಲೆಯನ್ನು ಕಟ್ಟಿದನು. ಆಗಿನ ರಾಮಚಂದ್ರನ ಮನಸ್ಸಿನ ಉಲ್ಲಾಸವನ್ನು ಕವಿ ಹೀಗೆ ಚಿತ್ರಿಸಿದ್ದಾರೆ.

'ಅರಮನೆಯೊಳಿಹುದೇನೊ?
ಅರಸುತನಮೆದೆಯೊಳಿರೆ ಕಾಡರಮನೆಗೆಕೀಳೇ?
ರಸವಿಲ್ಲದಿಹ ಬಾಳಿಗರ ಮನೆಯೆ ಮರುಭೂಮಿ
ರಸಿಕಂಗಡವಿ ಸಗ್ಗಕಿಂ ಮಿಗಿಲ್ ಸೊಗಸಲ್ತೆ,
ಜೊತೆಯಿರಲ್ಕೊಲಿದ ಪೆಣ್, ಮೇಣ್
ಕಾಣ್ಬಕಬ್ಬಗಣ್? (1.8 : 72 - 76)

ಕೆಯ್ಗೊಯ್

ಕೆಯ್ಗೊಯ್ (ಕ್ರಿ). ಹೊಲದ ಬೆಳೆಯನ್ನು ಕುಯ್ಯು (ಕೆಯ್ + ಕೊಯ್)

'ಅದ್ವಿತೀಯಮಾ ದ್ವಿತಿಯ ದಿನಂ' ಎಂಬ ರಾಕ್ಷಸ ಮತ್ತು ವಾನರರ ಭಯಂಕರ ಯುದ್ಧವನ್ನು ಕುವೆಂಪು ಒಕ್ಕಲಿಗರ ಹೊಲದ ಬೆಳೆ ಕೊಯ್ಯುವ ರೂಪಕದಲ್ಲಿ ಚಿತ್ರಿಸಿದ್ದಾರೆ. ರಾಕ್ಷಸ ವಜ್ರದಂಷ್ಟ್ರನ ಆಹುತಿಗೆ ಅಂಗದನ ಪಡೆ ತರಿದು ಬಿದ್ದದ್ದನ್ನು ಹೀಗೆ ವರ್ಣಿಸಿದ್ದಾರೆ:

ಕಿಡಿಗರೆವ ತನ್ನ ಕರಚಕ್ರಮಂ
ಗಿರ್ರನೆ ತಿರುಗಿಸುತ್ತಾ ಕರ್ಬುರಂ ಕೆಯ್‌ಗೊಯ್ವ
ಪೇರೊಕ್ಕಲಿಗನಂತೆ ತರಿದೊಟ್ಟಿದನು
ಬಣಬೆಯಂ. (3.14 : 64 - 66)

ಕೆಯ್ = ಪೈರು, ಬೆಳೆ.
ಬಣಬೆ = ಮೆದೆ; ರಾಶಿ; ಒಟ್ಟಿಲು

ವಜ್ರದಂಷ್ಟ್ರನ್ನು ಕುಯ್ಯುವಂತೆ ತರಿದು ಮೆದೆ ಹಾಕಿದನು.

ಇದು ರೈತರ ಹೊಲಕುಯ್ಯುವ ಚಿತ್ರಣವಾಗಿ ರಾಕ್ಷಸತ್ವದ ಅಮಾನುಷ ಬಣ್ಣನೆಯಾಗಿದೆ.

ದೀಪಾವಳಿ ಕಥೆ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕಥೆ-ಗಾಂಧಿ ಜೋಡಿನ ಮಳಿಗೆ

ಪ್ರಕಾಶ್ ಪುಟ್ಟಪ್ಪ

ಚಾಮರಾಜನಗರ ಜಿಲ್ಲೆಯ ಪೊನ್ನಾಚಿಯ ಇವರು ವೃತ್ತಿಯಲ್ಲಿ ಶಿಕ್ಷಕ. ಅಚಾನಕ್ಕಾಗಿ ಕವಿತೆಗೆ ಒಲಿದ ಸೃಜನಶೀಲ ಮನಸ್ಸಿನ ಇವರು 'ಮಣ್ಣಿಗೆ ಬಿದ್ದ ಮಳೆ' ಎಂಬ ಕವನ ಸಂಕಲನದ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಹೆಜ್ಜೆಗಳ ಗುರುತುಗಳನ್ನು ಮೂಡಿಸಿದ್ದಾರೆ. ಈಗ ಕಾವ್ಯದಿಂದ ಕಥಾ ಪ್ರಕಾರಕ್ಕೆ ಹೊರಳಿದ್ದಾರೆ.

ಕಥೆ ಓದಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ

ದೀಪಾವಳಿ ಕವನ ಸ್ಪರ್ಧೆ 2024
ಮೆಚ್ಚುಗೆ ಪಡೆದ ಕವನ-ರಂಜಕವಾದ ನಕಾಶೆ

ಶಂಕರರಾವ್ ಉಭಾಳೆ

ರಾಯಚೂರು ಜಿಲ್ಲೆಯ ದೇವದುರ್ಗದವರು. ಕವಿ, ಕಥೆಗಾರ ಮತ್ತು ಲೇಖಕ. ಇವರ 'ಹೂವಿನ ಹಾರ', 'ನೀರಿಗೆ ಪಾಚಿ ವೈರಿ', 'ಕಳೆ' ಮೊದಲಾದ ಕೃತಿಗಳು ಪ್ರಕಟಗೊಂಡಿವೆ. 'ಚಂಪಾ ಕಾವ್ಯ ಪ್ರಶಸ್ತಿ', 'ಚಂಪಾ ಕಥಾ ಪ್ರಶಸ್ತಿ', 'ಗುಲ್ಬರ್ಗ ವಿಶ್ವವಿದ್ಯಾಲಯದ ಕಥಾ ಪ್ರಶಸ್ತಿ' ಮೊದಲಾದ ಪ್ರಶಸ್ತಿಗಳು ಇವರ ಸಾಹಿತ್ಯಕ್ಕೆ ಲಭಿಸಿದೆ.

ಕವನ ಓದಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ
bhanuvara@prajavani.co.in

ಸಪ್ತ ಸುಂದರಿಯರ ನಾಡಿನಲ್ಲಿ...



ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿರುವ ಬುದ್ಧನ ಬೃಹತ್ ಪ್ರತಿಮೆ

ಚಂದ್ರ ಕಾಳೇನಹಳ್ಳಿ

ನಾವು ಅಸ್ಸಾಂನ ಗುವಾಹಟಿಗೆ ಕಾಲಿಟ್ಟ ದಿನ ದುರ್ಗಾದೇವಿಯನ್ನು ಬ್ರಹ್ಮಪುತ್ರ ನದಿಯಲ್ಲಿ ವಿಸರ್ಜಿಸುವ ಸಂಭ್ರಮ ಜೋರಾಗಿತ್ತು. ಮರುದಿನ ಮೇಘಾಲಯದ ರಾಜಧಾನಿ ಶಿಲ್ಲಾಂಗ್‌ನಿಂದ ಭಾರತದಲ್ಲೇ ಹೆಚ್ಚು ಮಳೆ ಬೀಳುವ ಚಿರಾಪುಂಜಿಯತ್ತ ನಮ್ಮ ಪಯಣ. ಅದು ನಮ್ಮ ಆಗುಂಬೆ ಘಾಟಿಯನ್ನು ನೆನಪಿಸುತ್ತಿತ್ತು. ಕಾನನದ ಭಿತ್ತಿಯ ಮೇಲೆ ಮೇಘಮಾಲೆಯ ವೈಭವವನ್ನು ಕಣ್ತುಂಬಿಕೊಳ್ಳುತ್ತಾ ಪಯಣಿಸುವುದೇ ವಿಶಿಷ್ಟ ಅನುಭವ.

ಪಾದಚಾರಿಗಳಿಗೆಂದೇ ನಿರ್ಮಿಸಿರುವ ದಾರಿಯಲ್ಲಿ ಕಾಲ್ನಡಿಗೆಯಲ್ಲಿ ಸಾಗಿದರೆ ಸುಣ್ಣದ ಕಲ್ಲುಗಳಿಂದ ನೈಸರ್ಗಿಕವಾಗಿ ನಿರ್ಮಿತವಾದ ಮೇಘಾಲಯದ ಅರವನ್ ಗುಹೆ ಸಿಗುತ್ತದೆ. ಒಳಗೆ ತಣ್ಣನೆಯ ನೀರಿನ ಜುಳು ಜುಳು ನಿನಾದ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ. ಗುಹೆಯ ಹೊರಭಾಗದಲ್ಲಿ ಆಳವಾದ ಪ್ರಪಾತವಿದೆ. ಅಲ್ಲಿಂದ ಸಪ್ತ ಸೋದರಿಯರ ಜಲಪಾತದತ್ತ ಹೊರಟೆವು. ಪರ್ವತದ ಭಿತ್ತಿಯಲ್ಲಿ ಜಲಪಾತ ಮನೋಹರವಾಗಿ ಕಾಣಿಸುತ್ತಿತ್ತು.

> ಭಾರತದ ಈಶಾನ್ಯ ರಾಜ್ಯಗಳು ಸಂಸ್ಕೃತಿ, ಆಹಾರ ಸಂಪ್ರದಾಯಗಳ ಮೂಲಕ ವೈವಿಧ್ಯತೆಯನ್ನು ಹೊಂದಿವೆ. ಈಶಾನ್ಯದ ಸಪ್ತ ಸಹೋದರಿಯರು ಎಂದೂ ಕರೆಯುವ ಭಾರತದ ಪೂರ್ವಭಾಗವು ತುಂಬಾ ಪ್ರಸಿದ್ಧವಾಗಿದೆ. ಈ ರಾಜ್ಯಗಳಿಗೆ ಭೇಟಿ ನೀಡಿದ್ದ ಲೇಖಕ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ಸುತ್ತಾಟ

ಅಸ್ಸಾಂನ ತೇಜ್‌ಪುರವನ್ನು ಸಂಪರ್ಕಿಸುವ ಬ್ರಹ್ಮಪುತ್ರ ನದಿಯ ಮೂರು ಕಿಲೊಮೀಟರ್ ಉದ್ದದ ಸೇತುವೆ, ನದಿಯ ವಿಸ್ತಾರವು ಬೆರಗುಗೊಳಿಸುತ್ತದೆ. ತೇಜ್‌ಪುರ ಪುರಾಣದ ಶ್ರೀ ಕೃಷ್ಣನ ಮಗ ಅನಿರುದ್ಧ ಹಾಗೂ ಉಷೆಯರ ಪ್ರಣಯ ಹಾಗೂ ವಿವಾಹ ಏರ್ಪಟ್ಟ ನಗರ ಎಂದು ಪುರಾಣಕ್ಕೆ ಥಳುಕು ಹಾಕುತ್ತದೆ. ಬೆಟ್ಟದಲ್ಲಿ ಅವರ ಕಲಾಕೃತಿಗಳನ್ನು ಕಾಣಬಹುದು.

ತೇಜ್‌ಪುರದಿಂದ ತವಾಂಗ್ ತಲುಪುವ ಮಾರ್ಗ ಅತ್ಯಂತ ದುರ್ಗಮ. ಎತ್ತರವಾದ ಅಸಂಖ್ಯಾತ ಪರ್ವತಗಳ ಸಾಲು. ಬಸ್ಸು ಹಾವಿನಂತೆ ಸಾಗುವ ಆ ಪರ್ವತಗಳ ರಸ್ತೆಯಲ್ಲಿ ಹತ್ತುವ, ಇಳಿಯುತ್ತಾ ಸಾಗುತ್ತಿತ್ತು. ಈ ಪರ್ವತಗಳ ಮುಂದೆ ನಮ್ಮ ಧರ್ಮಸ್ಥಳದ ಬೆಟ್ಟಸಾಲು ಏನೇನೂ ಅಲ್ಲ. ಮಳೆಗಾಲ ಮುಗಿದಿದ್ದರೂ ಅಲ್ಲಲ್ಲಿ ಎತ್ತರದಿಂದ ಧುಮುಕುವ ಜಲಪಾತಗಳ ಸೊಬಗು. ಕೊರೆಯುವ ಚಳಿ, ಕಿರಿದಾದ ರಸ್ತೆಯಲ್ಲಿ ಸಾಗುವ ವಾಹನ. ಚಾಲಾಕಿಗಳಾದ ಅಲ್ಲಿನ ವಾಹನ ಚಾಲಕರ ಕೌಶಲಕ್ಕೆ ನಾವು ಮೆಚ್ಚುಗೆ ವ್ಯಕ್ತಪಡಿಸಿದೆವು.

ಅರುಣಾಚಲ ಪ್ರದೇಶದ ತವಾಂಗ್ ಸಾಂಸ್ಕೃತಿಕ ಹಾಗೂ ರಾಜಕೀಯ, ವಾಣಿಜ್ಯ ದೃಷ್ಟಿಯಿಂದ ಪ್ರಮುಖ ಸ್ಥಳ. ತವಾಂಗ್‌ಗೆ ಪಯಣಿಸುವಾಗ ಮಾರ್ಗಮಧ್ಯೆ ಬೊಂಬಿಲಾ ಮಾರ್ಗದಲ್ಲಿ ಬುದ್ಧ ವಿಹಾರಗಳನ್ನು, ಅಲ್ಲಲ್ಲಿ ಜಲಪಾತಗಳನ್ನು, ಸೈನಿಕ ಶಿಬಿರಗಳನ್ನು ನೋಡುತ್ತಾ ಸಾಗಬಹುದು. ಮಾರ್ಗದಲ್ಲಿ ಸಿಗವುದೇ ಸೈನಿಕ ಜಸ್ವಂತ್ ಸಿಂಗ್ ರಾವತ್‌ನ ಸಮಾಧಿ. ಅವರ ಬಗ್ಗೆ ರೋಚಕ ಕಥೆಗಳನ್ನು ಹೇಳಲಾಗುತ್ತದೆ.

ತವಾಂಗ್‌ನಿಂದ 45 ಕಿಲೊಮೀಟರ್ ದೂರದಲ್ಲಿ ಭೂಮ್ ಲಾ ಪಾಸ್ ಇದೆ. ಅದೂ ಸಹ ದುರ್ಗಮ ದಾರಿ. ಮಾರ್ಗಮಧ್ಯೆ ಮಾಧುರಿ ಲೇಕ್ ನೋಡಬಹುದು. ಭೂಮ್ ಲಾ ಪಾಸ್ ಸಮುದ್ರ ಮಟ್ಟದಿಂದ 15,200 ಅಡಿ ಎತ್ತರದಲ್ಲಿದೆ. ಅಂದು ಅಲ್ಲಿನ ಹವಾಮಾನ ಮೈನಸ್ ಆರು ಡಿಗ್ರಿ ಇತ್ತು! ನಿಮಿಷ ನಿಮಿಷಕ್ಕೂ ಹವಾಮಾನ ಬದಲಾಗುತ್ತಿತ್ತು. ಕೊರೆಯುವ ಚಳಿಯಿಂದಾಗಿ ಮೈ ನಡುಗುತ್ತಿತ್ತು. ಹವಾಮಾನ ವೈಪರೀತ್ಯದಿಂದ ಗಡಿರೇಖೆಗೆ ನಮ್ಮನ್ನು ಕಳಿಸಲು ಸೈನಿಕರು ತಡ ಮಾಡಿದರು. ಎಷ್ಟೋ ವೇಳೆ ಹವಾಮಾನ ವೈಪರೀತ್ಯದಿಂದ ಅಲ್ಲಿಗೆ ಹೋಗಲು ಅನುಮತಿಯೇ ದೊರೆಯುವುದಿಲ್ಲ.

ಇಲ್ಲಿಗೆ ಭೇಟಿ ನೀಡುವವರು ಶೀತಪ್ರದೇಶಕ್ಕೆ ಹೊಂದುವ ಉಡುಪು ಧರಿಸಿರಬೇಕು. ಇಲ್ಲದಿದ್ದರೆ ಕೊರೆಯುವ ಚಳಿಯಿಂದಾಗಿ ಅನಾರೋಗ್ಯಕ್ಕೆ ಗುರಿಯಾಗಬೇಕಾಗುತ್ತದೆ. ಸಣ್ಣ ಹಿಮಾಪಾತ ನಿಂತ ಮೇಲೆ ಅಲ್ಲಿಗೆ ಹೋಗಲು ಅನುಮತಿ ದೊರೆಯಿತು. ಸೈನಿಕ ಮುಖ್ಯಸ್ಥರೊಬ್ಬರ ನೇತೃತ್ವದಲ್ಲಿ ಭಾರತ ಮತ್ತು ಚೀನಾ ಗಡಿರೇಖೆ ಸಮೀಪಕ್ಕೆ ಕರೆದೊಯ್ಯುತ್ತಾರೆ. ಗಡಿಯಲ್ಲಿ ಪ್ರವಾಸಿಗರು ಹೇಗೆ ನಡೆದುಕೊಳ್ಳಬೇಕೆಂದು ವಿವರಿದರು. ಅಲ್ಲಿ ಚೀನಾ ಗಡಿರೇಖೆಗೆ ಹೆಜ್ಜೆ ಇಡದಂತೆ ಮೊದಲೇ ಸೂಚಿಸುತ್ತಾರೆ. ಚೀನಾದ ಗಡಿರೇಖೆಯನ್ನು ಸ್ಪರ್ಶಿಸಬೇಕೆಂಬ ಅದಮ್ಯ ಬಯಕೆ ಇದ್ದರೂ ಮುಟ್ಟುವಂತಿಲ್ಲ. ಎರಡು ಕಡೆಯೂ ಕಣ್ಗಾವಲು. ಫೋಟೊ, ಮೊಬೈಲ್ ನಿಷಿದ್ಧ. ಇದೊಂದು ಭಾರತ ಚೀನಾದ ಸೌಹಾರ್ದ ಗಡಿ. ವರ್ಷದಲ್ಲಿ ಐದು ಬಾರಿ ಚೀನಾ ಸೈನ್ಯದ ಉನ್ನತ ಅಧಿಕಾರಿಗಳೊಡನೆ ಭಾರತ ಗಡಿಯಲ್ಲಿ ಹಾಗೂ ನಾಲ್ಕು ಬಾರಿ ಭಾರತ ಸೈನ್ಯದ ಉನ್ನತಾಧಿಕಾರಿಗಳೊಡನೆ ಚೀನಾ ಗಡಿಯಲ್ಲಿ ಸೌಹಾರ್ದ ಸಭೆ ನಡೆಯುತ್ತವೆ. ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ಇದೊಂದು ವೇದಿಕೆ. ಇದೇ ಅಲ್ಲದೇ ಇಂತಹ ಇನ್ನೂ ನಾಲ್ಕು ಸೌಹಾರ್ದ ಗಡಿಗಳು ಬೇರೆಡೆ ಇವೆ. ಭಾರತ ಸೈನಿಕರು ದೀಪಾವಳಿ, ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವ ಸಂದರ್ಭದಲ್ಲಿ ಚೀನಾ ಸೈನಿಕರು, ಚೀನಾ ಸೈನಿಕರ ಶುಭ ಸಮಾರಂಭಗಳಿಗೆ ಭಾರತ ಸೈನಿಕರು ಶುಭ ಕೋರುವ ಪದ್ಧತಿ ಇದೆ ಎಂದು ನಮ್ಮ ಸೈನಿಕರು ತಿಳಿಸಿದರು.

ನಾಗಾಲ್ಯಾಂಡ್‌ನ ಕೊಹಿಮಾದಲ್ಲಿರುವ ಸೈನಿಕರ ಸಮಾಧಿ ಸ್ಥಳ

ನಮ್ಮ ಮುಂದಿನ ಪಯಣ ಅಸ್ಸಾಂನ ಕಾಜಿರಂಗದ ಕಡೆಗೆ ಇತ್ತು. ಅದೊಂದು ರಾಷ್ಟ್ರೀಯ ಉದ್ಯಾನವನ. ಸಫಾರಿಯಲ್ಲಿ ಕಾಡು ಪ್ರಾಣಿಗಳನ್ನು ನೇರವಾಗಿ ನೋಡುವ ಸದಾವಕಾಶ. ಅಂದು ರಾತ್ರಿ ಅಲ್ಲಿನ ಸಾಂಸ್ಕೃತಿಕ ಸಂಘಟನೆಯೊಂದು ನಡೆಸಿಕೊಟ್ಟ ಗುಡ್ಡಗಾಡಿನ ಸಂಸ್ಕೃತಿಯನ್ನು ಬಿಂಬಿಸುವ ಬಿಹು, ಬಟರ್ ಫ್ಲೈ, ರಾಂಬೊ, ಸ್ಟಿಕ್ ಡಾನ್ಸ್ ಮುಂತಾದ ಅಲ್ಲಿನ ಬುಡಕಟ್ಟು ನೃತ್ಯಗಳು ಅಲ್ಲಿನ ಸಂಸ್ಕೃತಿಯನ್ನು ಬಿಂಬಿಸಿದವು.

ಕಾಜಿರಂಗದಿಂದ ಕೊಹಿಮಾ ಕಡೆಗೆ ಪಯಣಿಸುವಾಗ ಮಾರ್ಗದ ಎರಡೂ ಕಡೆ ಕಣ್ಣು ಹಾಯಿಸಿದಷ್ಟೂ ಕಾಣುವ ಟೀ ತೋಟಗಳು, ಮುಂದೆ ಸಮತಟ್ಟಾದ ಭೂಮಿ, ಭತ್ತದ ಗದ್ದೆಗಳು ಭೂಮಿಗೆ ಹಸಿರು ಕಾರ್ಪೆಟ್ ಹೊದಿಸಿದಂತೆ ಕಾಣುತಿದ್ದವು. ಕೊಹಿಮಾ ನಾಗಾಲ್ಯಾಂಡಿನ ರಾಜಧಾನಿ. ಗುಡ್ಡಗಾಡು ಪ್ರದೇಶ. ಅಲ್ಲಿ ಎರಡನೇ ಮಹಾಯುದ್ಧದಲ್ಲಿ ಜಪಾನ್ ಸೈನಿಕರಿಂದ ಹತರಾದ ನೂರಾರು ಸೈನಿಕರ ಸಮಾಧಿಗಳನ್ನು ನೋಡಿ ಯುದ್ಧದ ಬಗ್ಗೆ ತಿರಸ್ಕಾರ ಮೂಡಿ ಮೌನಕ್ಕೆ ಶರಣಾದೆವು.

ನಾಗ ಬುಡಕಟ್ಟಿನ ಜನರ ಜೀವನಕ್ರಮವನ್ನು ಬಿಂಬಿಸುವ ಕಿಸಮ ಹೆರಿಟೇಜ್ ಗ್ರಾಮ ಇಲ್ಲಿ ನೋಡಲೇಬೇಕಾದ ಸ್ಥಳ. ಪ್ರತಿ ವರ್ಷ ಡಿಸೆಂಬರ್ ಒಂದರಿಂದ ಹತ್ತು ದಿನ ಈ ಸ್ಥಳದಲ್ಲಿ ಹಾರ್ನ್‌ಬಿಲ್ ಉತ್ಸವ ನಡೆಯುತ್ತದೆ. ಅಲ್ಲಿನ 16 ಬಗೆಯ ಬುಡಕಟ್ಟು ಜನರ ಸಂಸ್ಕೃತಿಯನ್ನು ಬಿಂಬಿಸುವ ಉತ್ಸವ ಇದಾಗಿದ್ದು, ನಾಗಾಲ್ಯಾಂಡ್ ನ ಶ್ರೀಮಂತ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿ ರಕ್ಷಿಸುವ ಗುರಿಯನ್ನು ಈ ಉತ್ಸವ ಹೊಂದಿದೆ.

ಆನಂತರ ಇಲ್ಲಿ ನೋಡಲೇಬೇಕಾದ ಸ್ಥಳ ಎಂದರೆ ಕೊನೋಮಾ ಎಂಬ ಹಳ್ಳಿ. ಅಲ್ಲಿಗೆ ಭೇಟಿ ನೀಡಲು ಹೊರಟಾಗ ಮಾರ್ಗ ಮಧ್ಯೆ ಗುಡ್ಡ ಕುಸಿತ ಉಂಟಾಗಿತ್ತು. ಬಸ್ಸಿನ ಚಾಲಕ ಜಾಣ್ಮೆಯಿಂದ ಆ ಹಳ್ಳಿಗೆ ವಾಹನ ನಡೆಸಿದರು. ಕೊನೋಮಾಕ್ಕೆ ತಲುಪುವ ವೇಳೆಗೆ ಮಳೆ ಅಡ್ಡಿ ಉಂಟು ಮಾಡಿತು. ಹಳ್ಳಿಯ ಹೊರನೋಟವನ್ನಷ್ಟೇ ವೀಕ್ಷಿಸಲು ಸಾಧ್ಯವಾಯಿತು. ಕೊನೋಮಾ, ಸುತ್ತಲೂ ಸುಂದರ ಬೆಟ್ಟಗಳ ಹೂಮಾಲೆ ಧರಿಸಿರುವ ಒಂದು ಸ್ವಚ್ಛ ಗ್ರಾಮ. ಕುವೆಂಪು ಅವರ ಕುಪ್ಪಳಿಯನ್ನು ನೆನಪಿಸುತ್ತದೆ. ಆ ಹಳ್ಳಿಯ ಹೊರನೋಟದ ಸೌಂದರ್ಯದ ಜೊತೆಗೆ ಆ ಗ್ರಾಮದ ಸ್ವಚ್ಛತೆಯನ್ನು ಕಣ್ತುಂಬಿಕೊಂಡು ವಾಪಸ್ಸಾಗುವ ವೇಳೆಗೆ, ಮಾರ್ಗದ ಮಧ್ಯೆ ಮತ್ತೆ ಬೃಹತ್ ಗಾತ್ರದ ಬಂಡೆಯೊಂದು ಕುಸಿದು ಪಯಣಕ್ಕೆ ಅಡ್ಡಿಯಾಯಿತು. ಅಂದು ರಾತ್ರಿಯೇ ನಾವು ಗುವಾಹಟಿಗೆ ವಿಮಾನದಲ್ಲಿ ಪಯಣಿಸಬೇಕಿತ್ತು. ದೊಡ್ಡ ಹಿಟಾಚಿ ಮೂಲಕ ಆ ಬಂಡೆಯನ್ನು ತೆರವುಗೊಳಿಸಿ ದಾರಿಯನ್ನು ಸಂಚಾರಕ್ಕೆ ಸುಗಮಗೊಳಿಸಿದ್ದಕ್ಕೆ ನೆಮ್ಮದಿಯ ನಿಟ್ಟುಸಿರು ಬಿಟ್ಟೆವು. ಸ್ವಲ್ಪ ಮುಂದೆ ಬಂದರೆ, ಮಳೆಯಿಂದಾಗಿ ಗುಡ್ಡದ ಮಣ್ಣು ರಸ್ತೆಗೆ ಜಾರುತ್ತಾ ಬರುತ್ತಿತ್ತು. ಬಸ್ ಚಾಲಕ ಬುದ್ಧಿವಂತಿಕೆಯಿಂದ ವಾಹನ ಚಲಾಯಿಸಿ ಅದರಿಂದಲೂ ನಮ್ಮನ್ನು ಪಾರು ಮಾಡಿದರು. ಒಟ್ಟಾರೆ ದುರ್ಗಮ ಪಯಣ ಸುಖಾಂತ್ಯಗೊಂಡು ನೆಮ್ಮದಿ ತಂದಿತು.

ಈ ಸ್ಥಳಗಳಿಗೆ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಪ್ರವಾಸಿಗರು ಹೋಗುವುದು ಸೂಕ್ತ. ಹೋಗುವ ಮುನ್ನ ಹವಾಮಾನ ಇಲಾಖೆಯ ಸಲಹೆಯನ್ನು ಗಮನಿಸುವುದು ಮುಖ್ಯ. ಗಲಭೆಯ ಕಾರಣದಿಂದ ಮಣಿಪುರವನ್ನು ನೋಡಲಾಗಲಿಲ್ಲ ಎನ್ನುವ ಕೊರತೆ ಕಾಡುತ್ತಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ದಶ್ಯ ಚಕ್ಕು ಕೊಶಿಶ್ರಷ್ಟ ಕಥೆಯ — ಗುಂಡನ ಬೆಕ್ಕು!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ಗುಂಡ ಒಮ್ಮೆ ಬೆಕ್ಕಿನ ಪೋಸ್ಟರನ್ನು ಮನೆಗೆ ತರುತ್ತಾನೆ. ತಾನು ಸಾಕಿರುವ ಮೀನಿನ ಆಕ್ವೇರಿಯಂ ಇರುವ ಕೋಣೆಯ ಗೋಡೆಗೆ ಆ ಪೋಸ್ಟರ್ ಅಂಟಿಸುತ್ತಾನೆ. ಗುಂಡ ಮನೆಯಲ್ಲಿ ಇಲ್ಲದಿರುವಾಗ ಪೋಸ್ಟರ್‌ನಲ್ಲಿರುವ ಬೆಕ್ಕು ಹೊರಬಂದು ಒಂದೊಂದೆ ಮೀನನ್ನು ತಿಂದು ಇಡೀ ಆಕ್ವೇರಿಯಂ ಅನ್ನು ಖಾಲಿ ಮಾಡಿ ಪರಾರಿಯಾಗುತ್ತದೆ.

ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದೊಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ

ಗೆ	ಚಿ	ಕ	ಜ	ರೇ	ಸಾ
ವೇ	ಪ	ಕೋ	ಪು	ವಂ	ನಾ

1

	ಣ	ಸು
	ಣ	ಸು

2

	ತ	ನ
	ತ	ನ

3

	ಮ	ಲ
	ಮ	ಲ

4

	ಳ	ಕ
	ಳ	ಕ

5

	ಚ	ಕ
	ಚ	ಕ

6

	ಗ	ರ
	ಗ	ರ

ರಹಸ್ಯ ಪದ ಶೋಧ

ಇಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಪದ ಕಂಡು ಹಿಡಿದು ಅವುಗಳ ಮೊದಲಕ್ಷರ ಕೂಡಿಸಿ ಓದಿದರೆ ಓರ್ವ ರಾಷ್ಟ್ರ ನಾಯಕನ ಹೆಸರು ಸಿಗುತ್ತದೆ. ಪತ್ತೆ ಹಚ್ಚಿ

1				ಹುಡುಗ
2				ಉಪ್ಪು
3				ಪುರುಷ
4				ಆಶ್ಚರ್ಯ
5				ಭೂಮಿ
6				ಸೆಳವು
7				ಕತ್ತಲು
8				ಒಂದು ಆಟ
9				ಯುದ್ಧ

ಎಣಿಕೆ ಹಾಡು

ಒಂದು ಒಂದು ಒಂದು
ಕನ್ನಡಿಗರೆಲ್ಲಾ ಒಂದು

ಜೀರೋ, ಒಂದು, ಎರಡು
ಕನ್ನಡ ಗಂಧ ಹರಡು

ಒಂದು, ಎರಡು, ಮೂರು
ಎಳೆಯೋ ಕನ್ನಡ ತೇರು

ಎರಡು, ಮೂರು, ನಾಕು
ಕನ್ನಡ ಕಲಿಯಬೇಕು

ಮೂರು ನಾಲ್ಕು ಐದು
ಕನ್ನಡ ಪುಸ್ತಕ ಓದು

ನಾಲ್ಕು ಐದು ಆರು
ಕನ್ನಡ ಬಳಗ ಸೇರು

ಐದು, ಆರು, ಏಳು
ಕನ್ನಡ ಪದ್ಯ ಹೇಳು

ಆರು, ಏಳು, ಎಂಟು
ಕನ್ನಡ ಚಂದ ಉಂಟು

ಏಳು ಎಂಟು, ಒಂಭತ್ತು
ಕನ್ನಡ ಭಾಷೆ ಗಮ್ಮತ್ತು

ಎಂಟು ಒಂಭತ್ತು ಹತ್ತು
ಕನ್ನಡ ಮೆಟ್ಟಿಲು ಹತ್ತು !

ಗಣಿತದಲ್ಲಿ ಗರ್ದಿ ಗಮ್ಮತ್ತು

ಅದಲು-ಬದಲು-ಕಂಚಿಕದಲು...

44 X 7 = 308 = 77 X 4 = 308
444 X 7 = 3108 = 777 X 4 = 3108
4444 X 7 = 31108 = 7777 X 4 = 31108
44444 X 7 = 311108 = 77777 X 4 = 311108
444444 X 7 = 3111108 = 777777 X 4 = 3111108

ಪದ ಶೋಧ

ಜಲತರಂಗ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ
1.ಉಗುರು-ಚಿಗುರು
2.ಮಕರ-ಶಂಕರ
3.ಚಿಲಕ-ಫಲಕ
4.ತಿರುಕ-ಮರುಕ
5.ಡಬರಿ-ಶಬರಿ
6.ಗರಡಿ-ಪರಡಿ

ಜಾಣಪದ ಆಟ
1.ಕುಂಕುಮ
2.ಕಂಕುಳ
3.ಕೊಂಕಣಿ
4.ಕಿಂಕರ
5.ಕಂಕಣ
6.ಕೈಂಕರ್ಯ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ವೇದಾ ರೇವಣ್ಣವರ
ವಿಜಯಪುರ

ಹುಮೀಶಾ ಜಿ
ಧಾರವಾಡ



ವರುಣ್ ಶೆಟ್ಟಿ ಟಿ.ಎ
ಹಾಸನ

ಅನಿಕಾ ಪಂಡಿತ್
ಬೆಂಗಳೂರು

ವಿಶ್ರುತ್ ಎಲ್.ಜಿ
ಹಾವೇರಿ

ಮಿಥುನ್
ಸಿರಾ

ಐಪಿಎಲ್ ಮೆಗಾ ಹರಾಜು ಪ್ರಕ್ರಿಯೆ ಇಂದಿನಿಂದ ● ರಾಹುಲ್, ಶ್ರೇಯಸ್ ಮೇಲೆ ಕಣ್ಣು ● ಪೈಪೋಟಿಯಲ್ಲಿ ಅರ್ಷದೀಪ್ ಸಿಂಗ್, ಮೊಹಮ್ಮದ್ ಶಮಿ

ಮರುಭೂಮಿಯಲ್ಲಿ ಪಂತ್‌ಗೆ ಒಲಿಯುವುದೇ ಜಾಕ್‌ಪಾಟ್?



ಮೊಹಮ್ಮದ್ ಶಮಿ

ಯಜುವೇಂದ್ರ ಚಾಹಲ್

ಜೋಸ್ ಬಟ್ಲರ್

ಜೆದ್ದಾ, ಸೌದಿ ಅರೇಬಿಯಾ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮೆಗಾ ಹರಾಜು ಪ್ರಕ್ರಿಯೆಗೆ ಮರುಭೂಮಿ ನಾಡಿನ ನಗರಿ ಸಿದ್ಧವಾಗಿದೆ. ದೆಹಲಿ ಹುಡುಗ ರಿಷಭ್ ಪಂತ್ ಅವರ ಮೇಲೆ ಈಗ ಎಲ್ಲರ ಕಣ್ಣು ನೆಟ್ಟಿದೆ.

ಭಾನುವಾರ ಮತ್ತು ಸೋಮವಾರ ಇಲ್ಲಿ ಮುಂದಿನ ವರ್ಷದ ಐಪಿಎಲ್‌ನಲ್ಲಿ ಆಡುವ 10 ತಂಡಗಳು ಆಟಗಾರರನ್ನು ಖರೀದಿಸಲಿವೆ. ಈ ಮೆಗಾ ಬಿಡ್ ಪ್ರಕ್ರಿಯೆಯಲ್ಲಿ ಒಟ್ಟು 577 ಆಟಗಾರರು ಭಾಗವಹಿಸಲಿದ್ದಾರೆ. ಅದರಲ್ಲಿ 204 ಆಟಗಾರರ ಖಾಲಿ ಸ್ಥಾನಗಳಿಗೆ ಆಟಗಾರರ ಖರೀದಿ ನಡೆಯುವ ಸಾಧ್ಯತೆ ಇದೆ.

ಎರಡು ವರ್ಷಗಳ ಹಿಂದೆ ಭೀಕರ ರಸ್ತೆ ಅಪಘಾತದಲ್ಲಿ ಗಾಯಗೊಂಡು ದೀರ್ಘ ಸಮಯ ಚಿಕಿತ್ಸೆ ಪಡೆದಿದ್ದ ರಿಷಭ್ ಹೋದ ವರ್ಷದ ಐಪಿಎಲ್‌ನಲ್ಲಿ ಅಂಗಳಕ್ಕೆ ಮರಳಿದ್ದರು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿ ಆಡಿದ್ದರು. ನಂತರ ಟಿ20 ವಿಶ್ವಕಪ್ ಟೂರ್ನಿ ಹಾಗೂ ಟೆಸ್ಟ್ ಕ್ರಿಕೆಟ್ ಪಂದ್ಯಗಳಲ್ಲಿಯೂ ಅಮೋಘವಾಗಿ ಆಡಿದ್ದರು. ಆದರೆ ಡೆಲ್ಲಿ ಕ್ಯಾಪಿಟಲ್ಸ್ ಫ್ರ್ಯಾಂಚೈಸಿಯು ಈಚೆಗೆ ರಿಟೆನ್ಷನ್ ಪಟ್ಟಿಯಿಂದ ಅವರನ್ನು ಕೈಬಿಟ್ಟಿತ್ತು. ಆದ್ದರಿಂದ ಅವರನ್ನು ಖರೀದಿಸಲು ಎಲ್ಲ ತಂಡಗಳೂ ಪೈಪೋಟಿಗಿಳಿಯುವ ಸಾಧ್ಯತೆ ಇದೆ. ಡೆಲ್ಲಿ ತಂಡವೂ ರೈಟ್ ಟು ಮ್ಯಾಚ್ (ಆರ್‌ಟಿಎಂ) ಕಾರ್ಡ್ ಪ್ರಯೋಗಿಸಿ ಮರಳಿ ಪಂತ್ ಅವರನ್ನು ಖರೀದಿಸಿದರೂ ಅಚ್ಚರಿಯಿಲ್ಲ.

₹ 25 ಕೋಟಿಗಿಂತಲೂ ಹೆಚ್ಚಿನ ಮೌಲ್ಯ ಪಂತ್ ಅವರಿಗೆ ದಕ್ಕುವ ಸಾಧ್ಯತೆ ಕೆಲವು ಮಾಜಿ ಕ್ರಿಕೆಟಿಗರು ಈಗಾಗಲೇ ವ್ಯಕ್ತಪಡಿಸಿದ್ದಾರೆ. ನಾಯಕತ್ವ, ವಿಕೆಟ್‌ಕೀಪಿಂಗ್ ಮತ್ತು ಬ್ಯಾಟಿಂಗ್ ವಿಭಾಗಗಳಲ್ಲಿ ಉಪಯುಕ್ತ ಕಾಣಿಕೆ ನೀಡಬಲ್ಲ ರಿಷಭ್ ಅವರಿಗೆ ಈ ಮೌಲ್ಯ ಲಭಿಸಿದರೂ ಅಚ್ಚರಿಯೇನಿಲ್ಲ.

ಈ ಬಿಡ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡದ ಪರ್ಸ್‌ನಲ್ಲಿ ಅತಿ ಹೆಚ್ಚು ಹಣ ಇದೆ. ಆದರೆ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ತಲಾ ₹ 45 ಕೋಟಿ ಪರ್ಸ್ ಹೊಂದಿವೆ.

ಪಂತ್ ಅವರ ನಂತರ ಅತಿ ಹೆಚ್ಚು ಮೌಲ್ಯದ ನಿರೀಕ್ಷೆಯಲ್ಲಿರುವವರ ಸಾಲಿನಲ್ಲಿ ಎಡಗೈ ವೇಗಿ ಅರ್ಷದೀಪ್ ಸಿಂಗ್ ಹೆಸರು ಮುಂಚೂಣಿಯಲ್ಲಿದೆ. ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ ಅವರು ಕಡಿಮೆ ಅವಧಿಯಲ್ಲಿ 96 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಅವರಲ್ಲದೇ ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಇಂಗ್ಲೆಂಡ್‌ನ ಜೋಸ್ ಬಟ್ಲರ್, ಲಿಯಾಮ್ ಲಿವಿಂಗ್‌ಸ್ಟೋನ್, ನ್ಯೂಜಿಲೆಂಡ್‌ನ ರಚಿನ್ ರವೀಂದ್ರ, ಬೌಲರ್‌ಗಳಾದ ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಯಜುವೇಂದ್ರ ಚಾಹಲ್, ಖಲೀಲ್ ಅಹಮದ್, ದೀಪಕ್ ಚಾಹರ್, ಆವೇಶ್ ಖಾನ್, ಹರ್ಷಲ್ ಪಟೇಲ್, ಭುವನೇಶ್ವರ್ ಕುಮಾರ್, ಆರ್. ಅಶ್ವಿನ್, ತನುಷ್ ಕೋಟ್ಯಾನ್, ವಾಷಿಂಗ್ಟನ್ ಸುಂದರ್, ಆಸ್ಟ್ರೇಲಿಯಾದ ಮಾರ್ಕಸ್ ಸ್ಟೊಯಿನಿಸ್, ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ ಸೇರಿ ಹಲವರಿಗೆ ಹೆಚ್ಚಿನ ಬೇಡಿಕೆ ಕುದುರುವ ನಿರೀಕ್ಷೆ ಇದೆ.

ದೇವದತ್ತ ಪಡಿಕ್ಕಲ್

ಕಣದಲ್ಲಿರುವ ಕರ್ನಾಟಕದ ಆಟಗಾರರ ಮೂಲಬೆಲೆ

₹ 2 ಕೋಟಿ: ಕೆ.ಎಲ್. ರಾಹುಲ್, ದೇವದತ್ತ ಪಡಿಕ್ಕಲ್, ಪ್ರಸಿದ್ಧ ಕೃಷ್ಣ

₹ 1 ಕೋಟಿ: ಕೆ. ಗೌತಮ್, ಮಯಂಕ್ ಅಗರವಾಲ್

₹ 75 ಲಕ್ಷ: ಮನೀಷ್ ಪಾಂಡೆ

₹ 30 ಲಕ್ಷ: ಕರುಣ್ ನಾಯರ್, ವೈಶಾಖ ವಿ, ಶ್ರೇಯಸ್ ಗೋಪಾಲ್, ವಿದ್ವತ್ ಕಾವೇರಪ್ಪ, ಮನೋಜ್ ಭಾಂಡಗೆ, ಪ್ರವೀಣ ದುಬೆ, ಮನ್ವಂತಕುಮಾರ್, ವಿದ್ಯಾಧರ್ ಪಾಟೀಲ, ಕೆ.ಸಿ. ಕಾರಿಯಪ್ಪ, ಹಾರ್ದಿಕ್ ರಾಜ್, ಶುಭಾಂಗ್ ಹೆಗ್ಡೆ, ಆರ್. ಸ್ಮರಣ್, ಎಲ್.ಆರ್. ಚೇತನ್, ಜೆ. ಸುಚಿತ್, ಕೆ.ಎಲ್. ಶ್ರೀಜಿತ್

ಶ್ರೇಯಸ್ ಅಯ್ಯರ್

ರಿಷಭ್ ಪಂತ್

ಬಿಡ್ ದಿನಾಂಕ: ನವೆಂಬರ್ 24 ಹಾಗೂ 25
ಸ್ಥಳ: ಜೆದ್ದಾ, ಸೌದಿ ಅರೇಬಿಯಾ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ
ಸಮಯ: ಮಧ್ಯಾಹ್ನ 2.30ರಿಂದ
(ಅಂಕಿ ಅಂಶ: ಐಪಿಎಲ್ ಅಧಿಕೃತ ವೆಬ್‌ಸೈಟ್ ಹಾಗೂ ಪಿಟಿಐ)

577 ಬಿಡ್ ಪ್ರಕ್ರಿಯೆಯಲ್ಲಿರುವ ಒಟ್ಟು ಆಟಗಾರರು

25 ಪ್ರತಿ ತಂಡವು ಹೊಂದಬಹುದಾದ ಆಟಗಾರರ ಸಂಖ್ಯೆ

8 ಪ್ರತಿ ತಂಡದಲ್ಲಿ ವಿದೇಶಿ ಆಟಗಾರರ ಗರಿಷ್ಠ ಮಿತಿ

10 ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲಿರುವ ಫ್ರ್ಯಾಂಚೈಸಿಗಳ ಸಂಖ್ಯೆ

₹ 24.75 ಕೋಟಿ ಆಸ್ಟ್ರೇಲಿಯಾ ವೇಗಿ ಮಿಚೆಲ್ ಸ್ಟಾರ್ಕ್ ಹೋದ ವರ್ಷ ಪಡೆದ ಮೌಲ್ಯ. ಐಪಿಎಲ್ ಇತಿಹಾಸದಲ್ಲಿ ಇದುವರೆಗೆ ಆಟಗಾರರೊಬ್ಬರು ಪಡೆದ ಗರಿಷ್ಠ ಮೊತ್ತ ಇದು

₹ 641.5 ಕೋಟಿ ಎಲ್ಲ ಫ್ರ್ಯಾಂಚೈಸಿಗಳನ್ನು ಸೇರಿಸಿದ ಒಟ್ಟು ಪರ್ಸ್ ಮೌಲ್ಯ

204 ಖಾಲಿ ಇರುವ ಸ್ಥಾನಗಳು

ಕುತೂಹಲ ಕೆರಳಿಸಿದ ಆರ್‌ಸಿಬಿ ತಂಡ ರಚನೆ

ಪ್ರಜಾವಾಣಿ ವಾರ್ತೆ

ವಿರಾಟ್ ಕೊಹ್ಲಿ

ಬೆಂಗಳೂರು: ಐಪಿಎಲ್ ಟೂರ್ನಿಯಲ್ಲಿ ಬಹಳ ದೊಡ್ಡ ಅಭಿಮಾನಿಗಳ ಬಳಗವನ್ನು ಹೊಂದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿಯು ಈ ಬಾರಿ ಎಂತಹ ತಂಡ ಕಟ್ಟಲಿದೆ ಎಂಬ ಕುತೂಹಲ ಗರಿಗೆದರಿದೆ. ಈ ಸಲವಾದರೂ ಕನ್ನಡನಾಡಿನ ಆಟಗಾರರಿಗೆ ಮಣೆ ಹಾಕುವುದೇ ಎಂಬ ಚರ್ಚೆಗಳೂ ನಡೆಯುತ್ತಿವೆ.

ವಿರಾಟ್ ಕೊಹ್ಲಿ, ರಜತ್ ಪಾಟೀದಾರ್ ಮತ್ತು ಯಶ್ ದಯಾಳ್ ಅವರನ್ನು ಬಿಟ್ಟು ಉಳಿದೆಲ್ಲ ಆಟಗಾರರನ್ನೂ ತಂಡವು ಈಚೆಗೆ ಬಿಡುಗಡೆ ಮಾಡಿತ್ತು. ಅದರಲ್ಲಿ ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್, ವೇಗಿ ಮೊಹಮ್ಮದ್ ಸಿರಾಜ್ ಅವರನ್ನೂ ಕೈಬಿಟ್ಟಿದೆ. ಕೊಹ್ಲಿ ಅವರು ಕಳೆದ ಮೂರು ಆವೃತ್ತಿಗಳಲ್ಲಿ ನಾಯಕತ್ವ ವಹಿಸಿಲ್ಲ. ದಕ್ಷಿಣ ಆಫ್ರಿಕಾದ ಫಫ್ ಡು ಪ್ಲೆಸಿ ಅವರು ನಾಯಕರಾಗಿದ್ದರು. ಆದ್ದರಿಂದ ಈ ಬಾರಿ ಬಿಡ್‌ನಲ್ಲಿ ನಾಯಕತ್ವ ವಹಿಸುವ ಆಟಗಾರನ ಹುಡುಕಾಟದಲ್ಲಿ ತಂಡವಿದೆ ಎನ್ನಲಾಗಿದೆ. ಆದ್ದರಿಂದ ಕೆ.ಎಲ್.ರಾಹುಲ್, ಮುಂಬೈನ ಶ್ರೇಯಸ್ ಅಯ್ಯರ್, ದೆಹಲಿಯ ರಿಷಭ್ ಪಂತ್ ಅಥವಾ ಇಂಗ್ಲೆಂಡ್‌ನ ಜೋಸ್ ಬಟ್ಲರ್ ಅವರಲ್ಲೊಬ್ಬರನ್ನು ಖರೀದಿಸುವ ಸಾಧ್ಯತೆ ದಟ್ಟವಾಗಿದೆ.

ಬೆಂಗಳೂರು ತಂಡವು ಕನ್ನಡಿಗರಿಗೆ ಹೆಚ್ಚು ಆದ್ಯತೆ ನೀಡಬೇಕು. ಆದ್ದರಿಂದ ರಾಹುಲ್, ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್ ಅವರಂತಹ ಆಟಗಾರರಿಗೆ ಮಣೆ ಹಾಕಬೇಕು ಎಂಬ ಒತ್ತಾಯವೂ ಸಾಮಾಜಿಕ ಜಾಲತಾಣಗಳಲ್ಲಿ ಜೋರಾಗಿದೆ. 2008ರಲ್ಲಿ ನಡೆದ ಮೊದಲ ಆವೃತ್ತಿಯ ಟೂರ್ನಿಯಿಂದ ಇಲ್ಲಿಯವರೆಗೆ ಇರುವ ತಂಡಗಳಲ್ಲಿ ಆರ್‌ಸಿಬಿಯೂ ಒಂದು. ಆದರೆ ಇದುವರೆಗೆ ಒಂದು ಬಾರಿಯೂ ಚಾಂಪಿಯನ್ ಆಗಿಲ್ಲ. ಅಲ್ಲದೇ ಕಳೆದ ಕೆಲವು ವರ್ಷಗಳಿಂದ ಕನ್ನಡಿಗ ಆಟಗಾರರಿಗೂ ಆದ್ಯತೆ ಕೊಟ್ಟಿಲ್ಲವೆಂಬ ಆಕ್ಷೇಪವೂ ಈ ತಂಡದ ಬಗ್ಗೆ ಇದೆ. ಆದ್ದರಿಂದ ಈ ಬಾರಿ ₹ 83 ಕೋಟಿ ಪರ್ಸ್ ಹೊಂದಿರುವ ತಂಡವು ಸ್ಥಳೀಯ ಆಟಗಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸಬೇಕು ಎಂಬ ಒತ್ತಾಯ ಹೆಚ್ಚಿದೆ

'ಬಲಿಷ್ಠ ತಂಡ ಕಟ್ಟುವತ್ತ ಮ್ಯಾನೇಜ್‌ಮೆಂಟ್ ಚಿತ್ತ ನೆಟ್ಟಿದೆ. ಬ್ಯಾಟಿಂಗ್‌ನಲ್ಲಿ ವಿರಾಟ್, ರಜತ್ ಈಗಾಗಲೇ ತಂಡದಲ್ಲಿದ್ದಾರೆ. ಉಳಿದಂತೆ 2–3 ಪರಿಣತ ಬ್ಯಾಟರ್‌ಗಳು, 3 ಆಲ್‌ರೌಂಡರ್‌ಗಳು, 3 ವೇಗಿಗಳು ಮತ್ತು ಇಬ್ಬರು ಸ್ಪಿನ್ನರ್‌ಗಳನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ' ಎಂದು ತಂಡದ ಮೂಲಗಳು ಹೇಳಿವೆ.

ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಎಬಿ ಡಿವಿಲಿಯರ್ಸ್, ಕ್ರಿಸ್ ಗೇಲ್, ಶೇನ್ ವಾಟ್ಸನ್ ಅವರಂತಹ ಖ್ಯಾತನಾಮ ಆಟಗಾರರು ಈ ತಂಡವನ್ನು ಹಿಂದೆ ಪ್ರತಿನಿಧಿಸಿದ್ದಾರೆ.

ಫ್ರ್ಯಾಂಚೈಸಿಗಳ ಪರ್ಸ್ ಮೌಲ್ಯ (₹ ಕೋಟಿ)

ಫ್ರ್ಯಾಂಚೈಸಿ	ಮೌಲ್ಯ	ರಿಟೇನ್ ಆದ ಆಟಗಾರರು
ಪಂಜಾಬ್ ಕಿಂಗ್ಸ್	110.50	2
ರಾಯಲ್ ಚಾಲೆಂಜರ್ಸ್ ಬೆಂಗಳೂರು	83	3
ಡೆಲ್ಲಿ ಕ್ಯಾಪಿಟಲ್ಸ್	73	4
ಗುಜರಾತ್ ಟೈಟನ್ಸ್	69	5
ಲಖನೌ ಸೂಪರ್‌ಜೈಂಟ್ಸ್	69	5
ಚೆನ್ನೈ ಸೂಪರ್ ಕಿಂಗ್ಸ್	55	5
ಕೋಲ್ಕತ್ತ ನೈಟ್‌ರೈಡರ್ಸ್	51	6
ರಾಜಸ್ಥಾನ ರಾಯಲ್ಸ್	41	6
ಮುಂಬೈ ಇಂಡಿಯನ್ಸ್	45	5
ಸನ್‌ರೈಸರ್ಸ್ ಹೈದರಾಬಾದ್	45	5

ಪರ್ತ್ ಟೆಸ್ಟ್: ಉತ್ತಮ ಮುನ್ನಡೆ ಸಾಧಿಸಿದ ಭಾರತ ● ಬೂಮ್ರಾಗೆ ಐದು ವಿಕೆಟ್ ಗೊಂಚಲು

ರಾಹುಲ್–ಯಶಸ್ವಿ ಆಟಕ್ಕೆ ಬಸವಳಿದ ಆಸ್ಟ್ರೇಲಿಯಾ

● ಮಧು ಜವಳಿ

ಪರ್ತ್: ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲನೇ ದಿನ ಹದಿನೇಳು ವಿಕೆಟ್‌ಗಳು ಪತನಗೊಂಡಿದ್ದ ಅಂಕಣದಲ್ಲಿ ಎರಡನೇ ದಿನ ಬ್ಯಾಟ್ ಮತ್ತು ಚೆಂಡಿನ ಹದವಾದ ಪೈಪೋಟಿ ಮನಮುದಗೊಳಿಸಿತು. ಈ ದಿನ ಕೇವಲ ಮೂರು ವಿಕೆಟ್‌ಗಳು ಪತನವಾದವು. ಅದಕ್ಕೆ ಕ್ರಿಕೆಟ್ ಆಟವನ್ನು 'ಮಹಾನ್ ಸಮಾನತೆಯ ವೇದಿಕೆ' ಎಂದು ಕರೆಯಲಾಗುತ್ತದೆ.

ಶನಿವಾರ ಬೆಳಿಗ್ಗೆ ಆಸ್ಟ್ರೇಲಿಯಾ ತಂಡದ ಕೊನೆಯ 3 ವಿಕೆಟ್ ಉರುಳಿಸಲು ಭಾರತದ ಬೌಲರ್‌ಗಳೂ 25 ಓವರ್‌ಗಳನ್ನು ಹಾಕಿದರು. ಶುಕ್ರವಾರ ದಿನದಾಟದ ಮುಕ್ತಾಯಕ್ಕೆ ಆತಿಥೇಯ ತಂಡವು 27 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡಿತ್ತು. ಮೊದಲ ಇನಿಂಗ್ಸ್‌ನಲ್ಲಿ 46 ರನ್‌ಗಳ ಹಿನ್ನಡೆ ಅನುಭವಿಸಿದ ಆತಿಥೇಯರು ಎರಡನೇ ದಿನದಾಟದ ಮುಕ್ತಾಯದವರೆಗೂ ಹಾಕಿದ 57 ಓವರ್‌ಗಳಲ್ಲಿ ಒಂದೂ ವಿಕೆಟ್ ಗಳಿಸಲು ಸಾಧ್ಯವಾಗಲಿಲ್ಲ.

ಇದರಿಂದಾಗಿ ಆಪ್ಟಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಎದುರಿನ ಮೊದಲ ಟೆಸ್ಟ್ ಭಾರತದ ಹಿಡಿತಕ್ಕೆ ಸಿಕ್ಕಂತಾಗಿದೆ. ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡದ ಬ್ಯಾಟರ್‌ಗಳು ಎಡವಿದ್ದರಿಂದ 150 ರನ್‌ಗಳಿಗೆ ಆಲೌಟ್ ಆಗಿತ್ತು. ಆದರೆ ನಾಯಕ, ವೇಗಿ ಜಸ್‌ಪ್ರೀತ್ ಬೂಮ್ರಾ (30ಕ್ಕೆ5) ಬಿರುಗಾಳಿ ವೇಗಕ್ಕೆ ಆತಿಥೇಯ ತಂಡವು 67 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತು. ಇನಿಂಗ್ಸ್‌ನಲ್ಲಿ ಒಟ್ಟು 104 ರನ್ ಗಳಿಸಿ ಆಲೌಟ್ ಆಯಿತು.

ಇದರಿಂದಾಗಿ ಆತ್ಮವಿಶ್ವಾಸ ತುಂಬಿಕೊಂಡ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 57 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 172 ರನ್ ಕಲೆಹಾಕಿತು. ಒಟ್ಟು 218 ರನ್‌ಗಳ ಮುನ್ನಡೆ ಸಾಧಿಸಿದೆ. ಪಿಚ್ ಕೂಡ ಬ್ಯಾಟರ್‌ಗಳಿಗೆ ಪೂರ್ಣ ನೆರವು ನೀಡುತ್ತಿದೆ. ಯಶಸ್ವಿ ಜೈಸ್ವಾಲ್ (ಬ್ಯಾಟಿಂಗ್ 90) ಮತ್ತು ಕೆ.ಎಲ್. ರಾಹುಲ್ (ಬ್ಯಾಟಿಂಗ್ 62) ಅವರ ಚೆಂದದ ಆಟ ಕಣ್ಮನ ಸೆಳೆಯುವಂತಿದೆ. ಅದೇ ಆಸ್ಟ್ರೇಲಿಯಾದವರಿಗೆ ಪುಟಿದೇಳುವ ಅವಕಾಶ ನೀಡದ ಮತ್ತು ಅವರಿಗೆ ತುಸು ಬೇಸರ ತರಿಸುವಂತಹ ಆಟವನ್ನು ಭಾರತದ ಜೋಡಿ ಆಡಿತು.

ಭಾರತದ ಕೆ.ಎಲ್. ರಾಹುಲ್ (ಎಡ) ಮತ್ತು ಯಶಸ್ವಿ ಜೈಸ್ವಾಲ್ ಎಎಫ್‌ಪಿ ಚಿತ್ರ

ಊಟ ಮತ್ತು ಚಹಾ ವಿರಾಮದ ಮಧ್ಯದ ಅವಧಿಯಲ್ಲಿ ಈ ಜೋಡಿಯು 86 ರನ್ ಸೇರಿಸಲು 26 ಓವರ್‌ಗಳನ್ನು ಆಡಿತು. ಚಹಾ ವಿರಾಮದ ನಂತರ ಈ ಜೋಡಿಯು ಮತ್ತಷ್ಟು ತಾಳ್ಮೆಯಿಂದ ಆಡಿ, ಎದುರಾಳಿಗಳು ಕಠಿಣ ಶ್ರಮಪಡುವಂತೆ ಮಾಡಿದರು. ಏಕೆಂದರೆ; 17 ಓವರ್‌ಗಳನ್ನು ಆಡಿದ ಇಬ್ಬರೂ ಬ್ಯಾಟರ್‌ಗಳು ಗಳಿಸಿದ್ದು 22 ರನ್ ಮಾತ್ರ. ಈ ಹಂತದಲ್ಲಿ ಇಬ್ಬರೂ ಪಿಚ್‌ನಲ್ಲಿ ಪೂರ್ಣವಾಗಿ ಬೇರೂರಿದ್ದರು. ಯಾವುದೇ ಹಂತದಲ್ಲಿಯೂ ಗಡಿಬಿಡಿ ಮಾಡಲಿಲ್ಲ. ಯಶಸ್ವಿ, 51 ರನ್ ಗಳಿಸಿದ್ದ ಸಂದರ್ಭದಲ್ಲಿ ಮಿಚೆಲ್ ಸ್ಟಾರ್ಕ್ ಎಸೆತದಲ್ಲಿ ಕ್ಯಾಚ್ ಆಗುವ ಸಾಧ್ಯತೆ ಇತ್ತು. ಆದರೆ ಫೀಲ್ಡರ್ ಉಸ್ಮಾನ್ ಖ್ವಾಜಾ ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಬೆಳಗಿನ ಅವಧಿಯಲ್ಲಿ ಆಸ್ಟ್ರೇಲಿಯಾ ತಂಡದ ಹೋರಾಟಕ್ಕೆ ತಡೆಯೊಡ್ಡಲು ದಿನದಾಟದ ಆರಂಭದಲ್ಲಿಯೇ ಬೂಮ್ರಾ ತಮ್ಮ ಶಕ್ತಿ ಪ್ರದರ್ಶಿಸಿದರು. ಆಸ್ಟ್ರೇಲಿಯಾದ ಸಾಲಿನಲ್ಲಿದ್ದ ಕೊನೆಯ ಪರಿಣತ ಬ್ಯಾಟರ್ ಅಲೆಕ್ಸ್ ಕ್ಯಾರಿ ವಿಕೆಟ್ ಕಬಳಿಸಿದರು. ಬೂಮ್ರಾ ಎಸೆತವು ಕ್ಯಾರಿ ಬ್ಯಾಟ್ ಅಂಚು ಸವರಿಕೊಂಡು ಹೋಗಿ ರಿಷಭ್ ಪಂತ್ ಕೈಗವಸು ಸೇರಿಕೊಂಡಿತು. ಇದರೊಂದಿಗೆ ಬೂಮ್ರಾ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 11ನೇ ಸಲ ಐದು ವಿಕೆಟ್ ಗೊಂಚಲು ಗಳಿಸಿದರು. ಆಸ್ಟ್ರೇಲಿಯಾದ ನೆಲದಲ್ಲಿ ಎರಡನೇಯದ್ದು. 2018–19ರಲ್ಲಿ ಮೆಲ್ಬರ್ನ್ ನಲ್ಲಿ ನಡೆದಿದ್ದ ಪಂದ್ಯದಲ್ಲಿ 33ಕ್ಕೆ6 ವಿಕೆಟ್ ಗಳಿಸಿದ್ದರು. ಕ್ರೀಸ್‌ಗೆ ಬಂದ ನೇಥನ್ ಲಯನ್ ಅವರನ್ನು ಪದಾರ್ಪಣೆ ಆಟಗಾರ ಹರ್ಷಿತ್ ರಾಣಾ (48ಕ್ಕೆ3) ಪೆವಿಲಿಯನ್‌ಗೆ ಮರಳಿಸಿದರು. ಆದರೆ ಕೊನೆಯ ವಿಕೆಟ್ ಒಲಿಯುವುದು ತುಸು ತಡವಾಯಿತು.

ಮಿಚೆಲ್ ಸ್ಟಾರ್ಕ್ (26; 112ಎಸೆತ, 4X2) ಮತ್ತು ಜೋಶ್ ಹ್ಯಾಜಲ್‌ವುಡ್ ಪಿಚ್‌ನಲ್ಲಿ ಬಿಡಾರ ಹೂಡಲು ನಿರ್ಧರಿಸಿದರು. ಇಬ್ಬರೂ ಸೇರಿ 110 ಎಸೆತಗಳನ್ನು ಎದುರಿಸಿ 25 ರನ್ ಸೇರಿಸಿದರು. ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ದಾಖಲಾದ ಅತಿ ದೀರ್ಘ ಜೊತೆಯಾಟ ಇದಾಯಿತು. ಆದರೆ ಭಾರತವು ಮುನ್ನಡೆ ಪಡೆಯುವುದನ್ನು ತಡೆಯಲು ಈ ಜೊತೆಯಾಟಕ್ಕೂ ಸಾಧ್ಯವಾಗಲಿಲ್ಲ. ಸ್ಟಾರ್ಕ್ ವಿಕೆಟ್ ಗಳಿಸಿ ಜೊತೆಯಾಟಕ್ಕೆ ತೆರೆ ಎಳೆಯುವಲ್ಲಿ ರಾಣಾ ಸಫಲರಾದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್
ಭಾರತ: 150 (49.4 ಓವರುಗಳಲ್ಲಿ)
ಆಸ್ಟ್ರೇಲಿಯಾ: 104 (51.2 ಓವರುಗಳಲ್ಲಿ)
(ಶುಕ್ರವಾರ: 7ಕ್ಕೆ67)
ಕ್ಯಾರಿ ಸಿ ಪಂತ್ ಬಿ ಬೂಮ್ರಾ 21 (31ಎ, 4x3)
ಸ್ಟಾರ್ಕ್ ಸಿ ಪಂತ್ ಬಿ ರಾಣಾ 26 (112ಎ, 4x2)
ಲಯನ್ ಸಿ ರಾಹುಲ್ ಬಿ ರಾಣಾ 5 (16ಎ)
ಹೇಜಲ್‌ವುಡ್ ಔಟಾಗದೇ 7 (31ಎ, 4x1)
ಇತರೆ: 5 (ಲೆಗ್‌ಬೈ 1, ನೋಬಾಲ್ 4)
ವಿಕೆಟ್ ಪತನ: 8–70 (ಅಲೆಕ್ಸ್ ಕ್ಯಾರಿ, 28.1), 9–79 (ನೇಥನ್ ಲಯನ್, 33.2), 10–104 (ಮಿಚೆಲ್ ಸ್ಟಾರ್ಕ್, 51.2).
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 18–6–30–5; ಮೊಹಮ್ಮದ್ ಸಿರಾಜ್ 13–7–20–2; ಹರ್ಷಿತ್ ರಾಣಾ 15.2–3–48–3; ನಿತೀಶ್ ಕುಮಾರ್ ರೆಡ್ಡಿ 3–0–4–0; ವಾಷಿಂಗ್ಟನ್ ಸುಂದರ್ 2–1–1–0.
ಎರಡನೇ ಇನಿಂಗ್ಸ್
ಭಾರತ: ವಿಕೆಟ್ ನಷ್ಟವಿಲ್ಲದೇ 172 (57 ಓವರುಗಳಲ್ಲಿ)
ಜೈಸ್ವಾಲ್ ಔಟಾಗದೇ 90 (193ಎ, 4x7, 6x2)
ರಾಹುಲ್ ಔಟಾಗದೇ 62 (153ಎ, 4x4)
ಇತರೆ: 20 (ಬೈ 11, ನೋಬಾಲ್ 4, ವೈಡ್ 5)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 12–2–43–0; ಜೋಶ್ ಹ್ಯಾಜಲ್‌ವುಡ್ 10–5–9–0; ಪ್ಯಾಟ್ ಕಮಿನ್ಸ್ 13–2–44–0; ಮಿಚೆಲ್ ಮಾರ್ಷ್ 6–0–27–0; ನೇಥನ್ ಲಯನ್ 13–3–28–0; ಮಾರ್ನಸ್ ಲಾಬುಷೇನ್ 2–0–2–0; ಟ್ರಾವಿಸ್ ಹೆಡ್ 1–0–8–0

ಫೈನಲ್‌ಗೆ ಸುಲ್ತಾನೋವ್, ಬಾಬ್‌ರೋವ್

● ಮಲ್ಲಪ್ಪ ಪಾರೇಗಾಂವ

ಕಲಬುರಗಿ: ತನಗಿಂತ ಹೆಚ್ಚಿನ ಶ್ರೇಯಾಂಕದ ಆಟಗಾರನ ಎದುರು ಉತ್ತಮ ಹೋರಾಟ ತೋರಿದರೂ ಭಾರತದ ದೇವ್ ಜೇವಿಯಾ ಅವರಿಗೆ ಗೆಲುವಿನ ಫಲ ಲಭಿಸಲಿಲ್ಲ. ಕಲಬುರಗಿ ಓಪನ್ ಐಟಿಎಫ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ಜೇವಿಯಾ 6–7, 2–6 ರಿಂದ ಅಗ್ರಶ್ರೇಯಾಂಕದ ಖುಮೋಯುನ್ ಸುಲ್ತಾನೋವ್ ಎದುರು ಸೋತರು.

ಉಜ್ಬೇಕಿಸ್ತಾನದ ಸುಲ್ತಾನೋವ್ ಅವರು ಎಟಿಪಿ ರ‍್ಯಾಂಕಿಂಗ್‌ನಲ್ಲಿ ದೇವ್ ಅವರಿಗಿಂತ 450 ಸ್ಥಾನ ಮೇಲೆ ಇದ್ದಾರೆ.

ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಶನಿವಾರ ಟೈಬ್ರೇಕ್‌ವರೆಗೆ ಸಾಗಿದ ಮೊದಲ ಸೆಟ್‌ನಲ್ಲಿ ಇಬ್ಬರೂ ಆಟಗಾರರು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿದರು. ಏಕಪಕ್ಷೀಯ ಪಂದ್ಯವಾಗಬಹುದೆಂದು ನಿರೀಕ್ಷಿಸಿದ್ದ ಪ್ರೇಕ್ಷಕರನ್ನು ಜೇವಿಯಾ ಪ್ರಬಲ ಪೈಪೋಟಿಯ ಮೂಲಕ ಅಚ್ಚರಿಗೆ ತಳ್ಳಿದರು. ಆದರೂ ಮುಂಬೈ ಐಟಿಎಫ್ ಟೂರ್ನಿಯ ಸೋಲಿಗೆ ಸೇಡನ್ನು ತೀರಿಸಿಕೊಳ್ಳಲು ಭಾರತದ ಆಟಗಾರನಿಗೆ ಸಾಧ್ಯವಾಗಲಿಲ್ಲ.ಮೊದಲ ಸೆಟ್‌ನಲ್ಲಿ ಗೇಮ್‌ಗಳು 3–3, 5–5, 6–6 ಸಮನಾದವು. ಆದರೆ ಕೊನೆ ಕ್ಷಣದಲ್ಲಿ ಒತ್ತಡ ಮೀರಿ ನಿಂತ ಸುಲ್ತಾನೋವ್ ಸೆಟ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನ ಆರಂಭದಲ್ಲಿ ಜೇವಿಯಾ ಸ್ವಲ್ಪ ದಣಿದಂತೆ ಕಂಡರು. ಖುಮೋಯುನ್ 6–2 ರಿಂದ ಈ ಸೆಟ್ ಹಾಗೂ ಪಂದ್ಯ ಗೆದ್ದು ಫೈನಲ್‌ಗೆ ಮುನ್ನಡೆದರು.

ಚಾಪೆಲ್‌ಗೆ ನಿರಾಸೆ: ಇನ್ನೊಂದು ಸೆಮಿಫೈನಲ್ ಹಣಾಹಣಿಯಲ್ಲಿ ರಷ್ಯಾದ ಬಾಬ್‌ರೋವ್ 6–3, 6–3ರಿಂದ ಅಮೆರಿಕದ ನಿಕ್ ಚಾಪೆಲ್ ಎದುರು ಗೆದ್ದು ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟರು.

ಡಬಲ್ಸ್ ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ರಷ್ಯಾದ ಇಗೊರ್ ಅಗಾಫೊನೊವ್–ಬಾಗ್ದಾನ್ ಬಾಬ್‌ರೋವ್

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಬಾಬ್‌ರೋವ್–ಇಗೋರ್ ಜೋಡಿಗೆ ಡಬಲ್ಸ್ ಗರಿ: ಅಗ್ರಶ್ರೇಯಾಂಕದ ಬಾಗ್ದಾನ್ ಬಾಬ್‌ರೋವ್–ಇಗೋರ್ ಅಗಾಫೋನೊವ್ ಜೋಡಿಯು ಟೂರ್ನಿಯ ಡಬಲ್ಸ್ ವಿಭಾಗದ ಚಾಂಪಿಯನ್ ಆಗಿ ಹೊರಹೊಮ್ಮಿತು.ಫೈನಲ್ ಹಣಾಹಣಿಯಲ್ಲಿ ರಷ್ಯಾದ ಜೋಡಿಯು 7–5, 6–2ರಿಂದ ಭಾರತದ ನಿತಿನ್ ಕುಮಾರ್ ಸಿನ್ಹಾ–ಅಮೆರಿಕದ ನಿಕ್ ಚಾಪೆಲ್ ಅವರನ್ನು ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಇದರೊಂದಿಗೆ ₹1.30 ಲಕ್ಷ ಬಹುಮಾನ ಹಾಗೂ 25 ಎಟಿಪಿ ಪಾಯಿಂಟ್‌ಗಳನ್ನು ಖಾತೆಗೆ ಸೇರಿಸಿಕೊಂಡಿತು. ರನ್ನರ್ ಅಪ್ ತಂಡಕ್ಕೆ ₹ 75 ಸಾವಿರ ನಗದು ಬಹುಮಾನ ಹಾಗೂ 15 ಎಟಿಪಿ ಪಾಯಿಂಟ್‌ಗಳು ದೊರೆತವು.

ನಾಳೆಯಿಂದ ವಿಶ್ವ ಚೆಸ್ ಕಿರೀಟಕ್ಕೆ ಹೋರಾಟ

ಸಿಂಗಪುರ (ಪಿಟಿಐ): 'ನನ್ನ ಮುಂದಿರುವ ಕೆಲಸ ಸ್ಪಷ್ಟ. ಪ್ರತಿಯೊಂದು ಪಂದ್ಯದಲ್ಲಿ ಉತ್ತಮ ಆಟ ನೀಡುವುದು. ಪರಿಸ್ಥಿತಿಗೆ ಅನುಗುಣವಾಗಿ ಉತ್ತಮ ನಡೆಗಳನ್ನು ಇಡುವುದು. ಸಕಾರಾತ್ಮಕ ಮನೋಭಾವದಿಂದ ಆ ಕೆಲಸ ಮಾಡಿದರೆ ಎದುರಾಳಿಯ ಫಾರ್ಮ್ ಹೆಚ್ಚು ಗಣನೆಗೆ ಬರುವುದಿಲ್ಲ' ಎಂದು ವಿಶ್ವ ಚೆಸ್ ಚಾಂಪಿಯನ್ ಪಟ್ಟಕ್ಕೆ ಚಾಲೆಂಜರ್ ಆಗಿರುವ ಭಾರತದ ಡಿ.ಗುಕೇಶ್ ಹೇಳಿದ್ದಾರೆ.

ಹಾಲಿ ವಿಶ್ವ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಮತ್ತು ಗುಕೇಶ್ ನಡುವೆ ಸಿಂಗಪುರದ ಸೆಂಟೋಸ್ ದ್ವೀಪದಲ್ಲಿ 14 ಪಂದ್ಯಗಳ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಇದೇ 25ರಿಂದ ಡಿಸೆಂಬರ್ 13ರವರೆಗೆ ನಡೆಯಲಿದೆ.

'ನಾನು ಸ್ವಲ್ಪ ನರ್ವಸ್ ಆಗಿರುವುದು ನಿಜ, ಇದು ಒಳ್ಳೆಯದೇ. ಆಟ ಆರಂಭಕ್ಕೆ ತುದಿಗಾಲಲ್ಲಿ ಕಾಯುತ್ತಿದ್ದೇನೆ. ನನ್ನ ಮನಸ್ಸಿನಲ್ಲಿರುವುದು ಒಂದೇ ಯೋಚನೆ– ನನ್ನಿಂದಾದಷ್ಟು ಉತ್ತಮ ಆಟ ನೀಡುವುದು ಮತ್ತು ಮುಂದೇನಾಗುವುದೆಂದು ನೋಡುವುದಷ್ಟೇ' ಎಂದು 18 ವರ್ಷ ವಯಸ್ಸಿನ ಗುಕೇಶ್ ಟೂರ್ನಿ ಪೂರ್ವದ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

'ತುಂಬಾ ನಿರಾಳಭಾವದಿಂದ ಇದ್ದೇನೆ ಎಂದು ಹೇಳಲಾರೆ. ಆದರೆ ಒತ್ತಡ ತಾಳಿಕೊಳ್ಳುವುದನ್ನೂ ನಾನು ತಿಳಿದಿದ್ದೇನೆ. ನನ್ನ ಕೌಶಲಗಳ ಮೇಲೆ ಭರವಸೆಯಿರುವವರೆಗೆ ಬೇರೆ ವಿಷಯಗಳ ಬಗ್ಗೆ ಯೋಚಿಸುವುದಿಲ್ಲ' ಎಂದು ಗುಕೇಶ್ ಆತ್ಮವಿಶ್ವಾಸದ ಮಾತುಗಳನ್ನಾಡಿದರು. ಗುಕೇಶ್ ಕೆಲ ಸಮಯದಿಂದ ಉತ್ತಮ ಲಯದಲ್ಲಿದ್ದರೆ, ಲಿರೆನ್ ಈ ಪ್ರತಿಷ್ಠಿತ ಫೈನಲ್‌ಗೆ ಮೊದಲು ಎಂದಿನ ಲಯ ಕಂಡುಕೊಳ್ಳಲಾಗದೇ ಪರದಾಟದಲ್ಲಿದ್ದಾರೆ.

ಟೂರ್ನಿಯ 138 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿ ಏಷ್ಯದ ಆಟಗಾರರೇ ಫೈನಲ್‌ನಲ್ಲಿ ಎದುರಾಳಿಗಳಾಗಿದ್ದಾರೆ. ಟೂರ್ನಿ ಸುಮಾರು ₹20 ಕೋಟಿ ಬಹುಮಾನ ಹಣ ಹೊಂದಿದೆ.

'ಯಾವುದೇ ಟೂರ್ನಿಯಲ್ಲಿ, ಅದರಲ್ಲೂ ವಿಶ್ವ ಚಾಂಪಿಯನ್‌ಷಿಪ್‌ನಂಥ ಮಹತ್ವದ ಸ್ಪರ್ಧೆಯಲ್ಲಿ ಭಾರತದ ಪರ ಆಡುವುದು ಗೌರವದ ಮತ್ತು ಹೆಮ್ಮೆಯ ವಿಷಯ. ದೇಶವನ್ನು ಪ್ರತಿನಿಧಿಸುವುದು ಮತ್ತು ದೇಶದ ಜನರ ಭರವಸೆಗಳ ಭಾರ ಹೊರುವುದನ್ನು ನಾನು ಗಂಭೀರವಾಗಿ ತೆಗೆದುಕೊಳ್ಳುತ್ತೇನೆ' ಎಂದು ಗುಕೇಶ್ ಹೇಳಿದರು.

ಡಿಂಗ್ ಲಿರೆನ್ ಮತ್ತು ಡಿ.ಗುಕೇಶ್ ಎಎಫ್‌ಪಿ ಚಿತ್ರ

ತಯಾರಿಗೆ ತೃಪ್ತಿ: 'ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದ ದಿನದಿಂದಲೇ ತಯಾರಿಯ ಕಡೆ ಗಮನಕೊಟ್ಟಿದ್ದೇನೆ. ಎಷ್ಟು ಸಾಧ್ಯವೊ ಅಷ್ಟು ಉತ್ತಮ ರೀತಿಯಲ್ಲಿ ನಾನು ಮತ್ತು ನನ್ನ ತಂಡ ಈ ಚಾಂಪಿಯನ್‌ಷಿಪ್‌ಗೆ ಸಿದ್ಧತೆ ನಡೆಸಿದೆ' ಎಂದು ಗುಕೇಶ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೋಚ್ ಗ್ರೆಗೋರ್ಸ್ ಗಜೆವ್‌ಸ್ಕಿ ಅವರಿಗೆ ಶ್ರೇಯಸ್ಸನ್ನು ಸಲ್ಲಿಸಿದ ಗುಕೇಶ್, '2022ರಿಂದ ನಾವು ಜೊತೆಯಾಗಿ ಕೆಲಸ ಮಾಡುತ್ತಿದ್ದೇವೆ. ಆರಂಭದಲ್ಲಿ ಟೂರ್ನಿಗಳ ಆಧಾರದಲ್ಲಿ ತರಬೇತಿ ನಡೆಯುತಿತ್ತು. ಆದರೆ ನಂತರದ ಉತ್ತಮ ಅನುಭವಗಳಿಂದ ಪೂರ್ಣಾವಧಿಗೆ ಅವರಿಂದ ತರಬೇತಿ ಪಡೆಯುಲು ತೀರ್ಮಾನಿಸಿದ್ದೇನೆ' ಎಂದು ಗುಕೇಶ್ ಹೇಳಿದರು.

ಉತ್ತುಂಗದಲ್ಲಿಲ್ಲ: ಇತ್ತೀಚಿನ ಕೆಲವು ತಿಂಗಳಿಂದ ಲಯ ಕಂಡುಕೊಳ್ಳಲು ಪರದಾಡುತ್ತಿರುವುದನ್ನು ಒಪ್ಪಿಕೊಂಡ ಲಿರೆನ್, ಇತ್ತೀಚಿನ ಕೆಲವು ಟೂರ್ನಿಗಳಲ್ಲಿ ತೋರಿದ ನಿರ್ವಹಣೆಯ ಬಗ್ಗೆ ಪರಾಮರ್ಶೆ ನಡೆಸಿರುವುದಾಗಿ ಹೇಳಿದರು. ಇದರಿಂದ ಉತ್ತಮವಾಗಿ ಸಿದ್ಧಗೊಳ್ಳಲು ಸಾಧ್ಯವಾಗುತ್ತದೆ ಎಂಬುದು ಅವರ ಅನಿಸಿಕೆ.

'ನಾನು ಇತ್ತೀಚಿನ ಕೆಲ ತಿಂಗಳಲ್ಲಿ ಆಡಿದ ಪಂದ್ಯಗಳ ಪರಾಮರ್ಶೆಯನ್ನು ಶುಕ್ರವಾರ ನಡೆಸಿದೆ. ಗುಣಮಟ್ಟ ಉತ್ತಮವಾಗಿರಲಿಲ್ಲ. ನನ್ನ ಹೋರಾಟದ ಮನೋಭಾವ ಕೂಡ ಮೇಲ್ಮಟ್ಟದಲ್ಲಿರಲಿಲ್ಲ' ಎಂದು 32 ವರ್ಷ ವಯಸ್ಸಿನ ಲಿರೆನ್ ಹೇಳಿದರು.

ಗುಜರಾತ್ ಜೈಂಟ್ಸ್‌ಗೆ ಮಣಿದ ಟೈಟನ್ಸ್

ನೊಯ್ಡಾ: ಗುಜರಾತ್ ಜೈಂಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ಶನಿವಾರ 31–28ರಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. ಪರ್ತೀಕ್ ದಹಿಯಾ (10 ಅಂಕ) ಅವರ ಸೂಪರ್ ಟೆನ್ ಜೈಂಟ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.

ಟೈಟನ್ಸ್ ರೇಡರ್ ವಿಜಯ್ (15 ಅಂಕ) ಏಕಾಂಗಿ ಹೋರಾಟ ಗೆಲುವಿಗೆ ಸಾಲಲಿಲ್ಲ.

ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡ 43–30 ಪಾಯಿಂಟ್‌ಗಳಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಇನ್ನಷ್ಟು ಗಟ್ಟಿಪಡಿಸಿಕೊಂಡಿತು. ಸ್ಟೀಲರ್ಸ್ ಪರ ವಿನಯ್ (11) ಮತ್ತು ಶಿವಂ ಪತಾರೆ (11) ಅವರು ಸೂಪರ್ ಟೆನ್ ಸಾಧಿಸಿದರೆ, ಪ್ಯಾಂಥರ್ಸ್ ಪರ ಅರ್ಜುನ್ ದೇಶ್ವಾಲ್ (16 ಅಂಕ) ಹೋರಾಟದ ಆಟ ಫಲ ನೀಡಲಿಲ್ಲ.

ಯುವರಾಜ್ ಆಟಕ್ಕೆ ಕರ್ನಾಟಕ ಸುಸ್ತು

ಬೆಂಗಳೂರು: ಕರ್ನಾಟಕ ತಂಡ, ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿ 'ಬಿ' ಗುಂಪಿನ ಮೊದಲ ಪಂದ್ಯದಲ್ಲಿ ಉತ್ತರಾಖಂಡ ಎದುರು ಶನಿವಾರ ಆರು ರನ್‌ಗಳ ಸೋಲನುಭವಿಸಿತು. ವಿಶೇಷ ಎಂದರೆ ಈ ಬಾರಿ ಸೋಲಿಗೆ ಕಾರಣ ಬೌಲರ್‌ಗಳು ಕೈಕೊಟ್ಟಿದ್ದು.

ಆರು ಮಂದಿ ಬೌಲರ್‌ಗಳು 215 ರನ್ ಬಿಟ್ಟುಕೊಟ್ಟರು. ಉತ್ತರಾಖಂಡ 20 ಓವರುಗಳಲ್ಲಿ 5 ವಿಕೆಟ್ ಕಳೆದುಕೊಂಡ ಇಷ್ಟು ದೊಡ್ಡ ಮೊತ್ತ ಗಳಿಸಿತು.

ಆರಂಭ ಆಟಗಾರ ಯುವರಾಜ್ ಚೌಧರಿ ಹೆಚ್ಚು ಆಕ್ರಮಣಕಾರಿಯಾಗಿದ್ದು, 60 ಎಸೆತಗಳಲ್ಲಿ 123 ರನ್ ಸಿಡಿಸಿದರು. ಕೊನೆಯಲ್ಲಿ ಆದಿತ್ಯ ತಾರೆ 23 ಎಸೆತಗಳಲ್ಲಿ ಗಳಿಸಿದ ಬಿರುಸಿನ ಅಜೇಯ 42 ರನ್‌ಗಳು ಉಪಯುಕ್ತವಾದವು.

ಕರ್ನಾಟಕ ಪರ ಕೆ.ಎಲ್.ಶ್ರೀಜಿತ್ 40 ಎಸೆತಗಳಲ್ಲಿ ಅಜೇಯ 72 ರನ್ (4x5, 6x5) ಬಾರಿಸಿ ಹೋರಾಟ ನಡೆಸಿದರೂ ಅದು ಫಲ ನೀಡಲಿಲ್ಲ. ಅವರೊಡನೆ ಕೊನೆಯಲ್ಲಿ ಶುಭಾಂಗ್ ಹೆಗ್ಡೆ 4 ಸಿಕ್ಸರ್‌ಗಳಿದ್ದ 36 ರನ್ ಗಳಿಸಿದರೂ ತಂಡ ಒಂದು ಎಸೆತ ಇರುವಂತೆ 209 ರನ್ನಿಗೆ ಆಲೌಟಾಯಿತು. ಒಂದು ಹಂತದಲ್ಲಿ 2 ವಿಕೆಟ್‌ಗೆ 109 ರನ್ ಗಳಿಸಿದ್ದ ಕರ್ನಾಟಕ ನಂತರ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಸ್ಪಿನ್ನರ್ ಹಿಮಾಂಶು ಬಿಷ್ಟ್ (33ಕ್ಕೆ3) ಮಧ್ಯಮ ಕ್ರಮಾಂಕ ಮುರಿದರೆ, ನಾಯಕ, ವೇಗದ ಬೌಲರ್ ಆಕಾಶ್ ಮಧ್ವಾಲ್ (48ಕ್ಕೆ3) ಕೊನೆಯ 3 ವಿಕೆಟ್ ಪಡೆದರು.

ಸ್ಕೋರುಗಳು: ಉತ್ತರಾಖಂಡ: 20 ಓವರುಗಳಲ್ಲಿ 5 ವಿಕೆಟ್‌ಗೆ 215 (ಯುವರಾಜ್ ಚೌಧರಿ 123, ಆದಿತ್ಯ ತಾರೆ ಔಟಾಗದೇ 42, ಕೆ.ಕೌಶಿಕ್ 43ಕ್ಕೆ2, ಶ್ರೇಯಸ್ ಗೋಪಾಲ್ 30ಕ್ಕೆ2); ಕರ್ನಾಟಕ: 19.5 ಓವರುಗಳಲ್ಲಿ 209 (ಮಯಂಕ್ ಅಗರವಾಲ್ 48, ಕೆ.ಎಲ್.ಶ್ರೀಜಿತ್ ಔಟಾಗದೇ 72, ಶುಭಾಂಗ್ ಹೆಗ್ಡೆ 36; ಆಕಾಶ್ ಮಧ್ವಾಲ್ 48ಕ್ಕೆ3, ಹಿಮಾಂಶು ಬಿಷ್ಟ್ 33ಕ್ಕೆ3).